"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಕರ್ನಾಟಕ ವಿಧಾನ ಪರಿಷತ್ತು**

15ನೇ ನವೆಂಬರ್ 2017
ಬುಧವಾರ

**ವಿಷಯಾನುಕ್ರಮಾಣಿಕೆ**

1. **ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.**

3700– ತುಂಗಭದ್ರಾ ಅಣೆಕಟ್ಟೆಯಲ್ಲಿ ತುಂಬಿರುವ ಹೂಳಿನ ಬಗ್ಗೆ
– ಎನ್.ಎಸ್.ಬೋಸ್‌ರಾಜು

3500 – ಚಿಕ್ಕಮಗಳೂರು ಜಿಲ್ಲೆಗೆ ಮಂಜೂರಾದ ಮನೆಗಳ ಬಗ್ಗೆ– ಶ್ರೀಮತಿ ಮೋಟಮ್ಮ

3689 – ಬೆಳಗಾವಿ ಜಿಲ್ಲೆಯ ಕೆರೆಗಳಿಗೆ ನದಿಗಳಿಂದ ಏತ ನೀರಾವರಿ ಮೂಲಕ ನೀರು ತುಂಬಿಸುವ ಯೋಜನೆಗಳು ನೆನಗುದಿಗೆ ಬಿದ್ದಿರುವ ಬಗ್ಗೆ.
– ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ

3683 – ವಸತಿ ಯೋಜನೆ ಬಗ್ಗೆ– ಶ್ರೀ ನಿರಾಣಿ ಹಣವಂತ್ ರುದ್ರಪ್ಪ

3767 – ಕಾರ್ಮಿಕ ಕಲ್ಯಾಣ ನಿಧಿ– ಶ್ರೀ ಟಿ.ಎ.ಶರವಣ

3741 – ರೈತರ ಜಮೀನಿಗೆ ಪರಿಹಾರಧನ ನೀಡುವ ಬಗ್ಗೆ– ಶ್ರೀ ಆರ್.ಧರ್ಮಸೇನ

3783 – ಗಾರ್ಮೆಂಟ್ಸ್‌ಗಳಲ್ಲಿನ ಮಹಿಳಾ ಕಾರ್ಮಿಕರ ಬಗ್ಗೆ– ಎಂ.ನಾರಾಯಣಸ್ವಾಮಿ

3506 – ಪರಿಶಿಷ್ಟ ಪಂಗಡ ಪ್ರಮಾಣಪತ್ರ ವಿತರಣೆಯಲ್ಲಿ ತಾರತಮ್ಯ ಮಾಡುತ್ತಿರುವ ಬಗ್ಗೆ
– ಶ್ರೀ ರಘುನಾಥ ರಾವ್ ಮಲ್ಕಾಪೂರೆ

3774 – ಗ್ರಾಮ ಸಹಾಯಕರನ್ನು ಗ್ರೂಪ್ 'ಡಿ' ಎಂದು ಪರಿಗಣಿಸುವ ಬಗ್ಗೆ
– ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ

3659 – ಸರ್ವೇಯರ್ ಬಗ್ಗೆ ಮಾಹಿತಿ ಕೋರಿ
– ಶ್ರೀ ಎಸ್.ರವಿ

3778 – ಈಶಾನ್ಯ ಪದವೀಧರರ ಕ್ಷೇತ್ರದಲ್ಲಿ ಭೂಮಾಪಕರ ಖಾಲಿ ಹುದ್ದೆಗಳ ಬಗ್ಗೆ
– ಶ್ರೀ ಅಮರನಾಥ ಪಾಟೀಲ್

3691+
3692 – ರೈತರ ಜಮೀನುಗಳನ್ನು ಪೋಡಿ ಮಾಡಿಕೊಡಲು ವಸೂಲು ಮಾಡಿದ ಕೋಟ್ಯಾಂತರ ರೂಪಾಯಿ ಶುಲ್ಕ ಹಣ ಕಣ್ಮರೆಯಾಗಿರುವ ಬಗ್ಗೆ
– ಶ್ರೀ ರಾಮಚಂದ್ರ ಗೌಡ
– ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ

**ಆ) ಚುಕ್ಕೆ ರಹಿತ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.**

2. **ಸಭಾಪತಿಯವರ ಅನುಮತಿ ಮೇರೆ ಚರ್ಚಿಸಲ್ಪಟ್ಟ ವಿಷಯಗಳು.**

**ಅ) ರಾಜೀವಗಾಂಧಿ ಗ್ರಾಮೀಣ ವಸತಿ ನಿಗಮದ ಜಿಲ್ಲಾ ಹಾಗೂ ತಾಲ್ಲೂಕು ನೋಡಲ್ ಅಧಿಕಾರಿಗಳ ವೇತನ ಕಳೆದ 17 ತಿಂಗಳಿಂದ ಪಾವತಿಯಾಗದಿರುವ ಬಗ್ಗೆ.**

- ಶ್ರೀ ಬಸವರಾಜ ಹೊರಟ್ಟಿ
- ಶ್ರೀ ಎಂ.ಕೃಷ್ಣಪ್ಪ(ವಸತಿ ಸಚಿವರು)
-

**ಆ) ರಾಜ್ಯದ ಸುಮಾರು 6022 ಗ್ರಾಮ ಪಂಚಾಯತ್‌ಗಳಲ್ಲಿ ಡಾಟಾ ಎಂಟ್ರಿ ಆಪರೇಟ್ ನೇಮಕಾತಿ ಬಗ್ಗೆ.**

- ಶ್ರೀ ಕೋಟ ಶ್ರೀನಿವಾಸ ಪೂಜಾರಿ
- ಶ್ರೀ ಹೆಚ್.ಕೆ.ಪಾಟೀಲ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

**ಇ) ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಇ-ಆಫೀಸ್ ಆರಂಭಿಸಿರುವುದರಿಂದ ತೊಂದರೆಯಾಗಿರುವ ಬಗ್ಗೆ.**

- ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್)
- ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು)

**ಈ) ಸ್ನಾತಕೋತ್ತರ ಕೇಂದ್ರ ಧಾರವಾಡದಲ್ಲಿ ಬೋಧಕ ಮತ್ತು ಬೋಧಕೇತರರನ್ನು ಖಾಯಂ ಆಗಿ ನೇಮಿಸಿಕೊಂಡು ಪ್ರೊಬೇಷನರಿ ಅವಧಿ ಡಿಕ್ಲೇರ್ ಮಾಡದಿರುವ ಬಗ್ಗೆ.**

- ಶ್ರೀ ಕೆ.ಟಿ.ಶ್ರೀಕಂಠೇಗೌಡ
- ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು)

**೦3. ಸಭೆಯ ಮುಂದಿಡಲಾದ ಕಾಗದಪತ್ರಗಳು**

**೦4. ಅರ್ಜಿಯನ್ನೊಪ್ಪಿಸುವುದು**

**೦5 ನಿಯಮ 33೦ರ ಮೇರೆಗೆ ಜರೂರು ವಿಷಯದ ಮೇಲಿನ ಚರ್ಚೆ.**

**ಅ) ರಾಜ್ಯದಲ್ಲಿ ಆಕಸ್ಮಿಕ ಅವಘಡ, ಪ್ರಾಕೃತಿಕ ವಿಪತ್ತುಗಳು ಸಂಭವಿಸಿದಲ್ಲಿ ಮೃತರಾಗುತ್ತಿರುವ ನಾಗರಿಕರಿಗೆ ಸಮಾನವಾಗಿ ಪರಿಹಾರ ಒದಗಿಸುವ ಬಗ್ಗೆ.**

- ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ರಮೇಶ್ ಬಾಬು
- ಶ್ರೀ ಎಂ.ಕೆ. ಪ್ರಾಣೇಶ್
- ಶ್ರೀ ಶರಣಪ್ಪ ಮಟ್ಟೂರ
- ಶ್ರೀ ಕಾಗೋಡು ತಿಮ್ಮಪ್ಪ(ಕಂದಾಯ ಸಚಿವರು)

**ಆ) ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳಿಗೆ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲಾಗಿರುವ ಆಪ್ತ ಸಹಾಯಕರುಗಳಿಗೆ ಕಳೆದ ಎಂಟು-ಒಂಭತ್ತು ತಿಂಗಳುಗಳಿಂದ ವೇತನ ನೀಡದಿರುವ ಬಗ್ಗೆ.**

- ಶ್ರೀ ಬಿ.ಜೆ.ಪುಟ್ಟಸ್ವಾಮಿ
- ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
- ಶ್ರೀ ಕಾಗೋಡು ತಿಮ್ಮಪ್ಪ(ಕಂದಾಯ ಸಚಿವರು)

**೦6. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ.**

**ಅ) ಸಾರ್ವಜನಿಕ ಸುರಕ್ಷೆಯ (ಕ್ರಮಗಳ) ಜಾರಿ ವಿಧೇಯಕ, 2017**

– ಶ್ರೀ ರಾಮಚಂದ್ರಗೌಡ
– ಶ್ರೀ ರಮೇಶ್ ಬಾಬು
– ಶ್ರೀ ವಿ.ಎಸ್.ಉಗ್ರಪ್ಪ
– ಶ್ರೀ ಐವನ್ ಡಿ'ಸೋಜಾ(ಆಡಳಿತ ಪಕ್ಷದ ಮುಖ್ಯ ಸಚೇತಕರು)
– ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು)
– ಶ್ರೀ ಕೆ.ಟಿ.ಶ್ರೀಕಂಠೇಗೌಡ
– ಶ್ರೀ ಬಿ.ಜೆ.ಪುಟ್ಟಸ್ವಾಮಿ
– ಶ್ರೀ ಬಸವನಗೌಡ ಆರ್.ಪಾಟೀಲ್(ಯತ್ನಾಳ್)
– ಶ್ರೀ ಭಾನುಪ್ರಕಾಶ್
– ಡಾ॥ ಜಯಮಾಲ ರಾಮಚಂದ್ರ
– ಶ್ರೀ ಶರಣಪ್ಪ ಮಟ್ಟೂರ
– ಶ್ರೀಮತಿ ತಾರಾಅನೂರಾಧ
– ಶ್ರೀ ಕಾಂತರಾಜು(ಬಿಎಂಎಲ್)
– ಶ್ರೀ ಪಿ.ಆರ್.ರಮೇಶ್
– ಶ್ರೀ ಟಿ.ಎ. ಶರವಣ
– ಶ್ರೀ ಆರ್. ಪ್ರಸನ್ನಕುಮಾರ್
– ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
– ಶ್ರೀ ರಾಮಲಿಂಗಾರೆಡ್ಡಿ(ಗೃಹ ಸಚಿವರು)

**07. ಪ್ರಕಟಣೆಗಳು**

<><><>

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಕರ್ನಾಟಕ ವಿಧಾನ ಪರಿಷತ್ತು**

**ಬುಧವಾರ, 15ನೇ ನವೆಂಬರ್ 2017**

**ಸದನವು ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಬೆಳಗ್ಗೆ 11 ಗಂಟೆ 12 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಡಿ.ಹೆಚ್.ಶಂಕರಮೂರ್ತಿ) ಅವರು**

**ಪೀಠದಲ್ಲಿ ಉಪಸ್ಥಿತರಿದ್ದರು.**

**01. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು**

**ಪ್ರಶ್ನೆ ಸಂಖ್ಯೆ:3700**

**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀ ಎನ್.ಎಸ್.ಬೋಸ್‌ರಾಜು:-**ಮಾನ್ಯ ಸಭಾಪತಿಯವರೇ, ತುಂಗಭದ್ರಾ ಜಲಾಶಯದಿಂದ ಕರ್ನಾಟಕ ಮತ್ತು ಆಂಧ್ರಪ್ರದೇಶಗಳ ಸುಮಾರು 14 ಲಕ್ಷ ಎಕರೆಗೆ ನೀರು ಕೊಡಬೇಕು ಎನ್ನುವುದು ನಮ್ಮ ನಿಮ್ಮೆಲ್ಲರ ಆಶಯವಾಗಿದೆ. ಸದರಿ ಜಲಾಶಯದಲ್ಲಿ ಸುಮಾರು 32 ಟಿ.ಎಂ.ಸಿ. ಯಷ್ಟು ಹೂಳು ತುಂಬಿಕೊಂಡಿದೆ ಎನ್ನುವುದನ್ನು ಸರ್ಕಾರವೇ ಒಪ್ಪಿಕೊಂಡಿದೆ. ಇಷ್ಟೂ ಪ್ರಮಾಣದ ನೀರು ಈಗ ಬೇರೆ ರಾಜ್ಯಕ್ಕೆ ಹೋಗುತ್ತಿದೆ. ಈ ನೀರನ್ನು ನಮ್ಮ ರೈತರು ಯಾವರೀತಿ ಬಳಸಿಕೊಳ್ಳಬೇಕು ಎನ್ನುವುದರ ಬಗ್ಗೆ ಸರಿಯಾದ ಉತ್ತರ ಸಿಗುತ್ತಿಲ್ಲ. ನಮ್ಮ ನೀರಾವರಿ ಸಚಿವರು ರಾಜ್ಯದಲ್ಲಿ ಸಾಕಷ್ಟು ಕಾಮಗಾರಿ ಕೆಲಸಗಳನ್ನು ಉತ್ಸಾಹದಿಂದ ಮತ್ತು ಶೀಘ್ರಗತಿಯಲ್ಲಿ ಮಾಡುವ ಪ್ರಯತ್ನ ಮಾಡುತ್ತಿದ್ದಾರೆ. ಆದರೆ, ತುಂಗಭದ್ರಾ ಅಚ್ಚುಕಟ್ಟು ಪ್ರದೇಶದ ಕಡೆ ಹೆಚ್ಚು ಗಮನಹರಿಸುತ್ತಿಲ್ಲ ಎನ್ನುವ ಭಾವನೆ ನಮಗೆ ಬರುತ್ತಿದೆ. ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳು ಇಡೀ ರಾಷ್ಟ್ರಕ್ಕೆ ಮತ್ತು ಹೊರ ದೇಶಗಳಿಗೆ ಸೋನಾಮಸೂರಿ ಅಕ್ಕಿಯನ್ನು ರಫ್ತು ಮಾಡುತ್ತದೆ. ಇದು ಎಲ್ಲರಿಗೂ ತಿಳಿದಿರುವ ವಿಚಾರವಾಗಿದೆ. ಈ ಜಲಾಶಯದಲ್ಲಿ ಏನು 32 ಟಿ.ಎಂ.ಸಿ. ಹೂಳು ಸಂಗ್ರಹ ವಾಗಿದೆಯೋ ಆ ಕುರಿತು ಯಾವಾಗ ಪ್ರಶ್ನೆ ಕೇಳಿದರೂ ಸರಿಯಾದ ಉತ್ತರ ನಮಗೆ ಸಿಗುತ್ತಿಲ್ಲ. 32 ಟಿ.ಎಂ.ಸಿ. ನೀರು ಸಂಗ್ರಹವಾಗುವ ದಿಸೆಯಲ್ಲಿ ಸರ್ಕಾರ ಸೂಕ್ತ ಕಳಕಳಿ ಏಕೆ ತೋರಿಸುತ್ತಿಲ್ಲ ಎನ್ನುವ ಪ್ರಶ್ನೆಗೆ ಉತ್ತರ ಸಿಗುತ್ತಿಲ್ಲ. ಹಿಂದೆ, ಭದ್ರಾ ನದಿಯಿಂದ ತುಂಗಭದ್ರಾ ತನಕ ಯಾವುದೇ ಜಲಾಶಯ ಅಥವಾ ಯಾವುದೇ lift irrigation

ಇರಲಿಲ್ಲ. ಆದರೆ ಈಗ ಸುಮಾರು 18-20 ಟಿ.ಎಂ.ಸಿ. ಯಷ್ಟು ನೀರು ಲಿಫ್ಟ್ ಮಾಡುವುದಕ್ಕೆ ಸರ್ಕಾರ ಅನುಮೋದನೆ ಕೊಟ್ಟಿದೆ. ಒಟ್ಟು 133 ಟಿ.ಎಂ.ಸಿ.ಯ ಪ್ರಮಾಣದಲ್ಲಿ, ಇದೊಂದು 32 ಟಿ.ಎಂ.ಸಿ. ಮತ್ತು ಅದೊಂದು 20 ಟಿ.ಎಂ.ಸಿ., ಅಂದರೆ ಒಟ್ಟು 52 ಟಿ.ಎಂ.ಸಿ. ನೀರು ಸದುಪಯೋಗವಾಗುವ ಹಾಗೆ ನೋಡಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಕರ್ನಾಟಕದ ಸುಮಾರು 10 ಲಕ್ಷ ಎಕರೆ ಮತ್ತು ಉಳಿದದ್ದು ಆಂಧ್ರಪ್ರದೇಶದ 4 ಲಕ್ಷ ಎಕರೆ ಭೂಮಿಗೆ ನೀರು ಸಿಗುತ್ತದೆ. ಸರ್ಕಾರ ಏಕೆ ಇದರ ಬಗ್ಗೆ ಗಂಭೀರವಾಗಿ ಗಮನಕೊಡುತ್ತಿಲ್ಲ ಎನ್ನುವುದು ನಮ್ಮ ಪ್ರಶ್ನೆಯಾಗಿದೆ.

**ಸಭಾಪತಿಯವರು**:-ಮಾನ್ಯ ಸಚಿವರೇ, ಮಾನ್ಯ ಸದಸ್ಯರಾದ ಬೋಸ್‌ರಾಜುರವರು ಸೋನಾ ಮಸೂರಿ ಅಕ್ಕಿಯ ರಫ್ತಿನ ಬಗ್ಗೆ ಮಾತನಾಡಿದರು ಮತ್ತು 32 ಟಿ.ಎಂ.ಸಿ. ನೀರು ಸಂಗ್ರಹವಾಗುವ ನಿಟ್ಟಿನಲ್ಲಿ ಏನು ಕ್ರಮ ಕೈಗೊಳ್ಳುತ್ತೀರಿ ಎಂದು ಕೇಳಿದ್ದಾರೆ.

**ಶ್ರೀ ಎಂ.ಬಿ.ಪಾಟೀಲ**:-ಮಾನ್ಯ ಸಭಾಪತಿಯವರೇ, Central Water Commission Norms ಗಿಂತ ಜಾಸ್ತಿ ಹೂಳು ತುಂಬಿರುವಂತಹ ಜಲಾಶಯ ಎಂದರೆ ಅದು ತುಂಗಭದ್ರಾ ಜಲಾಶಯ. ಈ ಹೂಳು ಗಣನೀಯ ಪ್ರಮಾಣದಲ್ಲಿ ಸೇರಿಕೊಂಡಿದೆ. ಯಾವಾಗ ತುಂಗಭದ್ರಾ ಜಲಾಶಯ ಕಟ್ಟಿದರೋ ಅವತ್ತೇ ಪ್ರತಿವರ್ಷ ಅರ್ಧ ಟಿ.ಎಂ.ಸಿ. ಹೂಳು ಶೇಖರಣೆ ಆಗುತ್ತದೆ ಎಂದು ಹೇಳಲಾಗಿತ್ತು. ಈ ಜಲಾಶಯ ಕಟ್ಟಿ 64 ವರ್ಷವಾಗಿದ್ದು, ಅದರಲ್ಲಿ 32 ಟಿ.ಎಂ.ಸಿ. ಯಷ್ಟು ಹೂಳು ತುಂಬಿಕೊಂಡಿದೆ. ಈ ನಿಟ್ಟಿನಲ್ಲಿ ಸರ್ಕಾರ ಮತ್ತು ಜಲಸಂಪನ್ಮೂಲ ಸಚಿವರು ಗಂಭೀರವಾಗಿ ಗಮನಹರಿಸುತ್ತಿಲ್ಲ ಎಂದು ಮಾನ್ಯ ಸದಸ್ಯರು ಹೇಳಿದರು.

**ಸಭಾಪತಿಯವರು**:- ಮಾನ್ಯ ಬೋಸ್‌ರಾಜುರವರ ಧ್ವನಿಗೆ ಮಾನ್ಯ ಅಲ್ಲಂ ವೀರಭದ್ರಪ್ಪನವರೂ ಧ್ವನಿಗೂಡಿಸುತ್ತಿದ್ದರು.

**ಶ್ರೀ ಎಂ.ಬಿ.ಪಾಟೀಲ**:- ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ನಾವು ಏನೇನು ಕ್ರಮ ಕೈಗೊಳ್ಳುತ್ತಿದ್ದೇವೆ ಎನ್ನುವುದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಆದರೂ, ಕೆಲಸ ಇನ್ನೂ ಬೇಗ ಆಗಬೇಕು ಎನ್ನುವ ಕಾರಣದಿಂದ ಸರ್ಕಾರದ ಮೇಲೆ ಒತ್ತಡ ತರಲು ಈ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದಾರೆ. 32 ಟಿ.ಎಂ.ಸಿ. ಹೂಳು ತೆಗೆಯಬೇಕು ಎನ್ನುವ ಪ್ರಯತ್ನ ನಡೆಯುತ್ತಿದೆ. ಈ ಪ್ರಯತ್ನ ಹಿಂದಿನ ಸರ್ಕಾರದಲ್ಲೂ ನಡೆಯಿತು. ಮಾನ್ಯ ಬಸವರಾಜ ಬೊಮ್ಮಾಯಿಯವರು ಜಲಸಂಪನ್ಮೂಲ ಸಚಿವರಾಗಿದ್ದಾಗ Pilot Project ಆಗಿ ಒಂದು ಏಜೆನ್ಸಿಗೆ ಕೊಟ್ಟರು. ಆದರೆ ಅವರು ಆ ಕೆಲಸ ಮಾಡುವುದಕ್ಕೆ ಮುಂದೆ ಬರಲಿಲ್ಲ. ನನ್ನ ಮಾಹಿತಿ ಪ್ರಕಾರ ಆ ಏಜೆನ್ಸಿಯವರು, ಆ ಹೂಳಿನ ಜೊತೆ ಕಬ್ಬಿಣದ ಅದಿರು ಸಿಗುತ್ತದೆ ಮತ್ತು ಗುಣಮಟ್ಟದ ಮರಳು ಸಿಗುತ್ತದೆ ಎಂದು ಭಾವಿಸಿದ್ದರು. ಆದರೆ ಅದು ಸಿಗದೇ ಇದ್ದಾಗ ಆ ಕೆಲಸದಿಂದ ಹಿಂದೆ ಸರಿದುಬಿಟ್ಟರು. 32 ಟಿ.ಎಂ.ಸಿ. ಹೂಳು ತೆಗೆಯುವಂಥದ್ದು

ಅತ್ಯಂತ ಕಷ್ಟಕರವಾದ ಕೆಲಸವಾಗಿದೆ. It is next to impossible. ಒಂದು ವೇಳೆ 32 ಟಿ.ಎಂ.ಸಿ. ಹೂಳು ತೆಗೆದರೆ ಅದನ್ನು ಎಲ್ಲಿ ಹಾಕಬೇಕು ಎನ್ನುವ ಪ್ರಶ್ನೆ ಬರುತ್ತದೆ. ಒಂದು ವೇಳೆ ಇಷ್ಟು ಪ್ರಮಾಣದ ಹೂಳನ್ನು ತೆಗೆದು ಹಾಕುವುದಾದರೆ ಅದಕ್ಕೆ ಸುಮಾರು 66 ಸಾವಿರ ಎಕರೆ ಭೂಮಿ ಬೇಕಾಗುತ್ತದೆ. So, it is not feasible. 66 ಸಾವಿರ ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದು ಅತ್ಯಂತ ಕಷ್ಟಕರವಾಗಿರುತ್ತದೆ. ಈ ಕೆಲಸಕ್ಕೆ ಸುಮಾರು 25-30 ಸಾವಿರ ಕೋಟಿ ರೂಪಾಯಿಗಳು ಬೇಕಾಗಬಹುದು. ಮಾಧ್ಯಮಗಳಲ್ಲಿ, ರೈತರು ಹೂಳು ತೆಗೆಯುತ್ತಿರುವುದನ್ನು ತೋರಿಸುತ್ತಾರೆ. ಸಣ್ಣ ಕೆರೆಗಳಿಂದ ಹೂಳನ್ನು ತೆಗೆದುಕೊಂಡು ತಮ್ಮ ಜಮೀನಿಗೆ ಸಾಗಿಸಬಹುದೇ ಹೊರತು ಅದು ದೊಡ್ಡ ಪ್ರಮಾಣದ್ದಾಗಿರುವುದಿಲ್ಲ. 32 ಟಿ.ಎಂ.ಸಿ. ಹೂಳು ತೆಗೆಯುವ ವಿಚಾರಕ್ಕೆ ಸಂಬಂಧಪಟ್ಟಂತೆ ನಾವು Global Expression ಅನ್ನು ಕರೆದಿದ್ದೆವು. ಅದರ ತಜ್ಞರು, it is not at all feasible ಎಂದು ಹೇಳಿದರು. ಹೂಳು ತೆಗೆಯುವ ಸಂಬಂಧ ನಮ್ಮ ಇಲಾಖೆಯ ತಜ್ಞರು ವಿಚಾರ ಮಾಡಿದಾಗ, Balancing Reservoir ಮಾಡಿ ಅದನ್ನು gravity ಮೇಲೆ Flood Flow Canal ಮೂಲಕ ತುಂಬಬೇಕಾಗುತ್ತದೆ ಎಂದು ಹೇಳಿದರು. ಇದು ಅಂತರರಾಜ್ಯ ನೀರು ಹಂಚಿಕೆ ವಿಚಾರವಾಗಿರುವುದರಿಂದ, 32 ಟಿ.ಎಂ.ಸಿ. ಯಷ್ಟು ನೀರನ್ನು ಏನು ನಾವು ಕಳೆದುಕೊಂಡಿದ್ದೇವೆಯೋ ಅದನ್ನು ಮುಂದೆ 44 ರಿಂದ 52 ಟಿ.ಎಂ.ಸಿ.ಗೆ ವಿಸ್ತರಣೆ ಮಾಡಿಕೊಳ್ಳುವುದಕ್ಕೆ ಅವಕಾಶ ಸಿಗುವ ಹಾಗೆ 2015-16ರ ದರದ ಆಧಾರದ ಮೇಲೆ ಸುಮಾರು ರೂ. 6 ಸಾವಿರ ಕೋಟಿಗಳು ಬೇಕಾಗುತ್ತದೆ. Flood Flow Canal ಮಾಡಿದರೆ 90 ದಿವಸಗಳ ಅಂದರೆ, ಯಾವಾಗ flood ಇರುತ್ತದೆಯೋ ಆಗ ಮಾತ್ರ ನೀರನ್ನು ಸಂಗ್ರಹಿಸಬೇಕಾಗುತ್ತದೆ. Flood Flow Canals of wider size ಗೆ ಸುಮಾರು 700-800 ಎಕರೆ ಭೂಮಿ ಬೇಕಾಗುತ್ತದೆ. ಈ Reservoir ಅನ್ನು ಗಂಗಾವತಿ ತಾಲ್ಲೂಕಿನ ನವಿಲೆ ಪ್ರದೇಶದ ಹತ್ತಿರ ಶೇಖರಣೆ ಮಾಡುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ. gravity ಮೂಲಕ ಸುಮಾರು 38 ಕಿ.ಮೀ. ನಷ್ಟು Flood Flow Canal ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ. ಈ Balancing Reservoir ನಿರ್ಮಾಣಕ್ಕೆ ಸುಮಾರು 16,030 ಎಕರೆ ಭೂಮಿ ಬೇಕಾಗುತ್ತದೆ ಹಾಗೂ ಸುಮಾರು ರೂ.6 ಸಾವಿರ ಕೋಟಿಯ ಅಂದಾಜು ಇದ್ದು ಈ ಕುರಿತು ತುಂಗಭದ್ರಾ ಬೋರ್ಡ್‌ನಲ್ಲೂ ಕೂಡ ಚರ್ಚೆ ಮಾಡಿದ್ದೇವೆ. ಅವರಿಂದ ಇದಕ್ಕೆ ಉತ್ತರ ಬಂದಿಲ್ಲ. ನಮ್ಮಲ್ಲಿ ಈಗ ಒಂದು DPR (Detailed Project Report) ಕೂಡ ತಯಾರಾಗಿದೆ. ಆ DPR ಅನ್ನು unofficial ಆಗಿ ಅವರಿಗೆ ಸಬ್‌ಮಿಟ್ ಮಾಡಿದ್ದೇವೆ. ಬೋರ್ಡ್‌ನಲ್ಲಿ ನಮ್ಮ ಪ್ರತಿನಿಧಿಯಾಗಿರುವ ಇಲಾಖೆಯ ಕಾರ್ಯದರ್ಶಿ ಶ್ರೀ ಗುರುಪಾದಸ್ವಾಮಿಯವರು officially ಚರ್ಚೆ ಮಾಡಿದ್ದಾರೆ. ಇದಕ್ಕೆ viable alternate ಏನಾದರೂ ಇದ್ದರೆ ಇದು ಒಂದು possibility

ಆಗಿದೆ. Gravity ಮೂಲಕ ನವಿಲೆ ತನಕ ಹೋಗಿ ಮುಂದೆ 142ನೇ ಕಿಲೋ ಮೀಟರ್‌ಗೆ ಅದು ಮತ್ತೆ join ಆಗುತ್ತದೆ.

(974)15.11.2017.11.20 ಡಿಎಸ್-ಕೆಎಸ್

**ಶ್ರೀ ಎಂ.ಬಿ.ಪಾಟೀಲ್(ಮುಂದು):-**

ಅದನ್ನು ಬಹಳ ಗಂಭೀರವಾಗಿ ನಮ್ಮ ಸರ್ಕಾರ ಪರಿಗಣಿಸಿದೆ. ಅದು ಮಾನ್ಯ ಬೋಸ್‌ರಾಜ್‌ರವರಿಗೆ ಎಲ್ಲಾ ಗೊತ್ತಿದೆ. ಆದರೂ ಅವರು ಒತ್ತಡ ತಂದರೆ ಬೇಗ ಆಗುತ್ತದೆ ಎನ್ನುವ ಉದ್ದೇಶದಿಂದ ಕೇಳುತ್ತಿದ್ದಾರೆ. ಅದು ಬೇಗ ಆಗುವುದಕ್ಕೆ ಮುಂದಿನ ಬೋರ್ಡ್ ಮೀಟಿಂಗ್‌ನಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ. ಇದಕ್ಕೇನು ಅವರಿಂದ ನಮಗೆ ಉತ್ತರ ಬಂದಿಲ್ಲ. ಅವರ ಮೇಲೆ ಒತ್ತಾಯ ತಂದು ಇದರ ಬಗ್ಗೆ ಶೀಘ್ರವಾಗಿ ನಿರ್ಣಯ ತೆಗೆದುಕೊಳ್ಳಬೇಕೆಂದು ತುಂಗಾಭದ್ರಾ ಬೋರ್ಡ್‌ನಲ್ಲಿ ಅವರಿಗೆ ಒತ್ತಾಯ ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಅವರ ಮತ್ತೊಂದು ಪ್ರಶ್ನೆಗೆ ತಾವು ಉತ್ತರ ಹೇಳಲಿಲ್ಲ. ಅವರು ರಾಯಚೂರು ನಗರ ಹಾಗೂ ಇತರೆ ಗ್ರಾಮಗಳಗೆ ಕುಡಿಯುವ ನೀರಿನ ಸರಬರಾಜು ಬಗ್ಗೆ ಕೇಳಿದ್ದಾರೆ.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೆ, ಅದರ ಬಗ್ಗೆ ಚರ್ಚೆ ಮಾಡಬೇಕೆಂದರೆ ತಾವು ಅರ್ಧಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಮಾಡಿಕೊಡಬೇಕಾಗುತ್ತದೆ.

**Mr. CHAIRMAN:-** Particular ಆಗಿ ಈ ವಿಷಯದ ಬಗ್ಗೆ ಅವರು notice ಕೊಟ್ಟರೆ ಅವರಿಗೆ ಗಮನ ಸೆಳೆಯುವ ಸೂಚನೆ ಅಥವಾ ನಿಯಮ 330 ರಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತೇನೆ. ತಾವು ಉತ್ತರ ಹೇಳುವುದಕ್ಕೆ ಬರಬೇಕು ಅಷ್ಟೆ.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೆ, ಮೊದಲನೆಯ ಪ್ರಶ್ನೆ ತುಂಗಾಭದ್ರಾದ ಬಗ್ಗೆ, ಎರಡನೆಯ ಪ್ರಶ್ನೆ NRBC (Narayanapura Right Bank Canal), ಮೂರನೆಯ ಪ್ರಶ್ನೆ ರಾಯಚೂರು ನಗರ ಹಾಗೂ ಇತರೆ ಗ್ರಾಮಗಳಗೆ ಕುಡಿಯುವ ನೀರಿನ ಸರಬರಾಜು ಬಗ್ಗೆ ಕೇಳಿದ್ದಾರೆ. ಈ ಪ್ರಶ್ನೆ ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ವ್ಯಾಪ್ತಿಗೆ ಬರುತ್ತದೆ. ನಾಲ್ಕನೆಯ ಪ್ರಶ್ನೆ ತುಂಗಭದ್ರಾ ನದಿ ಪಾತ್ರದಲ್ಲಿ ಗಾದಿಗನೂರ ಯೋಜನೆಯಿಂದ ತುಂಗಭದ್ರಾ ಯೋಜನೆ ನಡುವೆ ಎಷ್ಟು ಏತ ನೀರಾವರಿ ಯೋಜನೆಗಳಿವೆ ಎಂದು ಪ್ರಶ್ನೆಯನ್ನು ಕೇಳಿದ್ದಾರೆ. ಇಷ್ಟು ದೊಡ್ಡ ನಾಲ್ಕು ಪ್ರಶ್ನೆಗಳನ್ನು ಒಂದರಲ್ಲಿಯೇ ಮಾನ್ಯ ಬೋಸ್‌ರಾಜ್‌ರವರು ಕೇಳಿದ್ದಾರೆ.

**ಶ್ರೀ ಎನ್.ಎಸ್.ಬೋಸ್‌ರಾಜು**:- ಮಾನ್ಯ ಸಭಾಪತಿಯವರೆ, ಮೂರು ಜಿಲ್ಲೆಗಳಿಗೆ ಸೇರಿರತಕ್ಕಂಥ ಜನಪ್ರತಿನಿಧಿಗಳನ್ನು ಕರೆದು ಈ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಮಾನ್ಯ ಸಚಿವರು ಪ್ರಯತ್ನ ಮಾಡಬೇಕು. ಅದು ಆಗುವುದಿಲ್ಲವೆಂದರೆ ಇದಕ್ಕೆ ಪರಿಹಾರ ಏನು ಎಂಬುದು ನಮಗೆ ಗೊತ್ತಾಗಬೇಕಾಗುತ್ತದೆಯಲ್ಲವೆ? ಕೋಟ್ಯಾಂತರ ರೂಪಾಯಿಗಳ turnover ಆಗುತ್ತಿದೆ. ರೈತರ ಜೀವನವೆಲ್ಲಾ ಅದರ ಮೇಲೆ ನಡೆಯುತ್ತಿದೆ. ಎರಡನೆಯ ವಿಷಯ, ಕುಡಿಯುವ ನೀರಿಗೆ ಅವರ ಅಧಿಕಾರಿಗಳಿಂದ impractical approach ಆಗಿದೆ. ಇದರ ಬಗ್ಗೆ ನಾನು ನಾಲ್ಕು ಬಾರಿ ಬೆಂಗಳೂರಿನಲ್ಲಿ ಮತ್ತು ಬೆಳಗಾವಿಯ ಅಧಿವೇಶನದಲ್ಲಿ ಮಾತನಾಡಿದ್ದೇನೆ. 145 ಕಿ.ಮೀ. ನಿಂದ ನಾವು ಕುಡಿಯುವ ನೀರನ್ನು ತಂದುಕೊಡುತ್ತೇವೆಂದರೆ ಅದು ದಾರಿ ತಪ್ಪಿಸುವಂತಹ ಕೆಲಸವಾಗುತ್ತದೆ. ಆದ್ದರಿಂದ ಅಲ್ಲಿರತಕ್ಕಂಥ ಪರಿಸ್ಥಿತಿ ಏನು, ಯಾವ ರೀತಿ ಕುಡಿಯುವ ನೀರನ್ನು ಒದಗಿಸುತ್ತಾರೆ ಎನ್ನುವುದು ಇಲ್ಲಿರುವಂತಹ ಪ್ರಶ್ನೆ. ಅದನ್ನು ಮಾಡುವುದಕ್ಕಾಗುವುದಿಲ್ಲವೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. 144 ಸೆಕ್ಷನ್ ಹಾಕಿ ನೀರು ಕೊಡಲಾಗುತ್ತಿದೆ ಎಂದು ಜಿಲ್ಲಾಧಿಕಾರಿಗಳು ಅನೇಕ ಬಾರಿ ಎನ್.ಆರ್.ಬಿ.ಸಿ. ಮೀಟಿಂಗ್‌ನಲ್ಲಿ ಹೇಳಿದ್ದಾರೆ. 145 ಕಿ.ಮೀ.ನಿಂದ ಕುಡಿಯುವ ನೀರು ಕೊಡುತ್ತಾರೆಂದರೆ, it is impractical. ನಾವು ಈ ವಿಚಾರವನ್ನು ಜವಾಬ್ದಾರಿಯಿಂದ ಎಷ್ಟು ಸಲ ಹೇಳಿದರೂ ಕೂಡ ಅವರು ಮತ್ತು ಅವರ ಇಲಾಖೆಯ ಅಧಿಕಾರಿಗಳು ಅರ್ಥ ಮಾಡಿಕೊಳ್ಳುತ್ತಿಲ್ಲ. ಮಾನ್ಯ ಸಚಿವರು ಈ ಸಮಸ್ಯೆಯನ್ನು ಬಗೆಹರಿಸಬೇಕು.

**ಶ್ರೀ ಎಂ.ಬಿ.ಪಾಟೀಲ್**:- ಮಾನ್ಯ ಸಭಾಪತಿಯವರೇ, ಆ ನೀರನ್ನು ರಾಯಚೂರು ಕುಡಿಯುವ ನೀರಿನ ಬಳಕೆಗಾಗಿ ಇಲಾಖೆ ಆ ರೀತಿಯ ಒಂದು ಮಾರ್ಗ ಮಾಡಿಕೊಟ್ಟಿದೆ. ಆದರೆ ಅಲ್ಲಿಂದ ಬೇಡ, ಬೇರೆ ಕಡೆಯಿಂದ ಕೊಡಬೇಕೆಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಇದು ದುರುಪಯೋಗವಾಗುವುದಕ್ಕೆ ಬಹಳ ಸಾಧ್ಯತೆ ಇದೆ. ಆ ಪ್ರದೇಶದಲ್ಲಿರುವ ಜನ ಅದನ್ನು ವಿರೋಧಿಸುತ್ತಾರೆ. ಇದು ಸತ್ಯ ಪರಿಸ್ಥಿತಿ. ಅದಾಗ್ಯೂ ಕೂಡ ಮಾನ್ಯ ಬೋಸ್‌ರಾಜ್‌ರವರು ನನಗೂ ಹೇಳಿದ್ದಾರೆ, ಬೋರ್ಡ್ ಮೀಟಿಂಗ್‌ನಲ್ಲೂ ಹೇಳಿದ್ದಾರೆ, ಅದರ ಬಗ್ಗೆ ಬಹಳ ಚರ್ಚೆಯಾಗಿದೆ. ನಾನು ensure ಮಾಡುತ್ತೇನೆಂದು ಹೇಳಿದ್ದಾರೆ. ಮಾನ್ಯ ಬೋಸ್‌ರಾಜುರವರು ಹೇಳುವಂತಹ ಸ್ಥಳದಿಂದ ನೀರನ್ನು ಕೊಡಿಸಿದರೆ ಅಲ್ಲಿ ನಾಳೆ ಮುಂದೆ ಉಳಿದಿರುವವರು ಕುಡಿಯುವ ನೀರು ಬಿಟ್ಟು ಬೇರೆ ಬಳಕೆ ಮಾಡಿದರೆ ಅದು ಬಹಳ ದೊಡ್ಡ ಅನಾಹುತವಾಗುತ್ತದೆ. ಅದಕ್ಕೆ ಅವರು assure ಮಾಡುತ್ತಿದ್ದಾರೆ. ಅಷ್ಟಾಗಿಯೂ ಕೂಡ ನಾವು ಬಹಳ ಗಂಭೀರವಾಗಿ ತೆಗೆದುಕೊಳ್ಳುತ್ತಿದ್ದೇವೆ. ಅದಕ್ಕೆ ನಾನು ಸಭೆ ಕರೆಯುತ್ತೇನೆ. ಮಾನ್ಯ ಸದಸ್ಯರು ಮೂರು ಜಿಲ್ಲೆಯ ಪ್ರತಿನಿಧಿಗಳ ಸಭೆ ಕರೆಯಿರಿ ಎಂದು ಹೇಳಿದ್ದಾರೆ. ಸಭೆ ಕರೆದು ಚರ್ಚೆ ಮಾಡಿ ನಿರ್ಣಯ ತೆಗೆದುಕೊಳ್ಳುತ್ತೇನೆ.

**ಚುಕ್ಕೆ ಪ್ರಶ್ನೆ ಸಂಖ್ಯೆ: ೩೫೦೦**

**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೆ, ಚಿಕ್ಕಮಗಳೂರು ಜಿಲ್ಲೆಗೆ ಒಟ್ಟು 21,337 ಮನೆಗಳು ಮಂಜೂರಾಗಿವೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಅದರಲ್ಲಿ ಗ್ರಾಮೀಣ ಪ್ರದೇಶಕ್ಕೆ 19,632 ಮನೆಗಳು ಮತ್ತು ನಗರ ಪ್ರದೇಶಕ್ಕೆ 1,705 ಮನೆಗಳು ಮಂಜೂರಾಗಿವೆ ಎಂದು ಹೇಳಿದ್ದಾರೆ. ಸದರಿ ಮಂಜೂರಾದ ಮನೆಗಳ ಪೈಕಿ ಎಷ್ಟು ಮನೆಗಳನ್ನು ಹಂಚಿಕೆ ಮಾಡಲಾಗಿದೆ ಎಂದು ಪ್ರಶ್ನೆಯನ್ನು ಕೇಳಿದ್ದೇನೆ. ಸದರಿ ಮಂಜೂರಾದ 21,337 ಮನೆಗಳ ಪೈಕಿ 17,324 ಫಲಾನುಭವಿಗಳನ್ನು ಆಯ್ಕೆ ಮಾಡಿ ಮನೆಗಳನ್ನು ಹಂಚಿಕೆ ಮಾಡಲಾಗಿದೆ. 2,983 ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ಪ್ರಗತಿಯಲ್ಲಿದೆ ಎಂದರೆ ಅವರು ಎಸ್.ಸಿ/ಎಸ್.ಟಿ.ಯವರಿಗೆ ಮನೆಗಳನ್ನು ಕೊಟ್ಟಿದ್ದಾರೆಯೇ? ಅವರದ್ದು ಏನೇನು ಪ್ರಗತಿಯಾಗಿಲ್ಲ. Excess ಮನೆಗಳು ಪಂಚಾಯಿತಿಯಲ್ಲಿವೆ. ಅದಕ್ಕೆ ಕಾರಣ ಅವರಿಗೆ ನಿವೇಶನಗಳಿಲ್ಲ. ನಿವೇಶನ ಕೊಡುವುದಕ್ಕೆ ಒಂದು ಕಡೆ ಗೋಮಾಳ ಎಂದು ಹೇಳುತ್ತಾರೆ, ಮತ್ತೊಂದು ಕಡೆ deemed forest ಎಂದು ಹೇಳುತ್ತಾರೆ. ಹಾಗಾಗಿ ನಿವೇಶನ ಇಲ್ಲದೆ ಎಸ್.ಸಿ./ಎಸ್.ಟಿ.ಯವರಿಗೆ ಕೊಡುವಂತಹ ಮನೆ ಹಾಗೆ excess ಆಗಿ ಉಳಿದಿದೆ. Excess ಎನ್ನುವುದಕ್ಕಿಂತ ಹಾಗೆಯೇ ಉಳಿದಿದೆ. ಮತ್ತೊಂದು ಪ್ರಶ್ನೆ, ಎಷ್ಟು ಮನೆಗಳನ್ನು ಹಂಚಿಕೆ ಮಾಡದೇ ರದ್ದುಗೊಳಿಸಲಾಗಿದೆ? ರದ್ದುಗೊಳ್ಳಲು ಕಾರಣವೇನು ಎಂದು ಕೇಳಿದ್ದೇನೆ. ಕೆಲವು ಫಲಾನುಭವಿಗಳಿಗೆ ಸಾಕಷ್ಟು ಕಾಲಾವಕಾಶ ನೀಡಿದರೂ ಹಾಗೂ ಸ್ಥಳೀಯ ಅಧಿಕಾರಿಗಳು ಪೂರ್ಣ ಸಹಕಾರ ಹಾಗೂ ಪ್ರೋತ್ಸಾಹ ನೀಡಿದರೂ ಸಹ ತಮ್ಮ ವೈಯಕ್ತಿಕ ಕಾರಣಗಳಿಂದ ಮನೆಗಳನ್ನು ನಿಗದಿ ಸಮಯದಲ್ಲಿ ನಿರ್ಮಿಸಿಕೊಳ್ಳಲು ಆಸಕ್ತಿ ತೋರುತ್ತಿಲ್ಲ ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. ಇದರಲ್ಲಿ ಏನಾಗಿದೆ ಎಂದರೆ ರಾಜೀವ್ ಗಾಂಧಿ ವಸತಿ ಯೋಜನೆಯಲ್ಲಿ ಆಯ್ಕೆಯಾದ ಫಲಾನುಭವಿಗಳು ಜಿಪಿಎಸ್ ಮಾಡಬೇಕಾಗಿದೆ. ಜಿಪಿಎಸ್ ಮಾಡುವಾಗ ಮೂರು ತಿಂಗಳೊಳಗಾಗಿ ತಳಪಾಯವನ್ನು ಹಾಕಬೇಕು, ನಂತರ ಗೋಡೆ ಕಟ್ಟಬೇಕೆಂದು ಇದೆ. ನಮ್ಮಲ್ಲಿ ಮರಳಿನ ಕೊರತೆಯಾಗಿದ್ದರಿಂದ ಬಡವರಿಗೆ ಮರಳು ಸಿಗಲಾರದೆ ಮನೆಯನ್ನು ಕಟ್ಟುವುದಕ್ಕೆ ಸಾಧ್ಯವಾಗಿಲ್ಲ. ಅದಕ್ಕೆ ನಾನು ಈ ಸಂದರ್ಭದಲ್ಲಿ ಮಾನ್ಯ ಸಚಿವರಿಗೆ ಮನವಿ ಮಾಡಿಕೊಳ್ಳುವುದೇನೆಂದರೆ, 4,696 ಮನೆಗಳು ಇನ್ನೂ ಪ್ರಾರಂಭವಾಗಿರುವುದಿಲ್ಲವೆಂದು ಉತ್ತರದಲ್ಲಿ ತಿಳಿಸಿದ್ದಾರೆ. ದಯಮಾಡಿ ಅದಕ್ಕೆ ಮಾನ್ಯ ಸಚಿವರು excuse ಕೊಡಲಿ. ಮರಳು ಸಿಗದಿರುವ ಕಾರಣಕ್ಕೆ ಅವರು ಮನೆಗಳನ್ನು ಕಟ್ಟಿಕೊಂಡಿಲ್ಲ. ಅವರಿಗೆ ಕಾಲಾವಕಾಶವನ್ನು ವಿಸ್ತರಣೆ ಮಾಡಿ, ಆದರೆ ರದ್ದುಗೊಳಿಸಬಾರದೆಂದು ನಾನು ಒತ್ತಾಯ ಮಾಡುತ್ತೇನೆ. ಎಸ್.ಸಿ./ಎಸ್.ಟಿ.ಯವರಿಗೆ ನಿವೇಶನಗಳನ್ನು ಒದಗಿಸಿ ಅವರಿಗೆ ಮನೆ ಕೊಡಲೇಬೇಕೆಂದು ಮಾನ್ಯ ಸಚಿವರು ಪಂಚಾಯಿತಿಯವರಿಗೆ ಹೇಳಬೇಕು.

**ಸಭಾಪತಿಯವರು**:– ಮಾನ್ಯ ಸಚಿವರೇ, ಮನೆ ಕಟ್ಟದಿರುವುದಕ್ಕೆ ಕಾರಣವಿದೆ. ಮರಳೇ ಇಲ್ಲದಿದ್ದರೆ ಅವರು ಮನೆ ಹೇಗೆ ಕಟ್ಟುತ್ತಾರೆ, ಅವರಿಗೆ time extension ಕೊಡಿ.

**ಶ್ರೀ ಎಂ.ಕೃಷ್ಣಪ್ಪ**:–ಮಾನ್ಯ ಸಭಾಪತಿಯವರೇ, ನನಗೆ ತಿಳಿದಮಟ್ಟಿಗೆ ಇವರೆಲ್ಲಾ ಎತ್ತಿನ ಗಾಡಿಯಲ್ಲಿ ಮರಳನ್ನು ತಂದು ಚಿಕ್ಕ ಚಿಕ್ಕ ಮನೆಗಳನ್ನು ನಿರ್ಮಾಣ ಮಾಡುತ್ತಾರೆ. ಎತ್ತಿನ ಗಾಡಿಯಲ್ಲಿ ಮರಳು ತರುವುದಕ್ಕೆ ಏನೂ ಅಡ್ಡಿ ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಈ ತರಹದ್ದು ನನ್ನ ಗಮನಕ್ಕೆ ಬಂದಾಗ ಸುಮಾರು ಮೂರ್‍ನಾಲ್ಕು ಜಿಲ್ಲೆಗಳಲ್ಲಿ ಮತ್ತು ಚಿಕ್ಕಮಗಳೂರು ಜಿಲ್ಲೆಯಲ್ಲಿಯೂ ಸಹ ಜಿಲ್ಲಾಧಿಕಾರಿಗಳಿಗೆ ಏಳೆಂಟು ತಿಂಗಳುಗಳ ಹಿಂದೆಯೇ ಸೂಚನೆಯನ್ನು ಕೊಟ್ಟಿದ್ದೇನೆ. ಗಾಡಿಯಲ್ಲಿ ಮರಳು ತಂದು ಮನೆ ಕಟ್ಟಿಕೊಳ್ಳುವವರಿಗೆ ತೊಂದರೆ ಮಾಡಬೇಡಿ ಎಂದು ಹೇಳಿದ್ದೇನೆ. ಮಾನ್ಯ ಮೋಟಮ್ಮನವರು ಹೇಳಿದಂತೆ ನಾವು sanction ಮಾಡಿದ ೯೦ ದಿನಗಳಲ್ಲಿ ಅವರು ಮನೆಯನ್ನು ಕಟ್ಟದೇ ಹೋದರೆ automatic ಆಗಿ ಅಂದರೆ ತಳಪಾಯದ ಒಂದು ಫೋಟೋವನ್ನು ಕಳುಹಿಸದೇ ಇದ್ದರೆ, ಇಲ್ಲಿ ಯಾರೂ ಕೂಲಿ ಆಳುಗಳೇ ಇಲ್ಲದೇ ಅವರು ಮನೆಯನ್ನು ಕಟ್ಟುವುದರಿಂದ ೯೦ ದಿನಗಳಲ್ಲಿ ಅವರು ಮನೆಯನ್ನು ನಿರ್ಮಾಣ ಮಾಡಬೇಕು. ಆದರೂ ಸಹ ಮನೆ ಕಟ್ಟದೇ ಇರುವವರಿಗೆ ಸಮಯವನ್ನು ವಿಸ್ತರಣೆ ಮಾಡುವುದಕ್ಕೆ ಖಂಡಿತವಾಗಿ ಪ್ರಯತ್ನ ಮಾಡುತ್ತೇವೆ.

**ಚುಕ್ಕೆ ಪ್ರಶ್ನೆ ಸಂಖ್ಯೆ: ೩೬೮೯**

**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ**:– ಮಾನ್ಯ ಸಭಾಪತಿಯವರೇ, ಸರ್ಕಾರ ನನ್ನ ಪ್ರಶ್ನೆಗೆ ದೀರ್ಘವಾದ ಉತ್ತರವನ್ನು ನೀಡಿದೆ. ನಾನು ಕೇಳಿರತಕ್ಕಂಥ ಪ್ರಶ್ನೆ ಏನೆಂದರೆ, ಬೆಳಗಾಂ ಜಿಲ್ಲೆಯಲ್ಲಿರುವ ನದಿ ಮೂಲಗಳಿಂದ ಕೆರೆಗಳಿಗೆ ಏತ ನೀರಾವರಿ ಮುಖಾಂತರ ನೀರು ತುಂಬಿಸುವ ವಿಚಾರವಾಗಿ ಕೇಳಿದ್ದೇನೆ. ಬೆಳಗಾವಿ ಜಿಲ್ಲೆಯಲ್ಲಿರುವ ಎಲ್ಲಾ ತಾಲ್ಲೂಕುಗಳ ಬಗ್ಗೆ ಸಂಪೂರ್ಣವಾದ ವಿವರಗಳನ್ನು ಕೊಟ್ಟಿದ್ದಾರೆ. ಆದರೆ ಮೊದಲನೇ column ಅಂದರೆ ಅನುಬಂಧ–1 ರಲ್ಲಿರುವಂತೆ ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನಲ್ಲಿ ಯಾದ್ಯಾನವಾಡಿ, ವಡಗೋಲ ಮತ್ತು ಬೈನಾಕವಾಡಿ ಗ್ರಾಮಗಳ ಕೆರೆಗಳಿಗೆ ದೂಧಗಂಗಾ ನದಿಯಿಂದ ನೀರು ತುಂಬಿಸುವುದಕ್ಕಾಗಿ ಮಲಿಕವಾಡ ಏತ ನೀರಾವರಿ ಯೋಜನೆಯ ಪುನರುಜ್ಜೀವನ ಮಾಡುವ ಬಗ್ಗೆ ಹೇಳಿದ್ದಾರೆ. ದಯವಿಟ್ಟು ಮಾನ್ಯ ಸಚಿವರು ಇದರ ಬಗ್ಗೆ ಸ್ಪಷ್ಟೀಕರಣವನ್ನು ನೀಡಬೇಕು. ಯಾದ್ಯಾನವಾಡಿ, ವಡಗೋಲ, ಬೈನಾಕವಾಡಿ ಮತ್ತು ಮಲಿಕವಾಡ ಯೋಜನೆಗಳ ಪುನರುಜ್ಜೀವನ ಎಂದರೆ ಈ ಮೊದಲೇ ಅವರು ಏತ ನೀರಾವರಿಯನ್ನು ಮಾಡಿ ಕೆರೆಯನ್ನು ತುಂಬಿಸಿದ್ದರು. ಈಗ ಮತ್ತೆ ಏಕೆ ಅದಕ್ಕಾಗಿ ಖರ್ಚು ಮಾಡಿದರು? ಒಂದು ಯೋಜನೆಯನ್ನು ತೆಗೆದುಕೊಂಡ ನಂತರ ಏಕೆ ಅದನ್ನು ಸಂಪೂರ್ಣಗೊಳಿಸಲಿಲ್ಲ ಮತ್ತು ಏಕೆ ಪುನಃ

ಖರ್ಚು ಮಾಡಿದರು ಎಂದು ಈ ನಾಲ್ಕೂ ಕೆರೆಗಳ ಬಗ್ಗೆ ನನಗೆ ಸ್ಪಷ್ಟೀಕರಣ ಬೇಕು. ಆಗ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ ಹಾಗೂ ಈಗ ಪುನಃ ಪುನರುಜ್ಜೀವನ ಮಾಡಲು ಏಕೆ ಆ ಯೋಜನೆಗೆ ಹೆಚ್ಚು ಖರ್ಚು ಮಾಡಲಾಯಿತು? ಅದೇನು defunct ಆಯಿತೇ? ಆಗೇನು pipeline ಕೆಟ್ಟಿತ್ತೇ ಅಥವಾ ಯಾವ ಕಾರಣಕ್ಕಾಗಿ ಈ ಯೋಜನೆಯ ಪುನರುಜ್ಜೀವನಕ್ಕಾಗಿ ಪುನಃ ಖರ್ಚು ಮಾಡಲಾಗಿದೆ ಎನ್ನುವುದು ಒಂದು ವಿಚಾರ.

**ಸಭಾಪತಿಯವರು**:- ಮಾನ್ಯ ಕವಟಗಿಮಠ್‌ರವರೇ, ತಾವು ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದೀರಿ. ಮೊದಲು ಮಾನ್ಯ ಸಚಿವರು ಅದಕ್ಕೆ ಉತ್ತರವನ್ನು ಹೇಳಲಿ.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ**:- ಮಾನ್ಯ ಸಭಾಪತಿಯವರೇ, ಅವರು ಉತ್ತರದಲ್ಲಿ ಪುನರುಜ್ಜೀವನ ಎಂದು ಬರೆದಿದ್ದಾರೆ.

**ಸಭಾಪತಿಯವರು**:- ನೀವು ಕೇಳಿದ ಪ್ರಶ್ನೆಗೆ ಸಚಿವರು ಉತ್ತರವನ್ನು ಹೇಳಲಿ. ನಂತರ ನಿಮಗೆ ಇನ್ನೊಂದು ಪ್ರಶ್ನೆಯನ್ನು ಕೇಳಲಿಕ್ಕೆ ಅವಕಾಶವನ್ನು ಕೊಡುತ್ತೇನೆ.

**ಶ್ರೀ ಎಂ.ಬಿ.ಪಾಟೀಲ್**:- ಮಾನ್ಯ ಸಭಾಪತಿಯವರೇ, ಅವರು ಅನುಬಂಧ-1ರಲ್ಲಿ ಚಿಕ್ಕೋಡಿ ತಾಲ್ಲೂಕಿನಲ್ಲಿ ಯಾದ್ಯಾನವಾಡಿ, ವಡಗೋಲ ಮತ್ತು ಬ್ಯೆನಾಕವಾಡಿ ಗ್ರಾಮಗಳ ಕೆರೆಗಳಿಗೆ ದೂಧಗಂಗಾ ನದಿಯಿಂದ ನೀರು ತುಂಬಿಸುವುದಕ್ಕಾಗಿ ಮಲಿಕವಾಡ ಏತ ನೀರಾವರಿ ಯೋಜನೆಯ ಪುನರುಜ್ಜೀವನ ಮಾಡುವ ಬಗ್ಗೆ ಹೇಳಿದ್ದಾರೆ. ಪುನರುಜ್ಜೀವನ ಏಕೆ ಮಾಡಿದರು ಎಂದು ಕೇಳುತ್ತಿದ್ದಾರೆ. ಇದಕ್ಕೆ ನಾನು ಮಾಹಿತಿಯನ್ನು ತರಿಸಿಕೊಂಡು ಮಾನ್ಯ ಸದಸ್ಯರಿಗೆ ಒದಗಿಸತ್ತೇನೆ.

**ಸಭಾಪತಿಯವರು**:- ಈಗ ನಿಮ್ಮ ಪ್ರಶ್ನೆಗೆ ಸಚಿವರು ಬಳಿ ಉತ್ತರ ready ಇಲ್ಲ. ನಂತರ ತರಿಸಿಕೊಡುತ್ತಾರೆ. ನಿಮ್ಮ ಮುಂದಿನ ಪ್ರಶ್ನೆಯನ್ನು ಕೇಳಿ.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ**:- ಮಾನ್ಯ ಸಭಾಪತಿಯವರೇ, ಇದೇ ಚಿಕ್ಕೋಡಿ ತಾಲ್ಲೂಕಿನ ಎರಡು ಕೆರೆಗಳ ಬಗ್ಗೆ ಈಗಾಗಲೇ DPR (Detailed Project Report) ತಯಾರಿದೆ. ಚಿಕ್ಕೋಡಿ ತಾಲ್ಲೂಕಿನ ಕೆರೂರು ಗ್ರಾಮದ ಬಾಣಂತಿಕೋಡಿ ಕೆರೆ ಮತ್ತು ಚಿಕ್ಕೋಡಿ ತಾಲ್ಲೂಕಿನ ಚಿಕ್ಕೋಡಿ ಕೆರೆಗಳ ಕಾಮಗಾರಿಯನ್ನು ತೆಗೆದುಕೊಳ್ಳಲಿಕ್ಕೆ ಸರ್ಕಾರದ ಮಟ್ಟದಲ್ಲಿ ಪ್ರಸ್ತಾವನೆ ಇತ್ತು. ಇದರ ಬಗ್ಗೆ ಸರ್ಕಾರ ಏನು ಕ್ರಮ ಜರುಗಿಸಿದೆ? ಏಕೆಂದರೆ, ಇವೆಲ್ಲಾ ಬಹಳ ಮುಖ್ಯವಾಗಿರುವಂತಹ ದೊಡ್ಡ ಕೆರೆಗಳು. ಇದರ ಜೊತೆಗೆ ಚಿಕ್ಕೋಡಿ ತಾಲ್ಲೂಕಿನ ಪಟ್ಟಣಕೋಡಿ ಮತ್ತು ವಾಳ್ಕಿ ಕೆರೆಗಳು ದೂಧಗಂಗಾ ಮತ್ತು ವೇದಗಂಗಾದಿಂದ ತುಂಬಿಸತಕ್ಕಂಥದ್ದು. ಕೃಷ್ಣಾ ನದಿಯಿಂದ

ತುಂಬಿಸತಕ್ಕಂಥದ್ದು, ಚಿಕೋಡಿ ಕೆರೆ ಮತ್ತು ಚಿಕ್ಕೋಡಿ ತಾಲ್ಲೂಕಿನ ಕೆರೂರು ಗ್ರಾಮದ ಬಾಣಂತಿಕೋಡಿ ಕೆರೆ.

975/15-11-2017/04-10/bkp-ks

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ(ಮುಂದು)**

ಇದರ ಜೊತೆಗೆ ಬಹಳ ಮುಖ್ಯವಾಗಿ ಖಾನಾಪುರ ತಾಲ್ಲೂಕಿನಲ್ಲಿ ಮಲಪ್ರಭಾ ನದಿ ಹುಟ್ಟುತ್ತದೆ ಮತ್ತು ಉತ್ತರ ಕರ್ನಾಟಕದ ಬಹು ಮುಖ್ಯವಾದ ಒಂದು ನೀರಾವರಿ ಯೋಜನೆಯಾಗಿದೆ. ಆದರೆ, ಮಹದಾಯಿಯನ್ನು ತನ್ನ ಜೊತೆಗೆ ಕೂಡಿಸಿಕೊಂಡಿರತಕ್ಕಂತಹ ಬಹು ಮುಖ್ಯವಾಗಿರುವಂತಹ ಯೋಜನೆ ಇದಾಗಿದೆ. ಆದರೆ, ಆ ಖಾನಾಪುರ ತಾಲ್ಲೂಕಿನಲ್ಲಿರುವ ಬಹಳಷ್ಟು ಕೆರೆಗಳಿಗೆ ಮಲಪ್ರಭಾ ನದಿಯಿಂದ ನೀರು ತುಂಬಿಸಬೇಕೆನ್ನುವುದು ಬಹಳಷ್ಟು ದಿನಗಳಿಂದ ಆ ಭಾಗದ ಜನರ ಬೇಡಿಕೆಯಾಗಿದೆ. ಅದಕ್ಕಾಗಿ ಯಾವ ನದಿ ಅಲ್ಲಿ ಹುಟ್ಟಿದೆ, ಅದೇ ನದಿಯಿಂದ ವಂಚಿತವಾಗಿರುವಂತಹ ಖಾನಾಪುರ ತಾಲ್ಲೂಕಿನ ಕೆರೆಗಳನ್ನು ತುಂಬಿಸುವಂತಹ ಕೆಲಸ ಆಗಬೇಕಾಗಿದೆ. ವಿಶೇಷವಾಗಿ ಇಟಗಿ ಇರಬಹುದು, ಮತ್ತೊಂದು ಇರಬಹುದು. ಹೀಗೆ ಅನೇಕ ಕೆರೆಗಳು ನದಿ ಪಕ್ಕದಲ್ಲಿವೆ. 4–5 ಕಿ.ಮೀ ವ್ಯಾಪ್ತಿಯಲ್ಲಿ ಇರುವಂತಹ ಈ ಕೆರೆಗಳನ್ನು ತುಂಬಿಸುವಂತಹ ವಿಚಾರ ಸರ್ಕಾರ ಮುಂದಿದೆಯೇ ಎನ್ನುವುದು ನನ್ನ ಪ್ರಶ್ನೆಯಾಗಿದೆ.

ಅದರ ಜೊತೆಗೆ ಬೆಳಗಾವಿ ತಾಲ್ಲೂಕಿನ ಹಿರೇಬಾಗೇವಾಡಿ ಮತ್ತು ಇನ್ನುಳಿದ ಕೆರೆಗಳು ಸಹ ಆ ಮಲಪ್ರಭಾ ನದಿಯಿಂದ 4–5 ಕಿ.ಮೀ ದೂರದಲ್ಲಿರತಕ್ಕಂತಹ ಕೆರೆಗಳಾಗಿವೆ. ಈ ಕೆರೆಗಳನ್ನು ತುಂಬಿಸುವಂತಹ ವಿಚಾರ ಅಂದರೆ ಬೆಳಗಾವಿ ತಾಲ್ಲೂಕಿನ ಕೆರೆಗಳು ಮತ್ತು ಖಾನಾಪುರ ತಾಲ್ಲೂಕಿನ ಕೆರೆಗಳನ್ನು ಮಲಪ್ರಭಾ ನದಿಯಿಂದ ತುಂಬಿಸುವಂತಹ ವಿಚಾರ ಸರ್ಕಾರದ ಮುಂದಿದೆಯೇ ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ಎಂ.ಬಿ.ಪಾಟೀಲ್**:– ಸನ್ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಸದಸ್ಯರಾದ ಶ್ರೀಯುತ ಕವಟಗಿಮಠರವರಿಗೆ ನಾನು ಹೇಳಲಿಕ್ಕೆ ಬಯಸುವುದೇನೆಂದರೆ, ಶ್ರೀಮಾನ್ ಸಿದ್ದರಾಮಯ್ಯನವರ ನೇತೃತ್ವದಲ್ಲಿ ನಾನು ಜಲಸಂಪನ್ಮೂಲ ಸಚಿವನಾದ ಮೇಲೆ ಬೆಳಗಾವಿಯಲ್ಲಿ 164 ಕೆರೆಗಳನ್ನು ತುಂಬಿಸುವಂತಹ ಯೋಜನೆಗಳನ್ನು ಮಾಡಿದ್ದೇನೆ. ಅವುಗಳು ಯಾವ್ಯಾವುದು ಎನ್ನುವುದಕ್ಕೆ ಅನುಬಂಧದಲ್ಲಿ ಕೊಟ್ಟಿದ್ದೇನೆ. ಇದೆಲ್ಲವನ್ನೂ ಮಾಡಿರುವ ನಮಗೆ ನೀವು ಅಭಿನಂದನೆಯನ್ನು ಸಲ್ಲಿಸಬೇಕು. ಚಿಕ್ಕೋಡಿ ತಾಲ್ಲೂಕಿನ ಯಾದ್ಯಾನವಾಡಿ, ವಡಗೊಲ ಮತ್ತು ಬೈನಾಕವಾಡಿ ಗ್ರಾಮಗಳ ಕೆರೆಗಳಿಗೆ ಮತ್ತು ಚಿಕ್ಕೋಡಿ ತಾಲ್ಲೂಕಿನಲ್ಲಿ ಶಿರಗಾಂವ ಗ್ರಾಮದ ಬಸವಣ್ಣ ಕೆರೆಗಳಿಗೆ ದೂಧಗಂಗಾ ನದಿಯಿಂದ ನೀರು ತುಂಬಿಸುವ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಮತ್ತೆ ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನಲ್ಲಿ ಕಾಡಾಪೂರ ಗ್ರಾಮದ ಕೆರೆಗೆ ಕೃಷ್ಣಾ ನದಿಯಿಂದ ನೀರು ತುಂಬಿಸುವ ಬಗ್ಗೆ

ಹೇಳಿದ್ದಾರೆ. ಹುಕ್ಕೇರಿ ತಾಲ್ಲೂಕಿನ 18 ಕೆರೆಗಳು ಮತ್ತು ಚಿಕ್ಕೋಡಿ ತಾಲ್ಲೂಕಿನ 4 ಕೆರೆಗಳನ್ನು ಹೀಗೆ ಒಟ್ಟು 22 ಕೆರೆಗಳನ್ನು ತುಂಬಿಸುವಂತಹ ಕೆಲಸವನ್ನು ಅರ್ಪಣೆ ಮಾಡುತ್ತಿದ್ದೇವೆ. ಇದೇ ತಿಂಗಳಿನಲ್ಲಿ trial ಕೂಡ ಮಾಡಿ ನೀರನ್ನು ತುಂಬಿಸಿದ್ದೇವೆ. ಹಾಗೆಯೇ ಶ್ರೀ ವೀರಭದ್ರೇಶ್ವರ ಏತ ನೀರಾವರಿ ಯೋಜನೆ ಮತ್ತೆ ಸೌದತ್ತಿ ತಡಸಲೂರ ಗ್ರಾಮದ ಕೆರೆಗೆ ಮುರುಗೋಡ ಏತ ನೀರಾವರಿ ಯೋಜನೆಯಡಿ ನೀರು ತುಂಬಿಸುವಂತಹದ್ದು, ಮತ್ತೆ ಚಿಕ್ಕೋಡಿ ತಾಲ್ಲೂಕಿನ ಚೋಡಕುರುಳ ಯನ್ನು SCP (Special Component Plan) ನಲ್ಲಿ ತೆಗೆದುಕೊಂಡಿದ್ದೇವೆ. ಮತ್ತೆ ನಾಯಿಂಗ್ಲಜ್ SCP ನಲ್ಲಿ ಇವತ್ತು ತೆಗೆದುಕೊಂಡಿದ್ದೇವೆ. ಮತ್ತೆ ರಾಯಭಾಗ ತಾಲ್ಲೂಕಿನಲ್ಲಿ 17 ಕೆರೆಗಳನ್ನು ತುಂಬಿಸುವಂತಹದ್ದು. ಮತ್ತೆ ರಾಯಭಾಗ ತಾಲ್ಲೂಕಿನ ಕುಡಚಿಯಲ್ಲಿ 19 ಕೆರೆಗಳನ್ನು ತುಂಬಿಸುವಂತಹದ್ದು. . .

**ಸಭಾಪತಿಯವರು:-** ಆ ವಿಚಾರವೆಲ್ಲಾ ನಿಮ್ಮ ಅನುಬಂಧದಲ್ಲಿ ಇದೆ.

**ಶ್ರೀ ಎಂ.ಬಿ.ಪಾಟೀಲ್:-** ಈ ಮಾಹಿತಿಯನ್ನು ಮಾನ್ಯ ಸದಸ್ಯರಾದ ಶ್ರೀ ಕವಟಗಿಮಠ ರವರಿಗೆ ಕೊಡಬೇಕಾಗಿದೆ.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ಸಚಿವರು ಆ ಮಾಹಿತಿಯನ್ನೆಲ್ಲಾ ಅವರ ಉತ್ತರದಲ್ಲಿ ಕೊಟ್ಟಿದ್ದಾರೆ. ಉಳಿದ ಯೋಜನೆಗಳಿಗೆ ಸಂಬಂಧಪಟ್ಟಂತೆ ನಮಗೆ ಮಾಹಿತಿಯನ್ನು ಕೊಡಬೇಕು.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಬೈಲಹೊಂಗಲ ಮತ್ತು ಸೌದತ್ತಿ ಸೇರಿ ಒಟ್ಟು 64 ಕೆರೆಗಳನ್ನು ತುಂಬಿಸುವಂತಹ ಕೆಲಸ ಮಾಡುತ್ತಿದ್ದೇವೆ. ಹೀಗಾಗಿ, ಈ ಎಲ್ಲಾ ಕೆಲಸಗಳನ್ನು ನಾವೇ ಮಾಡಿರುವುದಾಗಿದೆ. ಒಟ್ಟು 164 ಕೆರೆಗಳು. ಇನ್ನುಳಿದ ಕೆರೆಗಳ ಬಗ್ಗೆ ಕೇಳಿದ್ದಾರೆ. ಮತ್ತೆ ಸುಮಾರು 26 ಕೆರೆಗಳ ಪ್ರಸ್ತಾವನೆ ನಮ್ಮ ಮುಂದೆ ಇದೆ. ಅವುಗಳು ಯಾವ್ಯಾವೆಂದರೆ, ಚಿಕ್ಕೋಡಿಯಲ್ಲಿ ಜವಾಹರ ನಿಪ್ಪಾಣ, ಬೂದಿಹಾಳ, ಗವಾನ, ಸ್ಥವನಿಧಿ ಯರನಾಳ, ಶೆಂಡೂರ, ಪಾಂಗೇರಿ-ಬಿ ಮತ್ತು ಬೆಳಗಾವಿ ಜಿಲ್ಲೆ, ಚಿಕ್ಕೋಡಿ ಮತ್ತು ನಿಪ್ಪಾಣಿ ತಾಲ್ಲೂಕಿನ 7 ಕೆರೆಗಳಿಗೆ ದೂಧಗಂಗಾ ನದಿಯಿಂದ ನೀರು ತುಂಬುವಂತಹದ್ದು. ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ನಿಪ್ಪಾಣಿ ಮತಕ್ಷೇತ್ರದ 5 ಕೆರೆಗಳಿಗೆ ಅಂದರೆ ಅಪ್ಪಚ್ಚಿವಾಡಿ, ಅಕ್ಕೋಳ ಗಳತಗಾ ಕುಸನಾಳ ಬೋರಗಾಂವ ಮತ್ತೆ, ಬಾನಂತಿಕೋಡಿ ಮತ್ತು ಚಿಕ್ಕೋಡಿ ಕೆರೆಗಳಿಗೆ ಕೃಷ್ಣಾ ನದಿಯಿಂದ ನೀರನ್ನು ತುಂಬಿಸುವುದು. ಮತ್ತೆ ಕೊಕಟನೂರ ಮರಡಿ ಮತ್ತು ಯಲ್ಲಮ್ಮವಾಡಿ ದೊಡ್ಡಕೆರೆಗಳನ್ನು ಸಾವಳಗಿ ಏತ ನೀರಾವರಿ ಕಾಲುವೆಯಿಂದ ನೀರು ತುಂಬಿಸಲು ಇಂದು ಹೊಸ ಹೊಸ ಯೋಜನೆಯನ್ನು ಮಾಡಿರುವಂತಹದ್ದಾಗಿದೆ. ಮತ್ತೆ ಚಮಕೇರಿ ಕೆರೆ, ಅಡಾಳಹಟ್ಟಿ ಕೆರೆ ಬಾಳಿಗೇರಿ ಕೆರೆ, ಗುಂಡೇವಾಡಿ ಕೆರೆ, ಇವತ್ತಿನ ದಿವಸ ಅಥಣಿಯೊಳಗಡೆ ಯಲಿಹಡಲಗಿ

ಕೆರೆಯಿಂದ ನೀರನೆತ್ತಿ ತುಂಬಿಸುವ ಯೋಜನೆ. ಮತ್ತೆ, ಕಮಕೇರಿ ಘಟಪ್ರಭಾ ಬಲದಂಡೆ ಕಾಲುವೆಯಿಂದ ನೀರನ್ನು ತುಂಬಿಸುವಂತಹದ್ದು.

ಮತ್ತೆ, ಬೆಳಗಾವಿ ತಾಲ್ಲೂಕಿನ ಬ್ರಹ್ಮ ಕೆರೆ, ದೇವಗಿರಿ, ಗುಂಜೇನಟ್ಟಿ ಕೆರೆ ಜಾಫರವಾಡಿ ಕೆರೆ ಹೀಗೆ ಸುಮಾರು 26 ಕೆರೆಗಳ ಪ್ರಸ್ತಾವನೆ ನಮ್ಮ ಮುಂದೆ ಇದೆ. ಹೀಗಾಗಿ 164 ಕೆರೆಗಳು ಸೇರಿ ಸುಮಾರು 200 ಕೆರೆಗಳನ್ನು ತುಂಬಿಸುವಂತಹ ಕೆಲಸ ಬೆಳಗಾವಿ ಜಿಲ್ಲೆಯಲ್ಲಿ ಈ ಸರ್ಕಾರ ಬಂದ ಮೇಲೆ ಮಾನ್ಯ ಶ್ರೀ ಸಿದ್ದರಾಮಯ್ಯನವರ ನೇತೃತ್ವದಲ್ಲಿ ನಾನು ಜಲಸಂಪನ್ಮೂಲ ಸಚಿವನಾಗಿ ನಮ್ಮ ಸರ್ಕಾರ ಮಾಡಿದೆ ಎನ್ನುವುದನ್ನು ತಮಗೆ ಹೇಳಲಿಕ್ಕೆ ಬಯಸುತ್ತೇನೆ. ಇದನ್ನು ಬಿಟ್ಟು ಮತ್ತೆ ಯಾವುದಾದರೂ ಇದ್ದರೆ ಹೇಳಿ, ಅದನ್ನೂ ನಾನು ಪರಿಶೀಲನೆ ಮಾಡುತ್ತೇನೆ.

**ಶ್ರೀ ಕವಟಗಿಮಠ ಮಹಾಂತೇಶ್ ಮಲ್ಲಿಕಾರ್ಜುನ**:- ಮಾನ್ಯ ಸಭಾಪತಿಯವರೇ, ಎಲ್ಲಿ ಮಲಪ್ರಭಾ ನದಿ ಹುಟ್ಟುತ್ತದೆ, ಆ ನದಿ ಪಕ್ಕದಲ್ಲಿರುವಂತಹ ಗ್ರಾಮಗಳಿಗೆ ನೀರು ಕೊಡಬೇಕು. ಏಕೆಂದರೆ, ಯಾವ ಒಂದು ನದಿ ಅಲ್ಲಿ ಹುಟ್ಟಿದೆ, ಆ ತಾಲ್ಲೂಕಿನಲ್ಲಿ ಇರತಕ್ಕಂತಹ ಜನರು ನೀರಾವರಿಯಿಂದ ವಂಚಿತರಾಗಿದ್ದಾರೆ. ಆ ಗ್ರಾಮಗಳ ಕೆರೆಗಳನ್ನು ತುಂಬಿಸಬೇಕೆನ್ನುವುದು ನಮ್ಮ ಬೇಡಿಕೆಯಾಗಿದೆ.

**ಸಭಾಪತಿಯವರು**:- ಆಯಿತು, ಅದನ್ನು ಮಾನ್ಯ ಸಚಿವರು ಮಾಡಿಸುತ್ತಾರೆ.

**ಶ್ರೀ ಎಂ.ಬಿ.ಪಾಟೀಲ್**:- ಮಾನ್ಯ ಸಭಾಪತಿಯವರೇ, ಶ್ರೀಯುತ ಕವಟಗಿಮಠ ರವರು ಹೇಳಿದ್ದು ಖಾನಾಪುರ ವಿಷಯವಾಗಿದೆ. ಅದನ್ನು ನಾನು check ಮಾಡುತ್ತೇನೆ. ನನಗೆ ತಿಳಿದ ಮಟ್ಟಿಗೆ ಒಂದು ಪ್ರಸ್ತಾವನೆಯನ್ನು ಪ್ರಾಥಮಿಕ ಹಂತವಾಗಿ ತೆಗೆದುಕೊಂಡಿದ್ದೇವೆ. ಮತ್ತೊಂದು ಪ್ರಸ್ತಾವನೆ ನಮ್ಮ ಮುಂದೆ ಇದೆ. ಆ ಪ್ರಸ್ತಾವನೆಯನ್ನು ಹೊರತು ಪಡಿಸಿ ಈಗ ಅದು initial stage ನಲ್ಲಿದೆ. ಅದೂ ಸಹ ಖಾನಾಪುರದ್ದು ಕೂಡ ಮಲಪ್ರಭಾದಲ್ಲಿ ಆಗಬೇಕೆನ್ನುವ ಉದ್ಧೇಶ ನಿಮ್ಮದು ಇದೆ. ಅದನ್ನೂ ಕೂಡ ನಾವು ಸಕಾರಾತ್ಮಕವಾಗಿ ಪರಿಗಣಿಸುತ್ತೇವೆ.

**ಪ್ರಶ್ನೆ ಸಂಖ್ಯೆ : 3683**

**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ**:- ಮಾನ್ಯ ಸಭಾಪತಿಯವರೇ, ಉತ್ತರವನ್ನು ಸಚಿವರು ಒದಗಿಸಿದ್ದಾರೆ. ಬೀಳಗಿ ಪಟ್ಟಣಕ್ಕೆ ವಾಜಪೇಯಿ ವಸತಿ ಯೋಜನೆಯು ಯಾವ ಸಾಲಿನಲ್ಲಿ ಮಂಜೂರಾಗಿದೆ; ಈ ಯೋಜನೆಗೆ ಮಂಜೂರಾದ ಅನುದಾನವೆಷ್ಟು ಎನ್ನುವ ನನ್ನ ಪ್ರಶ್ನೆಗೆ ಮಾಹಿತಿಯನ್ನು ಒದಗಿಸಿದ್ದಾರೆ.

ಎರಡನೆಯದಾಗಿ, ಈ ಯೋಜನೆಗೆ ಸ್ವಾಧೀನಪಡಿಸಿಕೊಂಡ ಜಮೀನು ಎಷ್ಟು; ಅದರಲ್ಲಿ ನಿರ್ಮಿಸಲಾಗಿರುವ ನಿವೇಶನಗಳ ಸಂಖ್ಯೆ ಎಷ್ಟು; ಈ ನಿವೇಶನಗಳಿಗೆ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆಯೇ; ಆಯ್ಕೆ ಮಾಡಿದ್ದರೆ ಯಾವ ಮಾನದಂಡವನ್ನು ಅನುಸರಿಸಿ ಆಯ್ಕೆ ಮಾಡಲಾಗಿದೆ ಎನ್ನುವ ಪ್ರಶ್ನೆಗೆ ಸನ್ಮಾನ್ಯ ಸಚಿವರು ಉತ್ತರವನ್ನು ನೀಡಿದ್ದಾರೆ. ಆದರೆ, 2003-04ನೇ ಇಸವಿಯಲ್ಲಿ ನಿವೇಶನರಹಿತರ ಪಟ್ಟಿ ಆಧಾರದ ಮೇಲೆ ಆಯ್ಕೆ ಮಾಡಿದ್ದೇವೆ ಎನ್ನುವಂತಹ ಉತ್ತರವನ್ನು ನೀಡಿದ್ದಾರೆ. 2003-04ನೇ ಸಾಲಿನಲ್ಲಿ ನಿವೇಶನರಹಿತರಿಗೆ ಮನೆ ಹಂಚಿಕೆ ಮಾಡುವುದು ಯಾವ ಮಾನದಂಡ ಎನ್ನುವುದನ್ನು ಸನ್ಮಾನ್ಯ ಸಚಿವರಿಗೆ ಕೇಳಲಿಕ್ಕೆ ಬಯಸುತ್ತೇನೆ. ಜೊತೆಗೆ ಯಾವುದೇ ಒಂದು ಆಯ್ಕೆ ಪ್ರಕ್ರಿಯೆಯನ್ನು ಮಾಡಬೇಕಾದರೆ ಸಂವಿಧಾನದ 74ನೆಯ ಕಲಂ ಪ್ರಕಾರ ಅಧಿಕಾರ ವಿಕೇಂದ್ರೀಕರಣ ಆಗಬೇಕೆನ್ನುವ ಆಸೆಗೆ ಪಟ್ಟಣ ಪಂಚಾಯಿತಿ ಇರಲಿ, ಗ್ರಾಮ ಪಂಚಾಯಿತಿ ಇರಲಿ, ಅದರ ಸದಸ್ಯರು ಆಯಾ ವಾರ್ಡಿನ ಫಲಾನುಭವಿಗಳನ್ನು ಆಯ್ಕೆ ಮಾಡಿ ಅಲ್ಲಿ ವಸತಿರಹಿತರಿಗೆ, ನಿರ್ಗತಿಕರಿಗೆ ಮತ್ತು ಕಡುಬಡವರನ್ನು ಗುರುತಿಸಿ ಆಶ್ರಯ ಮನೆಗಳನ್ನು ಕೊಡಬೇಕೆನ್ನುವುದು ಸರ್ಕಾರದ ಆಸೆಯಾಗಿದೆ. ಆ ಹಿನ್ನೆಲೆಯಲ್ಲಿ ಇಲ್ಲಿ ನೇರವಾಗಿ 2003-04ನೇ ಸಾಲಿನ ಒಂದು ಪಟ್ಟಿಯ ಪ್ರಕಾರ ಆಯ್ಕೆ ಮಾಡಲಾಗಿದೆ ಎನ್ನುವಂತಹ ವಿಷಯವನ್ನು ತಾವು ಹೇಳುತ್ತಿದ್ದೀರಿ. ಇದು ಸರಿಯಲ್ಲವೆನ್ನುವುದು ನನ್ನ ವಿಚಾರವಾಗಿದೆ. ಒಟ್ಟಾರೆ, ಆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮತ್ತು ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ವಾರ್ಡ್ ಸಭೆಯನ್ನು ಮಾಡಿ, ಆ ವಾರ್ಡ್‌ನಲ್ಲಿ ಇರುವಂತಹ ಬಡವರನ್ನು, ನಿರ್ಗತಿಕರನ್ನು, ಆಸ್ತಿರಹಿತರನ್ನು ಗುರುತಿಸಿ ಈ ಪ್ಲಾಟ್‌ಗಳನ್ನು ಮತ್ತು ಮನೆಗಳನ್ನು ಹಂಚಿಕೆ ಮಾಡುವಂತಹದ್ದು ಸೂಕ್ತ ಎನ್ನುವುದನ್ನು ನಾನು ಇಲ್ಲಿ ಹೇಳಲಿಕ್ಕೆ ಬಯಸುತ್ತಿದ್ದೇನೆ. ಅಲ್ಲಿ ಸುಮಾರು 1080 ನಿವೇಶನಗಳಿವೆ. ಈ ಹಂಚಿಕೆಯಲ್ಲಿ ಯಾವುದೇ ಮಾನದಂಡವನ್ನು ಅನುಸರಿಸಿಲ್ಲ. ದಯವಿಟ್ಟು ಮಾನದಂಡದ ಪ್ರಕಾರ ಆಯ್ಕೆ ಆಗಲಿಕ್ಕೆ ತಾವು ನಿರ್ದೇಶನವನ್ನು ಕೊಡಬೇಕೆನ್ನುವುದನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತೇನೆ. ಜೊತೆಗೆ ಮಾನ್ಯ ಉಚ್ಚನ್ಯಾಯಾಲಯವು ಕೂಡ ಒಂದು ಆದೇಶವನ್ನು ಕೊಟ್ಟು ಗ್ರಾಮ ಮತ್ತು ವಾರ್ಡ್ ಸಭೆಗಳ ಮುಖಾಂತರ ಫಲಾನುಭವಿಗಳ ಆಯ್ಕೆಯಾಗಬೇಕೆನ್ನುವ ವಿಷಯವನ್ನು ಹೇಳಿದೆ.

ಆದರೆ, ಮಾನ್ಯ ಶಾಸಕರುಗಳ ಅಧ್ಯಕ್ಷರ ಆಶ್ರಯ ಸಮಿತಿ ಮೂಲಕ ಇಲ್ಲಿ ನಿವೇಶನಗಳಿಗೆ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ ಎನ್ನುವಂತಹ ಉತ್ತರವನ್ನು ನನ್ನ 3ನೇ ಪ್ರಶ್ನೆಗೆ ಕೊಟ್ಟಿದ್ದೀರಿ. ಆದರೆ, ಶಾಸಕರ ಅಧ್ಯಕ್ಷತೆಯಲ್ಲಿರುವಂತಹ ಸಮಿತಿಗೆ ವಾರ್ಡ್ ಸಮಿತಿಯ ಆಯ್ಕೆ ಸಮಿತಿಯಲ್ಲಿ ಆಯ್ಕೆಯಾಗಿರುವಂತಹ ಫಲಾನುಭವಿಗಳು ಏನಾದರೂ ಅನರ್ಹರಿದ್ದರೆ ಅವರು ಆ ವಸತಿ ಯೋಜನೆಗೆ ಫಲಾನುಭವಿ ಆಗಲಿಕ್ಕೆ ಅನರ್ಹರಾಗಿದ್ದರೆ, ಅದನ್ನು ತಿರಸ್ಕಾರ ಮಾಡುವಂತಹದ್ದು ಮತ್ತು ಅ ಒಂದು ಪಟ್ಟಿಯನ್ನು ಪುನರ್ ಪರಿಶೀಲನೆ ಮಾಡತಕ್ಕಂತಹ ಅಧಿಕಾರ ಆ ಒಂದು ಸಮಿತಿಗೆ ಇದೆ. ನೇರವಾಗಿ ಸಮಿತಿಯವರೇ ಫಲಾನುಭವಿಗಳನ್ನು ಆಯ್ಕೆ ಮಾಡಲಿಕ್ಕೆ ಬರುವುದಿಲ್ಲ. ಈ ಹಿನ್ನೆಲೆಯಲ್ಲಿ ಆ ಒಂದು

ಪಟ್ಟಿಯನ್ನು ಮತ್ತೊಮ್ಮೆ ಪರಿಶೀಲನೆ ಮಾಡಿ ಅಲ್ಲಿ ಇರತಕ್ಕಂತಹ ನಿರ್ಗತಿಕರಿಗೆ ವಸತಿ ಯೋಜನೆಯಡಿಯಲ್ಲಿ ಮನೆಗಳನ್ನು ಕೊಡತಕ್ಕಂತಹ ಯೋಜನೆಯನ್ನು ಮಾಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಜೊತೆಗೆ ಫಲಾನುಭವಿಗಳ ಪಟ್ಟಿಯನ್ನು ಕೊಡಬೇಕೆಂದು ಕೇಳಿದ್ದೆ. ಇಲ್ಲಿ ಆ ಪಟ್ಟಿಯನ್ನು ಕೂಡ ಇವತ್ತು ಕೊಟ್ಟಿಲ್ಲ. ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ ಎನ್ನುವಂತಹ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಆ ಫಲಾನುಭವಿಗಳ ಪಟ್ಟಿಯನ್ನು ಕೊಡುವಂತಹದ್ದನ್ನು ಮಾಡಬೇಕು. ಇದು ಬಹಳ ಮಹತ್ವಾಕಾಂಕ್ಷಿ ಯೋಜನೆಯಾಗಿರುವುದರಿಂದ, ಸುಮಾರು 34 ಎಕರೆ ಜಮೀನನ್ನು ಭೂಸ್ವಾದೀನ ಮಾಡಿಕೊಂಡು 1080 ಫಲಾನುಭವಿಗಳಿಗೆ ಇವತ್ತು ಮನೆಗಳನ್ನು ವಿತರಣೆ ಮಾಡುವಂತಹ ಬಹಳ ದೊಡ್ಡ ಯೋಜನೆಯಾಗಿದೆ. ದಕ್ಕೋಸ್ಕರ ನಾನು ಸರ್ಕಾರವನ್ನು ಅಭಿನಂದಿಸುತ್ತಿದ್ದೇನೆ. ಆದರೆ, ನನ್ನ ಆಸೆ ಏನೆಂದರೆ, ನಿರ್ಗತಿಕರಿಗೆ ವಸತಿ ಇಲ್ಲದಂತಹವರಿಗೆ, ಮಾತ್ರ ಇಲ್ಲಿ ಮನೆಯನ್ನು ಕೊಡಬೇಕು. ಅದನ್ನು ಬಿಟ್ಟು ಈಗಾಗಲೇ ಮನೆ ಇದ್ದವರಿಗೆ, ಆಸ್ತಿವಂತರಿಗೆ ಮನೆಗಳ ಹಂಚಿಕೆ ಆಗಬಾರದು ಎಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಆದ್ದರಿಂದ, ಈ ವಿಚಾರವನ್ನು ಮತ್ತೊಮ್ಮೆ ಪುನರ್ ಪರಿಶೀಲನೆ ಮಾಡಿದ ನಂತರ ಫಲಾನುಭವಿಗಳಿಗೆ ಮನೆಗಳನ್ನು ಕಟ್ಟಿಲಿಕ್ಕೆ ಹಕ್ಕುಪತ್ರಗಳನ್ನು ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತಿದ್ದೇನೆ.

**ಶ್ರೀ ಎಂ.ಕೃಷ್ಣಪ್ಪ:-** ಮಾನ್ಯ ಸಭಾಪತಿಯವರೇ, 2003-04ನೇ ಸಾಲಿನಲ್ಲಿ ಬಿಳಗಿ ಪಟ್ಟಣದಲ್ಲಿ ಎಷ್ಟು ಜನ ನಿವೇಶನರಹಿತರು ಇದ್ದಾರೆಂದು ಸರ್ವೆ ಮಾಡಿಸಲಾಗಿತ್ತು. ಅದರ ಪ್ರಕಾರ ನಮ್ಮ ಸರ್ಕಾರ ಬಂದ ಮೇಲೆ 2013-14ನೇ ಸಾಲಿನಲ್ಲಿ 34 ಎಕರೆ ಜಮೀನು ತೆಗೆದುಕೊಂಡು 1080 ನಿವೇಶನಗಳನ್ನು ಮಾಡಿದ್ದೇವೆ.

(976)15.11.2017/11.40/ಎಸ್‌ವಿ-ಜಿಆರ್

**ಶ್ರೀ ಎಂ.ಕೃಷ್ಣಪ್ಪ(ಮುಂದು):-**

ಅದರಲ್ಲಿ ಸುಮಾರು 900 ಜನರನ್ನು ಫಲಾನುಭವಿಗಳನ್ನಾಗಿ ಕೂಡ ಆಯ್ಕೆ ಮಾಡಿರುತ್ತೇವೆ. ಅದು ತಮಗೆಲ್ಲಾ ತಿಳಿದಿರುವ ವಿಷಯವಾಗಿದೆ. ಆಶ್ರಯ ಮತ್ತು ಜಾಗೃತ ಸಮಿತಿ ಇವೆರಡರ ನಡುವೆ ಮಾನ್ಯ ಸದಸ್ಯರು ಗೊಂದಲ ಮಾಡಿಕೊಳ್ಳುತ್ತಿದ್ದಾರೆ. ಆಶ್ರಯ ಸಮಿತಿಯೇ ಬೇರೆ; ಜಾಗೃತ ಸಮಿತಿಯೇ ಬೇರೆ. ಆಶ್ರಯ ಸಮಿತಿಗೆ ನಗರ/ಪಟ್ಟಣ ಪ್ರದೇಶಗಳಲ್ಲಿ ವಾಜಪೇಯಿ ವಸತಿ ಯೋಜನೆಯನ್ನು ಕೊಡುವಂತಹ ಕೆಲಸವನ್ನು ವಹಿಸಲಾಗಿದೆ. ಇದರಲ್ಲಿ ಏನಾದರೂ ಲೋಪದೋಷಗಳು ಮಾನ್ಯ ಸದಸ್ಯರಿಗೆ ಕಂಡು ಬಂದಲ್ಲಿ ಅದನ್ನು ನನ್ನ ಗಮನಕ್ಕೆ ತೆಗೆದುಕೊಂಡು ಬಂದರೆ ನಾನದನ್ನು ಸರಿಪಡಿಸುತ್ತೇನೆ. ಇದುವರೆಗೂ ನಮ್ಮ ಸರ್ಕಾರ ಬಂದ ಮೇಲೆ ನಗರ ಮತ್ತು ಹಳ್ಳಿಗಳಲ್ಲಿ ಈಗಾಗಲೇ ಸುಮಾರು 13 ಲಕ್ಷ ಮನೆಗಳನ್ನು ಕಟ್ಟಿರುತ್ತೇವೆ. ಹಂಚಿಕೆ ಮಾಡಿರುವುದಿಲ್ಲ. ಇದರಲ್ಲಿ ಏನಾದರೂ ಲೋಪದೋಷವಿದ್ದರೆ ಮಾನ್ಯ

ಸದಸ್ಯರು ದಯಮಾಡಿ ತಿಳಿಸಲಿ. ಏಕೆಂದರೆ ಇದರಲ್ಲಿ ಲೋಪದೋಷಗಳಿವೆಯೆಂದು ನಮಗೆ ತಿಳಿದ ಮೇಲೆ ಆಧಾರ್ ಸಂಖ್ಯೆಯನ್ನು ಲಿಂಕ್ ಮಾಡಲಾಗುತ್ತಿದೆ. ಆಧಾರ್ ಲಿಂಕ್ ಆದ ನಂತರ duplication, geo duplication ಎಲ್ಲವನ್ನೂ ಪರಿಶೀಲಿಸಲಾಗುತ್ತದೆ.

**ಶ್ರೀ ನಿರಾಣಿ ಹಣಮಂತ ರುದ್ರಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ದಯಮಾಡಿ ಯಾದಿಯನ್ನು ಕಳುಹಿಸಿಕೊಡಬೇಕು.

**ಶ್ರೀ ಎಂ.ಕೃಷ್ಣಪ್ಪ:–** ಮಾನ್ಯ ಸಭಾಪತಿಯವರೇ, ಕಳುಹಿಸಿಕೊಡುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ನಿರ್ಗತಿಕರು ಇನ್ನೂ ಎಷ್ಟು ಜನರಿದ್ದಾರೆ? ಪ್ರತಿ ಬಾರಿಯೂ ಹಂಚಿಕೆಯಾದವರಿಗೆ ಮನೆಗಳು ಪುನಃ ಹಂಚಿಕೆಯಾಗುತ್ತವೆ. ನಾನು ಮಾನ್ಯ ಸಚಿವರಾದ ಶ್ರೀ ಸಂತೋಷ್ ಲಾಡ್ ಅವರ ತಾಲ್ಲೂಕಿನಲ್ಲಿ ಆಶ್ರಯ ಸಮಿತಿಯ ಸದಸ್ಯನಾಗಿದ್ದೆನು. ಕೊಟ್ಟವರಿಗೆ ಮನೆಗಳನ್ನು ಕೊಡುತ್ತಾರೆ. GPS ಎಂದು ಹೇಳುತ್ತಾರೆ. ಪ್ರತಿ ವರ್ಷವೂ ಈ ರೀತಿ ಇದ್ದೇ ಇರುತ್ತದೆ. ಆದ್ದರಿಂದ ಇದರ ಬಗ್ಗೆ ಸಂಪೂರ್ಣವಾದಂತಹ ಮಾಹಿತಿಯನ್ನು ಕೊಡಬೇಕು. ಪ್ರತಿ ಬಾರಿಯೂ ರೂ.700 ಕೋಟಿ ಎಂದು ಹೇಳುತ್ತಾರೆ. ಮನೆಗಳನ್ನು ತೆಗೆದುಕೊಂಡವರೇ ಮನೆಗಳನ್ನು ತೆಗೆದುಕೊಳ್ಳುತ್ತಾರೆ. ಮನೆಯನ್ನು ತೆಗೆದುಕೊಂಡವರು ಮತ್ತೊಮ್ಮೆ ಮನೆಯನ್ನು ತೆಗೆದುಕೊಳ್ಳದಂತೆ ಮಾಡಲು ಏನಾದರೂ ಯೋಜನೆ ಇದೆಯೇ ಎಂದು ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

**ಸಭಾಪತಿಯವರು:–** ಮಾನ್ಯ ಹೊರಟ್ಟಿಯವರೇ, ಅದಕ್ಕಾಗಿಯೇ ಆಧಾರ್ ಸಂಖ್ಯೆಯನ್ನು ಲಿಂಕ್ ಮಾಡುತ್ತೇವೆಂದು ಮಾನ್ಯ ಸಚಿವರು ಹೇಳಿದರು.

**ಶ್ರೀ ಎಂ.ಕೃಷ್ಣಪ್ಪ:–** ಮಾನ್ಯ ಸಭಾಪತಿಯವರೇ, ಇದನ್ನು ಕಂಡುಹಿಡಿಯುವುದಕ್ಕಾಗಿಯೇ ಈಗ ಒಂದು ವರ್ಷದಿಂದ ನಾವು ಸಂಪೂರ್ಣ ಆಧಾರ್ ಸಂಖ್ಯೆಯನ್ನು ಲಿಂಕ್ ಮಾಡುತ್ತಿದ್ದೇವೆ. ಎಲ್ಲೆಲ್ಲಿ ಒಂದೇ ಊರಿನಲ್ಲಿ ಎರಡೆರಡು ಬಾರಿ ಹೆಸರು ಬರುತ್ತಿದೆಯೋ ಅಂತಹವುಗಳಲ್ಲಿ ಫಲಾನುಭವಿಯ ತಂದೆ ತಾಯಿ ಹೆಸರು ಪರಿಶೀಲನೆ ಮಾಡಿ ಅದನ್ನು ಸರಿಪಡಿಸಲಾಗುತ್ತಿದೆ. ಇದಕ್ಕಾಗಿಯೇ ಕೆಲವು ಕಾಲ ಹಣ ಬಿಡುಗಡೆಯಾಗುವುದೂ ಸಹ ತಡವಾಗಿತ್ತು.

**ಶ್ರೀ ಆರ್. ಧರ್ಮಸೇನ:–** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ಸುಪ್ರೀಂ ಕೋರ್ಟ್ ಸಹ ವಾಸವಿರುವವರಿಗೆ ಮನೆ ಎಂದು ಒಂದು ಆದೇಶವನ್ನು ನೀಡಿದೆ. ಅದನ್ನು ಶೀಘ್ರವಾಗಿ ಜಾರಿಗೆ ತಂದರೆ ಒಳ್ಳೆಯದು.

**ಸಭಾಪತಿಯವರು:–** ಇದು ಹೊಸದಾಗಿ ಮನೆ ಕಟ್ಟುವವರಿಗೆ ಅನ್ವಯಿಸುತ್ತದೆ.

**ಪ್ರಶ್ನೆ ಸಂಖ್ಯೆ : 3767**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಸಚಿವರು ಉತ್ತರವನ್ನು ನೀಡಿರುತ್ತಾರೆ. ಕಾರ್ಮಿಕ ಕಲ್ಯಾಣ ನಿಧಿಯಲ್ಲಿ ಎಷ್ಟು ಹಣ ಸಂಗ್ರಹ ಮಾಡಲಾಗಿದೆ? ಅದನ್ನು ಎಷ್ಟು ಕಾರ್ಮಿಕರಿಗಾಗಿ ಖರ್ಚು ಮಾಡಲಾಗಿದೆ? ಎಂದು ನಾನು ಪ್ರಶ್ನೆ ಕೇಳಿದ್ದೇನೆ. ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ರೂ.6,108.88 ಕೋಟಿ ಮೊತ್ತವನ್ನು ಹಾಗೂ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ರೂ.62.44 ಕೋಟಿ ಮೊತ್ತ ಇರುತ್ತದೆ ಎಂದು ಸಚಿವರ ಲಿಖಿತ ಉತ್ತರದಲ್ಲಿ ತಿಳಿಸಲಾಗಿದೆ. ಇಂದು ಕಾರ್ಮಿಕರ ಕಲ್ಯಾಣಕ್ಕೋಸ್ಕರ ಹಲವಾರು ಯೋಜನೆಗಳನ್ನು ಸರ್ಕಾರ ತಂದಿದ್ದು, ಅದರಲ್ಲಿ ಎಷ್ಟು ಖರ್ಚು ಮಾಡಲಾಗಿದೆ ಎಂಬ ಪ್ರಶ್ನೆಗೆ ರೂ.223,65,09,378/-ಗಳಷ್ಟು ಮೊತ್ತದ ಸಹಾಯಧನ ಬಿಡುಗಡೆ ಮಾಡಲಾಗಿರುತ್ತದೆ ಎಂದು ಹೇಳಲಾಗಿದೆ. ನಮ್ಮ ರಾಜ್ಯದಲ್ಲಿ ಇಂದು ಒಂದು ಕೋಟಿ ಜನ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಆದರೆ ಅದರಲ್ಲಿ 13 ಲಕ್ಷ ಕಾರ್ಮಿಕರು ಮಾತ್ರ ನೋಂದಣಿ ಮಾಡಿಕೊಂಡಿದ್ದಾರೆ. ಅದೇ ರೀತಿ ಮರು ನೋಂದಣಿ ಮಾಡುವ ಸಂದರ್ಭದಲ್ಲಿ 2.30 ಲಕ್ಷ ಕಾರ್ಮಿಕರು ಮಾತ್ರ ನೋಂದಣಿ ಮಾಡಿಕೊಂಡಿದ್ದಾರೆ. ಇದಕ್ಕಾಗಿ ಸರ್ಕಾರ ಏಕೆ ಜಾಗೃತಿಯನ್ನು ಮೂಡಿಸುತ್ತಿಲ್ಲ? ಕಾರ್ಮಿಕರ ಕಲ್ಯಾಣಕ್ಕಾಗಿ ಇರುವ ನಿಧಿಯು ಕೊಳೆಯುತ್ತಿದ್ದು, ಇದನ್ನು ಏಕೆ ಬಳಕೆ ಮಾಡಿಕೊಳ್ಳುತ್ತಿಲ್ಲ? ಕಾರ್ಮಿಕರ ಕಲ್ಯಾಣಕ್ಕಾಗಿ ಅನೇಕ ಯೋಜನೆಗಳನ್ನು ತಂದಿದ್ದೇವೆಂದು ಲಿಖಿತ ಉತ್ತರದಲ್ಲಿ ತೋರಿಸಲಾಗಿದೆ. ಅದು ಏಕೆ ನೇರವಾಗಿ ಫಲಾನುಭವಿಗಳಿಗೆ ಹೋಗಿ ಸೇರುತ್ತಿಲ್ಲ ಎನ್ನುವ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡಬೇಕಾಗುತ್ತದೆ.

ಎರಡನೆಯದಾಗಿ ಕಾರ್ಮಿಕರನ್ನು ನೋಂದಣಿ ಮಾಡಿಕೊಳ್ಳುವ ಒಂದು ವ್ಯವಸ್ಥೆಯಲ್ಲಿ ಕಾರ್ಮಿಕ ಇಲಾಖೆಯ ಅಧಿಕಾರಿಗಳು ಕಛೇರಿ ಬಿಟ್ಟು ಹೊರಗೆ ಬಂದು ಕಾರ್ಮಿಕರಲ್ಲಿ ಜಾಗೃತಿ ಮೂಡಿಸುವಂತಹ ಕೆಲಸವನ್ನು ಏಕೆ ಮಾಡುತ್ತಿಲ್ಲ? ಈ ಹಣವನ್ನು ಬಳಕೆ ಮಾಡುವುದಕ್ಕಾಗಿ ಏನಾದರೂ ಕಾಲಮಿತಿಯನ್ನು ಇಟ್ಟುಕೊಳ್ಳಲಾಗಿದೆಯೇ? ರೂ.6,100 ಕೋಟಿ ಹಣ ಸುಮ್ಮನೆ ಖಜಾನೆಯಲ್ಲಿ ತುಂಬಿದ್ದು, ಅದು ಫಲಾನುಭವಿಗಳಿಗೆ ಹೋಗಿ ಸೇರುತ್ತಿಲ್ಲ. ಇದರ ಬಗ್ಗೆ ಮಾನ್ಯ ಸಚಿವರು ಸಂಪೂರ್ಣ ಮಾಹಿತಿಯನ್ನು ಕೊಡಬೇಕೆಂದು ತಮ್ಮ ಮೂಲಕ ಕೋರುತ್ತೇನೆ.

**ಶ್ರೀ ಸಂತೋಷ್ ಲಾಡ್:-** ಮಾನ್ಯ ಸಭಾಪತಿಯವರೇ, ಕಳೆದ ಬಾರಿಯೂ ಕೂಡ ಇದರ ಬಗ್ಗೆ ನಾನು ಸದನದಲ್ಲಿ ಮಾತನಾಡಿದ್ದೆನು. ಆದರೆ the Karnataka Building and Other Construction Workers' Welfare Board ಮೂಲಕ Cess ಎಂದು ಏನು ಪ್ರಾರಂಭವಾಗಿದೆ, ಅದು ಸುಮಾರು 2007-08ನೇ ಇಸವಿಯಿಂದ ಪ್ರಾರಂಭವಾಗಿರುವಂತಹದ್ದಾಗಿದೆ. This Board is governed by the Central Government. ಇದರ ಮೂಲ

ಉದ್ದೇಶ ಇರುವುದು implementation of welfare schemes. It is only based on the welfare schemes. ಅದಕ್ಕಾಗಿ ದೊಡ್ಡ ಪ್ರಮಾಣದಲ್ಲಿ ಹಣವನ್ನು ಖರ್ಚು ಮಾಡುವುದಕ್ಕೆ ಆಗುವುದಿಲ್ಲ. ಆದರೆ ನಮ್ಮ ಸರ್ಕಾರ ಬಂದ ಮೇಲೆ ಎಷ್ಟು ಖರ್ಚಾಗಿದೆ ಎನ್ನುವ ಮಾಹಿತಿಯನ್ನು ಕೊಡುತ್ತೇನೆ. ಇಲ್ಲಿಯವರೆಗೆ 11,98,497 ಮಂದಿ ಕಟ್ಟಡ ಕಾರ್ಮಿಕರು ನೋಂದಣಿಯಾಗಿದ್ದಾರೆ. ಅದರಲ್ಲಿ 3,04,370 ಕಟ್ಟಡ ಕಾರ್ಮಿಕರು 2007-2013ರ ಅವಧಿಯಲ್ಲಿ ನೋಂದಣಿಯಾಗಿದ್ದಾರೆ. ನಮ್ಮ ಸರ್ಕಾರ ಬಂದ ನಂತರ ಅಂದರೆ, 2013 ರಿಂದ 2017ರ ಅವಧಿಯಲ್ಲಿ ಸುಮಾರು 8,94,127 ಕಟ್ಟಡ ಕಾರ್ಮಿಕರು ನೋಂದಣಿಯಾಗಿದ್ದಾರೆ. Collection of Cess ಬಗ್ಗೆಯೂ ಮಾಹಿತಿ ಕೊಡುತ್ತೇನೆ. As on today, October, 2017, ನಮ್ಮಲ್ಲಿ 6,108 ಕೋಟಿ including the interest from the registration fee ರೂಪದಲ್ಲಿ ಬಂದಂತಹ ಹಣ ಇರುವಂತಹದ್ದು. ಅದರಲ್ಲಿ ಸುಮಾರು 1,863 ಕೋಟಿ 2007ರಿಂದ 2013ರವರೆಗೆ ಸಂಗ್ರಹವಾಗಿದೆ. Rs.4,241 crore has been collected between 2013 and 2017. ಇದರ ಜೊತೆಗೆ, ಕಳೆದ 3 ವರ್ಷಗಳಲ್ಲಿ ಸಂಗ್ರಹಿಸಲಾದ ಸೆಸ್‌ನ ಮೊತ್ತವೇನು ಎಂದು ಮಾನ್ಯ ಸದಸ್ಯರು ಕೇಳಿದ್ದರು. Rs.2,029 crore Cess has been collected in the last three years. ಸೋಷಿಯಲ್ ಸೆಕ್ಯೂರಿಟಿ ಸ್ಕೀಮ್ ಏನಿದೆ ಅದರ ಕುರಿತು ನಮ್ಮಲ್ಲಿ ಒಟ್ಟು ಇರತಕ್ಕಂತಹ ಸುಮಾರು 11 ಲಕ್ಷ ನೋಂದಾಯಿತ ಕಾರ್ಮಿಕರಿಗೆ 12 ಸೋಷಿಯಲ್ ವೆಲ್‌ಫೇರ್ ಸ್ಕೀಮ್ಸ್‌ಗಳನ್ನು ಕೊಡುತ್ತೇವೆ. ಅದರ ಮಾಹಿತಿ ಇದೆ. 2,35,035 beneficiaries have been provided assistance under various Social Security Schemes, by incurring an expenditure of Rs.223 crore from 2007 to 2017. This money has to be spent only for the labourers, who are involved in construction activities only. This money cannot be spent on the unorganized sector. 2007ರಿಂದ 2017ರವರೆಗೆ ಈ ಯೋಜನೆಯಲ್ಲಿ 2,35,035 ಫಲಾನುಭವಿಗಳಿದ್ದಾರೆ. 15,970 only beneficiaries have been covered from 2007 to 2013. ನಮ್ಮ ಸರ್ಕಾರ ಬಂದ ನಂತರ ಅದರ ಜೊತೆಗೆ add ಆಗಿ 2013ರಿಂದ 2017ರವರೆಗೆ 2,19,062 ಫಲಾನುಭವಿಗಳು ಆಗಿದ್ದಾರೆ. During the last four years, we have covered more than two lakh people. ಒಟ್ಟು ಫಲಾನುಭವಿಗಳು 2,25,000 ಇದ್ದರೆ ಸುಮಾರು 2 ಲಕ್ಷ ಜನರನ್ನು ನಾವು ಕಳೆದ ಮೂರ್ನಾಲ್ಕು ವರ್ಷಗಳಲ್ಲಿ ಕವರ್ ಮಾಡಿದ್ದೇವೆ. ಮಾನ್ಯ ಸದಸ್ಯರು ಅವರ ಪ್ರಶ್ನೆಯಲ್ಲಿ ಈ ಮೊತ್ತ ಏಕೆ ಕಡಿಮೆ

ಖರ್ಚು ಆಗಿದೆಯೆಂದು ಕೇಳಿದ್ದಾರೆ. ಸುಪ್ರೀಂ ಕೋರ್ಟ್ ಗೈಡ್‌ಲೈನ್ಸ್ ಪ್ರಕಾರ ಮೂಲಭೂತ ಸೌಕರ್ಯಗಳಿಗಾಗಿ ಮಾತ್ರ ನಾವು ಖರ್ಚು ಮಾಡಬೇಕು. ಆ ಕಾರಣಕ್ಕಾಗಿ ನಾವು ಕಲಬುರಗಿ, ರಾಯಚೂರು, ಯಾದಗಿರಿ, ಬಳ್ಳಾರಿ, ಬೀದರ್, ಧಾರವಾಡ, ಚಿತ್ರದುರ್ಗ ಮತ್ತು ಕೊಪ್ಪಳ ಈ 8 ಜಿಲ್ಲೆಗಳಲ್ಲಿರುವ ನರೇಗಾ ಕಾರ್ಮಿಕರು ಯಾರು ಸ್ವಂತವಾಗಿ ಹಳ್ಳಿಗಳಲ್ಲಿ ನೋಂದಣಿಯಾಗಿದ್ದಾರೆ ಅವರನ್ನು ನೇರವಾಗಿ ಆಧಾರ್ ಲಿಂಕ್ ಇಟ್ಟುಕೊಂಡು ನೋಂದಣಿ ಮಾಡಲಾಗುತ್ತಿದೆ. ಡಿಸೆಂಬರ್ ಅಥವಾ ಜನವರಿಯ ವೇಳೆಗೆ ಸುಮಾರು 15 ಲಕ್ಷ ಕಟ್ಟಡ ಕಾರ್ಮಿಕರನ್ನು ಸೇರಿಸುವುದರಿಂದ ಈ ಮೊತ್ತವನ್ನು ಮಲ್ಟಿಪ್ಲೈ ಆಗಿ ಖರ್ಚು ಮಾಡಲಿಕ್ಕೆ ಅನುಕೂಲವಾಗುತ್ತದೆ. ಅದಕ್ಕಾಗಿ ಹೊಸ ಕಾರ್ಯಕ್ರಮಗಳನ್ನು ಮಾಡಿದ್ದೇವೆ. ಮಾನ್ಯ ಸದಸ್ಯರು ಕೇಳಿರುವಂತೆ Karnataka Building and Other Construciton Workers' Welfare Board ನಲ್ಲಿ 64 ಕೋಟಿಗಳಿದ್ದು, ಅದರಲ್ಲಿ ಕಳೆದ ಮೂರು ವರ್ಷಗಳಲ್ಲಿ ಏನು ಖರ್ಚು ಮಾಡಲಾಗಿದೆಯೆಂಬ ಪೂರ್ಣ ಮಾಹಿತಿಯನ್ನು ನೀಡಿದ್ದೇವೆ.

**ಶ್ರೀ ಟಿ.ಎ.ಶರವಣ**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ನಾನು ಕೇಳಿರುವಂತಹ ಪ್ರಶ್ನೆಗೆ ಈ ರಾಜ್ಯದಲ್ಲಿರುವ ಒಟ್ಟು ಕಾರ್ಮಿಕರಲ್ಲಿ ಕೇವಲ 2 ಲಕ್ಷ ಅಥವಾ 5 ಲಕ್ಷ ಜನ ಕಾರ್ಮಿಕರ ಕಲ್ಯಾಣಕ್ಕಾಗಿ ಖರ್ಚು ಮಾಡಿದ್ದೇವೆಂದು ಅವರು ಹೇಳುತ್ತಿದ್ದಾರೆ.

**ಶ್ರೀ ಸಂತೋಷ್ ಲಾಡ್**:- ಮಾನ್ಯ ಸಭಾಪತಿಯವರೇ, ಐದಲ್ಲ, 12 ಲಕ್ಷ ಜನ ಕಾರ್ಮಿಕರು ರಾಜ್ಯದಲ್ಲಿದ್ದಾರೆ.

**ಶ್ರೀ ಟಿ.ಎ.ಶರವಣ**:- ಆಗಲಿ ಮಾನ್ಯ ಸಭಾಪತಿಯವರೇ, ಆದರೆ ಈ ರಾಜ್ಯದಲ್ಲಿ ಸುಮಾರು ಒಂದು ಕೋಟಿ ಕಾರ್ಮಿಕರಿದ್ದಾರೆ.

**ಶ್ರೀ ಸಂತೋಷ್ ಲಾಡ್**:- ಮಾನ್ಯ ಸಭಾಪತಿಯವರೇ, ಅವರು ಅಸಂಘಟಿತ ಕಾರ್ಮಿಕರಾಗಿದ್ದಾರೆ.

**ಸಭಾಪತಿಯವರು**:- ಮಾನ್ಯ ಶರವಣ ಅವರೇ, ಮಾನ್ಯ ಸಚಿವರಿಗೆ ನೀವು ಸಹಕಾರವನ್ನು ಕೊಡಬೇಕು. ಇದು ಕಟ್ಟಡ ಕಾರ್ಮಿಕರಿಗೆ ಮಾತ್ರ, ಅಸಂಘಟಿತ ಕಾರ್ಮಿಕರಿಗೆ ಬರುವುದಿಲ್ಲ ಎಂದು ಅವರು ಹೇಳುತ್ತಿದ್ದಾರೆ.

**ಶ್ರೀ ಟಿ.ಎ.ಶರವಣ**:- ಕಟ್ಟಡ ಕಾರ್ಮಿಕರಿರಬಹುದು. ಜೊತೆಗೆ ಅದಕ್ಕೆ ಸಂಬಂಧಪಟ್ಟಂತಹ ಪ್ಲಂಬರ್ ಇರಬಹುದು, ಕಾರ್ಪೆಂಟರ್ ಇರಬಹುದು, ಈ ರೀತಿ ಅನೇಕ ಕಟ್ಟಡ ಕೆಲಸ ಮಾಡತಕ್ಕಂತಹ ಕಾರ್ಮಿಕರು ಎಂದಲ್ಲವೆ ಸಚಿವರು ಹೇಳುತ್ತಿರುವುದು. ಅದನ್ನು ಹೊರತುಪಡಿಸಿ ಅದರಲ್ಲಿಯೂ ಸಹ

ಬಹಳಷ್ಟು ಜನ ನೋಂದಣಿಯಾಗಿರುವುದಿಲ್ಲ. ನೋಂದಣಿ ಮಾಡುವುದಕ್ಕಾಗಿ ಜಾಗೃತಿ ಮೂಡಿಸಲು ಅಧಿಕಾರಿಗಳನ್ನು ಕಛೇರಿ ಬಿಟ್ಟು ಫೀಲ್ಡ್‌ಗೆ ಕಳುಹಿಸಬೇಕು. ಈಗ ರೂ.195/- ಶುಲ್ಕವನ್ನು ನೋಂದಣಿ ಮಾಡಲು ಪಡೆಯಲಾಗುತ್ತಿದ್ದು, ಅದನ್ನು ಉಚಿತವಾಗಿ ಮಾಡಬೇಕು.

(977)15.11.2017/11.50/ಕೆ.ಜಿ-ಜಿಆರ್

**ಶ್ರೀ ಸಂತೋಷ್ ಎಸ್.ಲಾಡ್**:- ಮಾನ್ಯ ಸಭಾಪತಿಯವರೇ, ಈಗ ಅದಕ್ಕೆ ಉತ್ತರ ಕೊಡುತ್ತೇನೆ. ಕಳೆದ ಮೂರು ವರ್ಷಗಳಲ್ಲಿನ increase ಅನ್ನು ನೋಡಿ. ಕಳೆದ ಮೂರು ವರ್ಷಗಳಲ್ಲಿ 8 ರಿಂದ 9 ಲಕ್ಷ ಜನ add ಆಗಿದೆ. ಈಗ ಸಂಪೂರ್ಣ ಮಾಹಿತಿಯನ್ನು ಸದನಕ್ಕೆ ಕೊಡುವುದಕ್ಕೆ ನನ್ನ ಬಳಿ data ಇಲ್ಲ. ಈ 8 ಜಿಲ್ಲೆಗಳಲ್ಲಿ separate drive ಮಾಡುತ್ತಿದ್ದೇವೆ. We are going to add another 15 lakh people. ಇನ್ನೂ ಬರುವಂತಹ 2-3 ತಿಂಗಳಿನಲ್ಲಿ 15 ಲಕ್ಷ ಜನರನ್ನು add ಮಾಡುತ್ತಿದ್ದೇವೆ. ನಾವೇ ಸ್ವತಹಃ through the KEONICS, we have identified an agency. ಎಲ್ಲಿ ನಮಗೆ Adhar linked data base ಅವರ ಹತ್ತಿರ ಇದೆ, ಅವರೇ ಅವರ ಮನೆಗೆ ಹೋಗಿ ಸಂಪೂರ್ಣ ಮಾಹಿತಿ ಕೊಟ್ಟು ಅವರ ಮನೆಯಲ್ಲಿಯೇ ಕುಳಿತುಕೊಂಡು ಪೋಟೋವನ್ನು ಮತ್ತು ಜೊತೆಗೆ data ವನ್ನು upload ಮಾಡಿ ಈಗ ನಮ್ಮ ಮಂಡಳಿಗೆ ಸಲ್ಲಿಸುತ್ತಿದ್ದಾರೆ. ಈಗ ನಮ್ಮಲ್ಲಿನ ಎಲ್ಲಾ ಸಂಪೂರ್ಣ data ವನ್ನು ಒಂದು web site ಮಾಡುತ್ತಿದ್ದೇವೆ. Karnataka Building and Other Construction Workers' Welfare Board ಅಡಿಯಲ್ಲಿ ಬರುವಂತಹ ಎಲ್ಲಾ ಕೆಲಸಗಾರರ ಮಾಹಿತಿಯನ್ನು ಒಳಗೊಂಡ ಒಂದು web site ಅನ್ನು ಮಾಡುತ್ತೇವೆ. ನಾಳೆ interface ಕೂಡ ಆಗಬಹುದು. ಯಾರಿಗಾದರೂ painter, plumber ಅಥವಾ ಬೇರೆ ಯಾವುದೇ ರೀತಿಯ ಕೆಲಸಗಾರರು ಬೇಕಾಗಿದ್ದರೆ, ಈ ಸಂಪೂರ್ಣ ಮಾಹಿತಿ Karnataka Building and Other Construction Workers' Welfare Board ನಲ್ಲಿ ಸಿಗುತ್ತದೆ. ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ, ಕಳೆದ ಮೂರು ವರ್ಷಗಳಿಂದ we have increased the number of beneficiaries from three lakhs to eleven lakhs. So, on an average, every year, we are increasing about three lakh beneficiaries. ಮುಂದೆ ನಾವೇ ಸ್ವತಃ ನಮ್ಮ ಇಲಾಖೆಯಿಂದ 15 ಲಕ್ಷ ಜನರನ್ನು enrolment ಮಾಡಿಕೊಳ್ಳುತ್ತಿದ್ದೇವೆ.

(ಗೊಂದಲ)

**ಸಭಾಪತಿಯವರು**:- ಮಾನ್ಯ ಸಚಿವರಿಗೆ ಧನ್ಯವಾದಗಳು. ಮಾನ್ಯ ಪೂಜಾರಿಯವರೇ, ಕಾರ್ಣಿಕ್‌ರವರೇ, ಹೀಗೆ ಎಲ್ಲರೂ ಎದ್ದು ನಿಂತುಕೊಂಡರೆ ಹೇಗೆ? ಮಾನ್ಯ ಶ್ರೀಕಂಠೇಗೌಡರೆ, ನನ್ನ ಅನುಮತಿ ಇಲ್ಲದೆ ಹಾಗೆ ಎದ್ದು ನಿಂತುಕೊಳ್ಳಬಾರದು. ನನ್ನ ಅನುಮತಿ ತೆಗೆದುಕೊಳ್ಳಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ** (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಸಾಮಾನ್ಯವಾಗಿ ಬಡವರಿಗೆ ಉಚಿತವಾಗಿ ನೋಂದಣಿ ಮಾಡಿದರೆ ಸರ್ಕಾರಕ್ಕೆ ಏನು ತೊಂದರೆ ಇದೆ?

**ಸಭಾಪತಿಯವರು**:- ಮಾನ್ಯ ಸದಸ್ಯರೆ, ಮಾನ್ಯ ಸಚಿವರು ಅದಕ್ಕೆ ಉತ್ತರ ಕೊಡುತ್ತಾರೆ. ದಯವಿಟ್ಟು ತಾವು ಕುಳಿತುಕೊಳ್ಳಿ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್**:- ಮಾನ್ಯ ಸಭಾಪತಿಯವರೇ, ನನ್ನದೊಂದು ಸಲಹೆ ಇದೆ.

**ಸಭಾಪತಿಯವರು**:- ಮಾನ್ಯ ಸದಸ್ಯರೇ, ಮಾನ್ಯ ಸಚಿವರು ಉತ್ತರ ಹೇಳಲಿ. ದಯವಿಟ್ಟು ತಾವು ಕುಳಿತುಕೊಳ್ಳಿ.

**ಶ್ರೀ ಸಂತೋಷ್ ಎಸ್.ಲಾಡ್**:- ಮಾನ್ಯ ಸಭಾಪತಿಯವರೇ, ಈಗ ನಾವು ಹೊಸದಾಗಿ ಮೂರು ವರ್ಷಕ್ಕೊಮ್ಮೆ ಮಾಡಿದ್ದೇವೆ. ಈಗ ಶುಲ್ಕವನ್ನು ಸಹ ಕಡಿಮೆ ಮಾಡಿದ್ದೇವೆ. ನಮ್ಮ ಸ್ನೇಹಿತರು ಏನು ಹೇಳುತ್ತಿದ್ದರೊ, ಅದರ ಪ್ರಕಾರ ಕಡಿಮೆ ಮಾಡಿದ್ದೇವೆ. ಈಗ ರೂ.175/- ಇರುವಂಥದ್ದನ್ನು ರೂ.50/- ಮಾಡಿದ್ದೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ನವೀಕರಣ ಮಾಡುವಾಗ ಅದು 2 ಲಕ್ಷರೂಳಗೆ ಬರುತ್ತದೆ. ಪುನಃ 120 ಅಥವಾ 175 ರೂಪಾಯಿಗಳನ್ನು ಕಟ್ಟುವುದಕ್ಕಿಂತ ಒಂದೇ ಸಾರಿ ಒಬ್ಬರು ನೋಂದಾವಣಿ ಮಾಡಿಕೊಂಡ ನಂತರ, ಸರ್ಕಾರಕ್ಕೆ ಉಚಿತವಾಗಿ ಮಾಡಿಕೊಡಲು ಏನು ತೊಂದರೆ ಇದೆ? ಮತ್ತೆ renewal ಮಾಡುವಂತಹ ಅವಶ್ಯಕತೆ ಏನಿದೆ?

**ಸಭಾಪತಿಯವರು**:- ಮಾನ್ಯ ಸದಸ್ಯರೆ, ಈಗ 50 ರೂಪಾಯಿಗಳಿಗೆ ಮಾಡಿದ್ದಾರೆ.

**ಶ್ರೀ ಸಂತೋಷ್ ಎಸ್.ಲಾಡ್**:- ಮಾನ್ಯ ಸಭಾಪತಿಯವರೇ, we can look into this matter. ಅವರು ಎರಡು ಲಕ್ಷ beneficiaries.

**ಶ್ರೀ ಟಿ.ಎ.ಶರವಣ (ವಿಧಾನ ಸಭಾ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ನಾನು ಹೇಳುತ್ತಿರುವುದು beneficiaries ಬಗ್ಗೆ ಅಲ್ಲ.

**ಸಭಾಪತಿಯವರು**:- ಮಾನ್ಯ ಸದಸ್ಯರೇ, ಸಾಕು ಬಿಡಿ. ಈಗ ಇಡೀ ಇಲಾಖೆಯ ಬಗ್ಗೆ ಚರ್ಚೆ ಬೇಡ.

**ಶ್ರೀ ಟಿ.ಎ.ಶರವಣ**:- ಮಾನ್ಯ ಸಭಾಪತಿಯವರೇ, ಮೊದಲನೆಯದಾಗಿ, enrolment ಮಾಡುವಾಗ, 3 ಲಕ್ಷ ಜನ ಇದ್ದರು. ಮತ್ತೊಮ್ಮೆ ಮೂರು ವರ್ಷಗಳಾದ ಮೇಲೆ ತಾವು ಏನು ನವೀಕರಣ ಮಾಡುತ್ತಿದ್ದೀರಿ ಈ ಸಂದರ್ಭದಲ್ಲಿ ಪುನಃ 2 ಲಕ್ಷ 30 ಸಾವಿರ ಆಗಿದೆ.

**ಶ್ರೀ ಸಂತೋಷ್ ಎಸ್.ಲಾಡ್**:- ಮಾನ್ಯ ಸಭಾಪತಿಯವರೇ, ಈಗ ಇರುವಂಥದ್ದು, as on today, 11 lakh people are registered on our Board.

**ಸಭಾಪತಿಯವರು**:- ಮಾನ್ಯ ಸದಸ್ಯರೇ, 11 ಲಕ್ಷ ಇದ್ದಾರೆ. ಸಾಕು ದಯವಿಟ್ಟು ತಾವು ಕುಳಿತುಕೊಳ್ಳಿ. ಅದನ್ನು ಹೇಳಿದ್ದಾರೆ. ಅದನ್ನು ಸಚಿವರು ಸಹ ಒಪ್ಪಿದ್ದಾರೆ.

**ಶ್ರೀ ಕೆ.ಬಿ.ಶಾಣಪ್ಪ (ನಾಮನಿರ್ದೇಶನ ಹೊಂದಿದವರು)**:- ಮಾನ್ಯ ಸಭಾಪತಿಯವರೇ, it should not be a problem. Renewal ಬೇಡ. ಒಂದು ಬಾರಿ 13 ಲಕ್ಷಗಳು ಅಂದರೆ, 13 ಲಕ್ಷಗಳದ್ದು ತೆಗೆದುಕೊಂಡು ಒಂದು ಬಾರಿ ಮಾಡಿಕೊಳ್ಳಬೇಕು.

**ಸಭಾಪತಿಯವರು**:- ಮಾನ್ಯ ಸದಸ್ಯರೇ, ಆಯಿತು. ತಾವು ಕುಳಿತುಕೊಳ್ಳಿ.

**ಚುಕ್ಕೆ ಗುರುತಿನ ಸಂಖ್ಯೆ 3741**

**(ಉತ್ತರ ಲಗತ್ತಿಸಿದೆ)**

**ಶ್ರೀ ಆರ್.ಧರ್ಮಸೇನ**:- ಮಾನ್ಯ ಸಭಾಪತಿಯವರೇ, ಹಾಸನ ಜಿಲ್ಲೆ, ಹಾಸನ ತಾಲ್ಲೂಕಿನ ಕ್ಯಾತನಹಳ್ಳಿ ಏತ ನೀರಾವರಿ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದ್ದೆ. ಮಾನ್ಯ ಸಚಿವರು ಅದಕ್ಕೆ ಉತ್ತರವನ್ನು ಒದಗಿಸಿದ್ದಾರೆ. ಇದರಲ್ಲಿ 137 ಭೂ ಮಾಲೀಕರು ಹೆಚ್ಚುವರಿ ಪರಿಹಾರಕ್ಕಾಗಿ ನ್ಯಾಯಾಲಯಕ್ಕೆ ಹೋಗಿದ್ದರು. ಅದರಲ್ಲಿ 67 ಪ್ರಕರಣಗಳ ವಿಚಾರಣೆ ಈಗಾಗಲೇ ಮುಗಿದಿದೆ. ಅದರ ಹಣವನ್ನು ನ್ಯಾಯಾಲಯದಲ್ಲಿ ಠೇವಣಿ ಇಡಲಾಗಿದೆ ಎಂದು ಹೇಳಿದ್ದಾರೆ. ಅದಕ್ಕೆ ತುಂಬ ಸಂತೋಷ. ಮಾನ್ಯ ಸಚಿವರಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ನ್ಯಾಯಾಲಯದಲ್ಲಿ ಹಣ ಠೇವಣಿ ಇರುವ ಬಗ್ಗೆ ನಮ್ಮ ರೈತರಿಗೆ ಯಾವುದೇ ಮಾಹಿತಿ ಇಲ್ಲ ಹಾಗೂ ಮುಂದೆ ಇದಕ್ಕೆ ಏನು ಮಾಡಬೇಕೆಂಬ ಬಗ್ಗೆ ಗೊತ್ತಿಲ್ಲ. ಅದಕ್ಕೆ ದಯಮಾಡಿ ರೈತರಿಗೆ ಇದಕ್ಕೆ ಸಂಬಂಧಪಟ್ಟ ಹಣ ಎಲ್ಲಿ ಠೇವಣಿ ಆಗಿದೆ ಎಂಬುದನ್ನು ಹೇಳಿದರೆ ಅನುಕೂಲವಾಗುತ್ತದೆ.

**ಶ್ರೀ ಎಂ.ಬಿ.ಪಾಟೀಲ**:- ಮಾನ್ಯ ಸಭಾಪತಿಯವರೇ, ಠೇವಣಿ ಆಗಿರುವಂತಹ ಹಣ ರೂ.2,20,52,438.00ಗಳು. ಇದು ಏನಾಗಿದೆ ಎಂದರೆ, ರೈತರು ಹೆಚ್ಚಿನ ಪರಿಹಾರ ಕೇಳಿ ಅಪೀಲು ಹೋದ ಮೇಲೆ award ಆಗಿರುವಂಥದ್ದು. ಮೊದಲನೇ ಹಂತದಲ್ಲಿ ಹೆಚ್ಚಿನ ಪರಿಹಾರ ಕೇಳಿ 137 ಜನ ರೈತರು ನ್ಯಾಯಾಲಯಕ್ಕೆ ಹೋಗಿದ್ದರು. ಈಗಾಗಲೇ ಅದರಲ್ಲಿ 67 ಜನ ರೈತರಿಗೆ ತೀರ್ಪು ಆಗಿದೆ.

ನಮ್ಮ ಮುಖ್ಯ ಅಭಿಯಂತರವರಿಗೆ ಈ ಬಗ್ಗೆ ರೈತರ ಬಳಿ ಸಭೆ ನಡೆಸಿ, ಮಾಹಿತಿಯನ್ನು ಕೊಡುವಂತೆ ಸೂಚಿಸುತ್ತೇನೆ.

**ಶ್ರೀ ಆರ್.ಧರ್ಮಸೇನ**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರ ಉತ್ತರದಲ್ಲಿ ಆ ಹಣ ಯಾವಾಗ ಠೇವಣಿ ಆಗಿದೆ ಎಂಬುದನ್ನು ಹೇಳಿರುವುದಿಲ್ಲ. ಅದಕ್ಕೆ ಆ ಹಣ ಯಾವ ದಿನಾಂಕದಂದು ಠೇವಣಿ ಆಗಿದೆ ಎಂಬುದನ್ನು ತಿಳಿಸಬೇಕು.

**ಶ್ರೀ ಎಂ.ಬಿ.ಪಾಟೀಲ**:- ಮಾನ್ಯ ಸಭಾಪತಿಯವರೇ, ಹಣ ಠೇವಣಿಯಾಗಿರುವ ದಿನಾಂಕವನ್ನು ನೀಡುತ್ತೇನೆ. ಅದರ ಸಂಪೂರ್ಣ ಮಾಹಿತಿ ಇದೆ. ಹಣ ಠೇವಣಿಯಾಗಿದೆ. ಈಗಾಗಲೇ ಅದರಲ್ಲಿ ಕೆಲವರು ಹಣವನ್ನು ತೆಗೆದುಕೊಂಡಿದ್ದಾರೆ. ಒಟ್ಟು 60 ಎಕರೆ 19 ಗುಂಟೆ ಜಮೀನಿನಲ್ಲಿ 168 ಜನ ರೈತರು ಬರುತ್ತಾರೆ. ಅದರಲ್ಲಿ 137 ಜನ ರೈತರು ಪರಿಹಾರ ತೆಗೆದುಕೊಂಡಿರುವವರು ಇದ್ದಾರೆ. ಅವರಿಗೆ ಮಾಹಿತಿ ಇಲ್ಲವೆಂದರೆ, ಅವರು ಪರಿಹಾರದ ಹಣವನ್ನು ಹೇಗೆ ತೆಗೆದುಕೊಂಡರು. 31 ಜನ ಮಾತ್ರ ಬಾಕಿ ಇದ್ದಾರೆ.

**ಶ್ರೀ ಆರ್.ಧರ್ಮಸೇನ**:- ಮಾನ್ಯ ಸಭಾಪತಿಯವರೇ, ನ್ಯಾಯಾಲಯದಲ್ಲಿ ಆದೇಶವಾಗಿರುವ ಬಗ್ಗೆ ಕೂಡ..

**ಸಭಾಪತಿಯವರು**:- 31 ಜನ ಮಾತ್ರ ಬಾಕಿ ಇದ್ದಾರೆ. ಉಳಿದವರು ಎಲ್ಲರೂ ತೆಗೆದುಕೊಂಡಿದ್ದಾರೆ.

**ಶ್ರೀ ಎಂ.ಬಿ.ಪಾಟೀಲ**:- ಮಾನ್ಯ ಸಭಾಪತಿಯವರೇ, ಅಲ್ಲ. 67 ಜನ ಬಾಕಿ ಇದ್ದಾರೆ.

**ಶ್ರೀ ಆರ್.ಧರ್ಮಸೇನ**:- ಮಾನ್ಯ ಸಭಾಪತಿಯವರೇ, ದಯಮಾಡಿ ಅವರಿಗೆ ನೋಟೀಸ್ ಕೊಡಿಸಿಕೊಡಿ.

**ಶ್ರೀ ಎಂ.ಬಿ.ಪಾಟೀಲ**:- ಮಾನ್ಯ ಸಭಾಪತಿಯವರೇ, ಅದರ ಬಗ್ಗೆ ನಮ್ಮ ಭೂ ಸ್ವಾಧೀನ ಅಧಿಕಾರಿಯವರಿಗೆ ಮತ್ತು ನಮ್ಮ ಮುಖ್ಯ ಅಭಿಯಂತರರಿಗೆ co-ordinate ಮಾಡುವುದಕ್ಕೆ ತಿಳಿಸುತ್ತೇನೆ.

**ಚುಕ್ಕೆ ಗುರುತಿನ ಸಂಖ್ಯೆ 3783**

**(ಉತ್ತರ ಪ್ರತಿ ಲಗತ್ತಿಸಿದೆ)**

**ಶ್ರೀ ಎಂ.ನಾರಾಯಣ ಸ್ವಾಮಿ**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ನನ್ನ ಪ್ರಶ್ನೆ ಏನೆಂದರೆ, ಇಡೀ ಕರ್ನಾಟಕ ರಾಜ್ಯದಲ್ಲಿ ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಅತೀ ಹೆಚ್ಚು ಗಾರ್ಮೆಂಟ್ಸ್ ಕಾರ್ಖಾನೆಗಳಿವೆ. ಆ ಕಾರ್ಖಾನೆಗಳಲ್ಲಿ ದುಡಿಯುತ್ತಿರುವ ಮಹಿಳೆಯರ ಸುರಕ್ಷತೆಗಾಗಿ ಕೈಗೊಂಡಿರುವ ಕ್ರಮಗಳೇನು ಎಂಬ ಬಗ್ಗೆ ಪ್ರಶ್ನೆ ಕೇಳಿದ್ದೇನೆ. ಅದಕ್ಕೆ

ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಸುರಕ್ಷತಾ ನಿಯಮಾವಳಿಗಳ ಅನುಷ್ಠಾನಕ್ಕೆ ನಿಯತಕಾಲಿಕ ಪರಿವೀಕ್ಷಣೆಗಳ ಮುಖಾಂತರ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದ ಹಾಗೂ ಕಳೆದ ಮೂರು ವರ್ಷಗಳಲ್ಲಿ ಸಿದ್ದ ಉಡುಪು ಕಾರ್ಖನೆಗಳಲ್ಲಿ ಯಾವುದೇ ಅಪಘಾತಗಳು ಸಂಭವಿಸಿರುವುದಿಲ್ಲವೆಂದು ಉತ್ತರ ನೀಡಿದ್ದಾರೆ. ಮಾನ್ಯ ಸಭಾಪತಿಯವರೇ, ಕಾನೂನು ಪ್ರಕಾರವಾಗಿ, ಒಂದು ಗಾರ್ಮೆಂಟ್ಸ್ ಕಾರ್ಖನೆಯಲ್ಲಿ 100 ರಿಂದ 500 ಜನ ಕಾರ್ಮಿಕರು ದುಡಿಯುತ್ತಿದ್ದರೆ, ಅಂತಹ ಕಾರ್ಖಾನೆಯಲ್ಲಿ ಒಂದು ಸಣ್ಣ ಆಸ್ಪತ್ರೆಯನ್ನು ತೆರೆದು ವೈದ್ಯರೋ ಅಥವಾ ನರ್ಸ್ ಇರಬೇಕು ಎನ್ನುವಂತಹ ಕಾನೂನು ಇದೆ. ಆದರೆ, ಇದುವರೆಗೂ ಸಹ, ಯಾವುದೇ ಒಂದು ಗಾರ್ಮೆಂಟ್ಸ್ ಕಾರ್ಖನೆಯಲ್ಲಿಯೂ ಸಹ ಒಬ್ಬ ವೈದ್ಯರು ಇಲ್ಲ. ಯಾವುದಾದರೊಂದು ಸಣ್ಣ ಅಪಘಾತವಾದರೆ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕು ಎನ್ನುವಷ್ಟರಲ್ಲಿ ಆಗುವಂತಹ ಅನಾಹುತಗಳಿಗೆ ಯಾರು ಕಾರಣರಾಗುತ್ತಾರೆ? ದಯಮಾಡಿ ಮಾನ್ಯ ಸಚಿವರು ಇದಕ್ಕೆ ಉತ್ತರ ಕೊಡಬೇಕು.

ಮಾನ್ಯ ಸಭಾಪತಿಯವರೇ, ನನ್ನ ಎರಡನೆ ಪ್ರಶ್ನೆ ಏನೆಂದರೆ, ಮಹಿಳಾ ಕಾರ್ಮಿಕರ ಮೇಲೆ ಆಗುತ್ತಿರುವ ದೌರ್ಜನ್ಯಗಳ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ, ಒಂದು ವೇಳೆ, ಬಂದಿದ್ದಲ್ಲಿ ಇದರ ಬಗ್ಗೆ ಯಾವ ರೀತಿಯ ಕ್ರಮ ಕೈಗೊಂಡಿದ್ದೀರಿ ಎಂದು ಪ್ರಶ್ನೆ ಕೇಳಿದೇನೆ. ಅದಕ್ಕೆ ಮಾನ್ಯ ಸಚಿವರು ಮಹಿಳಾ ಕಾರ್ಮಿಕರ ಅಂತಹ ಯಾವುದೇ ದೌರ್ಜನ್ಯಗಳ ಪ್ರಕರಣಗಳು ಕಾರ್ಮಿಕ ಇಲಾಖೆಯ ಗಮನಕ್ಕೆ ಬಂದಿರುವುದಿಲ್ಲವೆಂದು ತಿಳಿಸಿದ್ದಾರೆ. ಇದು ನಿಜವಾಗಲು ಸಹ ಅಶ್ಚರ್ಯವಾಗುತ್ತದೆ. ಆ ಕಾರ್ಖಾನೆಯಲ್ಲಿ ದುಡಿಯುತ್ತಿರುವಂತಹ ಮಹಿಳೆಗೆ ಕಾರ್ಖಾನೆಗೆ ಹೋಗುವುದಕ್ಕಿಂತ ಮುಂಚೆಯೇ ತೊಂದರೆ ಪ್ರಾರಂಭವಾಗುತ್ತದೆ. ಕಾರ್ಖಾನೆಯಲ್ಲಿ ಸಮಯ ಕೊಟ್ಟಿರುತ್ತಾರೆ. ಆ ಸಮಯಕ್ಕೆ ಸರಿಯಾಗಿಯೇ ಕಾರ್ಖಾನೆಗೆ ಹೋಗಬೇಕು. ಆ ರೀತಿ ಅವರು ಹೋಗುವುದಕ್ಕೆ ಸರಿಯಾದಂತಹ ಸಾರಿಗೆ ವ್ಯವಸ್ಥೆ ಇರುವುದಿಲ್ಲ. ಆಗ ಅವರಿಗೆ ಯಾವ ವಾಹನ ಸಿಗುತ್ತದೆಯೋ ಆ ವಾಹನಗಳಲ್ಲಿ ಹೋಗುತ್ತಾರೆ. ಆಟೋಗಳಲ್ಲಿ, ಲಗ್ಗೇಜು ವಾಹನಗಳಲ್ಲಿ ಅವರನ್ನು ಕುರಿಗಳನ್ನು ತುಂಬಿಸಿಕೊಂಡು ಹೋಗುವ ಹಾಗೆ ತುಂಬಿಕೊಂಡುಹೋಗುತ್ತಾರೆ. ಒಂದು ವೇಳೆ, ಅವರಿಗೆ ಏನಾದರೂ ಅಪಘಾತಗಳಾದರೆ, ಅವರಿಗೆ ಯಾರು ಹೊಣೆ? ಅವರ ಸಂಸಾರದ ಗತಿ ಏನು?. ಇದಕ್ಕೆ ಉತ್ತರವನ್ನು ಮಾನ್ಯ ಸಚಿವರು ಕೊಡಬೇಕೆಂದು ಮನವಿಯನ್ನು ಮಾಡಿಕೊಳ್ಳುತ್ತೇನೆ. ಮಾನ್ಯ ಸಚಿವರು ಕಾರ್ಖಾನೆಗಳಲ್ಲಿ ದೌರ್ಜನ್ಯಗಳು ಇಲ್ಲವೆಂದು ಹೇಳಿದ್ದಾರೆ. ಆ ಕಾರ್ಖಾನೆಗಳಲ್ಲಿ ದುಡಿಯುತ್ತಿರುವಂತಹ ಮ್ಯಾನೇಜರು ಇರಬಹುದು, ಸೂಪರ್‌ವೈಸರ್ ಇರಬಹುದು, ಮಹಿಳಾ ಕಾರ್ಮಿಕರಿಗೆ ಲೈಂಗಿಕ ಕಿರುಕುಳಗಳನ್ನು ನೀಡುತ್ತಿದ್ದಾರೆ. ಅದಕ್ಕೆ ಅವರ ಒಪ್ಪಿಗೆ ಇಲ್ಲವೆಂದರೆ, ಅವರಿಗೆ ಹೆಚ್ಚು ಸಮಯ ಕೆಲಸ ಮಾಡುವಂತೆ ಹೇಳುತ್ತಾರೆ. ಅದರೆ, ಆ ರೀತಿ ಹೆಚ್ಚು ಸಮಯ ಕೆಲಸ ಮಾಡಿದ್ದಕ್ಕೆ ವೇತನ ಕೊಡುವುದಿಲ್ಲ. ಬೆಳಗ್ಗೆ 9.00 ಗಂಟೆಗೆ ಕಾರ್ಖಾನೆಗೆ ಬಂದರೆ, ಸಂಜೆ 07 ರಿಂದ 08 ಗಂಟೆಯವರೆಗೆ ದುಡಿಸಿಕೊಳ್ಳುವಂತಹ ಶಿಕ್ಷೆಯನ್ನು ಕೊಡುತ್ತಾರೆ. ಜೊತೆಗೆ ಈ ದೌರ್ಜನ್ಯ

ಆಗಿರುವಂಥದ್ದು ಅವರ ಗಂಡಂದಿರಿಗೆ ಗೊತ್ತಾಗಿ ಸಂಸಾರ ಚಿದ್ರ ಚಿದ್ರವಾಗಿ ಹೊಡೆದು ಹೋಗಿವೆ. ಎಷ್ಟು ಜನ ಮಹಿಳಾ ಕಾರ್ಮಿಕರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇಂತಹ ಪ್ರಕರಣಗಳು ತಮ್ಮ ಗಮನಕ್ಕೆ ಬಂದಿಲ್ಲವೆಂದು ಹೇಳುತ್ತಾರೆ. ದಯಮಾಡಿ ಮಾನ್ಯ ಸಚಿವರು ಇದರ ಬಗ್ಗೆ ಗಮನ ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಅದರ ಜೊತೆಯಲ್ಲಿ ಇನ್ನೊಂದು ಪ್ರಶ್ನೆ.

**ಸಭಾಪತಿಯವರು**:- ಮಾನ್ಯ ಸದಸ್ಯರೇ, ಮಾನ್ಯ ಸಚಿವರಿಗೆ ಉತ್ತರ ಹೇಳುವುದಕ್ಕೆ ಬಿಡಿ.

**ಶ್ರೀ ಎಂ.ನಾರಾಯಣ ಸ್ವಾಮಿ**:- ಮಾನ್ಯ ಸಭಾಪತಿಯವರೇ, ಇನ್ನೊಂದು ಪ್ರಶ್ನೆ ಏನೆಂದರೆ, ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಅನೇಕ ಗಾರ್ಮೆಂಟ್ಸ್ ಕಾರ್ಖಾನೆಗಳಿದ್ದು ಅಲ್ಲಿನ ಮಹಿಳಾ ಕಾರ್ಮಿಕರ ಮಕ್ಕಳಿಗೆ ಶಿಶು ಪಾಲನಾ ಕೇಂದ್ರ್ರಗಳನ್ನು ತೆರೆಯಲಾಗಿದೆಯೇ, ಇದರ ಬಗ್ಗೆ ಸರ್ಕಾರ ತೆಗೆದುಕೊಂಡಿರುವಂತಹ ಕ್ರಮಗಳೇನು ಎಂಬ ಪ್ರಶ್ನೆಯನ್ನು ಕೇಳಿದ್ದೇನೆ. ಅದಕ್ಕೆ ಮಾನ್ಯ ಸಚಿವರು ಮಕ್ಕಳ ಶಿಶುಪಾಲನಾ ಕೇಂದ್ರ ಒದಗಿಸಬೇಕಿದ್ದು, ನಿಯಮಿತ ತಪಾಸಣೆಗಳ ಮುಖಾಂತರ ಬಾಲವಾಡಿ ಒದಗಿಸಿರುವ ಬಗ್ಗೆ ಪರಿಶೀಲಿಸಲಾಗುತ್ತಿರುತ್ತದೆ ಹಾಗೂ ಕಳೆದ ಮೂರು ವರ್ಷಗಳಲ್ಲಿ ನಿಯಮಾನುಸಾರ ಬಾಲವಾಡಿ ಒದಗಿಸದ ಕಾರ್ಖಾನೆಗಳ ವಿರುದ್ಧ 99 ಪ್ರಕರಣಗಳನ್ನು ಹೂಡಲಾಗಿರುತ್ತದೆಂದು ತಿಳಿಸಿರುತ್ತಾರೆ. ಆದರೆ, ಕಾರ್ಖಾನೆಗಳಲ್ಲಿ ಇರತಕ್ಕಂತಹ ಮಾಲೀಕರು ಆಗಿರಬಹುದು, ಮ್ಯಾನೇಜರ್‌ಗಳು ಇರಬಹುದು ಅವರು ಮಕ್ಕಳನ್ನು ಕರೆದುಕೊಂಡು ಬರಲೇಬೇಡಿ ಎಂದು ಮಹಿಳಾ ಕಾರ್ಮಿಕರ ಮೇಲೆ ಒತ್ತಡವನ್ನು ಹಾಕುತ್ತಾರೆ. ಇನ್ನೂ ಮಕ್ಕಳ ಪರಿಶೀಲನಾ ಕೇಂದ್ರವನ್ನು ಸ್ಥಾಪನೆ ಮಾಡುವುದು ಇರಲಿ, ಯಾರಿಗೆ ಸಣ್ಣ ಮಕ್ಕಳು ಇದ್ದಾರೆ, ಅವರು ಆ ಕಾರ್ಖಾನೆಗೆ ಮಕ್ಕಳನ್ನು ಕರೆದುಕೊಂಡು ಬಾರಬಾರದೆಂದು ಆ ಮಹಿಳಾ ಕಾರ್ಮಿಕರಿಗೆ ಒತ್ತಡವನ್ನು ಹೇರುತ್ತಾರೆ.

(ಮುಂದು...)

(978)15.11.2017-12.00-ಎಂವಿ-ಎಂಡಿ

**ಶ್ರೀ ಎಂ.ನಾರಾಯಣಸ್ವಾಮಿ (ಮುಂದು)**:-

ಯಾರಿಗೆ ಎಳೆಯ ಮಕ್ಕಳು ಇದ್ದಾರೋ, ಅವರು ಕಾರ್ಖಾನೆಗೆ ಮಕ್ಕಳನ್ನು ಕರೆದುಕೊಂಡು ಬರಬಾರದು. ಕರೆದುಕೊಂಡು ಬಂದರೆ ನಿಮಗೂ ಕೂಡ ಕೆಲಸವನ್ನು ಕೊಡುವುದಿಲ್ಲ ಎನ್ನುವಂತಹ ಒತ್ತಡವನ್ನು ಹಾಕುತ್ತಿದ್ದಾರೆ. ಕಳೆದ ಮೂರು ವರ್ಷಗಳಲ್ಲಿ ಸುಮಾರು 99 ಪ್ರಕರಣಗಳನ್ನು ಹಾಕಿದ್ದೇವೆ ಎಂದು ಹೇಳುತ್ತಾರೆ. ಆದರೆ, ಇದುವರೆವಿಗೂ ಯಾರ ಮೇಲಾದರೂ ಸಹ ಕಾನೂನಿನ ಕ್ರಮವನ್ನು ತೆಗೆದುಕೊಂಡಿದ್ದೀರಾ? ಆದುದರಿಂದ ಇವತ್ತಿನ ದಿವಸ ಯಾರಿಗೂ ಸಹ ಭಯ ಇಲ್ಲದಂತಾಗಿದೆ. ದಯಮಾಡಿ ಇದರಲ್ಲಿ ನನ್ನ ಕಳಕಳಿ ಏನೆಂದರೆ ಮಹಿಳೆಯರು ಮತ್ತು ಬಡವರು ಬೆಂಗಳೂರಿನ ಹೊರಗಡೆ ಇರುವಂತಹ ಜನ ವಲಸೆ ಬಂದು ಬೆಂಗಳೂರಿನಲ್ಲಿ ಉದ್ಯೋಗಕ್ಕೋಸ್ಕರ ಗಾರ್ಮೆಂಟ್ಸ್

ಕಾರ್ಖಾನೆಗಳಿಗೆ ಸೇರಿಕೊಳ್ಳುತ್ತಿದ್ದಾರೆ. ಅವರ ಕಷ್ಟ-ಸುಖಕ್ಕೆ ಭಾಗಿಯಾಗುವಂಥದ್ದು ಸರ್ಕಾರದ ಕರ್ತವ್ಯವಾಗಿದೆ. ದಯಮಾಡಿ ಸಚಿವರು ಇದಕ್ಕೆ ಉತ್ತರವನ್ನು ಕೊಡಬೇಕು.

**ಶ್ರೀ ಸಂತೋಷ್ ಎಸ್.ಲಾಡ್**:- ಮಾನ್ಯ ಸಭಾಪತಿಯವರೇ, ಇದರಲ್ಲಿ ಅವರು safety aspect ಬಗ್ಗೆ ಮಾತನಾಡುತ್ತಿದ್ದಾರೆ. According to the Factory Rules, safety aspect ಎಲ್ಲರಿಗೂ ಒಂದೇ ಆಗಿರುತ್ತದೆ. On that we have given him an answer. ಮಾನ್ಯ ಸದಸ್ಯರು ಕೇಳಿರುವಂಥದ್ದು ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ಕೆಲಸ ಮಾಡುವವರು ಬಡ ಜನರು, ಅಲ್ಲಿ ಅವರಿಗೆ ಲೈಂಗಿಕ ಕಿರುಕುಳವನ್ನು ಕೊಡುತ್ತಾರೆ ಎಂದು. ಸದ್ಯಕ್ಕೆ ನಮ್ಮ ಇಲಾಖೆಯಲ್ಲಿ as of now ಯಾವುದೇ ರೀತಿಯ ದೂರುಗಳು ಇಲ್ಲ. ಅದಕ್ಕೆ ಸಂಬಂಧಪಟ್ಟಂತೆ ನಾವು ಉತ್ತರವನ್ನು ಕೊಟ್ಟಿದ್ದೇವೆ.

**ಶ್ರೀ ಎಂ.ನಾರಾಯಣಸ್ವಾಮಿ**:- ಮಾನ್ಯ ಸಭಾಪತಿಯವರೇ, ಇದಕ್ಕೆ ಸಂಬಂಧಪಟ್ಟಂತೆ ಪ್ರತಿದಿನ ಪತ್ರಿಕೆಗಳಲ್ಲಿ ಮತ್ತು ಟಿ.ವಿ.ಗಳಲ್ಲಿ ಬರುತ್ತಿದೆ. ಇವತ್ತಿನ ದಿವಸ ಹೆಣ್ಣು ಮಕ್ಕಳು ದೂರು ನೀಡುವುದಕ್ಕೆ ಹೆದರುತ್ತಿದ್ದಾರೆ.

**ಶ್ರೀ ಸಂತೋಷ್ ಎಸ್. ಲಾಡ್**:- ಮಾನ್ಯ ಸಭಾಪತಿಯವರೇ, ಅವರು ನಮ್ಮಲ್ಲಿ ಬಂದು ದೂರನ್ನು ನೀಡಿದರೆ, ಅದರ ಬಗ್ಗೆ ನಾನು ಮಾಹಿತಿಯನ್ನು ಹೇಳಬಹುದು. As of now, there is no complaint. Certainly, in future if we receive any complaint, ಖಂಡಿತವಾಗಿಯೂ ತಕ್ಷಣ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಅವರು ಹೇಳಿರುವಂಥದ್ದು ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ consent ಇದೆ. ನಮ್ಮ ಇಲಾಖೆಯವರು ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮಂತ್ರಿಗಳು ಮಾತನಾಡಿದ್ದೇವೆ. ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ಸುಮಾರು ಮೂರುವರೆ ಲಕ್ಷ ಜನ ಕೆಲಸಗಾರರಿದ್ದಾರೆ. ಬೆಂಗಳೂರಿನ ಹೊರವಲಯದಲ್ಲಿ ಬಹಳಷ್ಟು ಜನ ಇದ್ದಾರೆ, ಅವರುಗಳಿಗೆ ಅನಾನುಕೂಲವಾಗಿದೆ. ಅವರಿಗೆ ವ್ಯವಸ್ಥೆ ಮಾಡುವುದಕ್ಕೆ ನಮ್ಮ ಇಲಾಖೆ ಮತ್ತು ಸಾರಿಗೆ ಇಲಾಖೆ ಮಂತ್ರಿಗಳು ಒಂದೆರಡು ಬಾರಿ ಮಾತನಾಡಿದ್ದೇವೆ, ಮುಂದಿನ ದಿನಗಳಲ್ಲಿ ಅದು ಪರಿಗಣನೆಯಲ್ಲಿದೆ. As far as the safety aspect is concerned, ನಾವು ಬಂದ ನಂತರ, ಕಳೆದ ನಾಲ್ಕು ವರ್ಷಗಳಲ್ಲಿ 332 ಪ್ರಕರಣಗಳನ್ನು ದಾಖಲು ಮಾಡಿದ್ದೇವೆ. Especially, where there is no crèches, ಅಲ್ಲಿ 99 ಪ್ರಕರಣಗಳನ್ನು ನೋಂದಾಯಿಸಿದ್ದೇವೆ. It's not that it will be changed overnight. ಹಂತ-ಹಂತವಾಗಿ the things are changing. Certainly, I will promise the member, ಮುಂದಿನ ದಿನಗಳಲ್ಲಿ

we will be more stringent towards them and we will see that, they follow rules and regulations.

**ಸಭಾಪತಿಯವರು:–** ಧನ್ಯವಾದಗಳು. ಮುಂದಿನ ಪ್ರಶ್ನೆ ಮಾನ್ಯ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ ರವರದ್ದು, ಮಾನ್ಯ ಸಚಿವರು ಸಮಯಾವಕಾಶವನ್ನು ಕೇಳಿದ್ದಾರೆ.

**ಚುಕ್ಕೆ ಪ್ರಶ್ನೆ ಸಂಖ್ಯೆ: 3655 + 3747**
**(ಕಾಲಾವಕಾಶ ಕೋರಲಾಯಿತು.)**

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಇದು ಬಹಳ ಮುಖ್ಯವಾದಂತಹ ಪ್ರಶ್ನೆ. ಕನಿಷ್ಟಪಕ್ಷ ಮುಂದಿನ ಬುಧವಾರ ಉತ್ತರವನ್ನು ನೀಡಲಿ.

**ಶ್ರೀ ಕಾಗೋಡು ತಿಮ್ಮಪ್ಪ:–** ಮಾನ್ಯ ಸಭಾಪತಿಯವರೇ, ಮಾಹಿತಿಯನ್ನು ಸಂಗ್ರಹಿಸಬೇಕು, ಅದಕ್ಕೋಸ್ಕರ ಹದಿನೈದು ದಿನಗಳ ಕಾಲಾವಕಾಶವನ್ನು ಕೇಳಿದ್ದೇನೆ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, Deemed Forest ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದ್ದೇನೆ. ಸುಮಾರು ಜನರು ಅರ್ಜಿಗಳನ್ನು ಹಾಕಿಕೊಂಡು ಕಾಯುತ್ತಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಸುಮಾರು ಎರಡರಿಂದ ಮೂರು ಲಕ್ಷ ಜನ ಅರ್ಜಿಗಳನ್ನು ಹಾಕಿಕೊಂಡು ಕಾಯುತ್ತಿದ್ದಾರೆ. ಇದು ನ್ಯಾಯವಲ್ಲ, ಮಾನ್ಯ ಸಚಿವರು 15 ದಿನಗಳ ಕಾಲಾವಕಾಶವನ್ನು ಕೇಳುತ್ತಿರುವುದನ್ನು ಪ್ರತಿಭಟಿಸಿ ಸದನದ ಭಾವಿಯಲ್ಲಿ ಧರಣಿ ಕುಳಿತುಕೊಳ್ಳುತ್ತೇನೆ.

**(ಮಾನ್ಯ ಸದಸ್ಯರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರು ಸದನದ ಬಾವಿಯಲ್ಲಿ ಧರಣಿ ಕುಳಿತರು)**

**ಸಭಾಪತಿಯವರು:–** ಈ ಪ್ರಶ್ನೆ ಮಾನ್ಯ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ ರವರದ್ದು. ಮಾನ್ಯ ಸದಸ್ಯರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿ ಯವರೆ, ನಿಮ್ಮ ಪ್ರಶ್ನೆ ಸಂಖ್ಯೆ ಇನ್ನೂ ಬಂದಿಲ್ಲ. ಅದು ಆದನಂತರ ಮುಂದಿನ ಪ್ರಶ್ನೆ ಮಾನ್ಯ ಸದಸ್ಯರಾದ ಶ್ರೀ ರಘುನಾಥ ರಾವ್ ಮಲ್ಕಾಪೂರೆ ಯವರದ್ದು. ಈ ಎರಡು ಒಂದೇ ರೀತಿಯ ಪ್ರಶ್ನೆಗಳೆ?

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಹೌದು, ಎರಡು ಪ್ರಶ್ನೆಗಳು ಒಂದೇ ರೀತಿ ಇದೆ.

**ಸಭಾಪತಿಯವರು:–** ಮಾನ್ಯ ಸಚಿವರು ಏನನ್ನು ಹೇಳುತ್ತಾರೆಂದು ಕೇಳೋಣ.

**(ಗೊಂದಲ)**

**ಶ್ರೀ ಕಾಗೋಡು ತಿಮ್ಮಪ್ಪ**:- ಮಾನ್ಯ ಸಭಾಪತಿಯವರೇ, ನಾವು ನಮ್ಮ ಇತಿ-ಮಿತಿಯಲ್ಲಿ ಕೆಲಸ ಮಾಡಬೇಕು. ನಾನು ಜಿಲ್ಲಾಧಿಕಾರಿಗಳಂದ ಎಲ್ಲಾ ಮಾಹಿತಿಯನ್ನು ತರಿಸಿಕೊಂಡು ಕೊಡಬೇಕಾಗುತ್ತದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈ ಇಬ್ಬರು ಸದಸ್ಯರಲ್ಲಿ ಯಾರ ಪ್ರಶ್ನೆಗೆ ಉತ್ತರವನ್ನು ಕೊಡುತ್ತಾರೆ.

**ಶ್ರೀ ಕಾಗೋಡು ತಿಮ್ಮಪ್ಪ**:- ಮಾನ್ಯ ಸಭಾಪತಿಯವರೇ, ಎರಡೂ ಪ್ರಶ್ನೆಗಳಿಗೆ ಸೇರಿ ಉತ್ತರವನ್ನು ಕೊಡುತ್ತೇನೆ. ಆದುದರಿಂದ ಮಾನ್ಯ ಸದಸ್ಯರ ಆತಂಕ ನನಗೆ ಅರ್ಥವಾಗುತ್ತದೆ. ತಡವಾಗಿರುವುದಕ್ಕೆ ನಾನು ಕ್ಷಮೆಯನ್ನು ಕೇಳುತ್ತೇನೆ. ದಯವಿಟ್ಟು ಮುಂದಿನ ವಾರ ಉತ್ತರ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ನಾಳೆ ಕೊಡಬಹುದು.

**(ಗೊಂದಲ)**

**ಶ್ರೀ ಕಾಗೋಡು ತಿಮ್ಮಪ್ಪ**:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿರವರೆ, ಇಲ್ಲಿ ಸ್ವಲ್ಪ ಸಮಾಧಾನವಾಗಿ ಕೇಳಿ.

**(ಗೊಂದಲ)**

**ಶ್ರೀ ಎಂ.ಆರ್.ಸೀತಾರಾಂ (ಸಭಾನಾಯಕರು)**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಂದ ಮುಂದಿನ ವಾರ ಮಾಹಿತಿಯನ್ನು ಕೊಡಿಸುತ್ತೇವೆಂದು ಹೇಳಿದ್ದೇವೆ. ಸದಸ್ಯರು ದಯವಿಟ್ಟು ಸಹಕಾರ ಮಾಡಬೇಕು, ಸುಮಾರು ೩೦ ಜಿಲ್ಲೆಗಳಂದ ಮಾಹಿತಿ ಬರಬೇಕು.

**ಸಭಾಪತಿಯವರು**:- ಮುಂದಿನ ವಾರ ಮಾಹಿತಿಯನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಮಾನ್ಯ ಸಚಿವರು ಹೇಳಿದ್ದಾರೆ.

**ಶ್ರೀ ಕಾಗೋಡು ತಿಮ್ಮಪ್ಪ**:- ಮಾನ್ಯ ಸಭಾಪತಿಯವರೇ, ನಾನು ಮನುಷ್ಯ ಮತ್ತು ಅವರು ಮನುಷ್ಯರು, ಇದು ಮನುಷ್ಯರ ಮಧ್ಯೆ ನಡೆಯುವಂತಹ ವ್ಯವಹಾರಗಳು. ಅಷ್ಟು ಹೊತ್ತಿನಲ್ಲಿ ನಾನು ಸತ್ತು ಹೋದರೆ ಆಗ ಏನು ಮಾಡುವುದು?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸಾಯುವುದು ಬೇಡ.

**ಶ್ರೀ ಕಾಗೋಡು ತಿಮ್ಮಪ್ಪ**:- ಮಾನ್ಯ ಸಭಾಪತಿಯವರೇ, ಮನುಷ್ಯನಾಗಿ ಪ್ರಾಮಾಣಿಕವಾಗಿ ನಿಮಗೆ ವಂಚನೆ ಮಾಡದೆ ಮಾಹಿತಿಯನ್ನು ಕೊಡುವುದಕ್ಕೆ ಖಂಡಿತವಾಗಿ ಪ್ರಯತ್ನ ಮಾಡುತ್ತೇನೆ.

**ಸಭಾಪತಿಯವರು**:- ಮಾನ್ಯ ಸಚಿವರು ಮಾಹಿತಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ಮುಂದಿನ ಪ್ರಶ್ನೆ ಮಾನ್ಯ ಸದಸ್ಯರಾದ ಶ್ರೀ ರಘುನಾಥ ರಾವ್ ಮಲ್ಕಾಪೂರೆ ರವರದ್ದು.

**ಚುಕ್ಕೆ ಪ್ರಶ್ನೆ ಸಂಖ್ಯೆ: 3506**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ರಘುನಾಥ ರಾವ್ ಮಲ್ಕಾಪೂರೆ**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಇನ್ನು ಐದು ನಿಮಿಷ ತಡವಾಗಿದ್ದರೆ ನನಗೂ ಉತ್ತರ ಸಿಗುತ್ತಿರಲಿಲ್ಲ.

**ಸಭಾಪತಿಯವರು**:- ಈಗ ಅದೆಲ್ಲಾ ಏಕೆ? ನಿಮ್ಮ ಪ್ರಶ್ನೆಗೆ ಉತ್ತರ ಬೇಕು, ನೀವು ಪ್ರಶ್ನೆಯನ್ನು ಕೇಳಿ. ಈ ರೀತಿಯಲ್ಲ ಮಾತನಾಡಬೇಡಿ. ನಿಮಗೆ ಪ್ರಶ್ನೆ ಉದ್ಭವಿಸಿದ್ದರೆ ಅದನ್ನು ಕೇಳಿ. ಇಲ್ಲವಾದರೆ ನಾನು ಮುಂದಿನ ಪ್ರಶ್ನೆಗೆ ಹೋಗುತ್ತೇನೆ.

**ಶ್ರೀ ರಘುನಾಥ ರಾವ್ ಮಲ್ಕಾಪೂರೆ**:- ಮಾನ್ಯ ಸಭಾಪತಿಯವರೇ, ಕನಿಷ್ಟಪಕ್ಷ ಉತ್ತರವನ್ನು ಓದಿಕೊಳ್ಳುವುದಕ್ಕಾದರೂ ಸಮಯ ಬೇಡವೆ?

**ಸಭಾಪತಿಯವರು**:- ಹಾಗಾದರೆ, ನಿಮ್ಮ ಪ್ರಶ್ನೆಯನ್ನು ಆಮೇಲೆ ತೆಗೆದುಕೊಳ್ಳಿ ಎಂದು ಹೇಳಿ, ನಿಮ್ಮ ಪ್ರಶ್ನೆಯನ್ನು ಮುಂದೆ ತೆಗೆದುಕೊಳ್ಳುತ್ತೇನೆ.

**ಶ್ರೀ ರಘುನಾಥ ರಾವ್ ಮಲ್ಕಾಪೂರೆ**:- ಮಾನ್ಯ ಸಭಾಪತಿಯವರೇ, ಬೇಡ. ಮಾನ್ಯ ಸಚಿವರು ಕೊಟ್ಟಿರುವಂತಹ ಉತ್ತರದಲ್ಲಿ ಬಹಳ ಸ್ಪಷ್ಟವಾಗಿದೆ. ನಾನು ಅವರಿಗೆ ಪ್ರಶ್ನೆಯನ್ನು ಕೇಳಿರುವಂತಹ ಉದ್ದೇಶವೇನೆಂದರೆ, ಬೀದರ್ ಜಿಲ್ಲೆಯಲ್ಲಿರುವಂತಹ ಪರಿಶಿಷ್ಟ ಪಂಗಡ ಜಾತಿಯ ಸಮುದಾಯದವರಿಗೆ, ವಿದ್ಯಾರ್ಥಿಗಳಿಗೆ ಮತ್ತು ಯುವಕರಿಗೆ ಬೇರೆ ಬೇರೆ ಅನುಕೂಲಕೋಸ್ಕರ ಮತ್ತು ಸರ್ಕಾರದಿಂದ ಸಿಗುವಂತಹ ಸವಲತ್ತುಗಳಿಗೋಸ್ಕರ ಅವರು ತಮ್ಮ ಜಾತಿ ಪ್ರಮಾಣಪತ್ರವನ್ನು ತೆಗೆದುಕೊಳ್ಳುವುದಕ್ಕೆ, ಸರ್ಕಾರದಿಂದ ಬಹಳ ತಾರತಮ್ಯವಾಗುತ್ತಿದೆ. ಅವರಿಗೆ ಸರಿಯಾಗಿ ಪ್ರಮಾಣಪತ್ರಗಳು ಸಿಗುತ್ತಿಲ್ಲ. ನನ್ನ ಪ್ರಶ್ನೆಗೆ ತಮ್ಮ ಉತ್ತರದಲ್ಲೇ ಈ ರೀತಿ ಹೇಳಿದ್ದಾರೆ. 2015-16ರಲ್ಲಿ ಸುಮಾರು 40892 ಅರ್ಜಿಗಳು ಬಂದಿದ್ದರೆ. ಅದರಲ್ಲಿ ವಿತರಣೆಯಾಗಿರುವಂತಹ ಪ್ರಮಾಣಪತ್ರಗಳು ಸುಮಾರು 18677, ತಿರಸ್ಕೃತವಾಗಿರುವಂತಹ ಅರ್ಜಿಗಳು ಸುಮಾರು 20840, ಇನ್ನೂ ಬಾಕಿ ಇರುವಂತಹ ಅರ್ಜಿಗಳು ಸುಮಾರು 1375. ಈ ಜಾತಿ ಪ್ರಮಾಣಪತ್ರಗಳನ್ನು ಹದಿನೈದು ದಿವಸಗಳಲ್ಲಿ ಕೊಡಬೇಕು. ಸುಮಾರು 1375 ಅರ್ಜಿಗಳು ಬಾಕಿಯಿವೆ, ಸುಮಾರು 20840 ಅರ್ಜಿಗಳು ತಿರಸ್ಕೃತಗೊಂಡಿವೆ. ಅಂದರೆ ಶೇಕಡ 60ಕ್ಕಿಂತ ಹೆಚ್ಚು ಅರ್ಜಿಗಳು ತಿರಸ್ಕೃತಗೊಂಡಿವೆ. 2016-17ರಲ್ಲಿ 41117 ಅರ್ಜಿಗಳು ಬಂದಿವೆ. 18707 ಅರ್ಜಿಗಳು ತಿರಸ್ಕಾರಗೊಂಡಿವೆ. 1449 ಅರ್ಜಿಗಳು ಇನ್ನೂ ಬಾಕಿ ಇವೆ. ಅಲ್ಲಿನ ಜನರ ಸಮಸ್ಯೆಯನ್ನು ಕೇಳಿ. ಮಾನ್ಯ ಮುಖ್ಯಮಂತ್ರಿಗಳು ಕಳೆದ ಆರು ತಿಂಗಳ ಹಿಂದೆ ತಮ್ಮ ಗೃಹ ಕಚೇರಿಯಲ್ಲಿ ಒಂದು

ಸಭೆಯನ್ನು ಕರೆದು, ಈ ಜನರಿಗೆ ಆಗುತ್ತಿರುವಂತಹ ತಾರತಮ್ಯವನ್ನು ಸರಿಪಡಿಸಬೇಕು ಎನ್ನುವಂತಹ ಆದೇಶವನ್ನು ಬೀದರ್, ಗುಲ್ಬರ್ಗ ಮತ್ತು ಯಾದಗಿರಿ ಮೂರು ಜಿಲ್ಲೆಯ ಜಿಲ್ಲಾಧಿಕಾರಿಗಳನ್ನು ಕರೆದು, ಮಾನ್ಯ ಮುಖ್ಯಮಂತ್ರಿಗಳು ನಿರ್ದೇಶನ ಕೊಟ್ಟಿದ್ದರೂ ಸಹ, ಇವತ್ತಿನವರೆವಿಗೂ ಈ ಸಮಸ್ಯೆ ಬಗೆಹರಿಯುತ್ತಿಲ್ಲ. ದಯವಿಟ್ಟು ಮಾನ್ಯ ಮಂತ್ರಿಗಳಲ್ಲಿ ನಾನು ವಿನಂತಿಯನ್ನು ಮಾಡುತ್ತೇನೆ. ಈ ತರಹ ಅಲ್ಲಿ ದೊಡ್ಡ ಪ್ರಮಾಣದ ಭ್ರಷ್ಟಾಚಾರ ನಡೆಯುತ್ತಿದೆ. ಮಾನ್ಯ ಮಂತ್ರಿಗಳೆ, ತಾವು ಅರ್ಥ ಮಾಡಿಕೊಳ್ಳಿ. ಈ 40892 ಅರ್ಜಿಗಳಲ್ಲಿ 20840 ಅರ್ಜಿಗಳು ತಿರಸ್ಕಾರಗೊಂಡಿವೆ ಎಂದರೆ, ಇದರ ಹಿಂದೆ ಇರುವಂತಹ ಕಾರಣಗಳೇನು? ಅಲ್ಲಿ ದೊಡ್ಡ ಪ್ರಮಾಣದ ಭ್ರಷ್ಟಾಚಾರ ನಡೆಯುತ್ತಿದೆ. ಇದರಿಂದ ಸಾವಿರಾರು ವಿದ್ಯಾರ್ಥಿಗಳು ತಾವು ಹೋಗಬೇಕಾದಂತಹ ಕೋರ್ಸ್‌ಗಳಿಗೆ ಹೋಗುತ್ತಿಲ್ಲ. ಸರಿಯಾದ ಸಮಯಕ್ಕೆ ಅವರು ಉದ್ಯೋಗಕ್ಕೆ ಹೋಗುವುದಕ್ಕೆ ತೊಂದರೆಯಾಗುತ್ತಿದೆ. ಅದನ್ನು ಸರಿಪಡಿಸಬೇಕು ಎನ್ನುವಂತಹ ವಿನಂತಿಯನ್ನು ಮಾಡಿ, ಇದಕ್ಕೆ ಕಠಿಣವಾದ ಏನು ಕ್ರಮವನ್ನು ಕೈಗೊಳ್ಳುತ್ತೀರಿ ಎಂದು ಮಾನ್ಯ ಮಂತ್ರಿಗಳಲ್ಲಿ ಕೇಳುತ್ತೇನೆ.

**ಶ್ರೀ ಕಾಗೋಡು ತಿಮ್ಮಪ್ಪ**:- ಮಾನ್ಯ ಸಭಾಪತಿಯವರೇ, ವಿಳಂಬವಾಗಿರುವುದು ನಿಜ. ನಮ್ಮ ನಿಯಮದ ಪ್ರಕಾರ ಅರ್ಜಿಗಳನ್ನು ಎಷ್ಟು ದಿವಸಗಳಲ್ಲಿ ಇತ್ಯರ್ಥಪಡಿಸಬೇಕು ಎನ್ನುವಂತಹ ಆದೇಶ ಇಲ್ಲ. ಹಾಗಾಗಿ ತಹಶೀಲ್ದಾರರು ವಿಳಂಬ ಮಾಡುವುದಕ್ಕೆ ಅವಕಾಶ ಸಿಕ್ಕಿದೆ. ನಮ್ಮ ನಿಯಮದ ಪ್ರಕಾರ ತಹಶೀಲ್ದಾರರೇ ಜಾತಿ ಪ್ರಮಾಣ ಪತ್ರವನ್ನು ಕೊಡಬೇಕು. ಅದು ಬಿಟ್ಟು ಬೇರೆ ಮಾರ್ಗವಿಲ್ಲ. ಆದುದರಿಂದ ಈ ರೀತಿ ಆಗಿರುವುದಕ್ಕೆ ನಾನು ಕ್ಷಮೆಯನ್ನು ಕೇಳುತ್ತೇನೆ.

(979)15.11.2017-12.10-ಎಲ್‌ಎಲ್-ಎಂಡಿ

**(ಶ್ರೀ ಕಾಗೋಡು ತಿಮ್ಮಪ್ಪ)**:- **(ಮುಂದುವರೆದಿದ್ದು...)**

ಈ ಶಾಸನಸಭೆ ಮುಗಿದ ನಂತರ ಪುನಃ ಬೀದರ್ ಮತ್ತು ಕಲಬುರಗಿ ಜಿಲ್ಲೆಗೆ ಸ್ವತಃ ಭೇಟಿ ನೀಡಿ ಈ ವಿಳಂಬವಾಗುವುದಕ್ಕೆ ಏನಾದರೂ ಅಧಿಕಾರಿಗಳ ಬೇಜವಾಬ್ದಾರಿತನ ಇದೆಯೇ ಅಥವಾ ಇಲ್ಲವೇ ಎನ್ನುವುದನ್ನು ತಿಳಿದುಕೊಂಡು ಸರಿಪಡಿಸುವ ಪ್ರಯತ್ನ ಮಾಡುತ್ತೇನೆ. ನಾನು ಒಂದು ಮಾತನ್ನು ಹೇಳುವುದೇನೆಂದರೆ, ನಮ್ಮ ಆಡಳಿತ ವ್ಯವಸ್ಥೆಯಲ್ಲಿ ವಿಳಂಬ ಎನ್ನುವುದು ಒಂದು ಸಂಸ್ಕೃತಿಯಾಗಿ ಬೆಳೆದುಕೊಂಡು ಬಂದು ಬಿಟ್ಟಿದೆ. ಇದು ಇವತ್ತು, ನಿನ್ನೆಯದಲ್ಲ. ಹಾಗಾಗಿ, ಈಗಾಗಲೇ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ನೀಡುವುದರಲ್ಲಿ ಆಗಿರುವ ವಿಳಂಬ ತಪ್ಪು. ಏಕೆಂದರೆ, ಮಾನ್ಯ ಸದಸ್ಯರು ಸದರಿ ವಿಳಂಬದಿಂದಾಗಿ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆಯೆಂದು ಹೇಳಿದ್ದಾರೆ. ಆದುದರಿಂದ, ಸ್ವತಃ ನಾನೇ ಪರಿಶೀಲನೆ ಮಾಡಿ ಈ ವಿಳಂಬಕ್ಕೆ ಪರಿಹಾರವನ್ನು ಕಂಡುಹಿಡಿಯುವಂತಹ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕೊಟ್ಟಿರುವ ಉತ್ತರವನ್ನು ಬಹಳ ಗೌರವಪೂರ್ವಕವಾಗಿ ಒಪ್ಪಿಕೊಳ್ಳುತ್ತೇನೆ. ಆದರೆ, ನಾನು ವಿನಂತಿ ಮಾಡುವುದೇನೆಂದರೆ, ಕಂದಾಯ ಇಲಾಖೆಯಲ್ಲಿ ಯಾವ ರೀತಿ ಕಾಗದ ಪತ್ರಗಳು/ಕೆಲಸಗಳು ಕಾಲಮಿತಿಯೊಳಗೆ ವಿಲೇವಾರಿಯಾಗಬೇಕೆಂದು ತೀರ್ಮಾನ ಮಾಡಿ ಅವುಗಳನ್ನು ಸಕಾಲದ ವ್ಯಾಪ್ತಿಯಲ್ಲಿ ತಂದಿದ್ದಾರೆ. ಅದೇ ರೀತಿ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ನೀಡುವುದನ್ನು ಮತ್ತು ಅದರ ಸಿಂಧುತ್ವ ನೀಡುವುದು ಈ ಎರಡು ಕೆಲಸಗಳನ್ನು ಸಕಾಲ ವ್ಯಾಪ್ತಿಯಲ್ಲಿ ತಂದು, ಅದನ್ನು 15 ದಿನಗಳ ಕಾಲಮಿತಿಯೊಳಗೆ ಕೊಡುವಂತಹದ್ದನ್ನು ಮಾಡಿದರೆ ವಿದ್ಯಾರ್ಥಿಗಳಿಗೆ ಬಹಳ ಅನುಕೂಲವಾಗುತ್ತದೆ.

**ಸಭಾಪತಿಯವರು:–** ಜಾತಿ ಪ್ರಮಾಣ ಪತ್ರವನ್ನು ಸಕಾಲ ವ್ಯಾಪ್ತಿಯಲ್ಲಿ ಏತಕ್ಕೆ ತರಬೇಕೆಂದು ಹೇಳುವುದು ಬೇಡ. ಬದಲಾಗಿ ಸಕಾಲ ವ್ಯಾಪ್ತಿಯಲ್ಲಿ ತನ್ನಿ ಎಂದು ಸಲಹೆ ನೀಡಿ.

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:–** ಮಾನ್ಯ ಸಭಾಪತಿಯವರೇ, 40892 ಅರ್ಜಿಗಳಲ್ಲಿ 20840 ಅರ್ಜಿಗಳು ತಿರಸ್ಕೃತ ಆಗುತ್ತವೆಯೆಂದರೆ ಮತ್ತು 41117 ಅರ್ಜಿಗಳಲ್ಲಿ 18707 ಅರ್ಜಿಗಳು ತಿರಸ್ಕೃತವಾದರೆ, ಒಂದು ವರ್ಷಕ್ಕೆ ಸುಮಾರು 20 ಸಾವಿರ ವಿದ್ಯಾರ್ಥಿಗಳ ಅರ್ಜಿಗಳು ತಿರಸ್ಕೃತವಾಗುತ್ತದೆಯೆಂದರೆ ಇದೊಂದು ಬಹಳ ದೊಡ್ಡ ಸಮಸ್ಯೆಯಾಗುತ್ತದೆ. ಆದುದರಿಂದ, ದಯಮಾಡಿ ಈ ಕೆಲಸವನ್ನು ಸಕಾಲ ವ್ಯಾಪ್ತಿಯೊಳಗೆ ತಂದು, ಜಾತಿ ಪ್ರಮಾಣ ಪತ್ರ, ಆದಾಯ ಪ್ರಮಾಣ ಪತ್ರ ಮತ್ತು ಆರ್ಟಿಕಲ್ 371 ಜೆ ಪ್ರಮಾಣ ಪತ್ರ ಕೊಡುವಂತಹದ್ದು ಮತ್ತು ಇದರ ಸಿಂಧುತ್ವ ಪ್ರಮಾಣ ಪತ್ರಗಳನ್ನು ಸಕಾಲ ವ್ಯಾಪ್ತಿಯಲ್ಲಿ ತಂದು ಕಾಲಮಿತಿಯಲ್ಲಿ ವಿಲೇವಾರಿ ಮಾಡುವಂತಹ ಕೆಲಸ ಮಾಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ಕೈ ಮುಗಿದು ವಿನಂತಿ ಮಾಡುತ್ತೇನೆ.

**ಸಭಾಪತಿಯವರು:–** ಮಾನ್ಯ ಡಿ.ಎಸ್. ವೀರಯ್ಯನವರೇ, ಈಗ ತಾವು ತಮ್ಮ ಪ್ರಶ್ನೆಯನ್ನು ಕೇಳಿ. What is your question?

**ಶ್ರೀ ಡಿ.ಎಸ್. ವೀರಯ್ಯ:–** ಮಾನ್ಯ ಸಭಾಪತಿಯವರೇ, ಒಂದು ಕಾಲದಲ್ಲಿ demand for getting the caste certificate was very low. ಆಗ, ಅಂತಿಮವಾಗಿ ಜಾತಿ ಪ್ರಮಾಣವನ್ನು ತಹಶೀಲ್ದಾರ್‌ರವರೇ ಕೊಡಬೇಕೆಂದು ತೀರ್ಮಾನಿಸಲಾಗಿತ್ತು. ಈಗ ಪ್ರತಿಯೊಂದು ಹೋಬಳಿ ಮಟ್ಟದಲ್ಲಿ ಒಬ್ಬ ಉಪ ತಹಶೀಲ್ದಾರ್‌ರವರನ್ನು ನೇಮಕ ಮಾಡಿದ್ದಾರೆ. ಅವರನ್ನು decentralise ಮಾಡಿ, ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಅವರೇ ಕೊಡುವ ಹಾಗೆ ಮಾಡಿದರೆ ಈ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ ಮತ್ತು ಅದಕ್ಕೆ ಕಾನೂನಿನಲ್ಲಿ ಅವಕಾಶ ಕೂಡ ಇದೆ. ಆದುದರಿಂದ, ಈ ಬಗ್ಗೆ ಸರ್ಕಾರ ನಿರ್ಧಾರ ತೆಗೆದುಕೊಂಡು, ಆ ನಿರ್ಧಾರವನ್ನು

decentralise ಮಾಡಿ ಅಧಿಕಾರವನ್ನು ಕೆಳಗಿನ ಮಟ್ಟದ ಅಧಿಕಾರಿಗಳಿಗೆ ಕೊಟ್ಟರೆ ಈ ಪ್ರಮಾಣ ಪತ್ರಗಳ ನೀಡಿಕೆಯಲ್ಲಿ ವಿಳಂಬ ಮತ್ತು ಲಕ್ಷಾಂತರ ಅರ್ಜಿಗಳು ಬಾಕಿ ಇಡಬೇಕಾಗುವಂತಹದ್ದನ್ನು ತಡೆಯಬಹುದು.

**ಶ್ರೀ ಕಾಗೋಡು ತಿಮ್ಮಪ್ಪ**:- ಮಾನ್ಯ ಸಭಾಪತಿಯವರೇ, ಬೀದರ್ ಮತ್ತು ಕಲಬುರಗಿ ಜಿಲ್ಲೆಗಳಲ್ಲಿ ಈ ರೀತಿಯ ಸಮಸ್ಯೆ ಏತಕ್ಕೆ ಆಗುತ್ತದೆಯೆಂದರೆ, ಅದನ್ನು ನಾನು ಬಿಚ್ಚಿ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಅಲ್ಲಿ ಕಾಡು ಕುರುಬರು, ಇಂತಹವರ ಸಮಸ್ಯೆ ಜಾಸ್ತಿ ಇದೆ. ಈ ಬಗ್ಗೆ ನಾನು ಸಮಾಜ ಕಲ್ಯಾಣ ಇಲಾಖೆ ಸಚಿವರಾಗಿದ್ದಾಗ ಸ್ವತಃ ಒಂದು ಆಜ್ಞೆಯನ್ನು ಕೂಡ ಮಾಡಿದ್ದೆನು. ಯಾರು ಅದನ್ನು surrender ಮಾಡುತ್ತಾರೋ ಅವರ ವಿರುದ್ಧ ಕ್ರಮ ಕೈಗೊಂಡಿದ್ದರೆ ಅದನ್ನು ಹಿಂತೆಗೆದುಕೊಳ್ಳೋಣ, ಇಲ್ಲವಾದರೆ ಅದನ್ನು ಮುಂದುವರೆಸೋಣವೆಂದು ನಿರ್ಧಾರ ಮಾಡಿದ್ದೇವೆ. ಈ ಕಾರಣಕ್ಕಾಗಿ ಈ ರೀತಿಯ ಸಮಸ್ಯೆಗಳು ಇವೆ ಎಂದು ಬೀದರ್‌ಗೆ ನಾನು ಭೇಟಿ ಕೊಟ್ಟಿದ್ದಾಗ ಈ ಸಮಸ್ಯೆ ಬಗ್ಗೆ ಸಂಬಂಧಪಟ್ಟವರು ನನಗೆ ಹೇಳಿದ್ದರು. ಇದನ್ನು ಪರಿಶೀಲನೆ ಮಾಡಿ ನಿರ್ದಾಕ್ಷಿಣ್ಯವಾಗಿ ನಮ್ಮ ಬಂಧುಗಳಿಗೆ ಹೇಳಿದ್ದೆನು... ಈ ವಿಚಾರವನ್ನು ಬಿಡಿಸಿ ಹೇಳುವುದಕ್ಕೆ ನಾನು ಇಷ್ಟಪಡುವುದಿಲ್ಲ. ಆ ರೀತಿಯ ಸನ್ನಿವೇಶವಿದೆ. ಮಾನ್ಯ ಸದಸ್ಯರು ಹೇಳಿರುವ ವಿಚಾರ ನಾನು ಒಪ್ಪುತ್ತೇನೆ. ಆದರೆ, ಅದು Quasi Judicial Body. ಆದುದರಿಂದ, ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳ ನೀಡುವ ಅಧಿಕಾರವನ್ನು ತಹಸೀಲ್ದಾರರವರಿಗೇ ಇದೆ. ಹಾಗಾಗಿ, ಮಾನ್ಯ ಸದಸ್ಯರು ಉಪ ತಹಸೀಲ್ದಾರ್‌ರವರಿಗೆ ಆ ಅಧಿಕಾರವನ್ನು ಕೊಡಿ ಎಂದು ಸಲಹೆ ಕೊಟ್ಟಿದ್ದಾರೆ. ಅದಕ್ಕೆ ಕಾನೂನು ಇಲಾಖೆಯಲ್ಲಿ ಅವಕಾಶ ಇದ್ದರೆ ನಾವು ಮಾಡುತ್ತೇವೆ. ಆದರೆ, ಈ ಬಗ್ಗೆ ನಾವು ಎಚ್ಚರದಿಂದರಬೇಕು. ಏಕೆಂದರೆ, ಇವತ್ತಿನ ದಿವಸ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಎಂದು ಹೇಳಿದರೆ ಕಡಿಮೆ ಇಲ್ಲ. ಹಾಗಾಗಿ ಮಾನ್ಯ ಸದಸ್ಯರು ಹೇಳಿರುವ ವಿಚಾರವನ್ನು ಗಮನದಲ್ಲಿಟ್ಟುಕೊಂಡು ನಾನು ಖಂಡಿತವಾಗಿ ಪರಿಶೀಲನೆ ಮಾಡುತ್ತೇನೆ.

**ಶ್ರೀ ರಘುನಾಥ ರಾವ್ ಮಲ್ಕಾಪೂರೆ**:- ಮಾನ್ಯ ಸಭಾಪತಿಯವರೇ, ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಸಕಾಲ ವ್ಯಾಪ್ತಿಗೆ ತರುವ ಬಗ್ಗೆ ಉತ್ತರ ನೀಡಿರುವುದಿಲ್ಲ.

**(ಗೊಂದಲ)**

**ಶ್ರೀ ಕಾಗೋಡು ತಿಮ್ಮಪ್ಪ**:- ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನಮ್ಮ ಅಧಿಕಾರಿಗಳು ಒಂದು ಚೀಟಿ ಕಳುಹಿಸಿದ್ದಾರೆ. ಅದರ ಪ್ರಕಾರ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ವಿತರಣೆ ಮಾಡುವುದು ಸಕಾಲ ವ್ಯಾಪ್ತಿಗೆ ಸೇರಿದೆ. ಅದರ ಪ್ರಕಾರ 21 ದಿವಸಗಳಲ್ಲಿ...

**(ಗೊಂದಲ)**

**ಸಭಾಪತಿಯವರು:-** ಜಾತಿ ಮತ್ತು ಆದಾಯ ಪ್ರಮಾಣವನ್ನು ನೀಡುವುದನ್ನು ಸಕಾಲ ವ್ಯಾಪ್ತಿಗೆ ಸೇರಿಸಿದ್ದಾರೆಂದು ಸಚಿವರು ಹೇಳಿದರು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಹಾಗಾದರೆ ಈ ವ್ಯವಸ್ಥೆ ಅನುಷ್ಠಾನವಾಗಿದೆಯೇ?

**(ಗೊಂದಲ)**

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಈ ವ್ಯವಸ್ಥೆ ಅನುಷ್ಠಾನವಾಗುತ್ತಿದೆಯೇ ಎನ್ನುವುದು ಮುಂದೆ ಗೊತ್ತಾಗುತ್ತದೆ. ಆದರೆ, ಕೆಲವು ಸಾರಿ ಕಬ್ಬಿಣ ಕಾಯಿಸಿ ಬರೆ ಹಾಕಬೇಕಾಗುತ್ತದೆ. ಒಂದು ವೇಳೆ ಅಂತಹ ಸಂದರ್ಭ ಬಂದರೆ ನಾವು ಅದನ್ನು ಮಾಡುತ್ತೇವೆ.

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ಈ ವ್ಯವಸ್ಥೆ ಸಕಾಲ ವ್ಯಾಪ್ತಿಯಲ್ಲಿದ್ದರೆ ಎಷ್ಟು ದಿವಸಗಳ ಕಾಲಮಿತಿಯಿದೆ? ಹಾಗಾದರೆ, 2015-16 ರ 1375 ಅರ್ಜಿಗಳು ಬಾಕಿ ಇವೆ. 2016-17 ರ 1449 ಅರ್ಜಿಗಳು ಬಾಕಿ ಇವೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಚಿವರು ಈಗ ಏನು ಉತ್ತರ ನೀಡುತ್ತಾರೆ ಅದನ್ನು ಕೇಳೋಣ.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಜಾತಿ ಮತ್ತು ಆದಾಯ ಪ್ರಮಾಣ ಪತ್ರ ನೀಡುವುದನ್ನು ಸಕಾಲ ವ್ಯಾಪ್ತಿಗೆ ಸೇರಿಸಿರುವ ವಿಚಾರ ನನಗೆ ಗೊತ್ತಿರಲಿಲ್ಲ. ನಮ್ಮ ಅಧಿಕಾರಿಗಳು ಈ ಬಗ್ಗೆ ಚೀಟಿ ಕಳುಹಿಸಿದ ನಂತರವೇ ನನಗೆ ಗೊತ್ತಾಗಿದೆ. ಅದಕ್ಕಾಗಿ ನಾನು ತಮ್ಮ ಕ್ಷಮೆ ಕೋರುತ್ತೇನೆ. ಈ ಸಕಾಲದ ಪ್ರಕಾರ 21 ದಿವಸಗಳ ಕಾಲಮಿತಿ ನಿಗದಿ ಮಾಡಿರುವುದರಿಂದ, ಸದರಿ ಪ್ರಮಾಣ ಪತ್ರಗಳನ್ನು ನೀಡಬೇಕು. ಒಂದು ವೇಳೆ ಈ ಕೆಲಸವನ್ನು ಯಾವ ಅಧಿಕಾರಿ ಮಾಡುವುದಿಲ್ಲ, ಅಂತಹವರ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ.

**ಪ್ರಶ್ನೆ ಸಂಖ್ಯೆ: 3774**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಶ್ರೀ ಕಾಗೋಡು ತಿಮ್ಮಪ್ಪನವರು ಸ್ಪೀಕರ್ ಆಗಿದ್ದಾಗ, ಮಂತ್ರಿಗಳಾದಂತಹವರು ಸದನದಲ್ಲಿ ಸ್ಪಷ್ಟವಾದಂತಹ ಉತ್ತರವನ್ನು ಕೊಡಬೇಕೆಂದು ಒಂದು ಮಾತನ್ನು ಹೇಳಿದ್ದರು. ಆ ವಿಚಾರವನ್ನು ನಾನು ದಿನಪತ್ರಿಕೆಯಲ್ಲಿ ಓದಿದ್ದೆನು. ಈಗ ಇವರೇ ಮಂತ್ರಿಯಾಗಿದ್ದಾರೆ. ಆದರೆ, ಉತ್ತರ ಯಾವ ರೀತಿ ಕೊಟ್ಟಿದ್ದಾರೆಂದು ತಾವೇ ಪರಿಶೀಲಿಸಿಬೇಕು. ರಾಜ್ಯದಲ್ಲಿ ಕಂದಾಯ ಇಲಾಖೆಯಡಿ ಎಷ್ಟು ಗ್ರಾಮ ಸಹಾಯಕರುಗಳು ಕೆಲಸ ಮಾಡುತ್ತಿದ್ದಾರೆಂದು

ನಾನು ಪ್ರಶ್ನೆ ಕೇಳಿದ್ದೆನು. ಅದಕ್ಕೆ, ಅವರು ಒಟ್ಟು 9816 ಗ್ರಾಮ ಸಹಾಯಕರುಗಳು ಕಾರ್ಯನಿರ್ವಹಿಸುತ್ತಿದ್ದಾರೆಂದು ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ. ಅದೇ ರೀತಿ, ಈ ಗ್ರಾಮ ಸಹಾಯಕರನ್ನು ಗ್ರೂಪ್-ಡಿ ನೌಕರರೆಂದು ಪರಿಗಣಿಸಿ ಖಾಯಂಗೊಳಿಸಲು ಉದ್ದೇಶಿಸಲಾಗಿದೆಯೇ ಮತ್ತು ಒಂದು ವೇಳೆ ಹಾಗಿದ್ದಲ್ಲಿ ಈ ಕುರಿತು ಯಾವಾಗ ಆದೇಶ ಹೊರಡಿಸಲಾಗುವುದೆಂದು ಪ್ರಶ್ನೆ ಕೇಳಿದ್ದೆನು. ಈ ಎಲ್ಲಾ ಪ್ರಶ್ನೆಗಳಿಗೆ ಮನವಿಯು ಸರ್ಕಾರದ ಪರಿಶೀಲನೆಯಲ್ಲಿದೆಯೆಂದು ಒಂದೇ ಉತ್ತರ ನೀಡಿರುತ್ತಾರೆ. ಮನವಿಯು ಸರ್ಕಾರದ ಪರಿಶೀಲನೆಯಲ್ಲಿದೆ ಅಂದರೆ ಏನು ಉತ್ತರವೆಂದು ತಾವೇ ನಮಗೆ ತಿಳಿಸಬೇಕು.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಗ್ರಾಮ ಸಹಾಯಕರುಗಳನ್ನು ಗ್ರೂಪ್-ಡಿ ನೌಕರರೆಂದು ಪರಿಗಣಿಸಬೇಕೆಂದು ಬೇಡಿಕೆಯಿಟ್ಟಿದ್ದಾರೆ. ಆದರೆ, ಇಲ್ಲಿ ಸಮಸ್ಯೆಯೇನಾಗಿದೆಯೆಂದರೆ, ಸದರಿ ನೌಕರರನ್ನು ನೇಮಕ ಮಾಡುವ ಸಂದರ್ಭದಲ್ಲಿ ಒಂದು ನಿಯಮವನ್ನು ಇಟ್ಟುಕೊಂಡು, ಆ ನಿಯಮದ ಪ್ರಕಾರ ನೇಮಕ ಮಾಡಿದ್ದರೆ ಈ ಸಮಸ್ಯೆ ಬರುತ್ತಿರಲಿಲ್ಲ. ಆದರೆ, ಇವತ್ತಿನ ದಿವಸ ಸದರಿ ನೌಕರರನ್ನು ಖಾಯಂ ಮಾಡಬೇಕಾದರೆ ಮೀಸಲಾತಿ ಬೇಕು, ವಿದ್ಯಾರ್ಹತೆ ಬೇಕು ಈ ರೀತಿಯ ಸಮಸ್ಯೆಗಳು ಬರುತ್ತವೆ. ಇವೆಲ್ಲವನ್ನೂ ನಾವು ಪರಿಗಣಿಸಿಯೇ ಖಾಯಂಗೊಳಿಸಬೇಕಾಗುತ್ತದೆ. ಆದುದರಿಂದ, ತಡವಾಗಿದೆ. ಇದಕ್ಕೆ ಆದಷ್ಟು ಬೇಗ ಪರಿಹಾರವನ್ನು ಕಂಡುಹಿಡಿಯುತ್ತೇವೆ. ಈಗ ಹೊಸದಾಗಿ ಅವರಿಗೆ ಅವಕಾಶವನ್ನು ಕೊಡಬೇಕಾದರೆ ನಿಯಮವನ್ನು ಕೂಡ ಬದಲಾವಣೆ ಮಾಡಬೇಕಾಗುತ್ತದೆ. ಈ ಸನ್ನಿವೇಶದಿಂದ ತಡವಾಗಿದೆ.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, 9816 ಗ್ರಾಮ ಸಹಾಯಕರುಗಳು ಯಾವ್ಯಾವ ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ ಎನ್ನುವುದನ್ನು ಪರಿಶೀಲಿಸಿ. ಇವರೆಲ್ಲರೂ ಒಮ್ಮೇಲೇ ನೇಮಕ ಆಗಿರುವುದಿಲ್ಲ. ಇವರನ್ನು ಮೊದಲು ಒಂದೆರೆಡು ವರ್ಷ ಹಾಗೆಯೇ ನೇಮಕಾತಿ ಮಾಡಿಕೊಂಡಿರುತ್ತಾರೆ. ತದನಂತರ, ವಿದ್ಯಾರ್ಹತೆ ಮತ್ತು ಮೀಸಲಾತಿಯನ್ನು ಪರಿಶೀಲಿಸಿದ ನಂತರವೇ ಗ್ರಾಮ ಸಹಾಯಕರೆಂದು ನೇಮಕ ಮಾಡಿಕೊಂಡಿರುತ್ತಾರೆ. ಆ ನಂತರ ಗ್ರೂಪ್-ಡಿ ನೌಕರರೆಂದು ಪರಿಗಣಿಸಲು ಸರ್ಕಾರ ಉದ್ದೇಶಿಸಲಾಗಿದೆಯೇ ಎಂದು ನಾನು ಪ್ರಶ್ನೆ ಕೇಳಿದ್ದೇನೆ. ಆ ರೀತಿ ಉದ್ದೇಶಿಸಿದ್ದರೆ 'ಹೌದು' ಎಂದು ಉತ್ತರ ನೀಡಲಿ, ಇಲ್ಲವಾದರೆ 'ಇಲ್ಲ' ಎಂದು ಉತ್ತರ ನೀಡಲಿ. ಸದರಿ ಗ್ರಾಮ ಸಹಾಯಕರನ್ನು ಗ್ರೂಪ್-ಡಿ ನೌಕಕರೆಂದು ಪರಿಗಣಿಸಿ ಖಾಯಂಗೊಳಿಸಲು ಉದ್ದೇಶಿಸಲಾಗಿದೆಯೇ ಎಂದು ಪ್ರಶ್ನೆ ಕೇಳಿದ್ದೇನೆ. ಆದರೆ, ಮನವಿಯು ಸರ್ಕಾರದ ಪರಿಶೀಲನೆಯಲ್ಲಿದೆಯೆಂದು ಉತ್ತರ ನೀಡಿದ್ದಾರೆ. ಸದರಿ ವಿಷಯ ಸಚಿವ ಸಂಪುಟದ ಪರಿಶೀಲನೆಗೆ ಬಂದಿದೆಯೆಂದು ನಾನು ಮಾನ್ಯ ಸಚಿವರನ್ನು ಕೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಸಚಿವರು ಹೇಳಿರುವ ಪ್ರಕಾರ ಖಾಲಿ ಹುದ್ದೆಗಳನ್ನು ಸರ್ಕಾರ ಕಾಲಕ್ಕೆ ಅನುಗುಣವಾಗಿ ತುಂಬಬೇಕು. ಆದರೆ, ಈ

ಸರ್ಕಾರ ಒಬ್ಬ ವ್ಯಕ್ತಿ ನಿವೃತ್ತಿಯಾದ ನಂತರ ಹಣಕಾಸಿನ ಇಲಾಖೆ ಅನುಮತಿಯನ್ನು ಕೇಳಿ ಈ ಪ್ರಕ್ರಿಯೆ ಆದಷ್ಟು ಮುಂದೆ ಹೋಗಲಿ ಎನ್ನುವ ದೃಷ್ಟಿಯಿಂದ ವಿಳಂಬ ಮಾಡುತ್ತಾರೆ, ಇದರಿಂದಾಗಿ, ನೌಕರರು ಹೆಚ್ಚಾಗುತ್ತಿದ್ದು, ಅವರನ್ನು ಖಾಯಂಗೊಳಿಸುತ್ತಿಲ್ಲ. ಮುಂದೆ, ಈ ನೌಕರರು ನಮ್ಮನ್ನು ಖಾಯಂಗೊಳಿಸಬೇಕೆಂದು ಕೋರುತ್ತಾರೆ. ಆದರೆ, ಸಂಬಂಧಪಟ್ಟವರು ಅಗತ್ಯವಾದಂತಹ ರೋಸ್ಟರ್ ನಿರ್ವಹಣೆ ಮಾಡುವುದಿಲ್ಲ. ಇದರಿಂದಾಗಿ ನಾಳೆಯ ದಿವಸ ಹೆಚ್ಚು ಸಮಯವಾಗುತ್ತದೆ. ಉದಾಹರಣೆಗೆ, ಪಶ್ಚಿಮ ಬಂಗಾಳ ರಾಜ್ಯದಲ್ಲಿ ಖಾಲಿಯಾಗುವ ಹುದ್ದೆಗಳಿಗೆ 3-4 ತಿಂಗಳ ಮೊದಲೇ ಹುದ್ದೆ ನೇಮಕಾತಿಗಾಗಿ ಜಾಹೀರಾತು ಮಾಡುತ್ತಾರೆ. ಆ ರೀತಿಯ ವ್ಯವಸ್ಥೆ ನಮ್ಮ ರಾಜ್ಯದಲ್ಲಿ ಮಾಡಿದರೆ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ. ಈ ರೀತಿಯ ಸಮಸ್ಯೆಗಳು ಎಲ್ಲಾ ಇಲಾಖೆಗಳಲ್ಲಿಯೂ ಇದೆ. ಅದಕ್ಕೆ ನಾನು ಏನು ಹೇಳುತ್ತೇನೆಂದರೆ, ಸರ್ಕಾರ ಸದರಿ ಗ್ರಾಮ ಸಹಾಯಕರುಗಳನ್ನು ಖಾಯಂಗೊಳಿಸುವುದಕ್ಕೆ ಸ್ಪಷ್ಟವಾಗಿ ಒಂದು ನಿರ್ಧಾರ ತೆಗೆದುಕೊಳ್ಳಬೇಕು. ಏಕೆಂದರೆ, ಈ ನೌಕರರು ಇನ್ನು 10 ಅಥವಾ 15 ವರ್ಷ ಕೆಲಸ ಮಾಡುತ್ತಾರೆ. ಇನ್ನು ಕೆಲವರ ವಯಸ್ಸು ಮುಗಿದು ನಿವೃತ್ತಿ ಹೊಂದುತ್ತಾರೆ. ಇಂತಹ ಸಮಸ್ಯೆಗಳಾಗುತ್ತವೆ. ಅಲ್ಲದೇ, ಸದರಿಯವರು 4 ನೇ ದರ್ಜೆ ನೌಕರರಾಗಿದ್ದು, ಈ ವಿಷಯದಲ್ಲಿ ಸರ್ಕಾರ ಯಾವ ನಿರ್ಧಾರ ತೆಗೆದುಕೊಳ್ಳುತ್ತಾರೆ ಅದನ್ನು ಸ್ಪಷ್ಟವಾಗಿ ತಿಳಿಸಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೇ, ಕಳೆದ ಬಾರಿ ಸದನದಲ್ಲಿ ಮಾನ್ಯ ಸಚಿವರು ಭರವಸೆ ಕೊಡುವ ಸಂದರ್ಭದಲ್ಲಿ ಸದರಿ ಗ್ರಾಮ ಸಹಾಯಕರುಗಳನ್ನು ಖಾಯಂಗೊಳಿಸುತ್ತೇವೆಂದು ಮತ್ತು ಗ್ರೂಪ್-ಡಿ ನೌಕರರೆಂದು ಪರಿಗಣಿಸುತ್ತೇವೆಂದು ಹೇಳಿದ್ದಾರೆ. ಜೊತೆಗೆ, ಸದರಿಯವರಿಗೆ ಈಗ ತಿಂಗಳಿಗೆ 10 ಸಾವಿರ ರೂಪಾಯಿಗಳ ವೇತನ ನೀಡುತ್ತಿದ್ದಾರೆ. ಅದನ್ನು ಕನಿಷ್ಠ 18 ಸಾವಿರ ವೇತನ ಮಾಡಬೇಕು. ಅದರ ಜೊತೆಗೆ, ಸದರಿ ಗ್ರಾಮ ಸಹಾಯಕರುಗಳನ್ನು ಖಾಯಂಗೊಳಿಸುವ ಬಗ್ಗೆ ಸರ್ಕಾರದ ನಿಲುವೇನು ಮತ್ತು ಅವರಿಗೆ ಕನಿಷ್ಠ ವೇತನ ತಕ್ಷಣದಿಂದ ಜಾರಿಗೆ ಬರುವಂತೆ ಮಾಡಲು ಸರ್ಕಾರ ಯಾವ ಯೋಚನೆ ಮಾಡುತ್ತದೆ ಎನ್ನುವುದರ ಬಗ್ಗೆ ಉತ್ತರ ಹೇಳಬೇಕೆಂದು ವಿನಂತಿಸುತ್ತೇನೆ.

**ಶ್ರೀ ಕಾಗೋಡು ತಿಮ್ಮಪ್ಪ**:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳು ಉತ್ತಮವಾದ ಸಲಹೆಯನ್ನು ನೀಡಿದ್ದಾರೆ. ಅದರ ಬಗ್ಗೆ ಶೀಘ್ರಗತಿಯಲ್ಲಿ ಸರ್ಕಾರ ಒಂದು ತೀರ್ಮಾನವನ್ನು ಮಾಡುತ್ತದೆ.

**ಶ್ರೀ ಬಸವರಾಜ ಹೊರಟ್ಟಿ**:- ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಈ ವಿಷಯದಲ್ಲಿ ಯಾವ ಕ್ರಮ ಕೈಗೊಳ್ಳುತ್ತಾರೆಂದು ದಯವಿಟ್ಟು ಈಗಲೇ ತಿಳಿಸಬೇಕು. ಸದರಿ ಗ್ರಾಮ ಸಹಾಯಕರುಗಳನ್ನು ಖಾಯಂ ಮಾಡುವುದಾದರೆ 'ಹೌದು' ಮಾಡುತ್ತೇವೆಂದು ಉತ್ತರ ನೀಡಲಿ. ಇಲ್ಲವಾದರೆ 'ಇಲ್ಲ' ಎಂದು ಉತ್ತರ ನೀಡಲಿ.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳು ಬಹಳ ಹಿರಿಯ ಸದಸ್ಯರುಗಳಿದ್ದಾರೆ.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಅದಕ್ಕಾಗಿಯೇ ನಾವು ಈ ವಿಚಾರವನ್ನು ಕೇಳುತ್ತಿರುವುದು.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಸರ್ಕಾರದ ವತಿಯಿಂದ ...

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಈ ಸಮಸ್ಯೆ ಸುಮಾರು 25-30 ವರ್ಷಗಳಿಂದ ಬಾಕಿ ಇರುವಂತಹ ಸಮಸ್ಯೆಯಾಗಿದೆ.

**(ಗೊಂದಲ)**

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಈಗ ದಯವಿಟ್ಟು...

**(ಗೊಂದಲ)**

(980)15.11.2017/12.20/ವೈಎಲ್-ಎಕೆ

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿದಂತೆ 9816 ಗ್ರಾಮ ಸಹಾಯಕರುಗಳು ಏನಿದ್ದಾರೆ, ಅವರು ಎಷ್ಟು ವರ್ಷಗಳಿಂದ ಸೇವೆಯನ್ನು ಸಲ್ಲಿಸುತ್ತಿದ್ದಾರೆಂದು ತಿಳಿಸಬೇಕು. ಏಕೆಂದರೆ ಈ ಗ್ರಾಮ ಸಹಾಯಕರು ಹಲವಾರು ವರ್ಷಗಳಿಂದ ಸೇವೆಯನ್ನು ಸಲ್ಲಿಸುತ್ತಿದ್ದು ಈಗಾಗಲೇ ನಿವೃತ್ತಿ ಹೊಂದುವ ಮಟ್ಟದಲ್ಲಿದ್ದಾರೆ. ಅದಕ್ಕಾಗಿ ನಾನು ಹೇಳುವುದೇನೆಂದರೆ, ನಾನು ಒತ್ತಾಯ ಮಾಡುವುದಕ್ಕೆ ಹೋಗುವುದಿಲ್ಲ. ಗ್ರಾಮ ಸಹಾಯಕರನ್ನು ಖಾಯಂ ಮಾಡುತ್ತಾರೆಯೋ ಅಥವಾ ಇಲ್ಲವೋ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು. ಖಾಯಂ ಮಾಡಿದರೆ ಮಾಡುತ್ತೇವೆಂದು ತಿಳಿಸಬೇಕು. ಇಲ್ಲದಿದ್ದರೆ ಮಾಡುವುದಕ್ಕಾಗುವುದಿಲ್ಲವೆಂದು ತಿಳಿಸಬೇಕು. Roster ನ್ನು ಅನುಸರಿಸಿ ಮಾಡುವುದಾದರೆ ಮಾಡಲಿ, ಒಂದು ವೇಳೆ roster ನ್ನು ಅನುಸರಿಸಿ ಮಾಡುವುದಿಲ್ಲವೆಂದರೆ, ಮುಂದೆ ಏನು ಮಾಡುತ್ತಾರೆಂದು ಹೇಳಲಿ. Whether 'yes' or 'no'? ಸರ್ಕಾರದ ನಿಲುವೇನೆಂದು ನಮಗೆ ತಿಳಿಸಬೇಕು.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಬೇಡಿಕೆ ಸರ್ಕಾರದ ಮುಂದಿದೆ. ಆದಷ್ಟು ಬೇಗ ಅವರುಗಳ ಬೇಡಿಕೆಗಳ ಬಗ್ಗೆ ನಾವು ತೀರ್ಮಾನ ಮಾಡುತ್ತೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ವೇತನ ಪರಿಷ್ಕರಣೆಯನ್ನಾದರೂ ಮಾಡುತ್ತಾರೆಯೇ ಎಂಬುದನ್ನು ತಿಳಿಸಲಿ.

**ಶ್ರೀ ಕಾಗೋಡು ತಿಮ್ಮಪ್ಪ**:– ಮಾನ್ಯ ಸಭಾಪತಿಯವರೇ, ಆ ರೀತಿ ವೇತನ ಪರಿಷ್ಕರಣೆಯಾಗುವ ಬಗ್ಗೆ ಹೇಳುವುದಕ್ಕೆ ಬರುವುದಿಲ್ಲ. ಅದನ್ನು ಸರ್ಕಾರ ತೀರ್ಮಾನ ಮಾಡಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:– ಮಾನ್ಯ ಸಭಾಪತಿಯವರೇ, ಸರ್ಕಾರವೆಂದರೆ ಮಾನ್ಯ ಸಚಿವರು ಬರುತ್ತಾರೆ ಅಲ್ಲವೇ?

**ಶ್ರೀ ಕಾಗೋಡು ತಿಮ್ಮಪ್ಪ**:– ಮಾನ್ಯ ಸಭಾಪತಿಯವರೇ, ನಮ್ಮ ಸರ್ಕಾರ ಇದ್ದಾಗ ಮಾಡುವುದಕ್ಕೆ ಅವಕಾಶ ಇತ್ತು. ಆದರೆ ನೀವು ಸರ್ಕಾರದಲ್ಲಿದ್ದು ಮಾಡಲಿಲ್ಲ. ಆದ್ದರಿಂದ ನಾವು ಮಾಡುವುದಕ್ಕೆ ಹೊರಟ್ಟಿದ್ದೇವೆ ಆ ಬೇಡಿಕೆಯನ್ನು ನಾವು ಪರಿಶೀಲನೆ ಮಾಡುತ್ತೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:– ಮಾನ್ಯ ಸಭಾಪತಿಯವರೇ, ಆ ರೀತಿಯೇನಿಲ್ಲ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**:– ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಮಾಡಲಿಲ್ಲ. ಮಾನ್ಯ ಕೋಟಾ ಶ್ರೀನಿವಾಸ ಪೂಜಾರಿಯವರು ಮಾಡಲಿಲ್ಲವೆಂದರೆ, ಮುಂದೆ ನಾವು ಮಾಡಬೇಕೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:– ಮಾನ್ಯ ಸಭಾಪತಿಯವರೇ, ವೇತನ ಪರಿಷ್ಕರಣೆಯಾದರೂ ಮಾಡಲಿ.

**ಶ್ರೀ ಕಾಗೋಡು ತಿಮ್ಮಪ್ಪ**:– ಮಾನ್ಯ ಸಭಾಪತಿಯವರೇ, ವೇತನ ಪರಿಷ್ಕರಣೆ ಮಾಡುವ ಬಗ್ಗೆ ಇರಬಹುದು. ಏನೇ ಸಮಸ್ಯೆ ಇದ್ದರೂ ಆದಷ್ಟು ಬೇಗ ತೀರ್ಮಾನ ಮಾಡುತ್ತೇವೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**:– ಮಾನ್ಯ ಸಭಾಪತಿಯವರೇ, ಇದರಲ್ಲಿ ಎರಡು ವಿಚಾರಗಳು ಬರುತ್ತವೆ. ಮೊದಲನೆಯದಾಗಿ ಉದ್ಯೋಗ ಭದ್ರತೆ ಒದಗಿಸುವುದು, ಎರಡನೆಯದಾಗಿ ಕನಿಷ್ಠ ವೇತನ ಪರಿಷ್ಕರಣೆ ಮಾಡುವುದು. ಯಾವಾಗ ಕನಿಷ್ಠ ವೇತನ ಕೊಡುತ್ತಾರೆ? ಕೆಲಸಕ್ಕೆ ಸೇರಿ ಸಾಯುವತನಕ ಕನಿಷ್ಠ ವೇತನ ಎಂದರೆ, ಗ್ರಾಮ ಸಹಾಯಕರನ್ನು ಯಾವ ರೀತಿ ನಡೆಸಿಕೊಂಡಂತಾಗುತ್ತದೆ? ಉದ್ಯೋಗಕ್ಕೆ ಭದ್ರತೆ ಕೊಡತಕ್ಕಂಥ ಜವಾಬ್ದಾರಿ ಸರ್ಕಾರದಾಗಿರುತ್ತದೆ. ಸರ್ಕಾರದವರೆ ಉದ್ಯೋಗಕ್ಕೆ ಭದ್ರತೆ ನೀಡದಿದರೆ ಬೇರೆ ಎಲ್ಲಿ ಭದ್ರತೆ ಸಿಗುತ್ತದೆ.

**ಶ್ರೀ ಕಾಗೋಡು ತಿಮ್ಮಪ್ಪ**:– ಮಾನ್ಯ ಸಭಾಪತಿಯವರೇ, ಗ್ರಾಮ ಸಹಾಯಕರು ಹುದ್ದೆಗೆ ಸೇರುವಂತಹ ಸಂದರ್ಭದಲ್ಲಿ ಸರ್ಕಾರದ ನಿಯಮ ಏನಿರುತ್ತದೆಯೋ, ಆ ನಿಯಮವನ್ನು ಒಪ್ಪಿಕೊಂಡ ಮೇಲೆಯೇ ನೇಮಿಸಿಕೊಳ್ಳಲಾಗಿರುತ್ತದೆ. ಹಾಗೆಯೇ ಏನು ಬೇಡಿಕೆಯನಿಟ್ಟಿದ್ದಾರೆಯೋ ಆ ಬೇಡಿಕೆಯನ್ನು ಪರಿಶೀಲನೆ ಮಾಡುತ್ತೇವೆ.

**ಶ್ರೀ ಕೆ.ಬಿ.ಶಾಣಪ್ಪ(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, exploit ಮಾಡುತ್ತಾರೆ. ಮಾನ್ಯ ಸಚಿವರ ಕಾಲದಲ್ಲಿಯಾದರೂ settlement ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. He is a man of commitment. *...(Interruptions)* We have got total faith in him. *...(Interruptions)* He is a man of commitment. He has to do it.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಅದು ಬೇರೆ ಮಾತಾಗುತ್ತದೆ. 'Man of commitment' ಯಾವುದಕ್ಕೆ ಇರುತ್ತದೆಂದರೆ philosophy ಗೆ ಇರುತ್ತದೆ. ಇದಕ್ಕಲ್ಲ. ಅದು ಬೇರೆ ಮಾತು.

**ಶ್ರೀ ಕೆ.ಬಿ.ಶಾಣಪ್ಪ(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಚಿವರು ಅಧಿಕಾರದಲ್ಲಿರುವಾಗ ಮಾಡಬೇಕಾಗುತ್ತದೆಯೇ ಹೊರತು ಬೇರೆಯವರು ಮಾಡುವುದಕ್ಕಾಗುವುದಿಲ್ಲ.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಅದು ಹಾಗಲ್ಲ.

**Sri K.B. SHANAPPA:** No, this is not the answer expected from you.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸದಸ್ಯರು ಹಿರಿಯರಾದಂಥವರಾಗಿದ್ದಾರೆ.

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೇ, ನಾವು ಅಧಿಕಾರದಲ್ಲಿರುವಾಗಲೇ ಮಾಡುತ್ತೇವೆಂದು ಮಾನ್ಯ ಸಚಿವರೆ ಹೇಳಿದ್ದಾರೆ. ಅದನ್ನೇ ಯಾವಾಗ ಮಾಡುತ್ತಾರೆಂದು ಹೇಳಬೇಕಲ್ಲವೇ?

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಯಾವ್ಯಾವ ಸನ್ನಿವೇಶದಲ್ಲಿ ಏನೇನು ನಿಯಮ ಇರುತ್ತದೆಯೋ ಅದರ ಪ್ರಕಾರ ಮಾಡಿಕೊಂಡು ಹೋಗುತ್ತೇವೆ.

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೇ, ಅಷ್ಟರಲ್ಲಿ ಆ ನೌಕರರು ನೇಮಕಾತಿಯಾಗುವ ಹೊತ್ತಿಗೆ ಕೆಲಸಕ್ಕೆ ಸೇರಿದ್ದರೂ ಕೂಡ ಆ ನೌಕರರಿಗೆ ಏನು ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳುತ್ತಾರೆ.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಏನು ಮಾಡುವುದಕ್ಕೆ ಬರುವುದಿಲ್ಲವೆಂದೇನಿಲ್ಲ. ಕೆಲಸವನ್ನು ಒದಗಿಸಿದ್ದೇವೆ, ಮಾಡತಕ್ಕಂಥ ಕೆಲಸಕ್ಕೆ ಅವರು ಸಂಬಳವನ್ನು ಪಡೆಯುತ್ತಿದ್ದಾರೆ.

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೇ, ಹಾಗಾದರೆ ಎಷ್ಟು ದಿವಸಗಳ ಕಾಲ ಕಡಿಮೆ ಸಂಬಳದ ಮೇಲೆ ದುಡಿಯಬೇಕು?

**ಶ್ರೀ ಕಾಗೋಡು ತಿಮ್ಮಪ್ಪ:-** ಅಯ್ಯೋ! ರಾಮ.

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೇ, ಅಯ್ಯೋ! ರಾಮವೆಂದರೆ ಹೇಗೆ?

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಇದು ಯಾವ ನ್ಯಾಯ. ವೇತನ ಪರಿಷ್ಕರಣೆ ಮಾಡಬೇಕಲ್ಲವೇ?

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದ ತಕ್ಷಣವೇ ಮಾಡುವುದಕ್ಕಾಗುತ್ತದೆಯೇ?

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ವೇತನ ಪರಿಷ್ಕರಣೆ ಮಾಡಲಿಲ್ಲವೆಂದರೆ, ಬೇರೆ ಯಾರೂ ಮಾಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಿದ್ದೇನೆ.

**ಸಭಾಪತಿಯವರು:-** ಈ ಪ್ರಶ್ನೆ ಬಗ್ಗೆ ಚರ್ಚೆ ಸಾಕು. ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ. ಒಂದು ಪ್ರಶ್ನೆಯ ಬಗ್ಗೆಯೇ ಅರ್ಧ ಗಂಟೆ ಚರ್ಚೆ ಮಾಡುವುದಕ್ಕಾಗುವುದಿಲ್ಲ. ಮಾನ್ಯ ಸಚಿವರು ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ. ದಯವಿಟ್ಟು ಮಾನ್ಯ ಶಾಣಪ್ಪನವರೇ ಕುಳಿತುಕೊಳ್ಳಿ.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೩೬೫೯**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ರಾಮನಗರ ಜಿಲ್ಲೆ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಇರತಕ್ಕಂಥ ಸರ್ವೇಯರ್‌ಗಳ ಹುದ್ದೆ, ಮಂಜೂರಾಗಿರತಕ್ಕಂಥ ಹುದ್ದೆ, ಭರ್ತಿ ಮಾಡಿರತಕ್ಕಂಥ ಹುದ್ದೆಗಳು, ವಿಲೇವಾರಿಯಾದ ಅರ್ಜಿಗಳು ಮತ್ತು ಸ್ವೀಕೃತಿಯಾದ ಅರ್ಜಿಗಳ ಬಗ್ಗೆ ಮಾಹಿತಿಯನ್ನು ಕೇಳಿದ್ದು, ಅದಕ್ಕೆ ಮಾನ್ಯ ಸಚಿವರು ನೀಡಿರತಕ್ಕಂಥ ಉತ್ತರದಲ್ಲಿ ಬಹುತೇಕವಾಗಿ ಹುದ್ದೆಗಳನ್ನು ಅಂಕಿ ಅಂಶಗಳ ಆಧಾರದ ಮೇಲೆ ಭರ್ತಿ ಮಾಡಿರಬಹುದೆಂದು ಭಾವಿಸುತ್ತೇನೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಸರ್ವೆಗಾಗಿ ಸ್ವೀಕೃತಿಯಾಗಿರತಕ್ಕಂಥ ಒಟ್ಟು ಅರ್ಜಿಗಳು ೮೪೬೬೯, ಬಾಕಿ ಇರತಕ್ಕಂಥದು ೧೪೬೪೧ ಅರ್ಜಿಗಳಾಗಿವೆ. ರಾಮನಗರ ಜಿಲ್ಲೆಯಲ್ಲಿ ಸರ್ವೇಯರ್‌ಗಳ ಸ್ವೀಕೃತಿಯಾದ ಒಟ್ಟು ಅರ್ಜಿಗಳು ೮೭೭೮೭, ಬಾಕಿ ಇರತಕ್ಕಂಥ ಅರ್ಜಿಗಳು ೧೯೨೫೫ ಎಂದು ಮಾಹಿತಿಯನ್ನು ಒದಗಿಸಿದ್ದಾರೆ. ಈ ಮಾಹಿತಿಯನ್ನು ನೋಡಿದರೆ ಬಹುತೇಕ ಶೇಕಡ ೨೫% ಕ್ಕೂ ಅಧಿಕ ಅರ್ಜಿಗಳು ಬಾಕಿ ಇದೆ. ಯಾವ್ಯಾವ ಅಂಶಗಳಿಂದಾಗಿ ವಿಲೇವಾರಿಯಾಗಿಲ್ಲವೆಂಬ ಕಾರಣವನ್ನು ಮಾನ್ಯ ಸಚಿವರು ನೀಡಿದ್ದಾರೆ. ಆದರೆ, ಇದನ್ನು ನೋಡಿದರೆ ಮಾನ್ಯ ಸಚಿವರು ನೀಡಿರತಕ್ಕಂಥ

ಉತ್ತರಕ್ಕೂ, ವಾಸ್ತವಾಂಶಕ್ಕೂ ಅಜಗಜಾಂತರ ವ್ಯತ್ಯಾಸವಿದೆ ಅನ್ನಿಸುತ್ತದೆ. ನೇರವಾಗಿ ಹೇಳುವುದಾದರೆ ಸಹಾಯಕ ಆಯುಕ್ತರು ಅಥವಾ ಉಪ ಆಯುಕ್ತರವರನ್ನು ಹಿಡಿದುಕೊಂಡು ಕೆಲಸ ಮಾಡಬೇಕಾದರೆ ಸರಳವಾಗಿ ಅವರನ್ನು approach ಮಾಡಿ ಕೆಲಸ ಮಾಡಿಸಬಹುದು. ಹಾಗೆಯೇ ಅವರ ಹತ್ತಿರ ಏನಾದರೂ ಕೆಲಸ ಬಾಕಿ ಇದ್ದರೆ ಅದು ಕೂಡ ತ್ವರಿತವಾಗಿ ಆಗುತ್ತದೆ. ಕಂದಾಯ ಇಲಾಖೆಯಲ್ಲಿ ಸರ್ವೆಯರ್‌ಗಳಿಗೆ ಹೆಚ್ಚು ಬೇಡಿಕೆ ಇರುತ್ತದೆ. ಸರ್ವೆಯರ್‌ಗಳಿಗೆ ಹೆಚ್ಚು ಬೇಡಿಕೆ ಇರುವುದರಿಂದ ಅವರನ್ನು ನೋಡುವುದಕ್ಕಾಗಲಿ ಅಥವಾ ದೂರವಾಣಿ ಮೂಲಕ ಮಾತನಾಡುವುದಕ್ಕಾಗಲಿ ಸಿಗುವುದಿಲ್ಲ. ಸಹಾಯಕ ಆಯುಕ್ತರು ಅಥವಾ ಉಪ ಆಯುಕ್ತರಿಗಿಂತ ಸರ್ವೆಯರ್‌ಗಳಿಗೆ ಹೆಚ್ಚು ಬೇಡಿಕೆ ಇದೆ. ಆದರೆ ಮಾನ್ಯ ಸಚಿವರು ಒದಗಿಸಿರತಕ್ಕಂಥ ಉತ್ತರವನ್ನು ನೋಡಿದರೆ ಆ ರೀತಿ ಅನ್ನಿಸುವುದಿಲ್ಲ. ಉತ್ತರವನ್ನು ನೋಡಿದರೆ ಸುಗಮವಾಗಿ ಕಾರ್ಯವಾಗುತ್ತಿರಬಹುದೆಂದು ಅನ್ನಿಸುತ್ತದೆ. ಯಾವುದಾದರೂ ಜಮೀನನ್ನು ವಸತಿ ರಹಿತರಿಗೆ ನಿವೇಶನವಾಗಿ ಹಂಚಬೇಕು. ಸರ್ವೆ ಮಾಡಿ, ಹದ್ದುಬಸ್ತು ಅಳವಡಿಸಿ ಎಂದರೆ, ಹದ್ದುಬಸ್ತು ಅಳವಡಿಸುವುದಕ್ಕೆ 3 ರಿಂದ 4 ತಿಂಗಳ ಕಾಲ ಸಮಯ ತೆಗೆದುಕೊಳ್ಳುತ್ತಾರೆ. ಯಾವುದಾದರೂ ಜಮೀನನ್ನು ವಿಭಾಗ ಮಾಡಿಸಿಕೊಂಡು ರೈತರು ಸ್ಕೆಚ್ ಮಾಡಿಸಿಕೊಳ್ಳಬೇಕು, ಜಮೀನನ್ನು ನೋಂದಾಯಿಸಬೇಕೆಂದರೂ ಸಾಧ್ಯವಾಗುತ್ತಿಲ್ಲ. ರಾಮನಗರವೂ ಬಹುತೇಕ ಅರಣ್ಯ ಪ್ರದೇಶವನ್ನು ಹೊಂದಿರತಕ್ಕಂಥ ಜಿಲ್ಲೆಯಾಗಿದೆ. ಅರಣ್ಯ ಇಲಾಖೆಗೂ ಮತ್ತು ಕಂದಾಯ ಇಲಾಖೆಗೂ ನಡುವಿನ ಕಿತ್ತಾಟವೂ ಸರ್ವೆ ಸಾಮಾನ್ಯವಾಗಿದೆ.

**ಸಭಾಪತಿಯವರು**:- ನಿಮ್ಮ ಪ್ರಶ್ನೆ ಏನೆಂದು ಹೇಳಿ.

**ಶ್ರೀ ಎಸ್.ರವಿ**:- ಮಾನ್ಯ ಸಭಾಪತಿಯವರೇ, ಜಂಟಿ ಸಮೀಕ್ಷೆ ಮಾಡಬೇಕಾದರೆ ಸರ್ವೆಯರ್ ಲಭ್ಯತೆಯಿಲ್ಲ. ರೈತರಿಗೆ ಜಮೀನು ಮಂಜೂರಾತಿಯಾಗಿ 30 ರಿಂದ 40 ವರ್ಷವಾಗಿದೆ. ಆ ರೈತರಿಗೆ ನಮ್ಮ ಜಮೀನೇ ಅಥವಾ ಸರ್ಕಾರದ ಜಮೀನೇ ಎನ್ನುವ ಭಾವನೆ ಮೂಡಿದೆ. ಜಮೀನಿನ ಪಹಣಿಯಾಗಿ, ಮಂಜೂರಾಗಿದೆ. ರೈತರು ಸಹ ಹಣವನ್ನು ಪಾವತಿ ಮಾಡಿದ್ದಾರೆ. ಆದರೆ ಆ ಜಮೀನಿನಲ್ಲಿ ಕೊಳವೆ ಬಾವಿಯನ್ನು ತೆಗೆಯಿಸಿ ಅಭಿವೃದ್ಧಿ ಮಾಡುವುದಕ್ಕೆ ರೈತರಿಂದ ಸಾಧ್ಯವಾಗುತ್ತಿಲ್ಲ. ಪೋಡಿ ಮತ್ತು ದುರಸ್ತಿ ಮಾಡಿಸದೇ ಜಮೀನುಗಳನ್ನು ಹಾಗೆಯೇ ಬಿಟ್ಟಿದ್ದಾರೆ. ಪೋಡಿ ಮಾಡುವುದಕ್ಕೆ ಸಾಧ್ಯವೇ ಇಲ್ಲವಾಗಿದೆ. ಆ ಕುಟುಂಬದ ಮಕ್ಕಳಿಗೆ ಪೈಕಿ ನಂಬರ್‌ಗಳನ್ನು ವಿಭಾಗ ಮಾಡಿಕೊಡಬೇಕೆಂದರೆ, ಸ್ಕೆಚ್ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ.

**ಸಭಾಪತಿಯವರು**:- ಏನಾಗಬೇಕು. What is it that you want from the Government?

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಒದಗಿಸಿರತಕ್ಕಂಥ ಮಾಹಿತಿ ಪ್ರಕಾರ ಸರ್ವೆಯರ್‌ಗಳಿದ್ದಾರೆ. ಆದರೆ, ಹಳ್ಳಿಗಳಲ್ಲಿ ಸರ್ವೆಯರ್‌ಗಳೇ ಇಲ್ಲದಂತಾಗಿದೆ. ಸರ್ವೆ ಮಾಡಿಸಲು ಸಂಬಂಧಪಟ್ಟ ಅಧಿಕಾರಿಗೆ ಅರ್ಜಿ ನೀಡಿದರೆ 6 ತಿಂಗಳು ಅಥವಾ ಒಂದು ವರ್ಷಗಳವರೆಗೆ ಸಮಯವನ್ನು ತೆಗೆದುಕೊಳ್ಳುತ್ತಾರೆ. ಏತಕ್ಕಾಗಿ ಎಂಬುದಕ್ಕೆ ಕಾರಣ ಬೇಕು. ಸಹಾಯಕ ಆಯುಕ್ತರು ಅಥವಾ ಉಪ ಆಯುಕ್ತರವರನ್ನು ಭೇಟಿ ಮಾಡಬಹುದು. ಆದರೆ, ಸರ್ವೆಯರ್‌ಗಳು ಮಾತ್ರ ಸಿಗುವುದಿಲ್ಲ. ಅದರ ಬಗ್ಗೆ ಮಾನ್ಯ ಸಚಿವರು ಸ್ಪಷ್ಟಪಡಿಸಬೇಕು. ಇಲಾಖಾಧಿಕಾರಿಗಳು ಮಾನ್ಯ ಸಚಿವರಿಗೆ ಉತ್ತರವನ್ನು ನೀಡಿದ್ದಾರೆ. ಹಿರಿಯರಾದಂಥ ಮಾನ್ಯ ಸಚಿವರು ಉತ್ತರವನ್ನು ನೀಡಿರತಕ್ಕಂಥ ಅಧಿಕಾರಿಗಳ ಮೇಲೆ ಸರಿಯಾಗಿ ತನಿಖೆ ಮಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಅಧಿಕಾರಿಗಳು ನೀಡಿರತಕ್ಕಂಥ ಉತ್ತರದಲ್ಲಿ ಅಂಕಿ ಅಂಶಗಳ ಪ್ರಕಾರ ಎಷ್ಟೆಷ್ಟು ಬಾಕಿ ಇದೆ, ಅರ್ಜಿಗಳು ಯಾವ್ಯಾವ ಸ್ವರೂಪದಲ್ಲಿವೆ ಹಾಗೂ ಪೈಕಿ ನಂಬರ್‌ಗಳ ಬಗ್ಗೆ ದಯಮಾಡಿ ಸಚಿವರು ಗಮನಹರಿಸಬೇಕು.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಸುಧೀರ್ಘವಾಗಿ ಉತ್ತರವನ್ನು ಒದಗಿಸಿದ್ದು, ಮಾನ್ಯ ಸದಸ್ಯರು ಕೂಡ ಒಪ್ಪಿಕೊಂಡಿದ್ದಾರೆ. ವಿಳಂಬವಾಗುತ್ತಿರುವುದು ನಿಜ. ಅದಕ್ಕೆ ಕಾರಣಗಳು ಇವೆ. ಸರ್ವೇಯರ್‌ಗಳ ಕೊರತೆ ಇದ್ದು, ಈಗಾಗಲೇ ನೇಮಕವನ್ನು ಮಾಡಿ ತರಬೇತಿಯನ್ನು ನೀಡಲಾಗುತ್ತಿದೆ. ಎರಡು ತಿಂಗಳೊಳಗಾಗಿ ಸರ್ವೇಯರ್‌ಗಳು ಕೆಲಸಕ್ಕೆ ಬರುತ್ತಾರೆ. ಏಕೆ ಈ ರೀತಿಯಾಗಿದೆಯೆಂದರೆ ಪಕ್ಕಾ ಪೋಡಿ ಮಾಡುವ ವಿಚಾರದಿಂದ ಈ ರೀತಿಯಾಗುತ್ತದೆ. ಅನೇಕ ಪ್ರಕರಣಗಳನ್ನು ನಾನೇ ಸ್ವತ: ತೆಗೆದುಕೊಂಡು ಹೋಗಿ ಮಾಡಿಸಿದಾಗ ಯಾವ ರೀತಿಯಲ್ಲಿ ವ್ಯವಸ್ಥೆ ಹಾಳಾಗಿದೆ ಎಂಬುದು ನಮಗೂ ಗೊತ್ತಾಗಿದೆ. ಅದಕ್ಕಾಗಿ ತಹಸೀಲ್ದಾರ್‌ಗೆ ಅರ್ಜಿ ನೀಡಿ, ತಹಸೀಲ್ದಾರ್ ಮೂಲಕ ಸಹಾಯಕ ಆಯುಕ್ತರವರಿಗೆ ಕಳುಹಿಸಿ, ನಂತರ ಸಹಾಯಕ ಆಯುಕ್ತರವರು ವಾಪಸ್ಸು ಹಿಂದಿರುಗಿಸಿದಾಗ ಅದಕ್ಕೆ ಮತ್ತೆ ನಾವು ಉತ್ತರವನ್ನು ಒದಗಿಸುವುದು. ಉತ್ತರವನ್ನು ಒದಗಿಸಿದ ಮೇಲೆ ಸಹಾಯಕ ಆಯುಕ್ತರಿಂದ ಉಪ ಆಯುಕ್ತರವರ ಕಛೇರಿಗೆ ಹೋಗುತ್ತದೆ. ಉಪ ಆಯುಕ್ತರಿಂದ ಮತ್ತೆ ಹಿಂದಿರುಗಿ ಬರುವಂತಹ ವ್ಯವಸ್ಥೆ ಏನಿದೆ, ಎಷ್ಟು ಹದ್ದಗೆಟ್ಟಿದೆ ಎಂಬುದನ್ನು ಸ್ವತ: ನಾನೇ ನೋಡಿರುವುದರಿಂದ ಇದರ ಸಂಪೂರ್ಣ ಅಧಿಕಾರವನ್ನು ತಹಸೀಲ್ದಾರ್‌ರವರಿಗೆ ನೀಡಿದ್ದೇನೆ.

**ಸಭಾಪತಿಯವರು:-** ಹಾಗಾದರೆ ಇಂತಹ ವ್ಯವಸ್ಥೆಯ ಬಗ್ಗೆ ಸಹಾಯಕ ಆಯುಕ್ತರವರಿಗೆ ಕಳುಹಿಸಬೇಕಾಗಿಲ್ಲವೇ?

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಕೆಲವು ಕಡೆಗಳಲ್ಲಿ ಮೂಲ ದಾಖಲೆ ಕಳೆದು ಹೋಗಿರುತ್ತದೆ. ಆಗ 'Missing Record' ಎಂದು ಮಾಡಬೇಕಾಗುವ ದೃಷ್ಟಿಯಿಂದ ಕಳುಹಿಸಬೇಕಾಗುತ್ತದೆ. ಕಾಣೆಯಾಗಿರತಕ್ಕಂಥ ದಾಖಲೆಗಳನ್ನು ತಹಸೀಲ್ದಾರ್‌ರವರು ತಯಾರು ಮಾಡಿ A.D.R. ಜೊತೆಗೆ ಇಟ್ಟುಕೊಂಡು ಉಪ ಆಯುಕ್ತರವರಿಂದ ಅನುಮತಿ ತೆಗೆದುಕೊಳ್ಳಬೇಕಾಗುತ್ತದೆ.

(981)/15.11.2017/12.30/ಎಸ್‌ಕೆ-ಎಕೆ

**ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು) ಮುಂದು:-**

ಮೂಲ ದಾಖಲೆ ಸಿಕ್ಕಿ ಬಿಟ್ಟರೆ ಅವುಗಳನ್ನು ಎಲ್ಲಿಗೆ ಕಳುಹಿಸಬೇಕೋ ಅಲ್ಲಿಗೆ ಕಳುಹಿಸಬೇಕಾಗುತ್ತದೆ. ಈಗ ಕಡತ ವಿಲೇವಾರಿ ಚೆನ್ನಾಗಿ ನಡೆಯುತ್ತಿದೆ. ಇದೆಲ್ಲಾ ನನಗೆ ಗೊತ್ತಿದೆ. ಅನೇಕ ಕಡೆಗಳಲ್ಲಿ ಬರುತ್ತಿದೆ. ಮಾನ್ಯ ಸದಸ್ಯರ ಆತಂಕವೇನಿದೆ ಎಂದರೆ, ಅದು ನಿಜವಿದೆ ಎಂದು ನಾನು ಇಲ್ಲವೆಂದು ಹೇಳುವುದಿಲ್ಲ. ಅದಕ್ಕೋಸ್ಕರ ವಿಳಂಬ ತಪ್ಪಿಸುವ ದೃಷ್ಟಿಯಿಂದ ತಹಶೀಲ್ದಾರ್‌ರವರಿಗೆ ಪೂರ್ಣ ಅಧಿಕಾರವನ್ನು ಕೊಟ್ಟಿದ್ದೇನೆ. ಮೂಲ ದಾಖಲೆ ಸಿಗದೇ ಹೋದಾಗ ಮಾತ್ರ ಸ್ವಲ್ಪ ವಿಳಂಬವಾಗುತ್ತದೆ. ಇದರಿಂದಾಗಿ ಜನರಿಗೆ ತೊಂದರೆಯಾಗಿರುವುದು ನಿಜ. ಆದ್ದರಿಂದ, ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇದನ್ನು ತಪ್ಪಿಸುವ ಸಲುವಾಗಿ ಆಡಳಿತದಲ್ಲಿ ತರುವ ಪ್ರಾಮಾಣಿಕವಾದ ಪ್ರಯತ್ನವನ್ನು ನಾನು ಖಂಡಿತವಾಗಿ ಮಾಡುತ್ತೇನೆ. ಸರ್ವೆಯರ್ ಸಿಗುವುದಿಲ್ಲ ಎನ್ನುವ ಮಾತನ್ನು ಹೇಳಿದ್ದೀರಿ. ಪ್ರತಿ ತಾಲ್ಲೂಕಿನ ತಹಶೀಲ್ದಾರ್‌ರವರಿಗೆ ಹೋಬಳಿ ಮಟ್ಟಕ್ಕೆ ಆಯಾಯ ಸರ್ಕಲ್ ಅನ್ನು ಕೊಟ್ಟು ಬಿಟ್ಟಿದ್ದೇವೆ. ಒಬ್ಬೊಬ್ಬ ಸರ್ವೇಯರ್‌ಗೆ ಆಯಾಯ ಹೋಬಳಿಯನ್ನು ಒಂದು ಸರ್ಕಲ್ ಎಂದು ಮಾಡಿದ್ದೇವೆ. ಆ ಕೆಲಸವನ್ನು ಅವರೇ ಮಾಡಬೇಕು. ಆಗ ಅವರು ಸಿಕ್ಕೆ ಸಿಗುತ್ತಾರೆ. ಅಗ ಆಯಾಯ ತಾಲ್ಲೂಕಿನ Head Quarters ನಲ್ಲಿ ವಾಸ ಮಾಡುತ್ತಾರೆ. ತಾಲ್ಲೂಕಿನಲ್ಲಿ ಯಾರ‍್ಯಾರು ವಾಸ ಮಾಡುತ್ತಿಲ್ಲವೆಂದು ನನ್ನ ಗಮನಕ್ಕೆ ಬಂದರೆ ಅದನ್ನು ನಾನು ತನಿಖೆ ಮಾಡಿಸುತ್ತೇನೆ. ತಮಗೆ ಏನಾದರೂ ಗೊತ್ತಿದ್ದರೆ, ಅದನ್ನು ನಮಗೆ ತಿಳಿಸಿದರೆ ಅವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳುತ್ತೇನೆ. ಒಟ್ಟಿನಲ್ಲಿ ಅನೇಕ ತಪ್ಪುಗಳಿವೆ. ಅದನ್ನು ನಾನು ಇಲ್ಲವೆಂದು ಹೇಳುವುದಿಲ್ಲ. ಇವು ಒಂದು ದಿನದಲ್ಲಿ ಬೆಳೆದಿದ್ದಲ್ಲ. ಅನೇಕ ದಿವಸಗಳಿಂದ ಬೆಳೆದುಕೊಂಡು ಬಂದಿದೆ. ನಾನು ಅದನ್ನು ಸರಿಪಡಿಸುತ್ತೇನೆ. ತಾವು ಸಹಕಾರ ನೀಡಿದರೆ, ಯಾರಾದರೂ ತಪ್ಪು ಮಾಡಿದ್ದರೆ ಅವರ ಮೇಲೆ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳುವ ಕೆಲಸವನ್ನು ಮಾಡುತ್ತೇವೆ.

**ಸಭಾಪತಿಯವರು:-** ಧನ್ಯವಾದಗಳು.

**ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಇದಕ್ಕೆ ಕಾಲಮಿತಿ ನಿಗದಿ ಮಾಡಬೇಕು. ಅರ್ಜಿ ಸ್ವೀಕೃತಿಯಾದಾಗ ಒಂದು ಹದ್ದುಬಸ್ತು ಮಾಡುವುದಕ್ಕೆ ಇಂತಿಷ್ಟು ಕಾಲ ಎಂದು ನಿಗದಿ ಮಾಡಬೇಕು. ಈ ಪಿ ನಂಬರ್ ದುರಸ್ತಿ ಆಗುತ್ತದೆಯೋ ಇಲ್ಲವೋ ಎಂಬುದರ ಬಗ್ಗೆ ಮಾನ್ಯ ಸಚಿವರು ವಿವರಣೆ ಕೊಡಬೇಕು. ಆ ಪೈಕಿ ನಂಬರ್ ದುರಸ್ತಿಯಾಗುತ್ತದೆ ಅಥವಾ ಇಲ್ಲವೇ ಎಂಬ ಬಗ್ಗೆ ನಮ್ಮ ರೈತರಿಗೆ ಅನುಮಾನ ಬಂದು ಬಿಟ್ಟಿದೆ. ಅದರ ಬಗ್ಗೆ ಮಾನ್ಯ ಸಚಿವರು ಸ್ಪಷ್ಟನೆ ಕೊಡಬೇಕು. ಅದರಿಂದ ಒಂದು ಕಾಲಮಿತಿ ನಿಗಧಿ ಮಾಡಬೇಕು ಮತ್ತು ಕಾಲಮಿತಿಯಿದ್ದರೂ ಕೂಡ ಕೆಲಸವಾಗುತ್ತಿಲ್ಲ.

**ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು)**:–ಮಾನ್ಯ ಸಭಾಪತಿಯವರೆ, ಕಾಲಮಿತಿಯಿದ್ದರೂ ಕಷ್ಟ. ಆದರೆ ವಿಳಂಬಕ್ಕೆ ಅವಕಾಶವಿಲ್ಲದ ರೀತಿಯಲ್ಲಿ ಆಡಳಿತ ನಡೆಸಬೇಕಾದಂತಹ ಅನಿವಾರ್ಯತೆ ಇವತ್ತಿನ ದಿವಸದಲ್ಲಿ ಇದೆ. ಮಾನ್ಯ ಸದಸ್ಯರು ಕೊಟ್ಟಂತಹ ಸಲಹೆಗಳನ್ನು ಗಂಭೀರವಾಗಿ ಪರಿಶೀಲಿಸಿ, ಆಡಳಿತದಲ್ಲಿ ಸ್ವಲ್ಪ ಕಡತಗಳನ್ನು ವಿಲೇವಾರಿ ಮಾಡುವಂತಹ ಕೆಲಸ ಶೀಘ್ರಗತಿಯಲ್ಲಿ ಆಗಲಿ. ಈಗ ಸಕಾಲ ಎನ್ನುವ ಕಾರ್ಯಕ್ರಮ ಬಂದಿದೆ. ಇದೆಲ್ಲಾ ಬಂದಿದ್ದರಿಂದ ಸ್ವಲ್ಪವೂ ವಿಳಂಬವಿಲ್ಲದೆ ಕೆಲಸ ನಡೆಯುತ್ತಿದೆ.

**ಸಭಾಪತಿಯವರು**:– ಧನ್ಯವಾದಗಳು.

**ಚುಕ್ಕೆ ಗುರುತಿನ ಪ್ರಶ್ನೆ: 3778**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಅಮರನಾಥ ಪಾಟೀಲ್**:– ಮಾನ್ಯ ಸಭಾಪತಿಯವರೆ, ಮಾನ್ಯ ಕಂದಾಯ ಸಚಿವರಿಗೆ ಕೇಳಬಯಸುವುದೇನೆಂದರೆ, ಕಂದಾಯ ಇಲಾಖೆಯಲ್ಲಿ ಭೂಮಾಪಕರ ಹುದ್ದೆಗಳ ನೇಮಕಾತಿಯ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದ್ದೆ. ಅದರಲ್ಲಿ ಅವರು ಒಂದು ಪ್ರಸ್ತಾಪ ಮಾಡಿದ್ದಾರೆ. ದಿನಾಂಕ: 05-11-2016 ರಲ್ಲಿ 1067 ಭೂಮಾಪಕರ ಹುದ್ದೆಗಳ ಭರ್ತಿಗಾಗಿ ಅಧಿಸೂಚನೆಯನ್ನು ಹೊರಡಿಸಲಾಗಿದೆ ಎಂದು ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ನನ್ನ ಕೈಯಲ್ಲಿ ಆ ಅಧಿಸೂಚನೆಯಿದೆ. ನನ್ನ ಪ್ರಶ್ನೆ ಏನೆಂದರೆ ಹೈದ್ರಾಬಾದ್-ಕರ್ನಾಟಕ ಪ್ರದೇಶದ 371(ಜೆ) ಅಡಿಯಲ್ಲಿ ಮೀಸಲಾತಿಯ ಬಗ್ಗೆ ನೇಮಕಾತಿಗಳಲ್ಲಿ ಎಲ್ಲಿಯೂ ಪ್ರಸ್ತಾಪ ಮಾಡಿಲ್ಲ. ಇದರ ಬಗ್ಗೆ ಮಾಹಿತಿಯನ್ನು ಮಾನ್ಯ ಸಚಿವರು ಒದಗಿಸಿಕೊಡಬೇಕು. ಇದಾದ ನಂತರ ಇನ್ನೊಂದು ಪ್ರಶ್ನೆಯಿದೆ.

**ಶ್ರೀ ಕಾಗೋಡು ತಿಮ್ಮಪ್ಪ**:–ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಏನು ಹೇಳುತ್ತಿರುವುದನ್ನು ಕೊಟ್ಟಿರತಕ್ಕಂಥದ್ದು ನಿಜ. ಏಕೆಂದರೆ, ನಾವೇನು 1,000 ಚಿಲ್ಲರೆ ಹುದ್ದೆಗಳನ್ನು ಏನು ಹೊಸದಾಗಿ ನೇಮಕ ಮಾಡುತ್ತಿದ್ದೇವೆ, ಆಗ ಹೈದ್ರಾಬಾದ್-ಕರ್ನಾಟಕಕ್ಕೆ ಅದರಲ್ಲಿ ವಿಶೇಷವಾದಂತಹ ಪ್ರಮಾಣವನ್ನು ಅದರಲ್ಲಿ ವಹಿಸಿಕೊಡುತ್ತೇವೆ.

**ಶ್ರೀ ಅಮರನಾಥ ಪಾಟೀಲ್**:– ಮಾನ್ಯ ಸಭಾಪತಿಯವರೆ, ದಿನಾಂಕ: 05-11-2016 ರಲ್ಲಿ ಅಧಿಸೂಚನೆಯಲ್ಲಿ ಹೈದ್ರಾಬಾದ್-ಕರ್ನಾಟಕಕ್ಕೆ ಶೇಕಡ ಎಷ್ಟು ಮೀಸಲಾತಿಯನ್ನು ಕೊಡುತ್ತಿದ್ದೀರಿ ಎಂಬ ಬಗ್ಗೆ ಇದರಲ್ಲಿ ಎಲ್ಲಿಯೂ ಪ್ರಸ್ತಾಪ ಮಾಡಿಲ್ಲ.

**ಶ್ರೀ ಕಾಗೋಡು ತಿಮ್ಮಪ್ಪ**:–ಮಾನ್ಯ ಸಭಾಪತಿಯವರೆ, ಇದರಲ್ಲಿ ಹೆಚ್ಚು ಕಡಿಮೆ ಶೇಕಡ 34 ಬರುತ್ತದೆ.

**ಶ್ರೀ ಅಮರನಾಥ ಪಾಟೀಲ್**:- ಮಾನ್ಯ ಸಭಾಪತಿಯವರೆ, ಈ ಅಧಿಸೂಚನೆಯಲ್ಲಿ ಎಲ್ಲಿಯೂ ಕೂಡ ಇದರ ಬಗ್ಗೆ ಪ್ರಸ್ತಾಪ ಮಾಡಿಲ್ಲ.

**ಶ್ರೀ ಕಾಗೋಡು ತಿಮ್ಮಪ್ಪ**:-ಮಾನ್ಯ ಸಭಾಪತಿಯವರೆ, ಈ ಉತ್ತರದಲ್ಲಿ ಇದೆ.

**ಶ್ರೀ ಅಮರನಾಥ ಪಾಟೀಲ್**:- ಮಾನ್ಯ ಸಭಾಪತಿಯವರೆ, ಈ ಅಧಿಸೂಚನೆಯಲ್ಲಿ ಮೀಸಲಾತಿಯ ಬಗ್ಗೆ ಎಲ್ಲೂ ಪ್ರಸ್ತಾಪ ಮಾಡಿಲ್ಲ.

**ಶ್ರೀ ಕಾಗೋಡು ತಿಮ್ಮಪ್ಪ**:-ಮಾನ್ಯ ಸಭಾಪತಿಯವರೆ, ಈಗ ಹೈದ್ರಾಬಾದ್-ಕರ್ನಾಟಕಕ್ಕೆ ಕಲಂ 371(ಜೆ) ಪ್ರಕಾರ ಎಷ್ಟು ಪ್ರಮಾಣದಲ್ಲಿ ಕೊಡಬೇಕೋ ಅಷ್ಟನ್ನು ಕಡ್ಡಾಯವಾಗಿ ಕೊಟ್ಟೇ ಕೊಡುತ್ತೇವೆ.

**ಶ್ರೀ ಅಮರನಾಥ ಪಾಟೀಲ್**:- ಮಾನ್ಯ ಸಭಾಪತಿಯವರೆ, ಈ ಅಧಿಸೂಚನೆಯಲ್ಲಿ ಪ್ರಸ್ತಾಪ ಮಾಡಬೇಕೆಂಬುದು ನನ್ನ ವಿನಂತಿಯಾಗಿದೆ. ಅದು ಇದರಲ್ಲಿ ಪ್ರಸ್ತಾಪವಾಗಿಲ್ಲ.

**ಶ್ರೀ ಕಾಗೋಡು ತಿಮ್ಮಪ್ಪ**:-ಮಾನ್ಯ ಸಭಾಪತಿಯವರೆ, ನಾಳೆ order ನಲ್ಲಿ ಬರುತ್ತದೆ.

**ಶ್ರೀ ಅಮರನಾಥ ಪಾಟೀಲ್**:- ಮಾನ್ಯ ಸಭಾಪತಿಯವರೆ, ನನಗೆ ಅದರ ಬಗ್ಗೆ ಮಾಹಿತಿಯನ್ನಾದರೂ ಒದಗಿಸಿಕೊಡಿ.

**ಶ್ರೀ ಕಾಗೋಡು ತಿಮ್ಮಪ್ಪ** :-ಮಾನ್ಯ ಸಭಾಪತಿಯವರೆ, ನಾನು ಅದರ ಬಗ್ಗೆ ಖಂಡಿತವಾಗಿಯೂ ಮಾಹಿತಿಯನ್ನು ಒದಗಿಸಿಕೊಡುತ್ತೇನೆ.

**ಶ್ರೀ ಅಮರನಾಥ ಪಾಟೀಲ್**:- ಮಾನ್ಯ ಸಭಾಪತಿಯವರೆ, ನನ್ನ ಇನ್ನೊಂದು ಪ್ರಶ್ನೆ ಏನೆಂದರೆ, ಇವುಗಳಲ್ಲಿ 499 ನೇರ ನೇಮಕಾತಿ ಹುದ್ದೆಗಳಾಗಿದ್ದು, ಈ ಪೈಕಿ 465 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ ಸಂಬಂಧಿಸಿದಂತೆ 2016ನೇ ಇಸವಿಯಲ್ಲಿ 104 ಭೂಮಾಪಕರ ಹುದ್ದೆಗಳನ್ನು ಈಗಾಗಲೇ ನೇರ ನೇಮಕಾತಿ ಮಾಡಲಾಗಿದೆಂದು ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಅದು ಯಾವ ಅಧಿಸೂಚನೆ ಮತ್ತು ಯಾವ ಇಸವಿಯಲ್ಲಿ ಮಾಡಿದ್ದೀರಿ. ಮಾನ್ಯ ಸಚಿವರು ಅದರ ಬಗ್ಗೆ ಮಾಹಿತಿಯನ್ನು ಕೊಡಬೇಕೆಂಬುದು ನನ್ನ ವಿನಂತಿಯಾಗಿದೆ.

**ಶ್ರೀ ಕಾಗೋಡು ತಿಮ್ಮಪ್ಪ**:-ಮಾನ್ಯ ಸಭಾಪತಿಯವರೆ, ಈಗಾಗಲೇ ಉತ್ತರವನ್ನು ಕೊಟ್ಟಿದ್ದೇವೆ. ಈಗಾಗಲೇ ಹೆಚ್ಚು ಕಡಿಮೆ 104 ಭೂಮಾಪಕರ ಹುದ್ದೆಗಳನ್ನು ನೇಮಕ ಮಾಡಿದ್ದಾರೆ.

**ಶ್ರೀ ಅಮರನಾಥ ಪಾಟೀಲ್**:- ಮಾನ್ಯ ಸಭಾಪತಿಯವರೆ, ಅದು ಯಾವಾಗಾಯಿತು ಮತ್ತು ಹೊಸದಾಗಿ ಈ ಅಧಿಸೂಚನೆ ಬಂದಿದೆ. ಇದು ಯಾವಾಗಾಯಿತು. ಇದರ ಬಗ್ಗೆ clarity ಸಿಗುತ್ತಿಲ್ಲ. ಅದಕ್ಕೆ ನಾನು ಕೇಳಿದೆ.

**ಶ್ರೀ ಕಾಗೋಡು ತಿಮ್ಮಪ್ಪ:**-ಮಾನ್ಯ ಸಭಾಪತಿಯವರೆ, 2016 ರಲ್ಲಿ ಮಾಡಿದ್ದೇವೆ.

**ಶ್ರೀ ಅಮರನಾಥ ಪಾಟೀಲ್**:- ಮಾನ್ಯ ಸಭಾಪತಿಯವರೆ, ಈ ಅಧಿಸೂಚನೆ 2016ನೇ ಇಸವಿಯಲ್ಲಿ ಅಗಿದೆ.

**ಶ್ರೀ ಕಾಗೋಡು ತಿಮ್ಮಪ್ಪ:**-ಮಾನ್ಯ ಸಭಾಪತಿಯವರೆ, ಮಾನ್ಯ ಸಭಾಪತಿಯವರೆ, ಅದರ ಪ್ರಕಾರವೇ ಮಾಡಿದ್ದೇವೆ.

**ಶ್ರೀ ಅಮರನಾಥ ಪಾಟೀಲ್**:- ಮಾನ್ಯ ಸಭಾಪತಿಯವರೆ, ಅದರಲ್ಲಿ ಉಲ್ಲೇಖಿಸಿಲ್ಲ. ದಯವಿಟ್ಟು, ತಿಳಿಸಲಿ.

**ಶ್ರೀ ಕಾಗೋಡು ತಿಮ್ಮಪ್ಪ:**-ಮಾನ್ಯ ಸಭಾಪತಿಯವರೆ, ಅವರಿಗೆ ಬೇಕಾಗಿರುವ ಮಾಹಿತಿಯನ್ನು ಕೇಳಲಿ.

**ಶ್ರೀ ಅಮರನಾಥ ಪಾಟೀಲ್**:- ಮಾನ್ಯ ಸಭಾಪತಿಯವರೆ, ಇದರ ಬಗ್ಗೆ ಮೀಸಲಾತಿ ಬೇಕು. ನಮ್ಮ ಭಾಗಕ್ಕೆ ಮೀಸಲಾತಿ ಬೇಕು ಮತ್ತು ನಿಖರವಾದಂತಹ figure ನ್ನು revise ಮಾಡಿ ವಿವರವಾಗಿ ಕೊಟ್ಟರೆ ಸಾಕು.

**ಶ್ರೀ ಕಾಗೋಡು ತಿಮ್ಮಪ್ಪ :**-ಮಾನ್ಯ ಸಭಾಪತಿಯವರೆ, ಅವರು ಅದರ ಬಗ್ಗೆ ಸ್ವಲ್ಪ ಕೇಳಲಿ. ಅದರ ಪ್ರಕಾರ 2015 ರಲ್ಲಿ ಆ ಭಾಗಕ್ಕೆ ವಿಶೇಷವಾಗಿ ಮೀಸಲಾತಿಯನ್ನು ಕೊಟ್ಟಿದ್ದೇವೆ ಮತ್ತು ಕೊಡಲೇಬೇಕು.

**ಶ್ರೀ ಅಮರನಾಥ ಪಾಟೀಲ್**:- ಮಾನ್ಯ ಸಭಾಪತಿಯವರೆ, ಅದರ ಬಗ್ಗೆ ಮಾಹಿತಿಯಿಲ್ಲ. ನಾನು ಅದನ್ನು ಕೇಳುತ್ತಿದ್ದೇನೆ.

**ಶ್ರೀ ಕಾಗೋಡು ತಿಮ್ಮಪ್ಪ:**-ಮಾನ್ಯ ಸಭಾಪತಿಯವರೆ, ಈಗ ಮಾಹಿತಿ ಇದೆ ತಿಳಿದುಕೊಳ್ಳಿ.

**ಶ್ರೀ ಕೆ.ಬಿ. ಶಾಣಪ್ಪ (ನಾಮ ನಿರ್ದೇಶಿತರು)**:- ಮಾನ್ಯ ಸಭಾಪತಿಯವರೆ, ಹೈದ್ರಾಬಾದ್-ಕರ್ನಾಟಕ ಭಾಗದ ಜನರಿಗೆ ಶೇಕಡ ಎಷ್ಟು ಮೀಸಲಾತಿಯನ್ನು ಕೊಡುತ್ತಿದ್ದೀರಿ ಎಂಬ ಬಗ್ಗೆ ಹೇಳಿದರೆ, ಕ್ಲಾರಿಟಿ ಇದ್ದರೆ, we will also be happy. Out of 100, ಎಷ್ಟು ಜನರನ್ನು ತೆಗೆದುಕೊಳ್ಳಬಹುದೆಂಬುದರ ಬಗ್ಗೆ ಸ್ಪಷ್ಟತೆ ಇದ್ದರೆ we will also be happy.

**ಶ್ರೀ ಕಾಗೋಡು ತಿಮ್ಮಪ್ಪ:**-ಮಾನ್ಯ ಸಭಾಪತಿಯವರೆ, ಇಷ್ಟು ದುಡ್ಡು ಮತ್ತು ಇಷ್ಟು ಶೇಕಡ ಕೊಡಬೇಕು.

**ಶ್ರೀ ಕೆ.ಬಿ. ಶಾಣಪ್ಪ**:- ಮಾನ್ಯ ಸಭಾಪತಿಯವರೆ, ಎಷ್ಟು ಕೊಟ್ಟಿದ್ದೀರಿ ಎಂಬ ಬಗ್ಗೆ ನಿಖರತೆ ಇದ್ದರೆ ಒಳ್ಳೆಯದು.

**ಶ್ರೀ ಕಾಗೋಡು ತಿಮ್ಮಪ್ಪ:**-ಮಾನ್ಯ ಸಭಾಪತಿಯವರೆ, ಇಷ್ಟು ನೇಮಕಾತಿಗೂ ಕೊಡಬೇಕು. ಮೀಸಲಾತಿ ಇದ್ದೇ ಇದೆ.

**ಶ್ರೀ ಕೆ.ಬಿ. ಶಾಣಪ್ಪ**:- ಮಾನ್ಯ ಸಭಾಪತಿಯವರೆ, ಅವರು ಕೊಟ್ಟಿದ್ದೀರಾ. ನಾನು ಇಲ್ಲವೆಂದು ಹೇಳುವುದಿಲ್ಲ. ಅದರ ಬಗ್ಗೆ ನಿಖರವಾಗಿ ಬರವಣಿಗೆಯಲ್ಲಿ ಕೊಡಿ.

**ಶ್ರೀ ಕಾಗೋಡು ತಿಮ್ಮಪ್ಪ:**-ಮಾನ್ಯ ಸಭಾಪತಿಯವರೆ, ಕೊಡುತ್ತೇವೆ.

**ಸಭಾಪತಿಯವರು**:- ಮುಂದಿನ ಪ್ರಶ್ನೆ ಶ್ರೀಮತಿ ತಾರಾ ಅನೂರಾಧರವರದ್ದು. ತಾರಾ ಅನೂರಾಧರವರ ಪ್ರಶ್ನೆಗೆ ಸಮಯ ಕೇಳಿದ್ದಾರೆ.

**ಶ್ರೀಮತಿ ತಾರಾಅನೂರಾಧ;-** ಮಾನ್ಯ ಸಭಾಪತಿಯವರೆ, ಅದಕ್ಕೆ ಕಾಲಾವಕಾಶ ಏಕೆ ಬೇಕು?

**ಸಭಾಪತಿಯವರು**:- ಮಾನ್ಯ ಸಚಿವರು ಹೇಳುತ್ತಾರೆ.

**ಶ್ರೀಮತಿ ತಾರಾಅನೂರಾಧ;-** ಮಾನ್ಯ ಸಭಾಪತಿಯವರೆ, ಅದಕ್ಕಿಂತ ಮುಂಚೆಯೇ ಪ್ರಶ್ನೆಗಳನ್ನು ಕಳುಹಿಸಿದ್ದೆವು. ಅದರೂ ಕೂಡ ಕಾಲಾವಕಾಶ ಕೇಳುತ್ತಾರೆ. ದಯವಿಟ್ಟು, ಅದಕ್ಕೆ ಕಾರಣ ಮತ್ತು ಯಾವಾಗ ಉತ್ತರವನ್ನು ಕೊಡುತ್ತಾರೆಂಬ ಬಗ್ಗೆ ಮಾನ್ಯ ಸಚಿವರು ಹೇಳಬೇಕು.

**ಶ್ರೀ ಸಂತೋಷ್ ಎಸ್. ಲಾಡ್ (ಕಾರ್ಮಿಕ ಮತ್ತು ಕೌಶಲ್ಯ ಅಭಿವೃದ್ಧಿ ಸಚಿವರು)**:- ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆ ಏನಿದೆ? ಈ Ministry of Skill Development and Entrepreneurship ಎನ್ನುವಂತಹದ್ದರ ಬಗ್ಗೆ ಪ್ರಶ್ನೆ ಕೇಳಿದ್ದಾರೆ. ಕಳೆದ ಒಂದು ವರ್ಷದ ಹಿಂದೆ ಕೌಶಲ್ಯ ಅಭಿವೃದ್ಧಿ ಪ್ರಾರಂಭವಾಗಿರುವಂತಹದ್ದು. ಕಳೆದ ಮೂರು ವರ್ಷಗಳಿಂದ ಕೇಂದ್ರ ಸರ್ಕಾರದಿಂದ ಏನೇನು ಅನುದಾನ ಬಂದಿದೆ ಎಂಬುದರ ಬಗ್ಗೆ ಮಾಹಿತಿ ಕೊಡಿ ಎಂದು ಕೇಳಿದ್ದಾರೆ. ಈ ministry ಗೆ ಬಂದಂತಹದ್ದಲ್ಲ. ಏಕೆಂದರೆ ಎಲ್ಲಾ ಇಲಾಖೆಗಳಿಗೆ ಬಂದಿರುವಂತಹ ಹಣ. ಆದ್ದರಿಂದ, ಎಲ್ಲಾ ಇಲಾಖೆಗಳಿಂದ ಮಾಹಿತಿಯನ್ನು ಪಡೆದುಕೊಳ್ಳಬೇಕು.

**ಶ್ರೀಮತಿ ತಾರಾಅನೂರಾಧ;-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಮುಂದಿನ ಬುಧವಾರ ಕೊಡುತ್ತೀರಾ.

**ಶ್ರೀ ಸಂತೋಷ್ ಎಸ್. ಲಾಡ್**:- ಮಾನ್ಯ ಸಭಾಪತಿಯವರೆ, ಮುಂದಿನ ಬುಧವಾರ ಕೊಡುತ್ತೇನೆ. ಬೇಕಾದರೆ, ಈ ವರ್ಷಕ್ಕೆ ಎಷ್ಟು ಅನುದಾನ ಬಂದಿದೆಂಬುದರ ಬಗ್ಗೆ ಮಾಹಿತಿ ಕೊಡುತ್ತೇನೆ.

**ಸಭಾಪತಿಯವರು:**–ಮಾನ್ಯ ಸಚಿವರ ಹತ್ತಿರ ಉತ್ತರವಿಲ್ಲ.

**ಶ್ರೀ ಸಂತೋಷ್ ಎಸ್. ಲಾಡ್:**– ಮಾನ್ಯ ಸಭಾಪತಿಯವರೆ, ಇದು ಪ್ರಾರಂಭವಾಗಿ overall ಒಂದು ವರ್ಷವಾಗಿದೆ.

**ಶ್ರೀ ಅಮರನಾಥ ಪಾಟೀಲ್:**– ಮಾನ್ಯ ಸಭಾಪತಿಯವರೆ, ಒಟ್ಟಿನಲ್ಲಿ ಯಾವಾಗ ಕೊಡುತ್ತಾರೆ?

**ಶ್ರೀ ರಮೇಶ್ ಬಾಬು:**– ಮಾನ್ಯ ಸಭಾಪತಿಯವರೆ, ನನ್ನದು ಒಂದು ಪ್ರಶ್ನೆ ಮಾನ್ಯ ಸಚಿವರು ಹೇಳುವಂತಹ ಉತ್ತರ ಸರಿಯಿಲ್ಲ. ಬೇಕಾದರೆ ಕೊಡುತ್ತೇವೆಂದರೆ ಇದರ ಅರ್ಥವೇನು? ನೀವು ಬಳಸುವ ಪದ ಸರಿಯಿಲ್ಲ.

**ಶ್ರೀಮತಿ ತಾರಾಅನೂರಾಧ:**– ಮಾನ್ಯ ಸಭಾಪತಿಯವರೆ, ಬೇಕೆ ಬೇಕು.

**Sri RAMESH BABU:** You are bound to give.

**ಶ್ರೀ ಸಂತೋಷ್ ಎಸ್. ಲಾಡ್:**– ಈಗ ಕೇಳಿರಿ. You are taking it wrong.

**ಸಭಾಪತಿಯವರು:**– ಆಯಿತು ಅಯಿತು ಬಿಡಿ.

**ಶ್ರೀ ರಮೇಶ್ ಬಾಬು:**– ಮಾನ್ಯ ಸಭಾಪತಿಯವರೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ವಿಷಯಕ್ಕೆ ಸಂಬಂಧಪಟ್ಟಂತೆ ಇನ್ನೂ ಉತ್ತರ ಬಂದಿಲ್ಲ.

**ಶ್ರೀ ಸಂತೋಷ್ ಎಸ್. ಲಾಡ್:**– ನಾನು ಹೇಳುವುದನ್ನು ಸ್ವಲ್ಪ ಕೇಳಿಸಿಕೊಳ್ಳಿ.

**ಶ್ರೀ ರಮೇಶ್ ಬಾಬು:**– ಮಾನ್ಯ ಸಭಾಪತಿಯವರೆ, ದಯಮಾಡಿ ಒಂದು ನಿಮಿಷ.

**Sri SANTHOSH S. LAD:** I will repeat what I have told.

**ಶ್ರೀ ರಮೇಶ್ ಬಾಬು:**– ದಯವಿಟ್ಟು, ನಾನು ಮನ್ಯ ಸಭಾಪತಿಯವರಿಗೆ ಹೇಳುತ್ತಿದ್ದೇನೆ.

**ಸಭಾಪತಿಯವರು:**– ಮಾನ್ಯ ಸಚಿವರೇ ಹೇಳಲಿ ಬಿಡಿ.

**Sri SANTHOSH S. LAD:** I told, “If you want, Madam, ಈ ವರ್ಷದ ಬಗ್ಗೆ ನಾನು ಮಾಹಿತಿಯನ್ನು ಕೊಡುತ್ತೇನೆ.”

**ಸಭಾಪತಿಯವರು:**– ಮಾನ್ಯ ಸಚಿವರು ಈ ವರ್ಷದ ಬಗ್ಗೆ ಮಾತ್ರ ಮಾಹಿತಿ ಕೊಡುತ್ತೇವೆಂದು ಹೇಳುತ್ತಿದ್ದಾರೆ.

**Sri SANTHOSH S. LAD:** I am requesting her.

**ಶ್ರೀ ರಮೇಶ್ ಬಾಬು**:- ಮಾನ್ಯ ಸಭಾಪತಿಯವರೆ, ಹೋದ ವರ್ಷ ಮಕ್ಕಳ ಕಲ್ಯಾಣ ಇಲಾಖೆಯ ವಿಷಯಕ್ಕೆ ಸಂಬಂಧಪಟ್ಟಂತೆ ಮಾಹಿತಿ ಕೇಳಿದ್ದೆವು. ಆದರೆ ಇಷ್ಟು ಸಮಯವನ್ನು ತೆಗೆದುಕೊಂಡರೂ ನಮಗೆ ಉತ್ತರ ಬಂದಿಲ್ಲ. ನಾವು ಪ್ರಶ್ನೆಯನ್ನು ಏತಕ್ಕೆ ಕೇಳುತ್ತೇವೆ. ಮಾನ್ಯ ಸದಸ್ಯರು ಕೇಳುವಂತಹ ಪ್ರಶ್ನೆಯನ್ನು ಒಂದು ವಾರಕ್ಕಿಂತ ಮುಂಚೆಯೇ ಕೊಟ್ಟು, procedure follow ಮಾಡಿದ್ದರೂ, ಉತ್ತರ ಕೊಡುವುದಿಲ್ಲವೆಂದರೆ, ಇಲ್ಲಿ ನಾವು ಏತಕ್ಕೆ ಪ್ರಶ್ನೆಯನ್ನು ಕೇಳಬೇಕು.

**ಸಭಾಪತಿಯವರು**:- ಅದನ್ನು ಹೇಳುತ್ತಾರೆ.

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**:- ಮಾನ್ಯ ಸಭಾಪತಿಯವರೆ, ಇದು ಒಂದೇ ಅಲ್ಲ ಬೇರೆ ಇಲಾಖೆಯಿಂದ ಉತ್ತರ ಬಂದಿಲ್ಲ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**:- ಮಾನ್ಯ ಸಭಾಪತಿಯವರೆ, ಶ್ರೀಮತಿ ತಾರಾ ಮತ್ತು ಶ್ರೀಮತಿ ಉಮಾಶ್ರೀಯವರು ಇವರೆಲ್ಲಾ ಎದ್ದು ನಿಂತರೆ ಇದೆಲ್ಲವೂ ಬರುತ್ತದೆ. ಇವರು ಎದ್ದು ನಿಂತರೆ ಸಾಕು. ನಾಳೆ ಇವರೇ ಹೈಲೈಟ್ ಆಗುವರು. ದಯವಿಟ್ಟು ಕುಳಿತುಕೊಳ್ಳಿ ಅವರು ಏನು ಪ್ರಶ್ನೆ ಕೇಳಿದ್ದಾರೆ. ಅದಕ್ಕೆ ಅವರು ಉತ್ತರ ಕೊಡುತ್ತಾರೆ. ಇಲ್ಲಿ ನಿಮ್ಮದೇ ಎಲ್ಲಾ ಆಗಿದೆ.

**ಸಭಾಪತಿಯವರು**:- ಇದರ ಬಗ್ಗೆ ಚರ್ಚೆ ಬೇಡ. ಮುಂದಿನ ವಾರ ಪಟ್ಟಿ ಮಾಡಿಕೊಳ್ಳುತ್ತೇವೆ. ಮಾನ್ಯ ಕಾರ್ಮಿಕ ಸಚಿವರೇ ತಾವು ಅದರ ಉತ್ತರವನ್ನು ಕಳುಹಿಸಿಕೊಡಿ.

**ಶ್ರೀ ಸಂತೋಷ್ ಎಸ್. ಲಾಡ್**:-ಮಾನ್ಯ ಸಭಾಪತಿಯವರೆ, ಎಲ್ಲಾ ಇಲಾಖೆಗಳಿಂದ ಮಾಹಿತಿ ಪಡೆದುಕೊಳ್ಳಬೇಕು. That's why it is getting delayed. ಈ ವರ್ಷದ ಬಗ್ಗೆ ಮಾಹಿತಿಯಿದೆ. But he (Sri Ramesh Babu) took me wrong.

**ಸಭಾಪತಿಯವರು**:- ಅಷ್ಟೇ ವರ್ಷದ ಬಗ್ಗೆ ಮಾಹಿತಿ ಸಾಕು ಎಂದರೆ ಮುಂದಿನ ವಾರ.

**ಶ್ರೀ ಸಂತೋಷ್ ಎಸ್. ಲಾಡ್**:-ಮಾನ್ಯ ಸಭಾಪತಿಯವರೆ, ಈ ವರ್ಷದ ಮಾಹಿತಿ ಬೇಕು ಎಂದರೆ ಸಂಪೂರ್ಣವಾಗಿ ಕೊಡುತ್ತೇನೆ.

**ಸಭಾಪತಿಯವರು**:-ಮುಂದಿನ ಪ್ರಶ್ನೆ ಮಾನ್ಯ ರಾಮಚಂದ್ರ ಗೌಡರದು ಮತ್ತು ಅದೇ ಪ್ರಶ್ನೆಯನ್ನು ಮಾನ್ಯ ಕವಟಗಿಮಠ ಮಹಂತೇಶ್ ಮಲ್ಲಿಕಾರ್ಜುನವರು ಕೇಳಿದ್ದಾರೆ.

**ಶ್ರೀ ರಾಮಚಂದ್ರ ಗೌಡ**:- ಮಾನ್ಯ ಸಭಾಪತಿಯವರೆ, ನನ್ನ ಹೆಸರಿನಲ್ಲಿರುವಂತಹ ಮತ್ತು ಮಾನ್ಯ ಕವಟಗಿಮಠ ಮಹಂತೇಶ್ ಮಲ್ಲಿಕಾರ್ಜುನವರ ಹೆಸರಿನಲ್ಲಿರುವಂತಹ 3691 ಹಾಗೂ 3692 ನೇ ಪ್ರಶ್ನೆಯನ್ನು ಮಾನ್ಯ ಕಂದಾಯ ಸಚಿವರಿಗೆ ಕೇಳುತ್ತಿದ್ದೇನೆ.

(ಮುಂದು)...

(982)15.11.2017/12.40/ಟಿಸಿಹೆಚ್-ಆರ್‌ಎನ್

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ. 3691+3692**
**(ಉತ್ತರ ಲಗತ್ತಿಸಿದೆ.)**

**ಶ್ರೀ ರಾಮಚಂದ್ರ ಗೌಡ**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನಾನು ಕೇಳಿದಂತಹ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದಾರೆ. ನಮಗೆ ಈ ಪ್ರಶ್ನೆ ಕೇಳುವ ಪ್ರಸಂಗ ಏತಕ್ಕೆ ಬಂತು ಎಂದರೆ, ಸರ್ವೆಗಾಗಿ ರೈತರು ಕೊಟ್ಟ 136 ಕೋಟಿ ರೂಪಾಯಿಗಳು ಎಲ್ಲಿಗೆ ಹೋಯಿತು ಎಂದು ಇತ್ತೀಚೆಗೆ ಪತ್ರಿಕೆಗಳಲ್ಲಿ ಬಂದಿದೆ. ಅವರು ಕೇಳಿರುವಂಥ ಪ್ರಶ್ನೆಗೆ reference ಯಾವ ಜಿಲ್ಲೆಗಳಿಗೆ ಕೊಟ್ಟಿದ್ದಾರೆಂದರೆ, ಬೆಂಗಳೂರು ನಗರ, ವಿಜಯಪುರ, ಕೋಲಾರ, ಬಳ್ಳಾರಿ, ಗದಗ್, ರಾಯಚೂರು, ಕಲಬುರಗಿ, ಯಾದಗಿರಿ, ಚಿಕ್ಕಬಳ್ಳಾಪುರ, ಮಂಡ್ಯ, ತುಮಕೂರು ಹಾಗೂ ಚಿಕ್ಕಮಗಳೂರು ಜಿಲ್ಲೆ. ಈ ಜಿಲ್ಲೆಗಳಲ್ಲಿ ಸಂಗ್ರಹವಾದಂತಹ ಹಣ ಎಲ್ಲಿಗೆ ಹೋಯಿತು ಎಂದು ದೊಡ್ಡದಾಗಿ ಪತ್ರಿಕೆಗಳಲ್ಲಿ ಬಂದಿದೆ. ಹಾಗಾಗಿ, ನಾನು ಪ್ರಶ್ನೆ ಕೇಳಿದ್ದೇನೆ. ಮಾನ್ಯ ಸಚಿವರು ಇದಕ್ಕೆ ಸರಿಯಾಗಿ ಉತ್ತರವನ್ನು ಕೊಟ್ಟಿದ್ದಾರೆ. ನಾನು ಇದನ್ನು ಮುಂದುವರೆಸುವುದಿಲ್ಲ. ನನ್ನ ಪ್ರಶ್ನೆ ಈಗ ಬಾಗಲಕೋಟೆ , ಕೊಪ್ಪಳ, ಗದಗ್, ಬಳ್ಳಾರಿ, ಚಿಕ್ಕಮಗಳೂರು, ಕೋಲಾರ, ಬೆಂಗಳೂರು ಹಾಗೂ ಹಾಸನ ಜಿಲ್ಲೆಗಳಲ್ಲಿ ಶೇ.50ರಷ್ಟು ಹಣ Reconciliationಗೆ ಬಾಕಿ ಇದೆ. ಇದನ್ನು ಯಾವಾಗ ಪೂರ್ಣಗೊಳಿಸುತ್ತೀರಿ ಎನ್ನುವುದು ಮುಖ್ಯ. ನಿಮ್ಮ ಉತ್ತರದಲ್ಲಿ ಎಲ್ಲೆಲ್ಲಿ ರೈತರಿಂದ ಹಣ ವಸೂಲಾಗಿದ್ದು Reconciliation ಎಂದು ಉತ್ತರದ ಕಾಲಂನಲ್ಲಿ ಹೇಳಿದ್ದೀರಿ. ನಾನು ಇದರಲ್ಲಿ ಲೆಕ್ಕ ಹಾಕಿದಾಗ, ಇಷ್ಟು ಜಿಲ್ಲೆಗಳಲ್ಲಿ ಶೇ.50 ರಷ್ಟು ಹಣ Reconciliation ಗೆ ಬಾಕಿ ಇದೆ. ಇದನ್ನು ತೀವ್ರಗತಿಯಲ್ಲಿ ಆಗುವಂತೆ ಮಾಡಲು ಏನು ಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವುದು ಒಂದು ಪ್ರಮುಖವಾದಂಥ ಪ್ರಶ್ನೆ. ರೈತರು ಸರ್ವೆಗಾಗಿ ಅರ್ಜಿ ಸಲ್ಲಿಸಿ, ಹಣವನ್ನು ಕಟ್ಟಿದ್ದಾಗ್ಯೂ, ಇಂತಿಷ್ಟೇ ದಿನಗಳಲ್ಲಿ ಅವರು ಸರ್ವೆ ಕಾರ್ಯ ಮಾಡಲೇಬೇಕು ಎಂದು ನಿಯಮ ಇಲ್ಲ. ರೈತರು ಸರ್ವೆ ಹಾಗೂ ಪೋಡಿಗಾಗಿ ಹಣ ಕಟ್ಟಿದರೆ, ನೀವು 6 ತಿಂಗಳು, 8 ತಿಂಗಳು ಅಥವಾ ಒಂದು ವರ್ಷದೊಳಗೆ ಸರ್ವೇ ಹಾಗೂ ಪೋಡಿ ಕಾರ್ಯ ಮುಗಿಸಬೇಕೆಂಬ ಯಾವುದೇ ನಿಯಮ ಇಲ್ಲ. ಆ ನಿಯಮವನ್ನು ನೀವು ಜಾರಿಗೆ ತರುತ್ತೀರಾ? ನೀವು ಇಷ್ಟು ದಿವಸದಲ್ಲಿ ಸರ್ವೇ ಮಾಡಿಕೊಡಲಾಗುವುದೆಂದು ಒಂದು ನಿಯಮ ಜಾರಿಗೆ ತರಬೇಕು. ಇನ್ನೊಂದು ವಿಷಯವನ್ನು ತಮ್ಮ ಮಾಹಿತಿಗಾಗಿ ಹೇಳುತ್ತಿದ್ದೇನೆ. ಕೆಲವೊಂದು ಹೊರ ರಾಜ್ಯಗಳಲ್ಲಿ ಅಂದರೆ ಮಧ್ಯಪ್ರದೇಶ, ರಾಜಸ್ಥಾನ,

ಮಹಾರಾಷ್ಟ್ರ ಇನ್ನುಳಿದ ರಾಜ್ಯಗಳಲ್ಲಿ 'ಓಂ ಜಿಜಜ ಎಂದಿದೆ. ಹಣ ಸಂಗ್ರಹಣೆ ಮಾಡುವುದಿಲ್ಲ. ರೈತರಿಗೆ ಪುಕ್ಕಟೆಯಾಗಿ ಸರ್ವೆ ಕಾರ್ಯ ಮತ್ತು ಪೋಡಿ ಮಾಡಿಕೊಡುತ್ತಿದ್ದಾರೆ. ಆದರೆ ನಮ್ಮ ರಾಜ್ಯದಲ್ಲಿ ಬಹಳ ಪ್ರಮುಖವಾಗಿ ಶೇ.85ರಷ್ಟು ರೈತರು ಇದ್ದಾರೆಂದು ಹೇಳುತ್ತೇವೆ. ರೈತರು ಅವರ ಜಮೀನನ್ನು ತಮ್ಮ ಸುಪರ್ಧಿಗೆ ತೆಗೆದುಕೊಳ್ಳಬೇಕಾದರೆ, ಲೆಕ್ಕ ಮಾಡಿಕೊಳ್ಳಬೇಕಾದರೆ, 1500/- ರೂಪಾಯಿಗಳು, 2000/- ರೂಪಾಯಿಗಳ ಶುಲ್ಕ ಕಟ್ಟಬೇಕಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಅವರು ಸರ್ವೇ ಮಾಡಿಸಿಕೊಳ್ಳುವುದಕ್ಕೆ ಆಗುತ್ತದೆಯೇ? ರೈತರು ಸರ್ವೇ ಮಾಡಿಸುವುದಕ್ಕೋಸ್ಕರವಾಗಿ ಅವರು ದುಡ್ಡನ್ನು ಕಟ್ಟಬಾರದು. ಉಚಿತವಾಗಿ ಅವರಿಗೆ ಸರ್ವೇ ಹಾಗೂ ಪೋಡಿ ಕಾರ್ಯ ಮಾಡಿಕೊಡಲು ಒಂದು ಯೋಜನೆಯನ್ನು ತರಬೇಕು. ಇದು ಬೇರೆ ರಾಜ್ಯಗಳಲ್ಲಿ ಇದೆ. ಅದನ್ನು ನಮ್ಮ ರಾಜ್ಯದಲ್ಲೂ ಪರಿಗಣಿಸಿ, ನೀವು ಇಲ್ಲಿಯೂ ಮಾಡುತ್ತೀರಾ ಎನ್ನುವುದು ಬಹಳ ಪ್ರಮುಖವಾದ ಪ್ರಶ್ನೆ. ಈ ಮೂರೇ ಪ್ರಶ್ನೆಗಳು ಇವೆ.

**ಸಭಾಪತಿಯವರು**:- ಮಾನ್ಯ ಸಚಿವರು ಅದರ ಬಗ್ಗೆ ಹೇಳುತ್ತಾರೆ.

**ಶ್ರೀ ಕಾಗೋಡು ತಿಮ್ಮಪ್ಪ**:- ಮಾನ್ಯ ಸಭಾಪತಿಯವರೇ, ರೈತರು ತಮ್ಮ ಜಮೀನಿನ ಸರ್ವೆ ಹಾಗೂ ಪೋಡಿಗಾಗಿ ಕಟ್ಟಿದಂಥ ಹಣ ಎಲ್ಲಿಯೂ ಹೋಗುವುದಿಲ್ಲ. ಭೂಮಾಪನ ಮತ್ತು ಭೂದಾಖಲೆಗಳ ವ್ಯವಸ್ಥೆಗಳ ಆಯುಕ್ತರ ಖಾತೆಗೆ ಈ ಹಣ ಜಮಾ ಆಗುತ್ತದೆ. ಬೇರೆ ಯಾರ ಖಾತೆಗೂ ಹೋಗುವುದಿಲ್ಲ. ಆ ಉಳಿದ Reconciliation ಕೆಲಸ ಇನ್ನು ಒಂದು ತಿಂಗಳೊಳಗೆ ಮಾಡಿಕೊಡಲಾಗುವುದು, ಇದು ಒಂದನೆಯದು. ಇನ್ನು ಎರಡನೆಯದು, ತಾವು ಏನು ಹೇಳಿದ್ದೀರಿ ಎಂದರೆ, ಇಂತಿಷ್ಟೇ ಸಮಯದಲ್ಲಿ ಮಾಡಬೇಕು ಎನ್ನುವಂಥದ್ದು ಇಲ್ಲ. ಒಂದು ಏನಿದೆ ಎಂದರೆ, ಒಬ್ಬ ಸರ್ವೆಯರ್ ಒಂದು ತಿಂಗಳಿನಲ್ಲಿ ಕನಿಷ್ಠ ಇಷ್ಟೇ ಸರ್ವೆ ಮತ್ತು ಪೋಡಿ ಮಾಡಬೇಕೆಂದು ಇದೆ. ಅವನು 25 ರಿಂದ 30 ಸರ್ವೆ ಹಾಗೂ ಪೋಡಿ ಮಾಡಲು ಅವಕಾಶವನ್ನು ಮಾಡಿಕೊಟ್ಟಿದ್ದೇವೆ. ಅವರಿಗೆ ಸ್ವಲ್ಪ work load ಜಾಸ್ತಿ ಕೊಡುತ್ತೇವೆ. ಅವರು ಅದನ್ನು ಮಾಡುವಂಥ ಕೆಲಸವನ್ನು ಮಾಡುತ್ತಿದ್ದೇವೆ. ಉಚಿತವಾಗಿ ಸರ್ವೇ ಹಾಗೂ ಪೋಡಿ ಮಾಡುವುದು ಬೇರೆ ರಾಜ್ಯದಲ್ಲಿ ಇರಬಹುದು. ಅದಕ್ಕೆ ನಾವು ಏನು ಮಾಡಿದ್ದೇವೆಂದರೆ, "ಪೋಡಿ ಮುಕ್ತ ಗ್ರಾಮ" ಎನ್ನುವ ಒಂದು ಕಾರ್ಯಕ್ರಮವನ್ನು ಜಾರಿಗೆ ತಂದಿದ್ದೇವೆ. ಆ ಕಾರ್ಯಕ್ರಮದ ಮುಖಾಂತರ ಮುಫತ್ತಾಗಿ ಮಾಡುತ್ತಿದ್ದೇವೆ. ಈಗ ಪೋಡಿ ಮುಕ್ತ ಗ್ರಾಮ ಮಾಡುವಂಥ ಸಂದರ್ಭದಲ್ಲಿ ಏನಾಗುತ್ತಿತ್ತು ಎಂದರೆ, ಮೂಲ ಸರ್ವೇ ನಂಬರ್‌ಗಳು ಇದ್ದವು. ಅವುಗಳನ್ನು ಮಾತ್ರ ಮಾಡುತ್ತಿದ್ದರು. ನಾನು ಕಂದಾಯ ಸಚಿವನಾಗಿ ಬಂದ ಮೇಲೆ, ಆ ಒಂದು "ಪೋಡಿ ಮುಕ್ತ ಗ್ರಾಮ" ಎನ್ನುವ ಕಾರ್ಯಕ್ರಮ ಜಾರಿಗೆ ತಂದೆನು. ಆ ಜಮೀನುಗಳು ಬಗರ್‌ಹುಕುಂ ಮೇಲೆ ಮಂಜೂರು ಆಗಿರಬಹುದು, ಮತ್ತಿತರೆ ಜಾಗ ಆಗಿರಬಹುದು ಮತ್ತು ಸರ್ಕಾರಿ ಜಾಗ ಇರಬಹುದು, ಒಂದಿಂಚು ಜಾಗವು ಉಳಿಯದ ರೀತಿಯಲ್ಲಿ ಇವತ್ತಿನ ದಿವಸ ಮಾಡಬೇಕು. ಏಕೆಂದರೆ,

ನಮ್ಮಲ್ಲಿ ಈ ರೀ-ಸರ್ವೇ ಮಾಡುವ ಕಾರ್ಯ ಆಗಲೇ ಇಲ್ಲ. ಅದು ಎಷ್ಟೋ ದಿವಸ ಆಗಿದೆ. ಈ ರೀ-ಸರ್ವೇ ಮಾಡಬೇಕಾದಂಥ ಅಗತ್ಯವೂ ಈಗ ಇದೆ. ಈ ಪೋಡಿ ಮುಕ್ತ ಗ್ರಾಮದಲ್ಲಿ ಇವತ್ತಿನ ದಿವಸ ಒಂದು ಗ್ರಾಮ ತೆಗೆದುಕೊಂಡರೆ, ಅದು ಪೂರ್ಣಪ್ರಮಾಣದಲ್ಲಿ ಆಗಬೇಕು. ಈಗ ಮಾನ್ಯ ಸದಸ್ಯರು ಏನು ಹೇಳಿದ್ದಾರೆ, ಬೇರೆ ರಾಜ್ಯದಲ್ಲಿ ಮುಫತ್ತಾಗಿ ಮಾಡುವಂಥ ವ್ಯವಸ್ಥೆ ಇದೆಯಲ್ಲಾ, ಅದಕ್ಕೆ ಪೂರಕವಾಗಿ ಈಗ ನಡೆಯುತ್ತಿದೆ. ಅದು ಇನ್ನಷ್ಟು ವಿಸ್ತಾರವಾದರೆ, ಮಾನ್ಯ ಸದಸ್ಯರು ತಾವು ಹೇಳಿದ ಅಭಿಪ್ರಾಯಕ್ಕೆ ಸರ್ಕಾರ ಮಾನ್ಯತೆಯನ್ನು ಕೊಟ್ಟಂತೆ ಆಗುತ್ತದೆ.

**ಸಭಾಪತಿಯವರು**:- ಧನ್ಯವಾದಗಳು. ಪ್ರಶ್ನೋತ್ತರ ಅವಧಿ ಮುಗಿದಿದೆ. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಎಂ.ಆರ್.ಸೀತಾರಾಂ (ಸಭಾ ನಾಯಕರು)**:- ಮಾನ್ಯ ಸಭಾಪತಿಯವರೇ, ದಿನಾಂಕ: 15ನೇ ನವೆಂಬರ್ 2017 ಸಮೂಹ-3ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 156 ಪ್ರಶ್ನೆಗಳ ಪೈಕಿ, 107 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಲಿಖಿತ ಉತ್ತರಗಳನ್ನು ಲಗತ್ತಿಸಲಾಗಿದೆ)**

**2. ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು**

ಅ) **ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮದ ಜಿಲ್ಲಾ ಹಾಗೂ ತಾಲ್ಲೂಕು ನೋಡಲ್ ಅಧಿಕಾರಿಗಳ ವೇತನ ಕಳೆದ 17 ತಿಂಗಳಿಂದ ಪಾವತಿಯಾಗದಿರುವ ಬಗ್ಗೆ.**

---

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮದಡಿ ಜಿಲ್ಲಾ ಹಾಗೂ ತಾಲ್ಲೂಕು ನೋಡಲ್ ಅಧಿಕಾರಿಗಳಾಗಿ ಸುಮಾರು 7 ವರ್ಷಗಳಿಂದ ಕೆಲಸ ಮಾಡುತ್ತಿರುವವರಿಗೆ ಕಳೆದ 17 ತಿಂಗಳುಗಳಿಂದ ವೇತನ ಪಾವತಿ ಮಾಡಿರುವುದಿಲ್ಲ.

2010-11ರಲ್ಲಿ ನೇಮಕಾತಿಯನ್ನು ಸ್ಪರ್ಧಾತ್ಮಕ ಪರೀಕ್ಷೆಗಳ ಮುಖಾಂತರ ಮಾಡಿದ್ದು, ಇವರು ಸೇವಾ ಭದ್ರತೆ ಹೊಂದಲು ಕೂಡಾ ಅರ್ಹತೆ ಹೊಂದಿರುತ್ತಾರೆ. ರಾಜೀವ್‌ಗಾಂಧಿ ವಸತಿ ನಿಗಮ ನಿಯಮಿತವು ಸ್ವಾಯತ್ತ ಸಂಸ್ಥೆಯಾಗಿದ್ದು, ಈಗಾಗಲೇ ಹಲವಾರು ನಿಗಮ ಮಂಡಳಿಗಳು ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡವರನ್ನು ವಿಲೀನಗೊಳಿಸಿಕೊಂಡಿವೆ. ಆದ್ದರಿಂದ ಸದರಿಯವರಿಗೆ

ಕೂಡಲೇ 17 ತಿಂಗಳ ಬಾಕಿ ವೇತನ ಪಾವತಿ ಮಾಡುವುದರೊಂದಿಗೆ ಇವರ ಸೇವಾ ಭದ್ರತೆ ಕುರಿತು ಅಗತ್ಯ ಕ್ರಮ ಕೈಗೊಳ್ಳಲು ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಸಭಾಪತಿಯವರು**:- ಧನ್ಯವಾದಗಳು, ಉತ್ತರ ಈಗಲೇ ಇದ್ದರೆ ಹೇಳಬಹುದು. ಇಲ್ಲದಿದ್ದರೆ ಸಮಯಾವಕಾಶ ತೆಗೆದುಕೊಳ್ಳಬಹುದು.

**ಶ್ರೀ ಎಂ.ಕೃಷ್ಣಪ್ಪ (ವಸತಿ ಸಚಿವರು)**:- ಮಾನ್ಯ ಸಭಾಪತಿಯವರೇ, ಈ ವಿಷಯವು ಹೈಕೋರ್ಟ್‌ನಲ್ಲಿದೆ. ತಾವು ಅಪ್ಪಣೆ ಕೊಟ್ಟರೆ, ಮುಂದಿನ ಬುಧವಾರ ಸದನದಲ್ಲಿ ಉತ್ತರ ಕೊಡುತ್ತೇನೆ.

**ಸಭಾಪತಿಯವರು**:- ಮಾನ್ಯ ಸಚಿವರಿಗೆ ಧನ್ಯವಾದಗಳು. ಮಾನ್ಯ ಸದಸ್ಯರೇ, ಮಾನ್ಯ ಸಚಿವರು ಬುಧವಾರ ಉತ್ತರ ಕೊಡುತ್ತೇನೆಂದು ಹೇಳುತ್ತಿದ್ದಾರೆ. ಮುಂದಿನ ವಿಷಯ ಶ್ರೀಮತಿ ಮೋಟಮ್ಮನವರದ್ದು. ಅವರು ಗೈರು ಹಾಜರಾಗಿರುತ್ತಾರೆ. ಮುಂದಿನ ವಿಷಯ ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರದ್ದು.

**ಆ) ವಿಷಯ**:- **ರಾಜ್ಯದ ಸುಮಾರು 6022 ಗ್ರಾಮ ಪಂಚಾಯತ್‌ಗಳಲ್ಲಿ ಡಾಟಾ ಎಂಟ್ರಿ ಆಪರೇಟರ್ ನೇಮಕಾತಿ ಕುರಿತು**.

---

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**:- ಗೌರವಾನ್ವಿತ ಸಭಾಪತಿಯವರೇ, ರಾಜ್ಯದ ಸುಮಾರು 6022 ಗ್ರಾಮ ಪಂಚಾಯತ್‌ಗಳಲ್ಲಿ ಸುಮಾರು 10 ವರ್ಷಗಳಿಂದ ಡಾಟಾ ಎಂಟ್ರಿ ಆಪರೇಟರ್‌ಗಳಾಗಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಹೊಸ ಡಾಟಾ ಎಂಟ್ರಿ ಆಪರೇಟರ್‌ಗಳ ಹುದ್ದೆ ಸೃಷ್ಟಿಸಿ, ನೇರ ನೇಮಕಾತಿ ಮಾಡಿಕೊಳ್ಳಲು ಆದೇಶ ಮಾಡಿದ್ದು, ಸದರಿ ಆದೇಶದಿಂದ ಪ್ರಸ್ತುತ ಗ್ರಾಮ ಪಂಚಾಯತ್‌ನಲ್ಲಿ ಡಾಟಾ ಎಂಟ್ರಿ ಆಪರೇಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿರುವ ಸಾವಿರಾರು ಸಿಬ್ಬಂದಿಗಳ ಕೆಲಸಕ್ಕೆ ಕುತ್ತು ಬಂದಿದೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಆದೇಶದಲ್ಲಿ, ದ್ವಿತೀಯ ಪಿ.ಯು.ಸಿ ಅಂಕಗಳ ಮೆರಿಟ್ ಆಧಾರದಲ್ಲಿ ನೇಮಕಾತಿ ನಡೆಯಬೇಕು ಎಂದಿದೆ. ಈ ಮೊದಲು ಕರ್ತವ್ಯ ನಿರ್ವಹಿಸುತ್ತಿರುವ ಡಾಟಾ ಎಂಟ್ರಿ ಆಪರೇಟರ್‌ಗಳು ಸುಮಾರು 10 ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಾ ಬಂದಿದ್ದು, ಕರ್ನಾಟಕ ರಾಜ್ಯದ ಗ್ರಾಮ ಪಂಚಾಯಿತಿಗಳು ಹಲವಾರು ಪ್ರಶಸ್ತಿಗಳನ್ನು ಇ-ಆಡಳಿತ ವಿಭಾಗದಲ್ಲಿ ಪಡೆದುಕೊಳ್ಳುವುದರಲ್ಲಿ ಡಾಟಾ ಎಂಟ್ರಿ ಆಪರೇಟರ್‌ಗಳ ಕೆಲಸ ಗಮನಾರ್ಹವಾದುದು. ಗ್ರಾಮ ಪಂಚಾಯಿತಿಗಳಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ, ಪಂಚತಂತ್ರ, ಇ-ಸ್ವತ್ತು, ನಮೂನೆ-9 ಮತ್ತು 11ನ್ನು ಒದಗಿಸುವುದು, ಗ್ರಾಮ ಪಂಚಾಯಿತಿಗಳ ವಾರ್ಷಿಕ ಲೆಕ್ಕಪತ್ರಗಳನ್ನು ತಯಾರಿಸುವುದು, ಹೀಗೆ ಹತ್ತು ಹಲವಾರು ಕೆಲಸಗಳು

ಆನ್‌ಲೈನ್ ಮೂಲಕವೇ ಆಗಬೇಕಿದ್ದು, ಡಾಟಾ ಎಂಟ್ರಿ ಆಪರೇಟರ್‌ಗಳ ಕಾರ್ಯ ಮಹತ್ತರವಾದುದು. ಇತ್ತೀಚೆಗೆ ಬಾಪೂಜಿ ಸೇವಾ ಕೇಂದ್ರವೂ ಗ್ರಾಮ ಪಂಚಾಯಿತಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಸುಮಾರು 50 ಕ್ಕೂ ಹೆಚ್ಚು ಸೇವೆಗಳನ್ನು ಕೊಡುತ್ತಿದೆ. ಈ ಸೇವೆಯನ್ನು ನೀಡುವಲ್ಲಿ ಗ್ರಾಮ ಪಂಚಾಯಿತಿಗಳ ಡಾಟಾ ಎಂಟ್ರಿ ಆಪರೇಟರ್‌ಗಳು ಹೆಚ್ಚಿನ ಮುತುವರ್ಜಿಯನ್ನು ವಹಿಸುತ್ತಿದ್ದಾರೆ.

ಈಗ ಬಂದಿರುವ ಈ ಆದೇಶದಿಂದ ಸುಮಾರು ಐದರಿಂದ ಹತ್ತು ವರ್ಷಗಳಿಂದ ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಡಾಟಾ ಎಂಟ್ರಿ ಆಪರೇಟರ್‌ಗಳು ಕೆಲಸವಿಲ್ಲದೇ ಇಕ್ಕಟ್ಟಿನಲ್ಲಿ ಸಿಲುಕುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಆದುದರಿಂದ, ಕರ್ತವ್ಯ ನಿಷ್ಠೆ ಮತ್ತು ಅನುಭವದ ಆಧಾರದ ಮೇಲೆ,ಈ ಹಿಂದೆ ಕರ್ತವ್ಯ ನಿರ್ವಹಿಸುತ್ತಿರುವ ಗ್ರಾಮ ಪಂಚಾಯಿತಿಗಳ ಡಾಟಾ ಎಂಟ್ರಿ ಆಪರೇಟರ್‌ಗಳನ್ನು ಅದೇ ಕರ್ತವ್ಯದಲ್ಲೇ ಮುಂದುವರೆಸಿ, ಅನುಮೋದನೆ ನೀಡಬೇಕಾಗಿ ಈ ಮೂಲಕ ಸರ್ಕಾರನ್ನು ನಾನು ಆಗ್ರಹ ಮಾಡುತ್ತಿದ್ದೇನೆ.

**ಶ್ರೀ ಹೆಚ್.ಕೆ.ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)**:- ಮಾನ್ಯ ಸಭಾಪತಿಯವರೇ, ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ಅನುಭವಸ್ಥರು. ನೀವು ಹೇಳಿದಂತೆ ಡಾಟಾ ಎಂಟ್ರಿ ಆಪರೇಟರ್‌ಗಳನ್ನು ಅದೇ ಕರ್ತವ್ಯದಲ್ಲಿ ಮುಂದುವರೆಸುವುದನ್ನು ಮಾಡಿದರೆ, ಅವರಿಗೆ ನ್ಯಾಯವೂ ಸಿಗುವುದಿಲ್ಲ. ಬೇಗ ಅವರನ್ನು ನಾವು ನಮ್ಮ ಸರ್ಕಾರದ ವ್ಯಾಪ್ತಿಯಲ್ಲಿ ತೆಗೆದುಕೊಳ್ಳುವುದಕ್ಕೆ ಆಗುವುದೇ ಇಲ್ಲ. ಆದ್ದರಿಂದ ಈಗ ತಮ್ಮ ಆತಂಕ ಏನಿದೆ. . .

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ಅವರಿಗೆ ರಕ್ಷಣೆ ಸಿಗುವುದಿಲ್ಲ.

**ಶ್ರೀ ಹೆಚ್.ಕೆ.ಪಾಟೀಲ್**:- ಮಾನ್ಯ ಸಭಾಪತಿಯವರೇ, ಆಮೇಲೆ ಅವರು ಹೊರಗೆ ಹೋಗುತ್ತಾರೆ. ಒಂದು ವೇಳೆ ಮಾನ್ಯ ಸದಸ್ಯರು ಹೇಳಿದಂತೆ ಮಾಡಿದರೆ anybody can go to Court of law. ಅವರು ನಮ್ಮ ಇಲಾಖೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಇಲ್ಲ, ಆದರೆ ಅವರು outsource ನಲ್ಲಿ ಇದ್ದಾರೆ. ಅದರಲ್ಲಿ ಬಹಳಷ್ಟು ಜನ 5ವರ್ಷ, 6 ವರ್ಷ, 7ವರ್ಷ ಮತ್ತು 8ವರ್ಷಗಳ ಕಾಲ ಕೆಲಸ ಮಾಡಿದವರು ಇದ್ದಾರೆ. ಆದರೆ ಅವರನ್ನು ಯಾವ parameter ನಿಂದಲೂ ಇಲಾಖೆಗೆ ತೆಗೆದುಕೊಳ್ಳಲು ಆಗುವುದಿಲ್ಲ. ಅದಕ್ಕೆ ನಾವು ಏನು ಮಾಡಿದ್ದೇವೆಂದರೆ, ಅವರು ಕೆಲಸ ಮಾಡುತ್ತಿದ್ದಾರೆಂದು ನಮಗೆ ಗೊತ್ತಿದೆ.

**(ಮುಂದು...)**

(983)15.11.2017/12.50/ಎಂ.ಎಂ/ಆರ್.ಎನ್

**ಶ್ರೀ ಹೆಚ್.ಕೆ. ಪಾಟೀಲ್ (ಮುಂದು..)**

ಆ ಕಾರಣದಿಂದ ಅವರಿಗೆ ಅನುಕೂಲ ಮಾಡಬೇಕೆಂದು ಈಗ ಹೊರಡಿಸಿರುವ ನೇಮಕಾತಿ ನಿಯಮಗಳಲ್ಲಿ ಒಂದನ್ನು ನಾನು ಒಪ್ಪುವುದಿಲ್ಲ. ಅದರಲ್ಲಿ ತಪ್ಪಾಗಿ ಮೂರು ಗುಣಗಳು ಎಂದು ಬಂದಿದೆ. It is not three marks. My intention is three percent. ಅದಲ್ಲದೇ ಇನ್ನು ಹೆಚ್ಚುವರಿಯಾಗಿ ಕೊಡಬೇಕು. ಈಗಿರುವ ಪ್ಯಾರಾಮೀಟರ್ ಅನ್ನು ಬದಲಾಯಿಸಿ, ಸಡಿಲಿಸಿ, 5, 6, 7 ವರ್ಷಗಳಿಂದ ಕೆಲಸ ಮಾಡುತ್ತಿರುವವರಿಗೆ ಅನುಕೂಲವಾಗುವ ರೀತಿಯಲ್ಲಿ ನೇರ ನೇಮಕಾತಿಯನ್ನು ಸರ್ಕಾರ ಮಾಡುತ್ತದೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಪ್ರತಿವರ್ಷ ಶೇ.3 ರಷ್ಟು ಇಲ್ಲದಿದ್ದರೆ ಹೊಸ evaluation system ನಲ್ಲಿ 70-80 ಗುಣಗಳನ್ನು ತೆಗೆದುಕೊಳ್ಳುತ್ತಾರೆ. 7-8 ವರ್ಷದ ಹಿಂದಿನ evaluation system ನಲ್ಲಿ ಅವರು ಎಷ್ಟು ಜಾಣರಾಗಿದ್ದರೂ 60-65ಕ್ಕೆ ನಿಂತು ಬಿಡುತ್ತಾರೆ ಎನ್ನುವ ಬಗ್ಗೆ ಸಂಪೂರ್ಣ ಅರಿವು ನನಗಿದೆ. ಆದ್ದರಿಂದ ಯಾರು ಕೆಲಸ ಮಾಡಿದ್ದಾರೆ ಅವರ ಹಿತರಕ್ಷಣೆಯನ್ನು ಸರ್ಕಾರ ಮಾಡುತ್ತದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ. . .

**ಸಭಾಪತಿಯವರು:-** ಧನ್ಯವಾದಗಳು. ಈಗ ಚರ್ಚೆ ಬೇಡ ದಯವಿಟ್ಟು ಕುಳಿತುಕೊಳ್ಳಿ. ಶೂನ್ಯ ವೇಳೆಯಲ್ಲಿ ಚರ್ಚೆ ಮಾಡಲು ಅವಕಾಶ ಕೊಡುವುದಿಲ್ಲ.

**ಶ್ರೀ ಐವನ್ ಡಿ'ಸೋಜಾ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಶೂನ್ಯವೇಳೆಯಲ್ಲಿ ಮಾನ್ಯ ಸಚಿವರು ಉತ್ತರವನ್ನು ಹೇಳಿದ್ದಾರೆ ಅಷ್ಟು ಸಾಕಲ್ಲವೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಾನು ಸರ್ಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಸರ್ಕಾರದ ಕಾಳಜಿ ನನಗೆ ಅರ್ಥವಾಗಿದೆ. ಶೂನ್ಯ ವೇಳೆಯಲ್ಲಿ ನಮ್ಮ ಗೊಂದಲ ಪರಿಹಾರ ಮಾಡಿದ್ದಾರೆ. ಆದರೆ ನನ್ನ ಒಂದು ವಿನಂತಿಯೇನೆಂದರೆ ಶೇ.3 ಕ್ಕಿಂತ ಸ್ವಲ್ಪ ಜಾಸ್ತಿ ಮಾಡುವ ಮೂಲಕ ಕಟ್ಟ ಕಡೆಯ ಡಾಟಾ ಆಪರೇಟರ್ ಕೂಡ ಅಲ್ಲಿಯೇ ಕಾರ್ಯನಿರ್ವಹಿಸಲು ಅನುಕೂಲ ಮಾಡಿಕೊಡಬೇಕೆಂಬುದು ನನ್ನ ವಿನಂತಿಯಾಗಿದೆ.

**ಶ್ರೀ ಹೆಚ್.ಕೆ. ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳಾದ ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ, ಶ್ರೀ ಕೆ.ಸಿ. ಕೊಂಡಯ್ಯ ಮತ್ತು ಶ್ರೀ ಬಸವರಾಜ ಪಾಟೀಲ ಇಟಗಿ ಯವರು ನನಗೆ ನಿನ್ನೆ ನಮ್ಮ ಆದೇಶವನ್ನು ತೋರಿಸಿ ಶೇ.3 ಸಾಲುವುದಿಲ್ಲ ಕೆಲವು ಸುಮಾರು ಇನ್ನೂ ನೂರು-ಎರಡು

ನೂರು ಜನರು ಉಳಿಯುತ್ತಾರೆ. ಆ ಕಾರಣಕ್ಕಾಗಿ ಸ್ಥಳೀಯವಾಗಿ ಶೇ.5 ಏಕೆ ಕೊಡಬಾರದೆಂದು ಅವರು ಒತ್ತಾಯ ಮಾಡುತ್ತಿದ್ದಾರೆ. ಅದನ್ನು ಅಧಿಕಾರಿಗಳ ಜೊತೆಗೆ ಚರ್ಚೆ ಮಾಡುತ್ತಿದ್ದೇನೆ. ಒಟ್ಟಾರೆ ಎಷ್ಟು ಜನರಿಗೆ ಅನುಕೂಲ ಮಾಡಲು ಸಾಧ್ಯವೋ ಅಷ್ಟು ಅನುಕೂಲ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

**ಸಭಾಪತಿಯವರು:**- ಮಾನ್ಯ ಸಚಿವರಿಗೆ ಧನ್ಯವಾದಗಳು.

**ಇ) ವಿಷಯ:- ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಇ-ಆಫೀಸ್ ಆರಂಭಿಸಿರುವುದರಿಂದ ತೊಂದರೆಯಾಗಿರುವ ಬಗ್ಗೆ.**

- - - - -

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್):**- ಮಾನ್ಯ ಸಭಾಪತಿಯವರೇ, ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯದಲ್ಲಿ 1ನೇ ಜನವರಿ 2016 ರಿಂದ ಜಿಲ್ಲಾಧಿಕಾರಿಗಳ ಕಛೇರಿಗಳಲ್ಲಿ "ಇ" ಆಫೀಸ್‌ನ್ನು ಆರಂಭಿಸಿರುತ್ತಾರೆ. ರಾಜ್ಯದಲ್ಲಿ ಒಟ್ಟು 6 ಜಿಲ್ಲೆಗಳನ್ನು ಮಾದರಿಗಾಗಿ ಆಯ್ಕೆ ಮಾಡಿಕೊಂಡಿದ್ದು, ಅದರಲ್ಲಿ ವಿಜಯಪುರ ಜಿಲ್ಲೆಯನ್ನು ಆಯ್ಕೆ ಮಾಡಿಕೊಂಡಿರುತ್ತಾರೆ. ಸರ್ಕಾರಿ ಕಚೇರಿಗಳಿಗೆ ಸಾರ್ವಜನಿಕರಿಂದ ಹಾಗೂ ಬೇರೆ ಬೇರೆ ಇಲಾಖೆಗಳಿಂದ ಹಾಗೂ ಸರ್ಕಾರದಿಂದ ಇತರ ಕಾಗದ ಪತ್ರಗಳು ಹಾಗೂ ಅನುದಾನದ ವಿಷಯಕ್ಕೆ ಸಂಬಂಧಿಸಿದಂತೆ ಜನಪ್ರತಿನಿಧಿಗಳ ಮಹತ್ವದ ಪತ್ರಗಳು ನಿರ್ಣಯಿಸುವಲ್ಲಿ ತೀವ್ರವಾಗಿ ವಿಳಂಬವಾಗುತ್ತಿದೆ. ಕೆಲವೊಂದು ಅತೀ ಜರೂರು ಪತ್ರಗಳ ಕುರಿತು ತುರ್ತು ಕ್ರಮ ಕೈಗೊಳ್ಳುವ ಸಾರ್ವಜನಿಕ ಹಾಗೂ ಸರ್ಕಾರದಿಂದ ಬಂದಂತಹ ಪತ್ರಗಳು ಇರುತ್ತವೆ. ಇವುಗಳ ಕುರಿತು ತಕ್ಷಣವೇ ಆದೇಶ ಹೊರಡಿಸಲು ವಿಳಂಬವಾಗುತ್ತಿದೆ. ಇದರಿಂದ ಸಾರ್ವಜನಿಕರಿಗೆ ಹಾಗೂ ಸರ್ಕಾರಕ್ಕೆ ವರದಿ ನೀಡಲು ಕಷ್ಟವಾಗುತ್ತಿದೆ. ಈ ಪದ್ಧತಿಯ ಮೂಲಕ ಜಿಲ್ಲಾಧಿಕಾರಿಗಳ ಕಚೇರಿ ಕಾರ್ಯನಿರ್ವಹಿಸುತ್ತಿರುವುದರಿಂದ, ಜನಪ್ರತಿನಿಧಿಗಳು ನೀಡುವ ಅನುದಾನ ಮಂಜೂರಾತಿಯ ಪಟ್ಟಿ ಹಾಗೂ ಇನ್ನಿತರ ಮಹತ್ವದ ವಿಷಯಗಳ ಕುರಿತು ಪತ್ರ ವ್ಯವಹಾರವನ್ನು ಮಾಡಿದಾಗ ಜಿಲ್ಲಾಧಿಕಾರಿಗಳ ಕಾರ್ಯಾಲಯದಿಂದ ಬೇಗನೆ ಸ್ಪಂದನೆ ಆಗುತ್ತಿಲ್ಲ. ಇದರಿಂದ ಸಾರ್ವಜನಿಕರಿಗೆ ವಿಷಯ ತಿಳಿಸುವಲ್ಲಿ ನಮ್ಮಿಂದಲೇ ವಿಳಂಬವಾಗುತ್ತಿದೆ ಎಂಬ ತಪ್ಪು ಅಭಿಪ್ರಾಯವುಂಟಾಗುತ್ತಿದೆ.

ಇದರಿಂದ ಜನಪ್ರತಿನಿಧಿಗಳ ಪ್ರಾಮಾಣಿಕತೆ ಹಾಗೂ ಅವರ ಕೆಲಸ-ಕಾರ್ಯಗಳ ಮೇಲೆ ವ್ಯತಿರಿಕ್ತ ಪರಿಣಾಮವುಂಟಾಗಿ ಜನರಿಗೆ ಸುಳ್ಳು ಹೇಳುತ್ತಿದ್ದಾರೆಂಬ ತಪ್ಪು ಭಾವನೆ ಹುಟ್ಟಿ ಆರಿಸಿ ಬಂದ ಕ್ಷೇತ್ರದಲ್ಲಿ ಅಪಪ್ರಚಾರವುಂಟಾಗುತ್ತದೆ. ಕಾರ್ಯಾಲಯಕ್ಕೆ ಬಂದಂತಹ ಪ್ರತಿಯೊಂದು ಕಾಗದ ಪತ್ರಗಳು ಈ ರೀತಿಯಾಗಿ ಚಲನ-ವಲನವಾಗುತ್ತದೆ. ಉದಾಹರಣೆಗೆ ಅನುಕ್ರಮವಾಗಿ ವಿಷಯ ನಿರ್ವಾಹಕರು, ಶಿರಸ್ತೇದಾರ, ಗ್ರೇಡ್-2 ತಹಶೀಲ್ದಾರ, ಅಪರ ಜಿಲ್ಲಾಧಿಕಾರಿಗಳು ಹಾಗೂ ಕೊನೆಯದಾಗಿ ಜಿಲ್ಲಾಧಿಕಾರಿಗಳಿಗೆ "ಇ" ಆಫೀಸ್ ಮುಖಾಂತರ ವಿಷಯವನ್ನು ತಲುಪಿಸಲಾಗುತ್ತಿದೆ. ಹಾಗೂ ನಂತರ

ಇದೆ ಮಾರ್ಗವಾಗಿ ಮರಳಿಸಿ ಕಾರ್ಯನಿರ್ವಹಿಸಲಾಗುತ್ತಿದೆ. ಈ ಪದ್ಧತಿಯನ್ನು ಅನುಸರಿಸಿ ಕೆಲಸ ಮಾಡುವ ನೌಕರರು ಹಾಗೂ ಅಧಿಕಾರಿಗಳು ವಿಳಂಬ ಮಾಡಿದರೆ ತೊಂದರೆಯಾಗುತ್ತಿದೆ. ಹಾಗೂ ಸಿಬ್ಬಂದಿಗಳು ಹಾಗೂ ಅಧಿಕಾರಿಗಳು ಒಬ್ಬರ ಮೇಲೆ ಒಬ್ಬರು ವೃಥಾ ಮಿಥ್ಯಾರೋಪ ಮಾಡಿರುವುದರಿಂದ ಬಿಡುಗಡೆಯಾಗುವ ಅನುದಾನದ ಆದೇಶದಲ್ಲಿಯೂ ಸಹ ಎರಡರಿಂದ ಮೂರು ತಿಂಗಳುಗಟ್ಟಲೆ ವಿಳಂಬವಾಗುತ್ತಿದ್ದು, ಈ ಪದ್ಧತಿಯಿಂದ ನೌಕರರು ಹಾಗೂ ಅಧಿಕಾರಿಗಳು ರಜೆಯ ಮೇಲೆ ತೆರಳಿದರೆ ಇನ್ನಷ್ಟು ವಿಳಂಬವಾಗುತ್ತದೆ. ಏಕೆಂದರೆ ಸಂಬಂಧಪಟ್ಟ ನೌಕರರು ಹಾಗೂ ಅಧಿಕಾರಿಗಳು ರಜೆಯ ಮೇಲಿಂದ ಮರಳಿ ಬಂದ ನಂತರವೇ ಕಡತವನ್ನು ಮಂಡಿಸಬೇಕಾಗುತ್ತದೆ ಮತ್ತು ರಜೆಯ ಮೇಲೆ ತೆರಳಿದಾಗ ಯಾವುದೇ ರೀತಿ ಕಡತವಾಗಲೀ ಕಾಗದ ಪತ್ರವಾಗಲೀ ಸಂಬಂಧಿಸಿದ ನೌಕರ ಅಥವಾ ಅಧಿಕಾರಿ ಹಾಜರಾಗುವವರೆಗೆ ಮುಂದುವರೆಸಿಕೊಂಡು ಹೋಗುವ ಯಾವುದೇ ಅವಕಾಶವಿರುವುದಿಲ್ಲ. ಸಾರ್ವಜನಿಕರ ಆಡಳಿತದ ಹಿತದೃಷ್ಟಿಯಿಂದ ಈ ಪದ್ಧತಿಯು ತುಂಬಾ ತೊಂದರೆಯಾಗುತ್ತಿದ್ದು, ಇದನ್ನು ಮುಂದುವರೆಸಿದರೆ ಅಭಿವೃದ್ಧಿ ಕಾರ್ಯಗಳು ಕೈಕೊಳ್ಳುವಲ್ಲಿ ವಿನಾಕಾರಣ ಅಡೆತಡೆ ಉಂಟಾಗುತ್ತದೆ. "ಇ" ಆಫೀಸ್ ನಿಂದ ಅನುಕೂಲಕ್ಕಿಂತ ಅನಾನುಕೂಲವೇ ಹೆಚ್ಚು ಕಂಡು ಬರುತ್ತಿದೆ. ಆದಕಾರಣ ತಾವುಗಳು ವಿಜಯಪುರ ಜಿಲ್ಲೆಯನ್ನು ಈ ಪದ್ಧತಿಯಿಂದ ಕೂಡಲೇ ಮುಕ್ತಗೊಳಿಸಬೇಕೆಂದು ಶೂನ್ಯ ವೇಳೆಯಲ್ಲಿ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆ.

**ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು)**:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವ ವಿಷಯವು ಗಂಭೀರವಾಗಿದೆ. ಇದನ್ನು ಸೂಕ್ತವಾದ ರೀತಿಯಲ್ಲಿ ಆಡಳಿತದಲ್ಲಿ ಬದಲಾವಣೆ ತರುವುದಕ್ಕೆ ಮತ್ತು ಅವರ ಅನಿಸಿಕೆಗಳನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನ ಮಾಡುತ್ತೇನೆ.

**ಈ) ವಿಷಯ:- ಸ್ನಾತಕೋತ್ತರ ಕೇಂದ್ರ ಧಾರವಾಡದಲ್ಲಿ ಬೋಧಕ ಮತ್ತು ಬೋಧಕೇತರರನ್ನು ಖಾಯಂ ಆಗಿ ನೇಮಿಸಿಕೊಂಡು ಪ್ರೊಬೇಷನರಿ ಅವಧಿ ಡಿಕ್ಲೇರ್ ಮಾಡದಿರುವ ಬಗ್ಗೆ.**

- - - - -

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ರಾಜ್ಯದ ಕಿತ್ತೂರು ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ ಪ್ರಸ್ತುತ ವಿದ್ಯಾರ್ಥಿ ಮತ್ತು ಕಾಲೇಜುಗಳ ಸಂಖ್ಯೆ ಹಾಗೂ ಗಾತ್ರದಲ್ಲಿ ಬಹು ದೊಡ್ಡ ವಿಶ್ವವಿದ್ಯಾಲಯವಾಗಿದೆ. ಮೂರು ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗನಿರತರಾಗಿದ್ದಾರೆ. 363 ಕ್ಕೂ ಹೆಚ್ಚು ಕಾಲೇಜುಗಳಿವೆ. ಬೆಳಗಾವಿ, ಬಿಜಾಪುರ, ಬಾಗಲಕೋಟೆ ಜಿಲ್ಲೆಗಳು ಇದರ ವ್ಯಾಪ್ತಿಯಲ್ಲಿ ಬರುತ್ತವೆ.

28 ವರ್ಷಗಳ ಹಿಂದೆ ಡಿ.ಎಂ. ನಂಜುಂಡಪ್ಪನವರು ಕುಲಪತಿಗಳಾಗಿದ್ದಾಗ ಧಾರವಾಡದಲ್ಲಿ ಅವರು ಪ್ರಾರಂಭ ಮಾಡಿದ್ದ ಸ್ನಾತಕೋತ್ತರ ಕೇಂದ್ರದಲ್ಲಿಯೇ 2010, ಸೆಪ್ಟೆಂಬರ್ 09ರಲ್ಲಿ

ವಿಶ್ವವಿದ್ಯಾಲಯವನ್ನು ಪ್ರಾರಂಭಿಸಲಾಯಿತು. ಇಂತಹ ವಿಶ್ವವಿದ್ಯಾಲಯಕ್ಕೆ 2013ರಲ್ಲಿ ಕೇವಲ 20 ಜನ ಬೋಧಕರುಗಳು, 127 ಜನ ಬೋಧಕೇತರನ್ನಷ್ಟೇ ಖಾಯಂ ಆಗಿ ನೇಮಕಾತಿ ಮಾಡಿಕೊಳ್ಳಲಾಯಿತು. ನಾಲ್ಕು ವರ್ಷಗಳ ಅವರ ಸೇವಾ ಅವಧಿ ಪೂರ್ಣಗೊಂಡಿದ್ದರೂ, 2 ವರ್ಷಗಳ ನಂತರದಲ್ಲಿ ಮಾಡಬೇಕಾಗಿದ್ದ ಪ್ರೊಬೇಷನರಿ ಅವಧಿಯನ್ನು ಡಿಕ್ಲೇರ್ ಮಾಡುವ ಕೆಲಸವನ್ನು ಇನ್ನು ಮಾಡಿಲ್ಲ. ಅಲ್ಲದೆ ಸದರಿ ಸಿಬ್ಬಂದಿಯವರು ಇ.ಎಸ್.ಐ, ಪಿ.ಎಫ್ ಮೊದಲಾದ ಸವಲತ್ತುಗಳಿಂದಲೂ ವಂಚಿತರಾಗಿದ್ದಾರೆ.

ಉನ್ನತ ಶಿಕ್ಷಣ ಸಚಿವರು ಈ ದಿಸೆಯಲ್ಲಿ ತೀವ್ರ ಗಮನಹರಿಸುವುದರ ಜೊತೆಗೆ ವರ ಪ್ರೊಬೇಷನರಿ ಡಿಕ್ಲೇರ್ ಮಾಡಬೇಕು ಮತ್ತು ಅವರಿಗೆ ಕೊಡಬೇಕಾದ ಸವಲತ್ತುಗಳನ್ನು ಕೂಡಲೇ ಕೊಡಿಸಿಕೊಡಬೇಕೆಂದು ತಮ್ಮ ಮೂಲಕ ಒತ್ತಾಯಿಸುತ್ತೇನೆ.

**ಸಭಾಪತಿಯವರು**:- ಸರ್ಕಾರದ ಪರವಾಗಿ ಸಭಾನಾಯಕರು ಉತ್ತರಿಸುತ್ತಾರೆ.

**ಶ್ರೀ ಎಂ.ಆರ್. ಸೀತಾರಾಂ (ಸಭಾನಾಯಕರು)**:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ವಿಷಯಕ್ಕೆ ಉನ್ನತ ಶಿಕ್ಷಣ ಸಚಿವರ ಉತ್ತರವನ್ನು ಪಡೆದು ಒದಗಿಸಿಕೊಡುತ್ತೇನೆ.

## 03. ಸಭೆಯ ಮುಂದಿಡಲಾದ ಕಾಗದ ಪತ್ರಗಳು

**ಕಾರ್ಯದರ್ಶಿ, ಕ.ವಿ.ಪ**:- ಮಾನ್ಯ ಸಭಾಪತಿಯವರ ಅನುಮತಿ ಮೇರೆಗೆ ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2017ನೇ ಸಾಲಿನ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**ಸಭಾಪತಿಯವರು**:- ಮಂಡಿಸಲಾಯಿತು.

## 04. ಅರ್ಜಿಯನ್ನೊಪ್ಪಿಸುವುದು

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನಸಭಾ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ಬಿ.ಬಿ.ಎಂ.ಪಿ. ವಾರ್ಡ್ ನಂ.18ರ ಆರ್.ಎಂ.ವಿ. 2ನೇ ಹಂತ, ಹೆಚ್.ಐ.ಜಿ. ಡಾಲರ್ಸ್ ಕಾಲೋನಿ, ಬುಲ್ಲೇ ವಾರ್ಡ್ ಉದ್ಯಾನವನದ ಮಧ್ಯ ಭಾಗದಲ್ಲಿ 7ನೇ ಕ್ರಾಸ್‌ನಿಂದ ರಾಜಕಾಲುವೆಯವರೆಗೆ (3ನೇ ಮತ್ತು 4ನೇ ಮುಖ್ಯರಸ್ತೆ ಮಧ್ಯೆ) ಹಾದು ಹೋಗುವ ಮೋರಿಯನ್ನು ಮುಚ್ಚುವ ಬಗ್ಗೆ ಅರ್ಜಿಯನ್ನು ಒಪ್ಪಿಸುತ್ತಿದ್ದೇನೆ.

**ಸಭಾಪತಿಯವರು**:- ಧನ್ಯವಾದಗಳು. ಈಗ ಅಜೆಂಡಾ ಪ್ರಕಾರ ಶಾಸನ ರಚನೆ ಇದೆ. ಆದರೆ ಈಗ ಸಮಯ 1.00 ಗಂಟೆಯಾಗಿದೆ. ಶಾಸನ ರಚನೆಯನ್ನು ತೆಗೆದುಕೊಂಡು 10-20 ನಿಮಿಷದಲ್ಲಿ ಮುಗಿಸುವುದಕ್ಕಾಗುವುದಿಲ್ಲ. ಈ ದಿನ Business Advisory Committee meeting ಇರುವುದರಿಂದ ಮಧ್ಯಾಹ್ನ 1.30 ಗಂಟೆಗೆ ಸರಿಯಾಗಿ ಸದನವನ್ನು ಭೋಜನಕ್ಕಾಗಿ

ಮುಂದೂಡಬೇಕಾಗುತ್ತದೆ. ಹಾಗಾಗಿ ಶಾಸನ ರಚನೆ ಕಾರ್ಯಕ್ರಮವನ್ನು ಭೋಜನ ವಿರಾಮದ ನಂತರ ತೆಗೆದುಕೊಳ್ಳುತ್ತೇನೆ. ಈಗ ನಿಯಮ ೩೩೦ರ ಮೇರೆಗೆ ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ಮಾನ್ಯ ಕಂದಾಯ ಸಚಿವರು ಉತ್ತರಿಸಲು ತಯಾರಿದ್ದಾರೆಂಬುದು ತಿಳಿದು ಬಂದಿದೆ. ಮಾನ್ಯ ಸದಸ್ಯರಾದ ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ಅವರು ನಿಯಮ ೩೩೦ರಡಿಯಲ್ಲಿ ಮಂಡಿಸುತ್ತಾರೆ.

**5. ನಿಯಮ ೩೩೦ರ ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ಜರೂರು ವಿಷಯದ ಮೇಲೆ ಚರ್ಚೆ.**

**ವಿಷಯ:– ರಾಜ್ಯದಲ್ಲಿ ಆಕಸ್ಮಿಕ ಅವಘಡ, ಪ್ರಾಕೃತಿಕ ವಿಪತ್ತುಗಳು ಸಂಭವಿಸಿದಲ್ಲಿ ಮೃತರಾಗುತ್ತಿರುವ ನಾಗರಿಕರಿಗೆ ಸಮಾನವಾಗಿ ಪರಿಹಾರ ಒದಗಿಸುವ ಬಗ್ಗೆ.**

– – – – –

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ವಿರೋಧ ಪಕ್ಷದ ಸಚೇತಕರು):–** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಆಕಸ್ಮಿಕವಾಗಿ, ಅವಘಡಗಳಾಗಿ ಅಥವಾ ಪ್ರಾಕೃತಿಕ ವಿಕೋಪಗಳಾಗಿ ಅಥವಾ ಗಲಭೆಗಳಾದ ಸಂದರ್ಭದಲ್ಲಿ, ಪೋಲೀಸ್ ಕಾರ್ಯಾಚರಣೆ ಸಂದರ್ಭದಲ್ಲಿ ಅಥವಾ ವಿದ್ಯಾರ್ಥಿಗಳು ಪ್ರವಾಸಕ್ಕೆ ಹೋದ ಸಂದರ್ಭದಲ್ಲಿ, ಅಲ್ಲಿ ಆಗುವ ಅವಘಡಗಳ ಸಂದರ್ಭದಲ್ಲಿ ಅನೇಕ ಸಮಯದಲ್ಲಿ ಪರಿಹಾರವನ್ನು ಕೊಡಬೇಕಾದರೆ ಒಂದು ಮಾನದಂಡವನ್ನು ಇಟ್ಟುಕೊಂಡು ಎಲ್ಲರಿಗೂ ಸಮಾನವಾಗಿ ಸಿಗುವಂತಹ ಅವಕಾಶಗಳು ನಮ್ಮ ರಾಜ್ಯದಲ್ಲಿ ನೋಡಿದಾಗ ಇಲ್ಲವೆಂದು ಅನಿಸುತ್ತದೆ.

**(ಈ ಹಂತದಲ್ಲಿ ಮಾನ್ಯ ಉಪಸಭಾಪತಿಯವರು ಸಭಾಪೀಠವನ್ನು ಅಲಂಕರಿಸಿದರು)**

ಬಹುಶಃ ಪ್ರಾಕೃತಿಕ ವಿಕೋಪಕ್ಕೆ ಸಂಬಂಧಪಟ್ಟ ಹಾಗೆ ಅಥವಾ ಎನ್.ಡಿ.ಆರ್.ಎಫ್ ಅಥವಾ ಎಸ್.ಡಿ.ಆರ್.ಎಫ್ ನಲ್ಲಿ ಕೆಲವು ಮಾನದಂಡಗಳು ಇರಬಹುದು. ಆದರೆ ನಾನು ಈ ಪ್ರಶ್ನೆಯನ್ನೆತ್ತಲು ಮುಖ್ಯವಾದ ಕಾರಣವೆಂದರೆ, ಇತ್ತೀಚೆಗೆ ವಿದ್ಯಾರ್ಥಿಗಳು ಪ್ರವಾಸಕ್ಕೆ ಹೋಗಿ ಹೊಳೆಯಲ್ಲಿ ಈಜುವುದಕ್ಕೆ ಹೋದಾಗ ಮೂವರು ವಿದ್ಯಾರ್ಥಿಗಳು ತೀರಿಕೊಂಡರು. ಆ ವಿದ್ಯಾರ್ಥಿಗಳ ಹೆತ್ತವರು ಯಾವುದೋ ಕಾರಣದಿಂದ ಮಕ್ಕಳು ತೀರಿಕೊಂಡಿದ್ದು, ಅದಕ್ಕೆ ನಮಗೆ ಏನಾದರೂ ಪರಿಹಾರ ಸಿಗಬೇಕೆಂದು ಅಪೇಕ್ಷೆ ಪಟ್ಟರು.

(ಮುಂದು . . .

(೯೮4)15–11–2017/1–00/ಕೆಹೆಚ್/ವಿಕೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಮುಂದು):–** ಅದನ್ನು ವಿಮರ್ಶೆ ಮಾಡಿದಾಗ ಹಿಂದೆ ಈ ರೀತಿಯ ಘಟನೆಗಳು ನಡೆದಾಗ ಅಲ್ಲಿಯವರೆವಿಗೂ ಪರಿಹಾರವನ್ನು ಕೊಟ್ಟಿದ್ದರು. ಆದರೆ ವಿದ್ಯಾರ್ಥಿಗಳು ಈ

ರೀತಿಯಲ್ಲಿ ತೀರಿಕೊಂಡ ಸಂದರ್ಭದಲ್ಲಿ ಪರಿಹಾರವನ್ನು ಕೊಡಲಿಲ್ಲ. ನಾನು ಈ ಪ್ರಶ್ನೆಯನ್ನು ಎತ್ತುವುದಕ್ಕೆ ಮುಖ್ಯವಾದ ಕಾರಣವೇನೆಂದರೆ, ಈ ರೀತಿಯ ಆಕಸ್ಮಿಕ ಘಟನೆಗಳು ಸಂಭವಿಸಿದಾಗ ರೆವಿನ್ಯೂ ಇಲಾಖೆ ಎಂದಲ್ಲ. ಮಾನ್ಯ ಮುಖ್ಯಮಂತ್ರಿಯವರ ಪರಿಹಾರ ನಿಧಿಯಿಂದ ಒಂದು discretionary grant ಆಗಿ ಅನೇಕ ಸಂದರ್ಭಗಳಲ್ಲಿ ಈ ರೀತಿ ಕೊಟ್ಟಿರುವುದನ್ನು ನಾವು ಗಮನಿಸಿದ್ದೇವೆ. ಒಂದು extreme ಪ್ರಕರಣದ ಬಗ್ಗೆ ಹೇಳುತ್ತೇನೆ. ಅದನ್ನು ಯಾರು ತಪ್ಪು ಭಾವಿಸಬಾರದು. ANF (Anti Naxal Force)ನ ಪೋಲೀಸ್ ಅಧಿಕಾರಿಗಳು ಒಬ್ಬ ಶಂಕಿತ ವ್ಯಕ್ತಿಯ ಮೇಲೆ ಗುಂಡು ಹಾರಿಸಿ, ಆತ ಮೃತಪಟ್ಟಾಗ, ಆತನ ಕುಟುಂಬಕ್ಕೆ 10 ಲಕ್ಷ ರೂಪಾಯಿಗಳ ಪರಿಹಾರವನ್ನು ಕೊಟ್ಟಿದ್ದಾರೆ. ನಂತರ ಆತನ ಬಗ್ಗೆ ಪತ್ತೆ ಹಚ್ಚಿದರೆ, ಆತ ಕಾಡು ಪ್ರಾಣಿಗಳನ್ನು ಕದ್ದು ಮಾರಾಟ ಮಾಡುತ್ತಿದ್ದ ಎನ್ನುವುದು ಗೊತ್ತಾಗಿದೆ. ಆತನನ್ನು ಚೆಕ್ ಪೋಸ್ಟ್‌ನಲ್ಲಿ ಅಡ್ಡಗಟ್ಟಿದಾಗ ನಿಲ್ಲಲಿಲ್ಲ. ಇದರಿಂದ, ಶಂಕೆಗೊಂಡು ANF ನವರು ಗುಂಡು ಹಾರಿಸಿದಾಗ ಆತ ತೀರಿಕೊಂಡಿದ್ದು, ಅವನ ಕುಟುಂಬಕ್ಕೆ 10 ಲಕ್ಷ ರೂಪಾಯಿಗಳ ಪರಿಹಾರವನ್ನು ನೀಡಿದ್ದಾರೆ. ಆದರೆ ಯಾರು ಅವಘಡದಲ್ಲಿ ಆಕಸ್ಮಿಕವಾಗಿ ಈ ರೀತಿಯ ಪ್ರಾಣ ಹಾನಿಯಾಗಿ ಪ್ರಾಣವನ್ನು ಕಳೆದುಕೊಂಡಂತಹ ಸಂದರ್ಭದಲ್ಲಿ ವಿನಂತಿ ಮಾಡಿದರೂ ಕೂಡ ಇನ್ನು ಅವರಿಗೆ ಪರಿಹಾರ ಸಿಗಲಿಲ್ಲ. ಹಿಂದೆ ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ಪ್ರಕರಣವೊಂದರ ಬಗ್ಗೆ ಉಲ್ಲೇಖ ಮಾಡಿದ್ದರು. ಒಂದು ರೀತಿಯ ಗಲಭೆ ಸಂಭವಿಸಿದ ಸಂದರ್ಭದಲ್ಲಿ ಮನೆಯೊಂದನ್ನು ಸುತ್ತುವರೆದು, ಪೆಟ್ರೋಲ್ ಹಾಕಿ, ಬೆಂಕಿ ಹಚ್ಚಿದಂತಹ ಸಂದರ್ಭದಲ್ಲಿ ಅಲ್ಲೊಬ್ಬ ವ್ಯಕ್ತಿ ತೀರಿಕೊಂಡಾಗ ವಿನಂತಿ ಮಾಡಿದರೂ ಕೂಡ ಆತನ ಕುಟುಂಗದವರಿಗೆ ಪರಿಹಾರವನ್ನು ಕೊಡಲಿಲ್ಲ. ಅತ್ಯಾಚಾರ ಸಂಭವಿಸಿ ಆ ಹುಡುಗಿ ತೀರಿಕೊಂಡಾಗ ಆಕೆಯ ಕುಟುಂಬದವರಿಗೂ ಸಹ ಪರಿಹಾರವನ್ನು ಕೊಡುವುದಕ್ಕಾಗಲಿಲ್ಲ. ನನ್ನ ವಿನಂತಿಯೇನೆಂದರೆ, ಸರ್ಕಾರ ಯಾರಿಗೆ ಪರಿಹಾರ ಕೊಡಬೇಕು? ಎಷ್ಟು ಪರಿಹಾರ ಕೊಡಬೇಕು? ಯಾವ ಸಂದರ್ಭಗಳಲ್ಲಿ ಪರಿಹಾರ ಕೊಡಬೇಕು? ಇದಕ್ಕಿರುವ ಮಾನದಂಡಗಳೇನು ಎನ್ನುವುದನ್ನು ನಿರ್ದಿಷ್ಟವಾಗಿ ತಿಳಸದಿದ್ದರೆ ಈ ರೀತಿ ಯಾರಿಗೆ influence ಇದೆ, ಯಾರಿಗೆ ಪ್ರಭಾವಿ ವ್ಯಕ್ತಿಗಳ ಪರಿಚಯ ಇದೆ, ಪತ್ರಿಕೆ ಮತ್ತು ಮಾಧ್ಯಮಗಳಲ್ಲಿ ಯಾರ ಬಗ್ಗೆ ಪ್ರಚಾರವಾಗುತ್ತದೆ, ದೂರದರ್ಶನದಲ್ಲಿ ಯಾರ ಬಗ್ಗೆ ಚರ್ಚೆಯಾಗುತ್ತದೆ, ಆ ಸಂದರ್ಭಗಳಲ್ಲಿ ಅಂತಹ ವ್ಯಕ್ತಿಗಳಿಗೆ ಸರ್ಕಾರ ದೊಡ್ಡ ಪರಿಹಾರವನ್ನು ಕೊಡುತ್ತದೆ. ಅದೇ ರೀತಿಯ ಘಟನೆಗಳು ಸಂಭವಿಸಿ ಪ್ರಚಾರ ಸಿಗದೇ ಇದ್ದರೆ, ಅದರ ಬಗ್ಗೆ ಚರ್ಚೆಯಾಗದಿದ್ದರೆ ಅವರಿಗೆ ಪರಿಹಾರ ಸಿಗುವುದಿಲ್ಲ. ಹಾಗಾಗಿ ರಾಜ್ಯ ಸರ್ಕಾರದವರು ಎಲ್ಲ ಪ್ರಜೆಗಳನ್ನು ಮಕ್ಕಳ ರೀತಿಯಲ್ಲಿ ನೋಡಬೇಕಾದ ಅವಶ್ಯಕತೆಯಿರುವುದರಿಂದ, ಎಲ್ಲರಿಗೂ ಸಮಾನವಾಗಿ ಪರಿಹಾರ ಸಿಗಬೇಕೆನ್ನುವ ಕಾರಣಕ್ಕಾಗಿ ಮಾನದಂಡಗಳನ್ನು ರೂಪಿಸುವಂತಹ ಅವಶ್ಯಕತೆಯಿದೆ. ಆ ದೃಷ್ಟಿಯಿಂದ ಸದನದಲ್ಲಿ ಈ ಪ್ರಶ್ನೆಯನ್ನು ಎತ್ತಿಕೊಂಡಿದ್ದೇನೆ. ಆದ್ದರಿಂದ, ನನ್ನ ವಿನಂತಿಯೇನೆಂದರೆ, ಯಾವ ರೀತಿಯ ಅವಘಡಗಳು

ಸಂಭವಿಸುತ್ತವೆ; ಅದು ಪ್ರಾಕೃತಿಕವಾಗಿಯೋ, ಅದು accident ಆಗಿಯೋ ಅಥವಾ ಅನಿವಾರ್ಯ ಕಾರಣಗಳಿಂದ ಆತ್ಮಹತ್ಯೆ ಮಾಡಿಕೊಂಡಿರುವುದೋ, ವಿದ್ಯಾರ್ಥಿಗಳಿಗೆ ಸಂಬಂಧಿಸಿದ ಸಂಗತಿಗಳೋ, ಅತ್ಯಾಚಾರ ನಡೆದಂತಹ ಸಂದರ್ಭದಲ್ಲಿ ಯಾವುದೋ ಕಾರಣಕ್ಕಾಗಿ ಆ ಹೆಣ್ಣು ಮಗಳು ಆತ್ಮಹತ್ಯೆ ಮಾಡಿಕೊಳ್ಳುವುದು ಅಥವಾ ಅತ್ಯಾಚಾರ ನಡೆದಂತಹ ಸಂದರ್ಭದಲ್ಲಿ ತೀರಿಕೊಳ್ಳುವಂತಹ ಘಟನೆಯೇ? ಈ ಎಲ್ಲಾ ಸಂಗತಿಗಳ ಬಗ್ಗೆ ಅವರ ಕುಟುಂಬಕ್ಕೆ ಸಾಂತ್ವನ ಹೇಳುವುದರ ಜೊತೆಗೆ ಅವರಿಗೆ ಸಹಕಾರ ನೀಡುವಂತಹ ಅವಶ್ಯಕತೆಯಿದೆ. ಅಂತಹ ಸಂದರ್ಭದಲ್ಲಿ ರಾಜ್ಯದ ಎಲ್ಲರನ್ನೂ ಕೂಡ ನಾವು ಮಕ್ಕಳ ಹಾಗೆ ಮತ್ತು ಒಂದೇ ದೃಷ್ಟಿಯಿಂದ ನೋಡಬೇಕು. ಪರಿಹಾರ ಕೊಡುವುದರಲ್ಲಿ ತಾರತಮ್ಯವಾಗಬಾರದು. ಎಲ್ಲರಿಗೂ ಒಂದೇ ರೀತಿಯ ಪರಿಹಾರ ಸಿಗಬೇಕು. ಉದಾಹರಣೆಗೆ ಯಾವುದಾದರೂ ಒಂದು ಗಲಭೆ ಸಂಭವಿಸಿದಂತಹ ಸಂದರ್ಭದಲ್ಲಿ ಆ ಗಲಭೆಯ ನೆಪವನ್ನಿಟ್ಟುಕೊಂಡು ತಮ್ಮ ತಮ್ಮ ಅಂಗಡಿಗಳಿಗೆ ತಾವೇ ಬೆಂಕಿಯನ್ನು ಹಚ್ಚಿಕೊಳ್ಳುತ್ತಾರೆ. ಆದರೆ, ಆ ಗಲಭೆಯ ಹೆಸರನ್ನು ಹೇಳಿಕೊಂಡರೆ ಅವರಿಗೆ ಪರಿಹಾರ ಸಿಗುತ್ತದೆ. ಈ ರೀತಿಯ ಘಟನೆಗಳು ಸಂಭವಿಸಿದಾಗ ನ್ಯಾಯೋಚಿತವಾಗಿ ಸಿಗಬೇಕಾದವರಿಗೆ ಪರಿಹಾರ ಸಿಗುವುದಿಲ್ಲ; ಯಾರು ಅದನ್ನು ಉಪಯೋಗ ಮಾಡಿಕೊಳ್ಳುವುದಕ್ಕಾಗಿ ಈ ಅವಕಾಶವನ್ನು ಬಳಸಿಕೊಳ್ಳುತ್ತಾರೆ, ಅಂಥವರಿಗೆ ಪರಿಹಾರ ಸಿಗುತ್ತದೆ. ಹಾಗಾಗಿ, ನಿಯಮ ೩೩೦ ರ ಅಡಿಯಲ್ಲಿ ಈ ಪ್ರಶ್ನೆಯನ್ನು ಏಕೆ ತೆಗೆದುಕೊಂಡಿದ್ದೇನೆಂದರೆ, ರಾಜ್ಯದಲ್ಲಿ ಕಳೆದ ಸುಮಾರು ನಾಲ್ಕಾರು ವರ್ಷಗಳಿಂದ ಅಥವಾ ಎಂಟು-ಹತ್ತು ವರ್ಷಗಳಿಂದ ನೋಡಿದಾಗ ಪರಿಹಾರ ನೀಡುವುದರಲ್ಲಿ ತಾರತಮ್ಯವಾಗುತ್ತಿದೆ. Discretionary power ಎಂದು ಹೇಳಿಕೊಂಡು ಯಾರಿಗೆ ಪರಿಹಾರ ಸಿಗಬೇಕೋ, ಅವರಿಗೆ ಪರಿಹಾರ ಸಿಗುತ್ತಿಲ್ಲ. ಆದರೆ, ಯಾರಿಗೆ ಪರಿಹಾರ ಸಿಗಬಾರದೋ, ಅವರಿಗೆ ಪರಿಹಾರ ಸಿಗುತ್ತಿದೆ ಅಥವಾ ಏಕರೂಪದ ಪರಿಹಾರ ಸಿಗುತ್ತಿಲ್ಲ. ಈ ದೃಷ್ಟಿಯಿಂದ ಇದಕ್ಕಾಗಿ ಮಾನದಂಡಗಳನ್ನು ರೂಪಿಸುವಂತಹ ಅವಶ್ಯಕತೆಯಿದೆ. ಅದು ಪೋಲೀಸ್ ಕಾರ್ಯಾಚರಣೆಯ ಸಂದರ್ಭಗಳಿರಬಹುದು. ಗಲಭೆಗಳಾದ ಸಂದರ್ಭಗಳಿರಬಹುದು. ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಳ್ಳುವಂತಹ ಅಥವಾ ಪ್ರವಾಸಕ್ಕೆ ಹೋದಾಗ accident ಮೂಲಕ ಇರಬಹುದು; ಹೊಳೆ, ನದಿಗಳಲ್ಲಿ ಮುಳುಗಿ ತೀರಿಕೊಳ್ಳುವಂತಹ ಸಂದರ್ಭವಿರಬಹುದು, ಈ ಎಲ್ಲಾ ಸಂಗತಿಗಳಲ್ಲೂ ಕೂಡ ಪರಿಹಾರ ಮೊತ್ತದ ವಿಚಾರದಲ್ಲಿ ಮಾನದಂಡಗಳನ್ನು ರೂಪಿಸುವಂತಹ ಅವಶ್ಯಕತೆಯಿದೆ.

ಈಗ ನಮ್ಮಲ್ಲಿರುವಂತಹ ಮಾನದಂಡಗಳೇನೆಂದರೆ, ಕೇಂದ್ರ ಸರ್ಕಾರದವರು ರೂಪಿಸಿರುವಂತಹ ಮಾನದಂಡಗಳ ಪ್ರಕಾರ NDRF (National Disaster Response Force) ನ ಸಂದರ್ಭದಲ್ಲಿ ಪ್ರಾಕೃತಿಕ ವಿಕೋಪಗಳು ಸಂಭವಿಸಿದಾಗ, ಅತಿವೃಷ್ಟಿ ಅಥವಾ ಅನಾವೃಷ್ಟಿಯ ಸಂದರ್ಭಗಳಿಗೆ ಸಂಬಂಧಿಸಿದ ಸಂಗತಿಗಳು; ಇನ್ನು ಬಹಳ ಸೂಕ್ಷ್ಮವಾದ ವಿಷಯವೇನೆಂದರೆ, ರೈತರ ಆತ್ಮಹತ್ಯೆ ಪ್ರಕರಣಗಳು. ರೈತರ ಆತ್ಮಹತ್ಯೆ ಸಂದರ್ಭದಲ್ಲಿ ಕೂಡ ಆ

ಆತ್ಮಹತ್ಯೆಗೆ ಕೊಡುವಂತಹ ಪರಿಹಾರದಲ್ಲಿ ಸರಿಯಾದ ಒಂದೇ ರೀತಿಯ ಮಾನದಂಡಗಳಿಲ್ಲದೇ ಇರುವುದರಿಂದ, ಅದರ ಬಗ್ಗೆ ಪ್ರಚಾರ ಸಿಕ್ಕಿದಾಗ ಕೆಲವು ರೈತರ ಕುಟುಂಬಗಳಿಗೆ 5 ಲಕ್ಷ ರೂಪಾಯಿಗಳ ಪರಿಹಾರವನ್ನು ಕೊಟ್ಟಿದ್ದೇವೆ, ಮತ್ತೆ ಕೆಲವು ರೈತರ ಕುಟುಂಬಗಳಿಗೆ 4 ಲಕ್ಷ ರೂಪಾಯಿಗಳ ಪರಿಹಾರವನ್ನು ಕೊಟ್ಟಿದ್ದೇವೆ. ಕೆಲವು ರೈತರಿಗೆ ಪರಿಹಾರವನ್ನೇ ಕೊಟ್ಟಿರುವುದಿಲ್ಲ. ಈ ರೀತಿಯ ಸಂಗತಿಗಳು ನಮ್ಮ ರಾಜ್ಯದಲ್ಲಿ ಆಗಬಾರದು. ಎಲ್ಲಾ ಪ್ರಜೆಗಳಿಗೂ ಒಂದೇ ರೀತಿಯ ನ್ಯಾಯ ಸಿಗುವಂತಹ ದಿಶೆಯಲ್ಲಿ ಇದಕ್ಕೆ ಸರಿಯಾದ ಮಾನದಂಡಗಳನ್ನು ರೂಪಿಸಿಕೊಳ್ಳಬೇಕೆಂಬ ವಿನಂತಿಯನ್ನು ನಾನು ಮಾಡುತ್ತೇನೆ.

ಕರ್ನಾಟಕ ರಾಜ್ಯಕ್ಕೆ ಸೇರಿದಂತಹ ಸೈನಿಕರು ಕಾರ್ಯಾಚರಣೆಯ ಸಂದರ್ಭದಲ್ಲಿ ತೀರಿಕೊಂಡಾಗ ಕೊಡುವಂತಹ ಪರಿಹಾರ ಏನಿದೆ, ಅದರಲ್ಲೂ ಕೂಡ ತಾರತಮ್ಯವಿದೆ. ಈ ರಾಜ್ಯದಲ್ಲಿ ತೀರಿಕೊಂಡಂತಹ ಕೆಲವು ಸೈನಿಕರ ಕುಟುಂಬಗಳಿಗೆ 25 ಲಕ್ಷ ರೂಪಾಯಿಗಳ ಪರಿಹಾರವನ್ನು ಕೊಟ್ಟಿದ್ದರೆ, ಕೆಲವು ಸೈನಿಕರ ಕುಟುಂಗಳಿಗೆ 5 ಲಕ್ಷ ರೂಪಾಯಿಗಳ ಪರಿಹಾರವನ್ನು ಕೊಟ್ಟಿದ್ದೇವೆ, ಕೆಲವು ಸೈನಿಕರಿಗೆ ಜಾಗವನ್ನು ನೀಡುತ್ತೇವೆಂದು ಮಾತು ಕೊಟ್ಟಿದ್ದೇವೆ. ಕೇಂದ್ರ ಸರ್ಕಾರ ಕಾರ್ಯಾಚರಣೆಯ ಸಂದರ್ಭದಲ್ಲಿ ಮೃತರಾದ ಸೈನಿಕರ ಕುಟುಂಬದವರಿಗೆ ಹಣ ಕೊಡಬೇಕಾದರೆ, ಅವರು ಮಾನದಂಡಗಳನ್ನು ರೂಪಿಸಿಕೊಂಡಿದ್ದಾರೆ. ಅವರು ಸೈನ್ಯದ ಸೇವೆಯಲ್ಲಿರಬೇಕಾದರೆ, accident ಆಗಿ ತೀರಿಕೊಂಡರೆ ಎಷ್ಟು ಪರಿಹಾರವನ್ನು ಕೊಡಬೇಕು. ಕಾರ್ಯಾಚರಣೆಯ ಸಂದರ್ಭದಲ್ಲಿ ತೀರಿಕೊಂಡರೆ ಎಷ್ಟು ಪರಿಹಾರವನ್ನು ಕೊಡಬೇಕು. ಈ ಎಲ್ಲಾ ಸಂಗತಿಗಳ ಬಗ್ಗೆ ಅವರು ಮಾನದಂಡಗಳನ್ನು ರೂಪಿಸಿಕೊಂಡಿದ್ದಾರೆ. ಆದರೆ ರಾಜ್ಯದಲ್ಲಿ ಪೋಲೀಸ್ ಇಲಾಖೆಯಲ್ಲಿ ಸೇವೆಯನ್ನು ಸಲ್ಲಿಸುವಂತಹ ಸಿಬ್ಬಂದಿಗಳಿರಬಹುದು, ಸೇನೆಯಲ್ಲಿ ಕೆಲಸ ಮಾಡುತ್ತಿರುವಂತಹ ಸಿಬ್ಬಂದಿಗಳಿರಬಹುದು. ಅವರು ಕಾರ್ಯಾಚರಣೆಯ ಸಂದರ್ಭದಲ್ಲಿ ತೀರಿಕೊಂಡರೆ, ಶ್ರೀಯುತ ಹನುಮಂತ ಕೊಪ್ಪದ್ ರವರ ಪ್ರಕರಣವನ್ನು ಈ ಸಂದರ್ಭದಲ್ಲಿ ನಾವೆಲ್ಲರೂ ನೆನಪು ಮಾಡಿಕೊಳ್ಳಬೇಕು. ಸುಮಾರು 9 ದಿನಗಳ ಕಾಲ ಸಾವು-ಬದುಕಿನ ನಡುವೆ ಹೋರಾಟವನ್ನು ನಡೆಸಿಕೊಂಡು ಕೊನೆಗೆ ತೀರಿಕೊಂಡಾಗ ಅವರ ಬಗ್ಗೆ ತುಂಬಾ ಪ್ರಚಾರವಾದ ಕಾರಣಕ್ಕಾಗಿ ಅವರ ಕುಟುಂಬದವರಿಗೆ ಕೊಟ್ಟಂತಹ ಮೊತ್ತ ತುಂಬಾ ಜನ ಸೈನಿಕರಿಗೆ ಸಿಗಲಿಲ್ಲ. ಆ ದೃಷ್ಟಿಯಲ್ಲಿ ಸೈನಿಕರಿಗೆ ಕೊಡುವಂತಹ ಪರಿಹಾರದಲ್ಲೂ ಕೂಡ ಒಂದು ಮಾನದಂಡವನ್ನು ರೂಪಿಸಿಕೊಂಡು, ಅದು peacetime death ಮರಣವೆ, ಕಾರ್ಯಾಚರಣೆಯ ಸಂದರ್ಭದಲ್ಲಿ ಆಗಿರುವಂತಹ ಸಾವೇ ಅಥವಾ ಅದು ಯುದ್ಧದ ಸಮಯದಲ್ಲಿ ಆಗಿರುವಂತಹ ಸಾವೇ ಎನ್ನುವಂತಹ ಅಂಶಗಳೆಲ್ಲವನ್ನೂ ವಿಮರ್ಶೆ ಮಾಡಿಕೊಂಡು ಸರ್ಕಾರವು ಕೊಡುವಂತಹ ಪರಿಹಾರ ಧನ ಅಥವಾ ಪೋಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವಂತಹ ಸಿಬ್ಬಂದಿಗಳಿರಬಹುದು, ಸೈನ್ಯದಲ್ಲಿ ಕೆಲಸ ಮಾಡುತ್ತಿರುವಂತಹ ಸಿಬ್ಬಂದಿಗಳಿರಬಹುದು, ಅರೆ ಸೈನಿಕ ಪಡೆಯಲ್ಲಿ ಕೆಲಸ ಮಾಡುತ್ತಿರುವಂತಹ ಸಿಬ್ಬಂದಿಗಳಿರಬಹುದು ಇವರೆಲ್ಲರ ಕುಟುಂಬದವರಿಗೂ ಒಂದೇ ಸಮಾನವಾದ ಪರಿಹಾರ ಸಿಗುವಂತಹ

ರೀತಿಯಲ್ಲಿ ಮಾನದಂಡಗಳನ್ನು ರೂಪಿಸುವಂತಹ ಅವಶ್ಯಕತೆ ಇದೆ. ಆದ್ದರಿಂದ, ಮಾನ್ಯ ಸಭಾಪತಿಯವರೇ ಈ ಸಂದರ್ಭದಲ್ಲಿ ಈ ಎಲ್ಲಾ ವಿಚಾರಗಳನ್ನು ಉಲ್ಲೇಖ ಮಾಡಿಕೊಂಡು, ಸರ್ಕಾರ ಇದರ ಬಗ್ಗೆ ಎಚ್ಚೆತ್ತುಕೊಂಡು ಮಾನದಂಡಗಳನ್ನು ರೂಪಿಸಿ, ಇನ್ನು ಮುಂದಿನ ದಿನಗಳಲ್ಲಿ ರಾಜ್ಯದ ಎಲ್ಲಾ ಪ್ರಜೆಗಳಗೂ ಈ ರೀತಿಯ ಅವಘಡಗಳು ಸಂಭವಿಸಿದಾಗ ತಾರತಮ್ಯ ಇಲ್ಲದಂತೆ ಪರಿಹಾರವನ್ನು ದೊರಕಿಸುವಂತಹ ಕೆಲಸವನ್ನು ಮಾಡಬೇಕೆಂದು ನಾನು ವಿನಂತಿಯನ್ನು ಮಾಡುತ್ತೇನೆ.

**ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು)**:- ಮಾನ್ಯ ಸಭಾಪತಿಯವರೆ, . . .

**ಉಪ ಸಭಾಪತಿಯವರು**:- ಮಾನ್ಯ ಸಚಿವರೆ, ಈಗ ಮಾನ್ಯ ರಮೇಶ್ ಬಾಬು ರವರು ಮಾತನಾಡ ಬಯಸುತ್ತಿದ್ದಾರೆ.

**ಶ್ರೀ ರಮೇಶ್ ಬಾಬು (ಶಿಕ್ಷಕರ ಕ್ಷೇತ್ರ)**:- ಮಾನ್ಯ ಸಭಾಪತಿಯವರೆ, ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ರವರು ಬಹಳ ಗಂಭೀರವಾದ ವಿಚಾರವನ್ನು ಸದನದ ಮುಂದೆ ಎತ್ತಿದ್ದಾರೆ. ಬಹಳ ಪ್ರಾಸಂಗಿಕವಾಗಿ 'ಆಕಸ್ಮಿಕ ಅವಘಡಗಳು' ಈ ವ್ಯಾಖ್ಯಾನದಲ್ಲೇ ಕೆಲವು ಘಟನೆಗಳನ್ನು ತರಬೇಕಾಗಿದೆ. ಮಾನ್ಯ ಸದಸ್ಯರು ರೈತರ ಆತ್ಮಹತ್ಯೆ ವಿಚಾರವನ್ನು ಪ್ರಸ್ತಾಪ ಮಾಡಿದರು, ವಿದ್ಯಾರ್ಥಿಗಳ ವಿಚಾರವನ್ನು ಪ್ರಸ್ತಾಪ ಮಾಡಿದರು, ಸೈನಿಕರ ವಿಚಾರವನ್ನು ಪ್ರಸ್ತಾಪ ಮಾಡಿದರು. ಅನೇಕ ಸಂದರ್ಭಗಳಲ್ಲಿ ಉದಾಹರಣೆಗೆ, ಕಟ್ಟಡ ಕಾರ್ಮಿಕರ ವಿಚಾರವನ್ನು ತೆಗೆದುಕೊಂಡರೆ ರಾಜ್ಯ ಸರ್ಕಾರದವರು ಈ ಕಟ್ಟಡ ಕಾರ್ಮಿಕರಿಗೆ ಒಂದು Building and Other Construction Workers Welfare Cess ಎಂದು ಮಾಡುತ್ತಿದ್ದಾರೆ. ಗುತ್ತಿಗೆದಾರರು ಬಿಲ್ಲುಗಳ ಮೂಲಕ ಹಣವನ್ನು ತೆಗೆದುಕೊಳ್ಳುವಂತಹ ಸಂದರ್ಭದಲ್ಲಿ ಆ ಬಿಲ್ಲಿನಲ್ಲಿ ಶೇಕಡ 2 ರಷ್ಟು ಹಣವನ್ನು ಹಿಡಿದು, ನಮಗೆ ಬಂದಿರುವಂತಹ ಮಾಹಿತಿಯ ಪ್ರಕಾರ ಸುಮಾರು 150 ಕೋಟಿ ರೂಪಾಯಿಗಳಂತ ಹೆಚ್ಚು ಹಣ ಸರ್ಕಾರದಲ್ಲಿದೆ. ಆದರೆ ಕಟ್ಟಡ ಕಾರ್ಮಿಕರಿಗೆ ಅವಘಡಗಳು ಸಂಭವಿಸಿದಂತಹ ಸಂದರ್ಭದಲ್ಲಿ, ಕಾರ್ಮಿಕರಿಗೆ ಕೈ-ಕಾಲು ಮುರಿತ ಮತ್ತು ಈ ರೀತಿಯ ದೈಹಿಕ ಹಾನಿಯಾದಂತಹ ಸಂದರ್ಭದಲ್ಲಿ, ಪ್ರಾಣ ಹಾನಿಯಾದಂತಹ ಸಂದರ್ಭದಲ್ಲಿ, ಅವರಿಗೆ ಹಣ ಅಥವಾ ಪರಿಹಾರ ಕೊಡುವಂತಹ ಪ್ರಕ್ರಿಯೆ ಇನ್ನು ಆಗುತ್ತಿಲ್ಲ.

ಇದೇ ನಿಟ್ಟಿನಲ್ಲಿ ಬೀದಿ-ಬದಿಯ ವ್ಯಾಪ್ಯಾರಿಗಳು ಬೇರೆ ಬೇರೆ ಕಡೆಗಳಲ್ಲಿ ನಡೆಯುವ ಅಪಘಾತಗಳರಬಹುದು, ಇನ್ಯಾವುದೋ ಕಾರ್ಯನಿಮಿತ್ತ ಸಂದರ್ಭಗಳಲ್ಲಿರಬಹುದು, ಅವರಿಗೆ ಈ ರೀತಿಯ ಪರಿಹಾರ ಸಿಗುತ್ತದೆ ಎಂಬ ಮಾಹಿತಿ ಕೂಡ ಇರುವುದಿಲ್ಲ. ಅಂತಹ ಅವಘಡಗಳನ್ನು ನಾವು ಕಾಣುತ್ತಿದ್ದೇವೆ. ಈಗ ಸ್ವಾಭಾವಿಕವಾಗಿ ಮಾನ್ಯ ಮುಖ್ಯಮಂತ್ರಿಯವರ ಪರಿಹಾರ ನಿಧಿಯಿಂದ ಇಂತಹ ಪರಿಹಾರವನ್ನು ಪಡೆದುಕೊಳ್ಳುವಂತಹ ಪ್ರಯತ್ನವನ್ನು ಮಾಡುತ್ತೇವೆ. ಹೈದರಾಬಾದ್-ಕರ್ನಾಟಕ ಭಾಗದವರು, ಗ್ರಾಮೀಣ ಪ್ರದೇಶದಲ್ಲಿರುವಂತಹ ಹಾಗೂ ಗಡಿನಾಡು ಪ್ರದೇಶದಲ್ಲಿರುವಂತಹ ವ್ಯಕ್ತಿಗಳು

ಅಲ್ಲಿಗೆ ಬಂದು ಓಡಾಟ ಮಾಡಿಕೊಂಡು, ಮಾನ್ಯ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ 5 ಸಾವಿರ ಅಥವಾ 10 ಸಾವಿರ ರೂಪಾಯಿಗಳ ಹಣವನ್ನು ಪಡೆದುಕೊಳ್ಳುವುದಕ್ಕೆ ಬಹಳ ದುಸ್ತರವಾಗುತ್ತದೆ. ಹಾಗಾಗಿ, ಇಂತಹ ಹಣವನ್ನು ಜಿಲ್ಲಾಧಿಕಾರಿಗಳ ಮುಖಾಂತರ ಕೊಡುವಂತಹದ್ದು. ಘಟನೆಗಳು ಸಂಭವಿಸಿದಂತಹ ಸಂದರ್ಭದಲ್ಲಿ ಇವತ್ತಿನ ದಿವಸ ಬಹುತೇಕ ಪ್ರಕರಣಗಳಲ್ಲಿ ಜಿಲ್ಲಾಧಿಕಾರಿಗಳು 500 ರೂಪಾಯಿ, 1000 ರೂಪಾಯಿ, 2000 ರೂಪಾಯಿಗಳ ಪರಿಹಾರ ಕೊಟ್ಟಿರುವಂತಹ ನಿರ್ದಶನಗಳಿವೆ. ಉದಾಹರಣೆಗೆ, ದಾವಣಗೆರೆಯಲ್ಲಿ ಈ ಮಳೆಹಾನಿ ಆದಂತಹ ಸಂದರ್ಭದಲ್ಲಿ ಅಲ್ಪಸಂಖ್ಯಾತರ ಕಾಲೋನಿಗಳಲ್ಲಿ ಮನೆಗಳು ಕುಸಿದಂತಹ ಸಂದರ್ಭದಲ್ಲಿ ಅವರಿಗೆ ಕೊಟ್ಟಿರುವಂತಹ ಗರಿಷ್ಠ ಪರಿಹಾರದ ಹಣ 2000 ರೂಪಾಯಿಗಳು. ಮನೆ ಬಿದ್ದು ಹೋಗಿರುವಂತಹ ಕುಟುಂಬದವರಿಗೆ ಕೊಟ್ಟಿರುವಂತಹ ಪರಿಹಾರದ ಹಣ 2000 ರೂಪಾಯಿ. ಇಂತಹ ಪ್ರಕರಣಗಳಲ್ಲಿ ಸರ್ಕಾರವು ಸ್ವಲ್ಪ ಉದಾರವಾಗಿ ವರ್ತನೆ ಮಾಡಬೇಕಾಗುತ್ತದೆ. ಇರುವಂತಹ ಅವಕಾಶಗಳಲ್ಲಿ ಹೆಚ್ಚಿನ ಮೊತ್ತದ ಪರಿಹಾರವನ್ನು ಕೊಡಬೇಕಾಗುತ್ತದೆ. ಮತ್ತೊಂದು ಪ್ರಮುಖವಾದ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನ ದಿವಸ ಇಡೀ ರಾಜ್ಯದಲ್ಲಿ hit and run ಪ್ರಕರಣವೆಂದು ನಾವೇನು ಕರೆಯುತ್ತೇವೆ, ರಸ್ತೆ ಅಪಘಾತಗಳ ಸಂದರ್ಭಗಳಲ್ಲಿ ಬಹುತೇಕ ಪ್ರಕರಣಗಳಲ್ಲಿ hit and run cases ನಲ್ಲಿ ವಾಹನ ಯಾವುದು? ವಾಹನದ ನಂಬರ್ ಆಗಲಿ, ಮತ್ತೊಂದು ಆಗಲಿ ಮಾಹಿತಿ ಸಿಗುವುದಿಲ್ಲ. ಬಹುತೇಕ ಸಂದರ್ಭಗಳಲ್ಲಿ ಕಾಲು ದಾರಿಯಲ್ಲಿ ನಡೆದುಕೊಂಡು ಹೋಗುತ್ತಿರುವಂತಹವರು ಮತ್ತು ರಸ್ತೆಯನ್ನು cross ಮಾಡುತ್ತಿರುವಂತಹವರು ಸಹ ಇಂತಹ ಅಪಘಾತಗಳಿಗೆ ಒಳಗಾಗುತ್ತಿದ್ದಾರೆ.

(ಮುಂದು)

**(985)15-11-2017/1.10/ಎಸ್‌ಪಿಆರ್/ವಿಕೆ**

**ಶ್ರೀ ರಮೇಶ್ ಬಾಬು(ಮುಂದು):-**

ಬಹುತೇಕ ಪ್ರಕರಣಗಳಲ್ಲಿ ವಿಮೆ ಸಿಗುವುದಿಲ್ಲ. ಏಕೆಂದರೆ ಅಲ್ಲಿ ಯಾವುದೇ ವಾಹನ ಕುರಿತಾದ ಮಾಹಿತಿ ಇರುವುದಿಲ್ಲ. ಅಂತಹ ಸಂದರ್ಭಗಳಲ್ಲಿ ರಾಜ್ಯ ಸರ್ಕಾರವು ಕಂದಾಯ ಇಲಾಖೆಯ ಮೂಲಕ ಮೃತರ ಕುಟುಂಬ ವರ್ಗದವರಿಗೆ 25,000/- ರೂಪಾಯಿಗಳ ಪರಿಹಾರ ಮೊತ್ತವನ್ನು ನೀಡುತ್ತಿದೆ. ಬಹುತೇಕ ಅಪಘಾತ ಪ್ರಕರಣಗಳನ್ನು ಸ್ವಯಂಪ್ರೇರಿತವಾಗಿ ದಾಖಲು ಮಾಡಬೇಕಾಗುತ್ತದೆ ಹಾಗೂ ಜಿಲ್ಲಾಧಿಕಾರಿಗಳು ಪರಿಹಾರವನ್ನು ಕೊಡುವ ಪ್ರಯತ್ನವನ್ನು ಮಾಡಬೇಕಾಗುತ್ತದೆ. ರಾಜ್ಯದಲ್ಲಿ ಸಂಭವಿಸುತ್ತಿರುವ hit and run ಪ್ರಕರಣಗಳಲ್ಲಿ ಶೇಕಡ 10 ರಷ್ಟು ಪ್ರಕರಣಗಳಲ್ಲಿ ರಾಜ್ಯ ಸರ್ಕಾರದಿಂದ ಮೃತರಿಗೆ ಪರಿಹಾರ ಮೊತ್ತವು ಸಿಗುತ್ತಿಲ್ಲ. ಮೊದಲನೆಯದಾಗಿ ಮೃತರ ಕುಟುಂಬ ವರ್ಗದವರಿಗೆ ಪರಿಹಾರ ಮೊತ್ತ ಸಿಗುವಂತಹ ಪ್ರಯತ್ನಗಳಾಗಬೇಕು. ಎರಡನೆಯದಾಗಿ ಹಾಲಿ ಇರುವ ಪರಿಹಾರದ ಗರಿಷ್ಠ ಮೊತ್ತವನ್ನು 25,000/- ರೂಪಾಯಿಗಳಿಂದ ಕನಿಷ್ಟ ಎರಡು ಲಕ್ಷ

ರೂಪಾಯಿಗಳವರೆಗೆ ನಿಗದಿಪಡಿಸಬೇಕಾಗುತ್ತದೆ. ಏಕೆಂದರೆ ವಿಮೆ ಪಾಲಿಸಿಗಳಿದ್ದು ವಾಹನಗಳು ಸಿಕ್ಕಿದಂತಹ ಸಂದರ್ಭಗಳಲ್ಲಿ ದೈಹಿಕ ನ್ಯೂನತೆ ಹಾಗೂ ಪ್ರಾಣ ಹಾನಿಯಾದವರಿಗೆ ಐದು ಲಕ್ಷ ರೂಪಾಯಿಗಳಿಂದ ಒಂದು ಕೋಟಿ ರೂಪಾಯಿಗಳವರೆಗೆ ಪರಿಹಾರದ ಮೊತ್ತವು ದೊರೆಯುತ್ತದೆ. Hit and run ಪ್ರಕರಣಗಳಲ್ಲಿ ಮೃತರ ಕುಟುಂಬ ವರ್ಗದವರು ಪರಿಹಾರದ ಮೊತ್ತಕ್ಕೆ ಅರ್ಹರಿದ್ದರೂ, ಎಲ್ಲಾ ಅಗತ್ಯ ದಾಖಲೆಗಳಿದ್ದರೂ ಸಹ ಕೆಲವೊಂದು ಬಾರಿ ಪರಿಹಾರದ ಮೊತ್ತವನ್ನು ಪಡೆಯಲಾಗುತ್ತಿಲ್ಲ. ಇವತ್ತಿನ ದಿವಸ ರಾಜ್ಯ ಸರ್ಕಾರವು ಕಂದಾಯ ಇಲಾಖೆಯ ಮುಖಾಂತರ ನೀಡಲಾಗುತ್ತಿರುವ 25,000/- ರೂಪಾಯಿಗಳ ಪರಿಹಾರ ಮೊತ್ತವನ್ನು ಗರಿಷ್ಟ ಎರಡು ಲಕ್ಷ ರೂಪಾಯಿಗಳವರೆಗೆ ಹೆಚ್ಚಳ ಮಾಡಬೇಕು. ಇಂತಹ ಪ್ರಕರಣಗಳನ್ನು ಆಕಸ್ಮಿಕ ಅವಘಡದ ವ್ಯಾಪ್ತಿಗೆ ಒಳಪಡಿಸಬೇಕು. ಆಕಸ್ಮಿಕ ಅವಘಡಕ್ಕೆ ರಸ್ತೆ ಬದಿಯ ವ್ಯಾಪಾರಿಗಳು, ಕೂಲಿ ಕಾರ್ಮಿಕರು, ವಿದ್ಯಾರ್ಥಿಗಳು ಅಥವಾ ಇತರೆ ರೀತಿಯ ವ್ಯಕ್ತಿಗಳು ಒಳಗಾಗಿರಬಹುದು, ಯಾರೇ ಆಗಲೀ ಅವರು ಇಂತಹ ಅಪಘಾತಕ್ಕೆ ಒಳಗಾಗುತ್ತಾರೋ ಅಂತಹವರಿಗೆ ಸಿಗುವಂತಹ ಪರಿಹಾರದ ಮೊತ್ತವನ್ನು ಹೆಚ್ಚಳ ಮಾಡಬೇಕು. ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಪರ್ಯಾಯವಾಗಿ ಜಿಲ್ಲಾಧಿಕಾರಿಗಳ ಮಟ್ಟದಲ್ಲಿಯೂ ಸಹ ಒಂದು ನಿಧಿಯನ್ನು ಸ್ಥಾಪನೆ ಮಾಡಿ, ಸ್ಥಳೀಯವಾಗಿಯೇ ಪರಿಹಾರ ಮೊತ್ತವನ್ನು ಪಾವತಿಸುವಂತಹ ಕೆಲಸಗಳನ್ನು ಮಾಡಬೇಕಾಗುತ್ತದೆ. ಏಕೆಂದರೆ ಉದಾಹರಣೆಗೆ ಹೇಳುವುದಾದರೆ ಬೆಳಗಾವಿ ಜಿಲ್ಲೆಯ ಗಡಿ ಪ್ರದೇಶದಲ್ಲಿ ಯಾರೋ ಒಬ್ಬರಿಗೆ ಅನಾಹುತ ಸಂಭವಿಸಿದರೆ, ಅಂತಹವರು ಬೆಂಗಳೂರು ನಗರಕ್ಕೆ ಬಂದು ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ 5-10 ಸಾವಿರ ರೂಪಾಯಿಗಳ ಪರಿಹಾರ ಮೊತ್ತವನ್ನು ಪಡೆಯುವುದಕ್ಕೆ ಆಗುವುದಿಲ್ಲ. ಈ ಕಾರಣದಿಂದಾಗಿ ಪರಿಹಾರ ಮೊತ್ತವನ್ನು ಮಂಜೂರು ಮಾಡುವ ಅಧಿಕಾರವನ್ನು delegate ಮಾಡಿ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಆ ಅಧಿಕಾರವನ್ನು ನೀಡಿದರೆ ಮೃತರ ಕುಟುಂಬ ವರ್ಗದವರಿಗೆ ಬಹುತೇಕವಾಗಿ ಪರಿಹಾರದ ಮೊತ್ತವು ಸ್ಥಳೀಯವಾಗಿಯೇ ದೊರೆಯುವಂತಹ ಕೆಲಸಗಳಾಗುತ್ತವೆ. ಈ ನಿಟ್ಟಿನಲ್ಲಿ ಸರ್ಕಾರವು ಕ್ರಮವನ್ನು ತೆಗೆದುಕೊಳ್ಳಬೇಕು. ಆಕಸ್ಮಿಕ ಅವಘಡ ಎಂಬ ವ್ಯಾಖ್ಯಾನಕ್ಕೆ ಇನ್ನಷ್ಟು ಹೆಚ್ಚಿನ ಪರಿಭಾಷೆಯನ್ನು ನೀಡಿ ಎಲ್ಲಾ ರೀತಿಯ ಅವಘಡಗಳನ್ನು ಇದರ ವ್ಯಾಪ್ತಿಯೊಳಗೆ ತರಬೇಕು ಎಂಬ ವಿನಂತಿಯನ್ನು ನಾನು ಸರ್ಕಾರಕ್ಕೆ ಮಾಡಿಕೊಳ್ಳುತ್ತೇನೆ.

**ಶ್ರೀ ಎಂ.ಕೆ.ಪ್ರಾಣೇಶ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು ಬಹಳ ಗಂಭೀರವಾದ ವಿಚಾರವನ್ನು ಪ್ರಸ್ತಾಪಿಸಿದ್ದಾರೆ. ಏಕೆಂದರೆ, ಬಹುಶಃ ಮುಂಜಾಗ್ರತಾ ಕ್ರಮಗಳು ಇಲ್ಲದಿರುವಂತಹ ಸಂದರ್ಭಗಳಲ್ಲಿ ಈ ರೀತಿಯ ಅವಘಡಗಳು ಸಂಭವಿಸುತ್ತವೆ. ಇದಕ್ಕೆ ಕಾರಣವೇನೆಂದರೆ, ಉದಾಹರಣೆಗೆ ಹೇಳುವುದಾದರೆ, ಹಲವಾರು ಸಂದರ್ಭಗಳಲ್ಲಿ ಅರಣ್ಯ ಇಲಾಖೆಗಳಲ್ಲಿ ಕರ್ತವ್ಯ ನಿರ್ವಹಿಸುವಂತಹ ಹಲವಾರು ಜನರು ಅರಣ್ಯದಂಚಿನ

ಗ್ರಾಮಾಂತರ ಪ್ರದೇಶಗಳಲ್ಲಿ ವಾಸಿಸುತ್ತಾರೆ. ಪ್ರಾಣಿಗಳ ಹಾವಳಿಗಳಿಂದ ಅರಣ್ಯದ ಅಂಚಿನಲ್ಲಿ ವಾಸಿಸುತ್ತಿರುವವರ ತಮ್ಮ ಪ್ರಾಣಗಳನ್ನು ಕಳೆದುಕೊಂಡಿರುವಂತಹ ಪ್ರಕರಣಗಳು ನಮಗೆಲ್ಲರಿಗೂ ಮತ್ತು ಮಾನ್ಯ ಕಂದಾಯ ಮಂತ್ರಿಗಳಿಗೂ ಗೊತ್ತಿರುವಂತಹ ವಿಚಾರವಾಗಿದೆ. ಇತ್ತೀಚೆಗೆ ಮಾನ್ಯ ಕಂದಾಯ ಮಂತ್ರಿಗಳು ಚಿಕ್ಕಮಗಳೂರು ಜಿಲ್ಲೆಗೆ ಭೇಟಿ ನೀಡಿದಂತಹ ಸಂದರ್ಭದಲ್ಲಿ ಇದೇ ವಿಚಾರದಲ್ಲಿ ಹಲವಾರು ಮನವಿಗಳನ್ನು ಸಲ್ಲಿಸಲಾಗಿದೆ. ಸದರಿ ಗ್ರಾಮಾಂತರ ಪ್ರದೇಶಗಳಲ್ಲಿ ನಿರಂತರವಾಗಿ ಆನೆಗಳು ಬಂದು ಜೀವ ಹಾನಿಯನ್ನು ಮಾಡುತ್ತಿರುವಂತಹ ಸಂಗತಿಗಳನ್ನು ನಾವೆಲ್ಲರೂ ಕೇಳಿದ್ದೇವೆ. ಸಾಮಾನ್ಯವಾಗಿ ಅಪಘಾತ, ಪ್ರಾಣಿಗಳ ದಾಳಿಯಿಂದ ಜೀವ ಹಾನಿಯಾದ ಪ್ರಸಂಗಗಳಲ್ಲಿ ಪರಿಹಾರ ಮೊತ್ತವನ್ನು ನೀಡಬೇಕಾಗುತ್ತದೆ. ಆದರೆ ನಿಯಮಾನುಸಾರ ಮೃತರ ಕುಟುಂಬ ವರ್ಗದವರಿಗೆ ಪರಿಹಾರ ಮೊತ್ತವನ್ನು ಪಾವತಿಸುವಷ್ಟರಲ್ಲಿ 3-4 ತಿಂಗಳುಗಳಾಗುವಂತಹ ವ್ಯವಸ್ಥೆಗಳಿವೆ. ಮುಂಜಾಗ್ರತಾ ಕ್ರಮ ಎಂಬ ವಿಚಾರವನ್ನು ನಾನು ಏಕೆ ಪ್ರಸ್ತಾಪ ಮಾಡಿದ್ದೇನೆ ಎಂದರೆ ಪರಿಹಾರ ಮೊತ್ತವನ್ನು ಪಾವತಿಸುವಲ್ಲಿ ವಿಳಂಬವಾಗುವ ವಿಚಾರವು ಎಲ್ಲರಿಗೂ ಗೊತ್ತಿದೆ. ಅರಣ್ಯದ ಅಂಚಿನಲ್ಲಿನ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಾಣಿಗಳಿರುತ್ತವೆ ಹಾಗೂ ಅವುಗಳು ಸುತ್ತಮುತ್ತಲಿನ ಗ್ರಾಮಗಳಿಗೆ ನುಗ್ಗುತ್ತವೆ. ಅದನ್ನು ತಡೆಯುವಂತಹ ಕೆಲಸಗಳನ್ನು ಮಾಡಬೇಕು. ಒಂದು ವೇಳೆ ತಡೆಯುವಂತಹ ಕೆಲಸಗಳನ್ನು ಮಾಡುವುದಕ್ಕೆ ಆಗದಿದ್ದಲ್ಲಿ, ಇಂತಹ ಅವಘಡಗಳು ನಡೆದಂತಹ ಸಂದರ್ಭಗಳಲ್ಲಿ ಕೂಡಲೇ ಪರಿಹಾರವನ್ನು ಕೊಡುವಂತಹ ಕೆಲಸಗಳನ್ನು ಮಾಡಬೇಕಾಗುತ್ತದೆ. ಹಳ್ಳಿಗಾಡು ಪ್ರದೇಶಗಳಲ್ಲಿ ಹಲವಾರು ಕಡೆಗಳಲ್ಲಿ ವಿದ್ಯುತ್ ಕಂಬಗಳು ಹಾದು ಹೋಗಿವೆ. ಮಳೆಗಾಲದ ಸಂದರ್ಭಗಳಲ್ಲಿ ವಿದ್ಯುತ್ ಕಂಬದಿಂದ ವೈರ್‌ಗಳು ಯಾವಾಗ ತುಂಡಾಗಿ ಬೀಳುತ್ತದೆ ಎಂಬುದು ಗೊತ್ತಿರುವುದಿಲ್ಲ. ಯಾರೋ ಒಬ್ಬ ಗ್ರಾಮೀಣ ನಿವಾಸಿಯು ಗೊತ್ತಿಲ್ಲದೇ ವೈರ್ ತುಂಡಾಗಿ ಬಿದ್ದಿರುವಂತಹ ಸ್ಥಳಕ್ಕೆ ಹೋದಾಗ ಅವರಿಗೆ ಗೊತ್ತಿಲ್ಲದೇ ವೈರ್‌ಗಳು ಅವರ ಕೈಕಾಲುಗಳಿಗೆ ಸಿಕ್ಕಿಹಾಕಿಕೊಂಡಾಗ ಅವರು ತಮ್ಮ ಪ್ರಾಣವನ್ನು ಕಳೆದುಕೊಳ್ಳುತ್ತಾರೆ. ಇಂತಹ ಸಂದರ್ಭಗಳಲ್ಲಿಯೂ ಸಹ ಪರಿಹಾರವನ್ನು ಪಾವತಿಸುವ ನಿಯಮಗಳನ್ನು ಸರಳೀಕರಣಗೊಳಿಸಿದರೆ ಅನುಕೂಲವಾಗುತ್ತದೆ. ಆದರೆ ನಾವು ಯಾವುದೋ ಒಂದು ಸಂದರ್ಭದಲ್ಲಿ ಮಾನವೀಯತೆಯನ್ನು ಮರೆಯುತ್ತಿದ್ದೇವೆ ಎಂದು ನನಗನ್ನಿಸುತ್ತಿದೆ. ಅದಕ್ಕಾಗಿಯೇ ನಾನು ಪ್ರಥಮವಾಗಿ ಮುಂಜಾಗ್ರತಾ ಕ್ರಮಗಳ ಬಗ್ಗೆ ಉಲ್ಲೇಖಿಸಿದ್ದೇನೆ. ಈ ಎಲ್ಲಾ ವಿಚಾರಗಳಲ್ಲಿಯೂ ಸಹ ಸರ್ಕಾರ ಯೋಚನೆಯನ್ನು ಮಾಡಬೇಕು. ಅದರಲ್ಲೂ ಮಳೆಗಾಲದ ಸಂದರ್ಭಗಳಲ್ಲಿ, ಪ್ರಾಣಿಗಳ ಹಾವಳಿ ಹೆಚ್ಚು ಇರುವಂತಹ ಪ್ರದೇಶಗಳಲ್ಲಿ ಸರ್ಕಾರ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳುವ ಬಗ್ಗೆ ಸೂಕ್ತ ಕೆಲಸ ಕಾರ್ಯಗಳನ್ನು ಕೈಗೆತ್ತಿಕೊಳ್ಳಬೇಕಾಗುತ್ತದೆ. ಇಂತಹ ಸಂದರ್ಭಗಳೂ ಮೀರಿ ಆಕಸ್ಮಿಕ ಅವಘಡಗಳು ಸಂಭವಿಸಿದಾಗ ತತ್‌ಕ್ಷಣ ನಿಯಮಾನುಸಾರ ಸರ್ಕಾರವು ನಿಗದಿಪಡಿಸಿದ ಪರಿಹಾರ ಮೊತ್ತವನ್ನು ಮಂಜೂರು ಮಾಡಬೇಕು. ಅಧಿಕಾರಿಗಳ ಮುಖಾಂತರ ಸರ್ಕಾರಕ್ಕೆ ಪರಿಹಾರ ಮೊತ್ತದ ಮನವಿಯನ್ನು ಸಲ್ಲಿಸಿದ

ನಂತರ ಸರ್ಕಾರವು ಅವಘಡವನ್ನು ಪರಿಶೀಲನೆ ಮಾಡುತ್ತದೆ. ಯಾರಾದರೂ ಪರಿಹಾರದ ಮೊತ್ತದ ಆಸೆಗಾಗಿ ಪ್ರಾಣಿಗಳಂದ ತಮ್ಮ ಪ್ರಾಣವನ್ನು ಕಳೆದುಕೊಳ್ಳಲು ಸಿದ್ಧರಿರುತ್ತಾರೆಯೇ? ಇದು ಎಲ್ಲರಿಗೂ ಗೊತ್ತಿರುವ ಸಾಮಾನ್ಯ ವಿಚಾರವಾಗಿದೆ. ಹೀಗಾಗಿ ಎಲ್ಲಾ ಪ್ರಕರಣಗಳನ್ನೂ ನಿಯಮದಡಿ ಪರಿಶೀಲಿಸಬೇಡಿ. ಹಲವಾರು ಮೃತರ ಕುಟುಂಬ ವರ್ಗದವರು ಬಡವರಿರುತ್ತಾರೆ. ಅವರಿಗೆ ಈ ಪರಿಹಾರದ ಮೊತ್ತ ತಲುಪುವಷ್ಟರಲ್ಲಿ ಅವರುಗಳು ಆತ್ಮಹತ್ಯೆಯನ್ನು ಮಾಡಿಕೊಳ್ಳುವಂತಹ ಪರಿಸ್ಥಿತಿ ನಿರ್ಮಾಣವಾಗಿರುತ್ತದೆ. ಹೀಗಾಗಿ ಸರ್ಕಾರವು ಈ ವಿಚಾರದಲ್ಲಿ ಗಂಭೀರವಾಗಿ ಯೋಚನೆಯನ್ನು ಮಾಡಬೇಕಾಗುತ್ತದೆ. ಅವಘಡ ನಡೆಯುವುದಕ್ಕೆ ಅವಕಾಶವನ್ನು ನೀಡದೇ ಅದಕ್ಕೆ ಸೂಕ್ತ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಬೇಕು. ಆದಾಗ್ಯೂ ಅವಘಡಗಳು ಸಂಭವಿಸಿದ ಸಂದರ್ಭಗಳಲ್ಲಿ ತಕ್ಷಣ ಪರಿಹಾರವನ್ನು ಮಂಜೂರು ಮಾಡುವಂತಹ ಕೆಲಸಗಳನ್ನು ಮಾಡಬೇಕೆಂದು ನಾನು ಸರ್ಕಾರವನ್ನು ವಿನಂತಿಸುತ್ತೇನೆ.

**ಶ್ರೀ ಶರಣಪ್ಪ ಮಟ್ಟೂರ(ಶಿಕ್ಷಕರ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು. ಮಾನ್ಯ ಸದಸ್ಯರಾದ ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ರವರು ಇವತ್ತಿನ ದಿವಸ ರಾಜ್ಯದಲ್ಲಿ ಆಕಸ್ಮಿಕ ಅವಘಡ, ಪ್ರಾಕೃತಿಕ ವಿಪತ್ತುಗಳು ಸಂಭವಿಸಿದಲ್ಲಿ ಮೃತರಾಗುತ್ತಿರುವ ನಾಗರೀಕರಿಗೆ ಸಮಾನವಾಗಿ ಪರಿಹಾರ ಒದಗಿಸುವ ಬಗ್ಗೆ ಮಾನ್ಯ ಸದಸ್ಯರಾದ ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು ಒಳ್ಳೆಯ ವಿಚಾರವನ್ನು ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಈ ವಿಚಾರದಲ್ಲಿ ಈಗಾಗಲೇ ಸಾಕಷ್ಟು ಮಾರ್ಗಸೂಚಿಗಳಿವೆ. ಆದಾಗ್ಯೂ ಎರಡು ಅಂಶಗಳ ಬಗ್ಗೆ ಮಾನ್ಯ ಸದಸ್ಯರು ವಿಶೇಷವಾಗಿ ಉಲ್ಲೇಖ ಮಾಡಿದ್ದಾರೆ. ಮೊದಲನೆಯದು, ಮನೆಯನ್ನು ಸುತ್ತುವರೆದು ಬೆಂಕಿಯನ್ನಿಡುವಂತಹ ಹಲವು ಘಟನೆಗಳು ಕೂಡ ನಡೆದಿದೆ. ಈ ವಿಚಾರದಲ್ಲಿ ನಾನು ಒಂದು ಉದಾಹರಣೆಯನ್ನು ಕೊಡಲಿಚ್ಛಿಸುತ್ತೇನೆ. ಇಂತಹ ಘಟನೆಗಳು ಸಂಭವಿಸಿದಾಗ ಸಿಆರ್‌ಪಿಸಿಯ ಕಲಂ 357 ರನ್ವಯ ಸತ್ರ ನ್ಯಾಯಾಧೀಶರು ಪರಿಹಾರವನ್ನು ಒದಗಿಸುವಂತಹ ವ್ಯವಸ್ಥೆಗಳು ನ್ಯಾಯಾಲಯದಲ್ಲಿವೆ.

ಎರಡನೆಯದು ವಿದ್ಯಾರ್ಥಿಗಳ ಬಗ್ಗೆ ಉಲ್ಲೇಖ ಮಾಡಿದ್ದಾರೆ. ಇದು ಬಹಳ ಪ್ರಮುಖವಾದ ವಿಚಾರವಾಗಿದೆ. ವಿದ್ಯಾರ್ಥಿಗಳು ಎಲ್ಲಿಯಾದರೂ ಪ್ರವಾಸಕ್ಕೆಂದು ತೆರಳಿದಾಗ ಅಲ್ಲಿ ನಡೆದಿರುವಂತಹ ಅವಘಡಗಳಲ್ಲಿ ಮೃತರಾದಾಗ ಅಂತಹ ಪ್ರಕರಣಗಳನ್ನು ವಿಶೇಷವಾಗಿ ಗಮನಹರಿಸಿ ಪರಿಹಾರವನ್ನು ಕೊಡುವುದಕ್ಕಾಗಿ ಮಾನದಂಡಗಳನ್ನು ಅನುಸರಿಸುವುದು ಬಹಳ ಅವಶ್ಯಕವಾಗಿದೆ. ಇಂತಹ ವಿಚಾರದಲ್ಲಿ NDRF (National Disaster Response Fund) and SDRF (State Disaster Response Fund) scheme ನ ನಿಯಮಗಳೇನು ಎಂಬ ಬಗ್ಗೆ ತಿಳಿಯಬೇಕಾಗುತ್ತದೆ. ಮಾನ್ಯ ಕಂದಾಯ ಸಚಿವರು ಬಹಳ ಹಿರಿಯ ಸಚಿವರಾಗಿದ್ದು, ಅವರಿಗೆ ಹೆಚ್ಚಿನ

ಅನುಭವವಿದೆ. ಇಂತಹ ವಿಚಾರಗಳಲ್ಲಿ ಮಾನ್ಯ ಸಚಿವರು ಹೆಚ್ಚಿನ ಮುತುವರ್ಜಿಯನ್ನು ವಹಿಸಿ ವಿದ್ಯಾರ್ಥಿಗಳಿಗೆ ಪರಿಹಾರ ಮೊತ್ತವನ್ನು ನೀಡುವಂತಹ ಕೆಲಸಗಳಾಗಬೇಕು. ಪ್ರತಿ ವರ್ಷ ವಿದ್ಯಾರ್ಥಿಗಳು ಪ್ರವಾಸಕ್ಕೆಂದು ಹೋಗುತ್ತಾರೆ. ಕೆಲವು ಸಂದರ್ಭಗಳಲ್ಲಿ ಆಕಸ್ಮಿಕ ಅವಘಡಗಳು ಸಂಭವಿಸುತ್ತವೆ. ಅಪಘಾತಗಳು ಸಂಭವಿಸಿದಾಗ ವಿಮೆಯ ಸೌಲಭ್ಯವಿರುತ್ತದೆ ಹೀಗಾಗಿ ಪರಿಹಾರ ಮೊತ್ತವನ್ನು ಪಡೆಯುವ ಅವಕಾಶಗಳಿರುತ್ತವೆ. ವಿದ್ಯಾರ್ಥಿಗಳು ಈಜಲು ಅಥವಾ ಎತ್ತರದ ಪ್ರದೇಶಗಳಿಗೆ ಹೋದಾಗ ಅವಘಡಗಳು ಸಂಭವಿಸಿ ಮೃತರಾದಾಗ, ಅವರ ಕುಟುಂಬ ವರ್ಗದವರಿಗೆ ಯಾವುದೇ ರೀತಿಯ ಪರಿಹಾರ ಸಿಗುವುದಿಲ್ಲ. ಹೀಗಾಗಿ ದಯಮಾಡಿ ಈ ನಿಟ್ಟಿನಲ್ಲಿ ವಿಚಾರ ಮಾಡಿ, ಮೃತ ವಿದ್ಯಾರ್ಥಿಗಳ ಕುಟುಂಬ ವರ್ಗದವರಿಗೆ ಪರಿಹಾರ ಮೊತ್ತವನ್ನು ಪಾವತಿಸಲು ಮಾನದಂಡವನ್ನು ರೂಪಿಸಲು ಒಳ್ಳೆಯ ಅವಕಾಶಗಳಿವೆ. ಇಂತಹ ವಿಷಯವನ್ನು ಪ್ರಸ್ತಾಪಿಸಿದ ಮಾನ್ಯ ಸದಸ್ಯರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಹಾಗೆಯೆ ಮುಂದುವರೆದು ಈ ವಿಚಾರದಲ್ಲಿ ಮಾನ್ಯ ಸಚಿವರಿಗೆ ಒಂದು ಸಲಹೆಯನ್ನು ಕೊಡಲಿಚ್ಛಿಸುತ್ತೇನೆ ಏಕೆಂದರೆ ಇದು ಬಹಳ ಮಹತ್ವದ ವಿಚಾರವಾಗಿದೆ. ಎಸ್.ಸಿ. ಮತ್ತು ಎಸ್.ಟಿ. ಪಂಗಡದ ಜನರಿಗೂ ಸಹ ಕೆಲವೊಮ್ಮೆ ಅವಘಡಗಳು ಸಂಭವಿಸುತ್ತವೆ. ಉದಾಹರಣೆಗೆ ಬೆಂಕಿ ಇಟ್ಟ ಪ್ರಸಂಗಗಳಲ್ಲಿ, ಕೋಮು ಗಲಭೆಗಳುಂಟಾದಾಗ, ಜಾತಿ, ಜಾತಿಗಳ ನಡುವೆ ಹೊಡೆದಾಟವಾದಾಗ ಅಥವಾ ಅತ್ಯಾಚಾರಗಳಂತಹ ಪ್ರಕರಣಗಳು ಸಂಭವಿಸಿದಾಗ ಪರಿಹಾರವನ್ನು ನೀಡಲು ಅನೇಕ ಮಾನದಂಡಗಳಿವೆ, ಕಾಯ್ದೆ-ಕಾನೂನುಗಳಿವೆ. ಇದರಿಂದಾಗಿ ಪರಿಹಾರವನ್ನು ಪಡೆಯಲು ಅವಕಾಶಗಳಿವೆ. CVCF (Central Victim Compensation Fund) ಎಂಬುದಾಗಿ ಇದೆ. 1989 ನೇ ಸಾಲಿನಿಂದ ಇಲ್ಲಿಯವರೆವಿಗೂ ಸಹ ಸದರಿ ಯೋಜನೆಯು ಜಾರಿಯಲ್ಲಿದೆ. ಅದಕ್ಕೆ 2003 ನೇ ಸಾಲಿನಲ್ಲಿ ತಿದ್ದುಪಡಿಯನ್ನೂ ಸಹ ತರಲಾಗಿದೆ. ಅದೇ ರೀತಿಯಾಗಿ ಈ ವಿಚಾರದಲ್ಲಿ ಕೇಂದ್ರ ಸರ್ಕಾರದ ಯೋಜನೆಯೂ ಸಹ ಇದೆ. ಯಾವ್ಯಾವ ಅವಘಡಗಳಿಗೆ ಎಷ್ಟೆಷ್ಟು ಪರಿಹಾರ ಮೊತ್ತವನ್ನು ನೀಡಬೇಕು ಎಂಬ ಬಗ್ಗೆ ಮಾರ್ಗಸೂಚಿ ಹಾಗೂ ನಿಯಮಾವಳಿಗಳು ಇವೆ. ಆದರೆ ವಿದ್ಯಾರ್ಥಿಗಳಿಗೆ ಅವಘಡಗಳು ಸಂಭವಿಸಿದಾಗ ಪರಿಹಾರವನ್ನು ಕೊಡುವುದಕ್ಕೆ ಅವಕಾಶಗಳು ಇಲ್ಲ. ಅದೇ ರೀತಿಯಾಗಿ ಸರ್ಕಾರಿ ನೌಕರರಿಗೆ, ಶಿಕ್ಷಕರುಗಳಿಗೆ ಅವಘಡಗಳು ಸಂಭವಿಸಿದಾಗ ಅವರಿಗೂ ಸಹ ಪರಿಹಾರ ಮೊತ್ತವನ್ನು ನೀಡಲು ಕಾಯ್ದೆ ಕಾನೂನುಗಳಲ್ಲಿ ಅವಕಾಶಗಳಿಲ್ಲ ಎಂಬುದಾಗಿ ಹೇಳುತ್ತಾರೆ. ಆದ್ದರಿಂದ ಇಂತಹ ವಿಚಾರಗಳಲ್ಲಿ ಸರ್ಕಾರವು ಗಮನ ಹರಿಸಿ, ಇಂತಹ ಅವಘಡಗಳು ಸಂಭವಿಸಿದಾಗ ಮೃತರ ಕುಟುಂಬ ವರ್ಗದವರಿಗೆ ಪರಿಹಾರ ಮೊತ್ತವನ್ನು ಮಂಜೂರು ಮಾಡಲು ಸೂಕ್ತ ಮಾನದಂಡವನ್ನು ಜಾರಿಗೊಳಿಸಬೇಕೆಂದು ನಾನು ಮನವಿಯನ್ನು ಮಾಡಿಕೊಳ್ಳುತ್ತೇನೆ ಹಾಗೂ ನನಗೆ ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ.

**ಶ್ರೀ ಕಾಗೋಡು ತಿಮ್ಮಪ್ಪ(ಮಾನ್ಯ ಕಂದಾಯ ಸಚಿವರು)**:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ರವರು ಪ್ರಸ್ತಾಪ ಮಾಡಿರುವಂತಹ ವಿಷಯದಲ್ಲಿ ಇತರೆ

ಮಾನ್ಯ ಸದಸ್ಯರುಗಳು ಕೈಜೋಡಿಸಿ, ತಮ್ಮ ತಮ್ಮ ಅಭಿಪ್ರಾಯಗಳನ್ನು ಹೇಳಿದ್ದಾರೆ. ಮಾನ್ಯ ಸದಸ್ಯರುಗಳು ಪ್ರಸ್ತಾಪಿಸಲ್ಪಟ್ಟಿರುವ ವಿಚಾರದಲ್ಲಿ ನೈಸರ್ಗಿಕ ವಿಕೋಪಗಳು ನಡೆದಿರುವಂತಹ ಸಂದರ್ಭಗಳಲ್ಲಿ ಪರಿಹಾರ ಮೊತ್ತವನ್ನು ನೀಡುವ ಬಗ್ಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಮಾರ್ಗಸೂಚಿಗಳಿವೆ. ಆದರೆ ಈಗ ವಿಷಯವನ್ನು ಪ್ರಸ್ತಾಪ ಮಾಡುವ ಸಂದರ್ಭದಲ್ಲಿ ಅನೇಕ ಘಟನೆಗಳು ಅಂದರೆ ಅದು ಅಪಘಾತವಾಗಿರಬಹುದು ಅಥವಾ ವೈಯಕ್ತಿಕ ಕಾರಣಗಳಿಂದಾಗಿ ಕೆರೆಗಳಲ್ಲಿ ಮೃತರಾಗಿರಬಹುದು. ಇಂತಹ ಸಾಮಾನ್ಯವಾದ ಅವಘಡಗಳು ಸಂಭವಿಸುತ್ತಿರುತ್ತವೆ. ಇಂತಹ ಸನ್ನಿವೇಶಗಳಲ್ಲಿ ಪರಿಹಾರವನ್ನು ನೀಡುವುದಕ್ಕೆ ಒಂದು ನಿರ್ದಿಷ್ಟವಾದ ಕಾರ್ಯಸೂಚಿ ಇಲ್ಲ. ತಾವು ಹೇಳಿರುವಂತೆ ಇತ್ತೀಚಿನ ದಿನಗಳಲ್ಲಿ ಆಕಸ್ಮಿಕ ಅವಘಡಗಳು ಸಂಭವಿಸುತ್ತಿರುವುದು ನಿಜ. ಅಂತಹ ಪ್ರಕರಣಗಳಲ್ಲಿ ಮೃತರ ಕುಟುಂಬ ವರ್ಗದವರಿಗೆ ಪರಿಹಾರವನ್ನು ಮಂಜೂರು ಮಾಡುವುದರ ಮುಖಾಂತರ ನ್ಯಾಯವನ್ನು ನೀಡುವುದರ ಅವಶ್ಯಕತೆಯಿದೆ ಎನ್ನುವ ಅಂಶವು ಎದ್ದು ಕಾಣುತ್ತದೆ. ಈ ವಿಚಾರದಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಮಾನ್ಯ ಸದಸ್ಯರಾದ ಪ್ರಾಣೇಶ್‌ರವರು ಪ್ರಸ್ತಾಪಿಸಿರುವ ಅಂಶಗಳನ್ನು ನಾನು ಗಮನಿಸಿದ್ದೇನೆ. ಪ್ರಾಣಿಗಳ ದಾಳಿಗಳಿಂದ ಅವಘಡಗಳು ಸಂಭವಿಸಿದ ಪ್ರಕರಣಗಳಲ್ಲಿ ತತ್‌ಕ್ಷಣ ಪರಿಹಾರವನ್ನು ಕೊಡಬೇಕೆನ್ನುವ ಅಂಶಗಳಿವೆ. ಇಂತಹ ಸಂಗತಿಗಳನ್ನು ಗಮನದಲ್ಲಿಟ್ಟುಕೊಂಡು ಪರಿಹಾರ ಪಾವತಿಸುವ ನಿಟ್ಟಿನಲ್ಲಿ ಒಂದು ಮಾರ್ಗಸೂಚಿಯನ್ನು ತರುವುದಕ್ಕೆ ಪ್ರಯತ್ನವನ್ನು ಮಾಡಲಾಗುವುದು.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ನಾನು ಪ್ರಸ್ತಾಪ ಮಾಡಿರುವ ವಿಷಯದ ವ್ಯಾಪ್ತಿಯು ವಿಸ್ತಾರವಾಗಿರುವುದರಿಂದ, ನಾನು ಪ್ರಶ್ನೆಯನ್ನು ಕೇಳುವ ಸಂದರ್ಭದಲ್ಲಿ ಆಕಸ್ಮಿಕ ಮತ್ತು ಅವಘಡ ಎಂಬ ಎರಡು ಶಬ್ದಗಳನ್ನು ಸೇರಿಸಿಕೊಂಡಿದ್ದೇನೆ. ಏಕೆಂದರೆ, ಎಲ್ಲಾ ಪ್ರಸಂಗಗಳನ್ನು ಪ್ರತ್ಯೇಕವಾಗಿ ಹೇಳುವುದಕ್ಕಾಗುವುದಿಲ್ಲ. ಆಕಸ್ಮಿಕ ಎಂದರೆ ಅದು ಅಪಘಾತವಾಗಬಹುದು ಅಥವಾ drowning ಆಗಬಹುದು ಅಥವಾ ಇನ್ನಾವುದೇ ರೀತಿಯ ಅವಘಡಗಳಾಗಬಹುದು. ಪ್ರಸ್ತುತ ವಿಷಯವನ್ನು ನಿಯಮ ೩೩೦ ರಲ್ಲಿ ಪ್ರಸ್ತಾಪಿಸಿದಾಗ, ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡಬೇಕೆಂದು ಕೇಳಿದರೆ, ಇದು ನಮಗೆ ಬರುವುದಿಲ್ಲ ಬಹುಶಃ ಇದು ಕಂದಾಯ ಇಲಾಖೆಗೆ ಸಂಬಂಧಪಟ್ಟಿದ್ದು ಎಂಬುದಾಗಿ ಹೇಳುತ್ತಾರೆ. ಮಾನ್ಯ ಸಚಿವರು ಉಲ್ಲೇಖಿಸಿರುವಂತೆ ಎಲ್ಲಿಯಾದರೂ ಆನೆ ದಾಳಿಯಿಂದ ಯಾರಾದರೂ ಮೃತರಾದರೆ ಅಂತಹ ಪ್ರಸಂಗವು ತಮ್ಮ ಇಲಾಖೆಗೆ ಬರುವುದಿಲ್ಲ, ಇದು ಅರಣ್ಯ ಇಲಾಖೆಗೆ ಸಂಬಂಧಪಟ್ಟಿದ್ದು ಎಂಬುದಾಗಿ ಹೇಳುತ್ತಾರೆ.

(ಮುಂದು)

(೯86)1.20/15.11.2017/CS/BNS

**ಶ್ರೀ ಕ್ಯಾಪ್ಟನ್ ಗಣೇಶ್ ಕಾಣೀಕ್(ಮುಂದು)**

ಈ ಮಾನದಂಡಗಳನ್ನು ರೂಪಿಸುವಾಗ ಇಲಾಖೆಗಳ ನಡುವೆ ಸಮನ್ವಯ ಇರಬೇಕೆನ್ನುವ ಒಂದು ಅಂಶವನ್ನು ಸೇರಿಸಿಕೊಳ್ಳಬೇಕಾಗುತ್ತದೆ. ಸದನದಲ್ಲಿ ಕೇಳುವ ಪ್ರಶ್ನೆಗಳನ್ನೇ ಒಂದೊಂದು ಸಲ ನಮ್ಮ ಇಲಾಖೆಗೆ ಸಂಬಂಧಿಸಿದ್ದಲ್ಲ ಎಂದು ಇಲಾಖೆಯವರು ಹೇಳಿಬಿಡುತ್ತಾರೆ. ನಾವು ಸದನಕ್ಕೆ ಪ್ರಶ್ನೆ ಕೇಳುವಾಗ ಏನೋ ಕ್ಲ್ಯಾರಿಟಿ ಇಲ್ಲದೇ ಇಲಾಖೆಗೆ ಪ್ರಶ್ನೆ ಕೇಳಿದ್ದಲ್ಲಿ ಈ ಪ್ರಶ್ನೆ ನಮ್ಮ ಇಲಾಖೆಗೆ ಬರುವುದಿಲ್ಲ ಎಂದು ಅದನ್ನು ತಳ್ಳಿ ಹಾಕುತ್ತಾರೆ. ಅದೇ ರೀತಿ ಏನಾದರೂ ಆಕಸ್ಮಿಕ ಮತ್ತು ಅವಘಡಗಳು ನಡೆದು ಸಾವು ಸಂಭವಿಸಿದಾಗ ಅಧಿಕಾರಿಗಳು ಯಾವ ರೀತಿ ವರ್ತನೆ ಮಾಡುತ್ತಾರೆಂದರೆ ಒಂದು ವೇಳೆ ಸಾವು ಪ್ರಾಕೃತಿಕ ವಿಕೋಪದಿಂದ ಆಗಿದ್ದರೆ ಅದು ಕಂದಾಯ ಇಲಾಖೆಗೆ ಬರುತ್ತದೆ. ಆನೆ ದಾಳಿ ಆಗಿದ್ದರೆ ಅದು ಬೇರೆ ಇಲಾಖೆಗೆ ಬರುತ್ತದೆ. ಹೀಗಿರುವಾಗ ಇಲಾಖೆಗಳ ನಡುವೆ ಕೂಡ ಸಮನ್ವಯವನ್ನು ತರುವುದು ಅವಶ್ಯಕವಾಗಿದೆ. ಈ ರೀತಿಯ ಆಕಸ್ಮಿಕ ಅಥವಾ ಅವಘಡ ಏನೇ ಸಂಭವಿಸಿರಲಿ ಮೃತ ಕುಟುಂಬ ಏನಿದೆ ಅವರಿಗೆ ಸಹಕಾರ ಮತ್ತು ಸಾಂತ್ವನ ಹೇಳುವ ಆದ್ಯ ಕರ್ತವ್ಯ ರಾಜ್ಯ ಸರ್ಕಾರದ್ದಾಗಿರುತ್ತದೆ. ಆ ದೃಷ್ಟಿಯಲ್ಲಿ ಮಾನದಂಡಗಳನ್ನು ರೂಪಿಸಿಕೊಂಡು ನಾವು ಮುಂದಿನ ಕಾರ್ಯಚರಣೆಗಳನ್ನು ಮಾಡಬೇಕೆಂದು ಸರ್ಕಾರಕ್ಕೆ ನಾನು ವಿನಂತಿಸಿಕೊಳ್ಳುತ್ತೇನೆ.

ಎರಡನೆಯದಾಗಿ, ರಾಜ್ಯದಲ್ಲಿ ‘Universal Health Scheme’ ವಿಮೆಯನ್ನು ಎಲ್ಲರಿಗೂ ತರುವಂತಹ ಒಂದು ಕಲ್ಪನೆ ಇದೆ. ಈ ರೀತಿಯ ಆಕಸ್ಮಿಕಗಳಿಗೆ ಆ ಪಾಲಿಸಿಯಲ್ಲಿ ಎಲ್ಲಾದರೂ ಅವಕಾಶ ಮಾಡಿಕೊಡಲಾಗುವುದೇ? ಮುಖ್ಯಮಂತ್ರಿಗಳ ಪರಿಹಾರ ನಿಧಿಯಲ್ಲಿ ಎಷ್ಟು ಹಣ ಇದೆ ಎನ್ನುವುದು ನಮಗೆ ಗೊತ್ತಿಲ್ಲ, ಯಾವಾಗ ಹಣ ಇರುತ್ತದೆ, ಯಾವಾಗ ಇರುವುದಿಲ್ಲ ಎನ್ನುವುದು ನನಗೆ ಗೊತ್ತಿಲ್ಲ. ನನಗೆ ತಿಳಿದಿರುವ ಹಾಗೆ ಮುಖ್ಯಮಂತ್ರಿಗಳ ಪರಿಹಾರ ನಿಧಿಯಲ್ಲಿ ಹಣ ಇದ್ದರೆ ಕೊಡುತ್ತಾರೆ ಇಲ್ಲದಿದ್ದರೆ ಇಲ್ಲ. ಈ ರೀತಿಯ ಆಕಸ್ಮಿಕಗಳು, ಅವಘಡಗಳು ಸಂಭವಿಸುವುದು ಸಾಮಾನ್ಯವಾಗಿರುವುದರಿಂದ, ‘Universal Health Scheme’ ವಿಮೆಯಲ್ಲಿ ಈ ರೀತಿಯ ಅನಾಹುತಗಳಿಗೆ ಅವಕಾಶವನ್ನು ಮಾಡಿಕೊಟ್ಟು, ಇದಕ್ಕಾಗಿಯೇ ಒಂದು ಮಾನದಂಡವನ್ನು ರೂಪಿಸಿಕೊಂಡು ರಾಜ್ಯದ ಎಲ್ಲಾ ಪ್ರಜೆಗಳಿಗೆ ನ್ಯಾಯೋಚಿತವಾಗಿ ತಾರತಮ್ಯ ಇಲ್ಲದೇ ಒಂದು ಪರಿಹಾರ ನೀಡುವ ಕ್ರಮಕ್ಕೆ ಸರ್ಕಾರ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಕಾಗೋಡು ತಿಮ್ಮಪ್ಪ(ಕಂದಾಯ ಸಚಿವರು)**:- ಮಾನ್ಯ ಸಭಾಪತಿಯವರೇ, ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು ಮಹತ್ವದ ಹಾಗೂ ಅಪರೂಪದ ಸಲಹೆಗಳನ್ನು ಸರ್ಕಾರಕ್ಕೆ ನೀಡಿದ್ದಾರೆ. ಅವುಗಳ ಬಗ್ಗೆ ಗಂಭೀರವಾಗಿ ಪರಿಶೀಲಿಸಬೇಕಾದ ಅಗತ್ಯವಿದೆ ಎನ್ನುವುದನ್ನು ನಾನು ಒಪ್ಪುತ್ತೇನೆ.

ಆದ್ದರಿಂದ ಈ ವಿಚಾರದ ಬಗ್ಗೆ ಪರಿಶೀಲಿಸಿ, ಒಂದು ಹೊಸ ನೀತಿಯನ್ನು ಮಾಡುವುದಕ್ಕೆ ಕ್ರಮ ಕೈಗೊಳ್ಳುತ್ತೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಧನ್ಯವಾದಗಳು.

**ಆ) ವಿಧಾನಸಭೆ ಮತ್ತು ವಿಧಾನಪರಿಷತ್ತಿನ ಮಾನ್ಯ ಸದಸ್ಯರುಗಳಿಗೆ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲಾಗಿರುವ ಆಪ್ತ ಸಹಾಯಕರುಗಳಿಗೆ ಕಳೆದ 8-9 ತಿಂಗಳುಗಳಿಂದ ವೇತನ ನೀಡದಿರುವ ಬಗ್ಗೆ.**

~~~~~~

**ಶ್ರೀ ಬಿ.ಜೆ.ಪುಟ್ಟಸ್ವಾಮಿ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ವಿಚಾರವನ್ನು ಪ್ರಸ್ತಾಪಿಸುವುದಕ್ಕೆ ಮಾನಸಿಕವಾಗಿ ಮನಸ್ಸಿಗೆ ನೋವಾಗುತ್ತದೆ. ಏಕೆಂದರೆ, ಶಾಸಕರು ಮತ್ತು ಪಾರ್ಲಿಮೆಂಟಿನ ಸದಸ್ಯರು, ಕೇಂದ್ರ ಸಚಿವರುಗಳಿಗೆ ಕೊಟ್ಟಂತಹ ಆಪ್ತ ಸಹಾಯಕರುಗಳಿಗೆ ಕಳೆದ 8-10 ತಿಂಗಳುಗಳಿಂದ ಸಂಬಳ ನೀಡುವುದಕ್ಕೆ ಈ ಸರ್ಕಾರ ನಿಶಕ್ತವಾಗಿರುವುದನ್ನು ನೋಡಿ ನನಗೆ ಬಹಳ ನೋವಾಗುತ್ತಿದೆ. 8-10 ತಿಂಗಳುಗಳಿಂದಲೂ ನಾನು ಅಧಿಕಾರಿಗಳಿಗೆ ಈ ಬಗ್ಗೆ ಒತ್ತಡ ತಂದಿದ್ದೇನೆ. ನನ್ನ ಆಪ್ತ ಸಹಾಯಕನಿಗೂ ಸಹ ಸಂಬಳ ಆಗಿರುವುದಿಲ್ಲ. ಇನ್ನು ಯಾರ್ಯಾರಿಗೆ ಸಂಬಳ ಬಂದಿಲ್ಲ ಎಂದರೆ ಶ್ರೀ ರೆಹಮಾನ್ ಖಾನ್‌ರವರ ಆಪ್ತ ಸಹಾಯಕರಿಗೆ ಸಂಬಳ ಬಂದಿಲ್ಲ. ಶ್ರೀ ರಾಜೀವ್ ಚಂದ್ರಶೇಖರ್, ಶ್ರೀ ಪಿ.ಸಿ.ಮೋಹನ್, ಶ್ರೀ ಹರಿಪ್ರಸಾದ್, ಶ್ರೀ ಸದಾನಂದಗೌಡರು, ಶ್ರೀ ಕುಪೇಂದ್ರರೆಡ್ಡಿ, ಶ್ರೀ ಅನಂತಕುಮಾರ್, ಶ್ರೀ ಕೆ.ಸಿ.ರಾಮಮೂರ್ತಿ, ಡಿಫೆನ್ಸ್ ಮಿನಿಸ್ಟರ್, ಶ್ರೀಮತಿ ನಿರ್ಮಲ ಸೀತರಾಮನ್ ಇವರುಗಳ ಆಪ್ತ ಸಹಾಯಕರುಗಳಿಗೆ ಕಳೆದ 8-10 ತಿಂಗಳುಗಳಿಂದ ಸಂಬಳ ಬಂದಿಲ್ಲ. ಹಾಗೆಯೇ ನಮ್ಮ ವಿಧಾನ ಪರಿಷತ್ತಿನ ಸದಸ್ಯರುಗಳಾದ ಶ್ರೀ ನಾರಾಯಣಸ್ವಾಮಿ ಹಾಗೂ ಶ್ರೀಮತಿ ಜಯಮಾಲರವರ ಆಪ್ತ ಸಹಾಯಕರಿಗೂ ಸಹ ಸಂಬಳ ಬಂದಿರುವುದಿಲ್ಲ. ದಿನಾಂಕ 24-09-2013ರಲ್ಲಿ ಒಂದು ಸರ್ಕಾರಿ ಆದೇಶವನ್ನು ಹೊರಡಿಸಿ, ಆ ಆದೇಶದ ಅನ್ವಯ ಆಪ್ತ ಸಹಾಯಕರುಗಳನ್ನು ನೇಮಕ ಮಾಡಿಕೊಳ್ಳಲಾಗಿದೆ. ಈ ರೀತಿ ನೇಮಕ ಮಾಡಿಕೊಂಡಿರುವವರಿಗೆ ವೇತನ ಏಕೆ ನೀಡುತ್ತಿಲ್ಲ ಎಂದು ಕೇಳಿದರೆ, ಮೊದಲಿಗೆ ಈ ವೇತನವನ್ನು ಬೆಂಗಳೂರು ನಗರ ಮತ್ತು ಬೆಂಗಳೂರು ಉತ್ತರ ತಾಲ್ಲೂಕಿನ Deputy Commissioner ಮತ್ತು ತಾಲ್ಲೂಕು ಕಛೇರಿಗಳಲ್ಲಿ ವೇತನಗಳನ್ನು ಡ್ರಾ ಮಾಡಲಾಗುತ್ತಿತ್ತು. ಆದರೆ ಏಪ್ರಿಲ್ 1, 2017ರಲ್ಲಿ ಹೊಸ ಆಯವ್ಯಯ ಬಂದ ಮೇಲೆ ಏಪ್ರಿಲ್‌ನಿಂದ Grant ಬಂದಿಲ್ಲವೆಂದು ಸಂಬಳವನ್ನು ನೀಡುತ್ತಿಲ್ಲ. ಹೊಸ ಆಯವ್ಯಯ ಬಂದ ಮೇಲೆ ನೌಕರರಿಗೆ ನೀಡಬೇಕಾದ ವೇತನವನ್ನು ಆ ಶೀರ್ಷಿಕೆಯಡಿಯಲ್ಲಿ ಕೊಡುವುದಿಲ್ಲ ಎಂದರೆ ಸರ್ಕಾರ ಆದೇಶಗಳನ್ನು ಏಕೆ ಹೊರಡಿಸಬೇಕು ಎನ್ನುವುದು ನನ್ನದೊಂದು ಪ್ರಶ್ನೆ. ಈಗಾಗಲೇ ಕಂದಾಯ ಇಲಾಖೆಯ ಕಾರ್ಯದರ್ಶಿಯವರು Regional Commissioner ರವರಿಗೆ ಒಂದು ಪತ್ರವನ್ನು ಬರೆದು ನಿಮ್ಮ ಇಲಾಖೆಯಲ್ಲಿರುವ ಹಣದಲ್ಲಿ ವೇತನ ನೀಡಬೇಕೆಂದು
~~~~~~

ತಿಳಿಸುತ್ತಾರೆ. Regional Commissioner ರವರು Deputy Commissioner ರವರಿಗೆ ಪತ್ರ ಬರೆದು ನಿಮ್ಮಲ್ಲಿರುವ ಹಣದಲ್ಲಿ ವೇತನ ನೀಡಿ ಎಂದು ತಿಳಿಸುತ್ತಾರೆ. ಆದರೆ Deputy Commissioner ರವರು ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಗೆ ದಿನಾಂಕ 9-10-2017ರಲ್ಲಿ ಒಂದು ಪತ್ರವನ್ನು ಬರೆದು ನಮ್ಮಲ್ಲಿ ಅನುದಾನ ಲಭ್ಯವಿಲ್ಲದ ಕಾರಣ ವೇತನ ನೀಡಲು ಸಾಧ್ಯವಾಗುವುದಿಲ್ಲ. 66 ಲಕ್ಷ ರೂಪಾಯಿಗಳನ್ನು ನೀವು ಕೊಟ್ಟರೆ ಮಾತ್ರ 8 ತಿಂಗಳ ಬಾಕಿಯನ್ನು ಈ ಆಪ್ತ ಸಹಾಯಕರಿಗೆ ನೀಡಲು ಸಾಧ್ಯವಾಗುತ್ತದೆ. ಇಲ್ಲದಿದ್ದರೆ ನಮಗೆ ವೇತನ ನೀಡಲು ಸಾಧ್ಯವಾಗುವುದಿಲ್ಲ ಎಂದು ಪತ್ರ ಮುಖೇನ ತಿಳಿಸಿರುತ್ತಾರೆ. ನಾನು ಅಧಿಕಾರಿಗಳಲ್ಲಿ ಕೇಳುವುದೇನೆಂದರೆ ಅವರಿಗೆ ಮಾತ್ರ 1ನೇ ತಾರೀಖಿನಂದೇ ಸಂಬಳ ಬಂದು ಬಿಡುತ್ತದೆ. ಡ್ರಾ ಮಾಡಿಕೊಳ್ಳುತ್ತಾರೆ. ಅದೇ ಈ ಆಪ್ತ ಸಹಾಯಕರುಗಳಿಗೆ ವೇತನ ಬಾರದಿದ್ದರೆ ಅದರ ಬಗ್ಗೆ ಎಚ್ಚೆತ್ತುಕೊಳ್ಳಬೇಕಾಗಿದ್ದು ಅಧಿಕಾರಿಗಳ ಕರ್ತವ್ಯವಲ್ಲವೇ? Concerned Clerk ಅಥವಾ concerned Tahsildar ಇರಬಹುದು ಅವರುಗಳು ಇದರ ಬಗ್ಗೆ ಗಮನವನ್ನು ಹರಿಸಬೇಕು. 5-6 ತಿಂಗಳ ಸಂಬಳ ಬರದೇ ಇದ್ದಾಗ ನಾವು ಅಧಿಕಾರಿಗಳ ಹಿಂದೆ ಬೀಳಬೇಕು. ನಾನು ತಹಶೀಲ್ದಾರರಿಗೆ ಹತ್ತಾರು ಸಲ ಫೋನ್ ಮಾಡಿದೆನು. Deputy Commissioner ರವರಿಗೆ ಫೋನ್ ಮಾಡಿದಾಗ ಅವರು ತಕ್ಷಣ ನನಗೆ respond ಮಾಡಿ, ಸರ್, ನಮಗೆ ಅನುದಾನವೇ ಬಂದಿಲ್ಲ, ಹಣ ಇಲ್ಲದೇ ನಾನು ಹೇಗೆ ಸಂಬಳ ಕೊಡಲಿ ಎಂದು ಹೇಳಿದರು. ತಹಶೀಲ್ದಾರ್‌ರವರು ನಮಗೆ ಹಣ ಟ್ರಾನ್ಸ್‌ಫರ್ ಆಗದೇ ನಾವು ಹೇಗೆ ಸಂಬಳ ನೀಡಲು ಸಾಧ್ಯವೆಂದು ಕೇಳುತ್ತಾರೆ? ಇಂತಹ ಪರಿಸ್ಥಿತಿ ಬಂದರೆ ನಮ್ಮ ಆಪ್ತ ಸಹಾಯಕರುಗಳಿಗೆ ನಾವು ಸಹಾಯವನ್ನು ಮಾಡುವುದಕ್ಕೆ ಆಗುವುದಿಲ್ಲ. ನಮ್ಮವರಿಗೆ ನಾವು ವೇತನ ಕೊಡಿಸಲು ಸಾಧ್ಯವಾಗದಿದ್ದರೆ ಈ ಸರ್ಕಾರದಲ್ಲಿ ನಾವು ಬೇರೆಯವರಿಗೆ ಸಹಾಯ ಮಾಡಲು ಸಾಧ್ಯವಾಗುವುದೇ ಎನ್ನುವುದು ನನ್ನ ನೋವಿನ ಸಂಗತಿ. ಅದಕ್ಕಾಗಿ ಈ ಬಾಕಿ 8 ತಿಂಗಳ ವೇತನವನ್ನು ಬಿಡುಗಡೆ ಮಾಡಬೇಕೆಂದು ಸರ್ಕಾರಕ್ಕೆ ಒತ್ತಾಯಿಸುತ್ತೇನೆ. ಅಧಿಕಾರಿಗಳು ಆರ್ಥಿಕ ಇಲಾಖೆ ಹಣ ನೀಡಲಿಲ್ಲ ಎಂದು ಹೇಳುತ್ತಾರೆ. 1-4-2017ರಲ್ಲಿ ಹೊಸ ಆಯವ್ಯಯ ಬಂದಾಗಿನಿಂದಲೂ ಈ ಆಪ್ತ ಸಹಾಯಕರುಗಳಿಗೆ ವೇತನವನ್ನು ನೀಡಿರುವುದಿಲ್ಲ. ಸರ್ಕಾರಿ ಆದೇಶದ ಪ್ರಕಾರ ಆಪ್ತ ಸಹಾಯಕರುಗಳನ್ನು ನೇಮಕ ಮಾಡಿದ ಮೇಲೆ ಅವರ ವೇತನಕ್ಕಾಗಿ ಆಯವ್ಯಯದಲ್ಲಿ allocate ಮಾಡಬೇಕಲ್ಲವೇ? ಅದನ್ನು ನಾನು ಕೇಳುತ್ತಿದ್ದೇನೆ. ಮತ್ತು ಈ ರೀತಿ ಪ್ರತಿ ತಿಂಗಳು ತೊಂದರೆ ಆಗದಂತೆ ನಮ್ಮ ಆಪ್ತ ಸಹಾಯಕರುಗಳಿಗೆ ಸಂಬಳ ಕೊಡಿಸಬೇಕೆನ್ನುವುದು ನನ್ನ ಒಂದು ಮನವಿ.

ಎರಡನೆಯದಾಗಿ ಆಪ್ತ ಸಹಾಯಕರುಗಳೆಲ್ಲರೂ 10 ಗಂಟೆಗಳ ಕಾಲ ಕೆಲಸವನ್ನು ಮಾಡಲೇಬೇಕಾಗುತ್ತದೆ.ಅಧಿವೇಶನ ನಡೆಯುವಾಗಲೂ ಸಹ ಅವರು ನಮ್ಮ ಜೊತೆ ಕೆಲಸ ಮಾಡುತ್ತಾರೆ. ಅವರ ಈ ಕೆಲಸಕ್ಕೆ ನಿಗದಿತ 14,500 ರೂಪಾಯಿಗಳ ವೇತನವನ್ನು ನೀಡುತ್ತಿದ್ದಾರೆ.

ಈಗ ಎಲ್ಲರಿಗೂ ಸಂಬಳ ಜಾಸ್ತಿಯಾಗುತ್ತದೆ. ಆದರೆ ಇವರು ನಮ್ಮ ಜೊತೆ 4-5 ವರ್ಷಗಳ ಕಾಲ ಕೆಲಸ ಮಾಡಿದರೂ ಸಹ ಅವರಿಗೆ ಯಾವುದೇ ಬಡ್ತಿ ಮತ್ತು ಭತ್ಯೆಗಳು ಇರುವುದಿಲ್ಲ. ಈ ಅಧಿವೇಶನ ನಡೆಯುವ ಸಂದರ್ಭದಲ್ಲಿ ನೌಕರರಿಗೆ ಅಧಿವೇಶನದ ಭತ್ಯೆ ಕೊಡುತ್ತಾರೆ, ಆದರೆ ಇವರಿಗೆ ಕೊಡುವುದಿಲ್ಲ. ಆದ್ದರಿಂದ ಮಾನ್ಯ ಕಂದಾಯ ಸಚಿವರು ಇವರುಗಳ ವೇತನವನ್ನು ಸ್ವಲ್ಪ ಹೆಚ್ಚಿಗೆ ಮಾಡಬೇಕು ಹಾಗೂ ಭತ್ಯೆಗಳನ್ನು ನೀಡುವ ಬಗ್ಗೆ ಯೋಚನೆಯನ್ನು ಮಾಡಬೇಕೆಂದು ಮನವಿಯನ್ನು ಮಾಡಿಕೊಳ್ಳುತ್ತಿದ್ದೇನೆ.

**ಶ್ರೀ ಕಾಗೋಡು ತಿಮ್ಮಪ್ಪ(ಕಂದಾಯ ಸಚಿವರು)**:- ಮಾನ್ಯ ಸಭಾಪತಿಯವರೇ,

**(ಸಚಿವರ ಹೇಳಿಕೆಯನ್ನು ಲಗತ್ತಿಸಲಾಗಿದೆ)**

(987)/15-11-2017/1-30/ಎಲ್‌ಎಂ/ಬಿಎನ್‌ಎಸ್

**ಶ್ರೀ ಬಿ.ಜಿ.ಪುಟ್ಟಸ್ವಾಮಿ**:- ಮಾನ್ಯ ಸಭಾಪತಿಗಳೇ, ಈಗ ಬಾಕಿ ಇರುವುದು 66 ಲಕ್ಷ ರೂ.ಗಳು ಎಂದು ನಿಮ್ಮ ಉಪ ಆಯುಕ್ತರವರು ಪತ್ರವನ್ನು ಬರೆದಿದ್ದಾರೆ. ನಿಮ್ಮಿಂದ 28 ಲಕ್ಷ ರೂ.ಗಳ ಬಾಕಿ ಇದೆ ಅದನ್ನು ಆದ್ಯತೆ ಮೇಲೆ ಕೊಡಿ ಎಂದು ಓದಿಸುತ್ತಿದ್ದಾರೆ. ಯಾವ ಲೆಕ್ಕದಲ್ಲಿ ಕೊಡುತ್ತೀರಾ? ಅವರಿಂದ ಕೆಲಸ ಮಾಡಿಸಿಕೊಳ್ಳಲಾಗಿದೆ. 66 ಲಕ್ಷ ರೂ.ಗಳ ಬಾಕಿ ಇದೆ ಉಪ ಆಯುಕ್ತರು ಪತ್ರವನ್ನು ಬರೆದಿದ್ದಾರೆ. ಕಂದಾಯ ಸಚಿವರು ಬರೆದಿರುವ ಪತ್ರವು ಇದೆ. ಬರೆದಿರುವ ಪತ್ರವನ್ನು ನಿಮ್ಮ ಅಧಿಕಾರಿಗಳು ಓದುವುದಿಲ್ಲವೆ? 28 ಲಕ್ಷ ರೂ.ಗಳ ಬಾಕಿ ಇದೆ ಎಂದು ನಿಮ್ಮಿಂದ ಓದಿಸುತ್ತಿದ್ದಾರೆ. ಇಂತಹ ಅಧಿಕಾರಿಗಳ ಮೇಲೆ ನಾವು ಹಕ್ಕುಚ್ಯುತಿ ಮಂಡನೆ ಮಾಡಬೇಕಾಗುತ್ತದೆ. ಯಾವಾಗ ಸಂಬಳವನ್ನು ಕೊಡುತ್ತೀರಾ ಎನ್ನುವುದನ್ನು ಮಾನ್ಯ ಸಚಿವರು ಹೇಳಬೇಕು.

ಶ್ರೀ ಕಾಗೋಡ ತಿಮ್ಮಪ್ಪ:- ಮಾನ್ಯ ಸಭಾಪತಿಗಳೇ, ಇಲ್ಲಿಯವರೆಗೆ ಬಾಕಿ ಇರುವುದನ್ನು ತಕ್ಷಣ ಬಿಡುಗಡೆ ಮಾಡಲು ಸಂಬಂಧಪಟ್ಟವರಿಗೆ ಸೂಚನೆಯನ್ನು ಕೊಡುತ್ತೇನೆ. ತಡವಾಗಿರುವುದಕ್ಕೆ ಕ್ಷಮೆ ಕೇಳುತ್ತೇನೆ. ಸಂಬಳವನ್ನು ಹೆಚ್ಚು ಮಾಡುವ ವಿಚಾರ ಮಾನ್ಯ ಮುಖ್ಯಮಂತ್ರಿಗಳ ವ್ಯಾಪ್ತಿಗೆ ಬರುತ್ತದೆ, ನನ್ನ ವ್ಯಾಪ್ತಿಗೆ ಬರುವುದಿಲ್ಲ. ಬಾಕಿ ಇರುವ ಹಣವನ್ನು ಬೇಗ ಕೊಡಿಸಲು ಪ್ರಯತ್ನ ಮಾಡುತ್ತೇನೆ.

**ಶ್ರೀ ಬಿ.ಜಿ.ಪುಟ್ಟಸ್ವಾಮಿ**:- ಇನ್ನು ಒಂದು ಅಥವಾ ಎರಡು ವಾರಗಳಲ್ಲಿ ಸಂಬಳವನ್ನು ಕೊಡಿಸುವ ವ್ಯವಸ್ಥೆಯನ್ನು ಸಚಿವರು ಮಾಡುತ್ತಾರಾ?

**ಶ್ರೀ ಕಾಗೋಡ ತಿಮ್ಮಪ್ಪ(ಕಂದಾಯ ಸಚಿವರು)**:- ಮಾನ್ಯ ಸಭಾಪತಿಗಳೇ, ಪುಟ್ಟಸ್ವಾಮಿಯವರೆ ತಮಗೂ ಗೊತ್ತಿರುವ ವಿಚಾರ. ಇಂದೇ ಕೊಡುತ್ತೇವೆ ನಾಳೆ ಕೊಡುತ್ತೇವೆ ಎಂದು ಹೇಳಲು ಆಗುತ್ತದೆಯೇ? ತಾವು ಸರ್ಕಾರದಲ್ಲಿ ಇದ್ದು ಕೆಲಸ ಮಾಡಿದವರು.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಅವರು ಬಿಲ್ ಮಾಡಬೇಕಾಗುತ್ತದೆ. ಇಷ್ಟು ದಿನಗಳಲ್ಲಿ ಸಂಬಳ ಕೊಡುತ್ತೇವೆ ಎಂದು ಹೇಳುವುದರಲ್ಲಿ ಏನು ತೊಂದರೆ ಇದೆ. 10 ತಿಂಗಳುಗಳಿಂದ ಅವರಿಗೆ ಸಂಬಳವಿಲ್ಲ, ಅವರ ಹೆಂಡತಿ ಮಕ್ಕಳನ್ನು ಹೇಗೆ ಸಾಕಬೇಕು? ಅವರ ಗತಿ ಏನಾಗಬೇಕು?

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಗಳೆ, ದಯಮಾಡಿ ಮಾನವೀಯತೆಯ ದೃಷ್ಟಿಯಿಂದ ಆದಷ್ಟು ಬೇಗ ಸಂಬಳವನ್ನು ಕೊಡುವ ವ್ಯವಸ್ಥೆಯನ್ನು ಮಾಡಬೇಕು.

**ಶ್ರೀ ಕಾಗೋಡ ತಿಮ್ಮಪ್ಪ:-** ನಾನೇ ಖುದ್ದು ಕಾಳಜಿವಹಿಸಿಕೊಂಡು ಸಂಬಳವನ್ನು ಬಿಡುಗಡೆ ಮಾಡಿ ಕೊಡುವ ಪ್ರಯತ್ನವನ್ನು ಮಾಡುತ್ತೇನೆ.

**ಶ್ರೀ ಬಿ.ಜಿ.ಪುಟ್ಟಸ್ವಾಮಿ:-** ಸಂಬಳ ಜಾಸ್ತಿ ಮಾಡುವುದರ ಬಗ್ಗೆ ದಯಮಾಡಿ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತನ್ನಿ.

**ಶ್ರೀ ಕಾಗೋಡ ತಿಮ್ಮಪ್ಪ:-** ಆ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಖಂಡಿತ ತರುತ್ತೇನೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಸರ್ಕಾರದಲ್ಲಿ ಹಣ ಇಲ್ಲದೆ ಪಾಪರ್ ಆಗಿದೆಯಾ?

**ಶ್ರೀ ಕಾಗೋಡ ತಿಮ್ಮಪ್ಪ:-** ಹಾಗೆ ಎಲ್ಲಾ ಮಾತನಾಡಬಾರದು.

**ಶ್ರೀ ಟಿ.ಎ.ಶರವಣ:-** ಅವರು ಜೀವನ ನಡೆಸುವುದು ಬೇಡವೆ? 10 ತಿಂಗಳು ಸಂಬಳ ಕೊಡದೆ ಪೆಂಡಿಂಗ್ ಇಟ್ಟುಕೊಂಡು ಕುಳಿತ್ತರೆ ಹೇಗೆ? ತಾವು ಸಚಿವರಾಗಿದ್ದ ಸಮಯದಲ್ಲಿ ಒಳ್ಳೆಯ ಕೆಲಸಗಳಾಗಬೇಕು.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಗಳೆ, ನನ್ನ ವಿನಂತಿ ಏನು ಎಂದರೆ, ಶಾಸಕರ ಆಪ್ತ ಸಹಾಯಕರಿಗೆ ಕೊಡುವುದೆ ಹದಿನಾಲ್ಕುವರೆ ಸಾವಿರ ರೂ.ಗಳ ಸಂಬಳವನ್ನು ಕೊಡಲಾಗುತ್ತದೆ. ಇದನ್ನಾದರೂ ಇನ್ನು ಮುಂದೆ ಪ್ರತಿ ತಿಂಗಳ್ ಸಂಬಳ ಕೊಡುವಂತಹ ವ್ಯವಸ್ಥೆಯನ್ನು ಮಾಡುತ್ತೀರಾ?

**ಶ್ರೀ ಕಾಗೋಡ ತಿಮ್ಮಪ್ಪ:-** ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ( ವಿರೋಧ ಪಕ್ಷದ ನಾಯಕರು):-** ಪ್ರತಿ ತಿಂಗಳು ಸಂಬಳವನ್ನು ಕೊಡುವ ವ್ಯವಸ್ಥೆ ಮಾಡುತ್ತೀರಾ ಎಂದು ಕೇಳಿದರೆ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ ಎಂದು ಮಾನ್ಯ ಕಂದಾಯ ಸಚಿವರು ಉತ್ತರ ಕೊಡುತ್ತಿದ್ದಾರೆ.

**ಶ್ರೀ ಕಾಗೋಡ ತಿಮ್ಮಪ್ಪ:-** ಬಾಕಿ ಇರುವ ಹಣವನ್ನು ತಕ್ಷಣ ಬಿಡುಗಡೆ ಮಾಡಲು ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ**:- ಆಯಾ ತಿಂಗಳ ಸಂಬಳವನ್ನು ಆಯಾ ತಿಂಗಳೆ ಕೊಡಿಸುವಂತಹ ವ್ಯವಸ್ಥೆಯನ್ನು ಮಾಡುತ್ತೀರಾ?

**ಶ್ರೀ ಕಾಗೋಡ ತಿಮ್ಮಪ್ಪ**:- ನೇಮಕಾತಿ ಮಾಡುವಾಗ ಏನು ಜಿ.ಓ ಇದೆ ಅದನ್ನು ನೋಡಿಕೊಂಡು ಮಾಡಬೇಕಾಗುತ್ತದೆ.

ಶ್ರೀ ಬಿ.ಜೆ.ಪುಟ್ಟಸ್ವಾಮಿ:- ನೇಮಕಾತಿ ಮಾಡಿಕೊಳ್ಳಲು ಇವರೆ ಆದೇಶವನ್ನು ಮಾಡಿದ್ದಾರೆ, ಇನ್ನು ಸಂಬಳ ಕೊಡಲು ಏಕೆ ಜಿಓ ನೋಡಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ**:- ಸಂಬಳ ಕೊಡಲು ಜಿಓ ಏಕೆ ನೋಡಬೇಕು?

**ಶ್ರೀ ಕಾಗೋಡ ತಿಮ್ಮಪ್ಪ:-** ಅವರಿಗೆ ಸಂಬಳ ಕೊಡಬೇಕು, ಕೊಡುತ್ತೇವೆ ಅದರಲ್ಲಿ ಏನು ಭಿನ್ನಾಭಿಪ್ರಾಯವಿಲ್ಲ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಗಳೆ, ಇದರಲ್ಲಿ ನನಗೆ ಒಂದು ವಿಚಾರ ಅರ್ಥವಾಗುತ್ತಿಲ್ಲ. ಪ್ರಯತ್ನಿಸುತ್ತೇನೆ ಎಂದು ಸರ್ಕಾರದವರು ಹೇಳಬಾರದು. ಪ್ರಶ್ನೆ ಬಂದ 24 ಗಂಟೆಗಳಲ್ಲಿ ಈ ಕೆಲಸವನ್ನು ಸರ್ಕಾರ ಮಾಡಬೇಕು. ಗಮನಕ್ಕೆ ಬಂದಿಲ್ಲ ಎಂದರೆ, ಗಮನಕ್ಕೆ ಬಂದ ತಕ್ಷಣ ಕೊಡಬೇಕಾಗಿರುವುದು ಸರ್ಕಾರದ ಕೆಲಸವಾಗಿದೆ. ಪ್ರಯತ್ನಿಸುತ್ತೇನೆ ಎಂದರೆ ಅನಿಶ್ಚಿತತೆ ಕಂಡು ಬರುತ್ತದೆ.

**ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು)**:- ಮಾನ್ಯ ಸಭಾಪತಿಗಳೆ, ದಿನಾಂಕ: 31-10-2017ಕ್ಕೆ ಹಣವನ್ನು ಬಿಡುಗಡೆ ಮಾಡಿ ಎಲ್ಲರಿಗೂ ವಿಲೇವಾರಿ ಮಾಡಿ ಎಂದು ಆಗಿರುವ ಆದೇಶದ ಬಗ್ಗೆ ಮಾನ್ಯ ಕಂದಾಯ ಸಚಿವರು ಈಗಾಗಲೇ ಎಲ್ಲರ ಗಮನಕ್ಕೆ ತಂದಿದ್ದಾರೆ.

**ಶ್ರೀ ಬಿ.ಜಿ.ಪುಟ್ಟಸ್ವಾಮಿ**:- ಆದೇಶವಾಗಿದೆ ಆದರೆ ಸಂಬಳವನ್ನು ಇನ್ನು ಕೊಟ್ಟಿರುವುದಿಲ್ಲ. ಈಗಾಗಲೆ 15ನೇ ತಾರೀಖು ಇವತ್ತು. 10ನೇ ತಿಂಗಳು ಆದೇಶವಾದರೂ 11ನೇ ತಿಂಗಳಾದರೂ ಇನ್ನು ಸಂಬಳವನ್ನು ಕೊಟ್ಟಿರುವುದಿಲ್ಲ. ನಿಮ್ಮ ಅಧಿಕಾರಿಗಳು ಏನು ಮಾಡುತ್ತಿದ್ದಾರೆ.

**ಶ್ರೀ ಎಂ.ಆರ್.ಸೀತಾರಾಂ**:- ಸಂಬಳ ಬಾಕಿ ಇದೆ ಅದನ್ನು ಕೊಡಿಸುತ್ತೇವೆ ಎಂದು ಕಂದಾಯ ಸಚಿವರು ಹೇಳಿದ್ದಾರೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** 10 ತಿಂಗಳಿಂದ ಅವರಿಗೆ ಸಂಬಳವನ್ನು ಕೊಟ್ಟಿರುವುದಿಲ್ಲ. ಅವರಿಂದ ಕೆಲಸ ಮಾಡಿಸಿಕೊಳ್ಳಲು ನಮಗೆ ನಾಚಿಕೆಯಾಗುತ್ತದೆ.

(ಗೊಂದಲ)

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಗಳೇ, ಪಿಯ ಗಳಿಂದ ಕೆಲಸ ಮಾಡಿಸಿಕೊಂಡು ಅವರಿಗೆ ಸಂಬಳ ಕೊಡುವುದರ ಬಗ್ಗೆ ಇಷ್ಟು ಚರ್ಚೆ ಮಾಡುವ ಅವಶ್ಯಕತೆ ಇಲ್ಲ. ನಿರ್ದಿಷ್ಟವಾಗಿ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ಏಕೆಂದರೆ ಶಾಸಕರ ಪಿಯ ಗಳಿಗೆ ಈ ಹಣೆಬರಹ ಇದೆ ಇನ್ನು ಬೇರೆಯವರ ಗತಿ ಏನು ಎಂದು ಜನರು ಹೇಳುವುದರಿಂದ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ. ಅದಕ್ಕಾಗಿ ಸ್ಪಷ್ಟವಾದ ತೀರ್ಮಾನ ತೆಗೆದುಕೊಳ್ಳಿ.

**ಶ್ರೀ ಎಂ.ಆರ್.ಸೀತಾರಾಂ:–** ಮಾನ್ಯ ಸಭಾಪತಿಗಳೇ, ತಕ್ಷಣ ಸಂಬಳ ಬಿಡುಗಡೆ ಮಾಡಲಾಗುತ್ತದೆ ಎಂದು ಕಂದಾಯ ಸಚಿವರು ಹೇಳಿದ ಮೇಲೆಯು ಈ ರೀತಿ ಮಾತನಾಡುವುದು ಸರಿಯಲ್ಲ ಎಂದು ನನ್ನ ಅನ್ನಿಸಿಕೆ.

**ಉಪ ಸಭಾಪತಿಯವರು:–** ಈ ವಿಷಯದ ಚರ್ಚೆ ಇಲ್ಲಿಗೆ ಮುಕ್ತಾಯಗೊಂಡಿದೆ. ಈಗ ಸದನವನ್ನು ಮಧ್ಯಾಹ್ನ 3 ಗಂಟೆ 30 ನಿಮಿಷದವರೆಗೆ ಮುಂದೂಡಲಾಗಿದೆ.

**( ಭೋಜನ ವಿರಾಮಕ್ಕಾಗಿ ಸದನವನ್ನು 1ಗಂಟೆ 35 ನಿಮಿಷದಿಂದ**

**3ಗಂಟೆ 30 ನಿಮಿಷದವರೆಗೆ ಮುಂದೂಡಲ್ಪಟ್ಟಿತು)**

(988)15–11–2017(03–30)ಬಿಎಸ್‌ಡಿ/ಕೆಎಸ್

**(ಭೋಜನ ವಿರಾಮದ ನಂತರ ಸದನವು ಮಧ್ಯಾಹ್ನ 03 ಗಂಟೆ 36 ನಿಮಿಷಗಳಿಗೆ ಪ್ರಾರಂಭವಾಯಿತು)**

**(ಪೀಠದಲ್ಲಿ ಮಾನ್ಯ ‘ಉಪಸಭಾಪತಿ’ ಯವರು ಉಪಸ್ಥಿತರಿದ್ದರು)**

**06.ಶಾಸನ ರಚನೆ**

**ವಿಧೇಯಕಗಳನ್ನು ಪರ್ಯಾಲೋಚನೆ ಹಾಗೂ ಅಂಗೀಕಾರ.**

***ಅ) ಕರ್ನಾಟಕ ಸಾರ್ವಜನಿಕ ಸುರಕ್ಷೆಯ (ಕ್ರಮಗಳ) ಜಾರಿ ವಿಧೇಯಕ, 2017***

***ಪರ್ಯಾಲೋಚನಾ ಪ್ರಸ್ತಾವ***

**ಶ್ರೀ ರಾಮಲಿಂಗರೆಡ್ಡಿ (ಗೃಹ ಸಚಿವರು):–** ಮಾನ್ಯ ಸಭಾಪತಿಯವರೆ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2017ರ ಕರ್ನಾಟಕ ಸಾರ್ವಜನಿಕ ಸುರಕ್ಷೆಯ (ಕ್ರಮಗಳ) ಜಾರಿ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

***ಪ್ರಸ್ತಾವವನ್ನು ಮಂಡಿಸಲಾಯಿತು***

**ಶ್ರೀ ರಾಮಲಿಂಗರೆಡ್ಡಿಃ-** ಮಾನ್ಯ ಸಭಾಪತಿಯವರೇ, ಈಗಾಗಲೆ ಈ ವಿಧೇಯಕವನ್ನು ತೆಲಂಗಾಣ, ಆಂಧ್ರ ಪ್ರದೇಶ ಮತ್ತಿತರ ಕಡೆ ಜಾರಿಗೆ ತಂದಿದ್ದು, ಇದರಲ್ಲಿ ರಕ್ಷಣೆಯ ವಿಷಯವು ಅಡಕವಾಗಿದೆ. ಸಾರ್ವಜನಿಕ ಸ್ಥಳಗಳಲ್ಲಿ ಅಂದರೆ, ಒಂದು ಬಾರಿ 100 ಜನ ಅಥವ ಒಂದು ದಿನದಲ್ಲಿ 500ಕ್ಕೂ ಜನ ಸೇರುವ ಸ್ಥಳಗಳಲ್ಲಿ ಕ್ಯಾಮರಗಳನ್ನು ಅಳವಡಿಸಲು ಉದ್ದೇಶಿಸಲಾಗಿದೆ. ಅದೇರೀತಿ ವಾಣಿಜ್ಯ ಸ್ಥಳಗಳಾದ ಮಾಲ್‍ಗಳು, ದೇವಸ್ಥಾನಗಳು, ಆಸ್ಪತ್ರೆಗಳು, Parking places, commercial establishments, Bus stands, Jewellery shops, ರೈಲ್ವೆ ಸ್ಟೇಷನ್‍ಗಳು, ಶಾಲೆಗಳು ಮತ್ತಿತರ ಕಡೆಗಳಲ್ಲಿ ಅಳವಡಿಸಬೇಕು. ಕ್ಯಾಮರಾಗಳನ್ನು ಯಾವರೀತಿ ಅಳವಡಿಸಬೇಕೆಂದು specifications ಅನ್ನು ನಾವು ಕೊಡುತ್ತೇವೆ. ಕ್ಯಾಮರಾಗಳಲ್ಲಿ ಸೆರೆ ಹಿಡಿದಿರುವ ಚಿತ್ರಣವು 30 ದಿನಗಳವರೆಗೂ ಸುರಕ್ಷಿತವಾಗಿ ಇರಬೇಕು. ಗಲಾಟೆ ಅಥವ ಮತ್ತಿತರ ಕಾರಣಗಳಿಂದ ಪೋಲೀಸರಿಗೆ ಬೇಕಾದ ಸಂದರ್ಭದಲ್ಲಿ 30 ದಿನಗಳವರೆಗೆ ಚಿತ್ರಣವನ್ನು ರಕ್ಷಣೆ ಮಾಡಬೇಕು. ಈ ಕಾಯ್ದೆ ಬಂದ ನಂತರ 3 ತಿಂಗಳಲ್ಲಿ ಮಾಡಬೇಕು ಮತ್ತು ಇದನ್ನು ಮಾಡದಿದ್ದರೆ treligious place ಗಳನ್ನು ಹೊರತುಪಡಿಸಿ ಇತರ ಕಡೆಗಳಲ್ಲಿ ಮೊದಲನೆಯ ತಿಂಗಳಿಗೆ ರೂ.5 ಸಾವಿರ ಮತ್ತು ಎರಡನೆ ತಿಂಗಳಿಗೆ ರೂ.10 ಸಾವಿರಗಳನ್ನು ದಂಡ ವಿಧಿಸುವ ಪ್ರಕ್ರಿಯೆ ಇರುತ್ತದೆ.

(ಮುಂದು)

**(989)15.11.2017/3.40/ಹೆಚ್‍ವಿಃಕೆಎಸ್**

**ಶ್ರೀ ರಾಮಲಿಂಗರೆಡ್ಡಿ(ಮುಂದುವರೆದದ್ದು)ಃ-**

ಸನ್ಮಾನ್ಯ ಸಭಾಪತಿಯವರೇ, ಮೊದಲನೆಯ ಹಂತದಲ್ಲಿ ಕಾರ್ಪೋರೇಶನ್ ಲಿಮಿಟ್‍ನಲ್ಲಿ ಸಿಸಿ ಟಿ.ವಿ.ಗಳನ್ನು ಹಾಕುತ್ತಿದ್ದೇವೆ. ಹಂತಹಂತವಾಗಿ ಬೇರೆ ನಗರ ಮತ್ತು ಪಟ್ಟಣಗಳಲ್ಲಿಯೂ ಸಹ ಇದನ್ನು ಅಳವಡಿಸಲಾಗುತ್ತದೆ. ಇದರಿಂದ ಅಪರಾಧಗಳ ಪ್ರಮಾಣ ಕಡಿಮೆಯಾಗುವುದಕ್ಕೆ ಅನುಕೂಲವಾಗುತ್ತದೆ ಮತ್ತು ಅಪರಾಧ ನಡೆದಂತಹ ಸಂದರ್ಭದಲ್ಲಿ ಅಪರಾಧಿಯ detectionಗೂ ಸಹ ಸಹಕಾರಿಯಾಗುತ್ತದೆ. ಆದ್ದರಿಂದ ಸದರಿ ವಿಧೇಯಕಕ್ಕೆ ಸದನವು ಅನುಮತಿ ನೀಡಬೇಕೆಂದು ಕೋರುತ್ತೇನೆ.

**ಶ್ರೀ ರಾಮಚಂದ್ರಗೌಡ(ಪದವೀಧರರ ಕ್ಷೇತ್ರ)ಃ-** ಸನ್ಮಾನ್ಯ ಸಭಾಪತಿಯವರೇ, ನಾನು ಈ ವಿಧೇಯಕವನ್ನು ಸ್ವಾಗತಿಸುತ್ತಿದ್ದೇನೆ. ವಿಧೇಯಕದ ಪುಟ ಸಂಖ್ಯೆಃ06ರಲ್ಲಿ, ಆರ್ಥಿಕ ಜ್ಞಾಪನ ಪತ್ರ ಶೀರ್ಷಿಕೆಯಡಿಯಲ್ಲಿ "ಪ್ರಸ್ತಾವಿಕ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ" ಎಂದು ಹೇಳಿದ್ದಾರೆ. ದೇವಸ್ಥಾನಗಳ ಬಳಿ, ರೈಲ್ವೆ ನಿಲ್ದಾಣದ ಬಳಿ ಮತ್ತು ಎಲ್ಲೆಲ್ಲಿ ಹೆಚ್ಚಿನ ಜನರು ಸೇರುತ್ತಾರೆ. ಅಲ್ಲಿ ಸಿಸಿ ಟಿ.ವಿ.ಗಳನ್ನು ಅಳವಡಿಸಬೇಕೆನ್ನುವ ನಿಯಮವನ್ನು ಈ

ವಿಧೇಯಕದ ಮೂಲಕ ವಿಧಿಸಲಾಗುತ್ತಿದೆ. ಆದರೆ, ಈಗ ಬಹಳಷ್ಟು ಕಡೆಗಳಲ್ಲಿ ಸಿಸಿ ಟಿ.ವಿ.ಗಳು ಇಲ್ಲ. ಈ ವಿಧೇಯಕದಲ್ಲಿ ತಿಳಿಸಿರುವಂತಹ ಸ್ಥಳಗಳಲ್ಲಿ ಸರ್ಕಾರವೇ ಸಿಸಿ ಟಿ.ವಿ.ಗಳನ್ನು ಅಳವಡಿಸಬೇಕಾದರೆ ಸಾಕಷ್ಟು ಸಿಸಿ ಟಿ.ವಿ.ಗಳನ್ನು ಅಳವಡಿಸಬೇಕಾಗುತ್ತದೆ. ಅದಕ್ಕಾಗಿ ಎಷ್ಟು ಹಣವನ್ನು ವೆಚ್ಚ ಮಾಡಲಾಗುತ್ತದೆ ಎನ್ನುವ ಮಾಹಿತಿಯನ್ನು ನೀಡಬೇಕಾಗುತ್ತದೆ. ಆದರೆ, ವಿಧೇಯಕದಲ್ಲಿ “ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ” ಎಂದು ಹೇಳಿದ್ದಾರೆ. ಇದನ್ನು ಹೇಗೆ ನಂಬುವುದಕ್ಕೆ ಸಾಧ್ಯ?

**ಶ್ರೀ ರಾಮಲಿಂಗಾರೆಡ್ಡಿ:-** ಸನ್ಮಾನ್ಯ ಸಭಾಪತಿಯವರೇ, ಮಾಲ್‍ಗಳಲ್ಲಿ ಸರ್ಕಾರ ಸಿಸಿ ಟಿ.ವಿ.ಯನ್ನು ಅಳವಡಿಸುವುದಿಲ್ಲ, ಮಾಲ್‍ನ ಮಾಲೀಕರೇ ಅದನ್ನು ಅಳವಡಿಸಿಕೊಳ್ಳುತ್ತಾರೆ. ಅದೇ ರೀತಿಯಲ್ಲಿ ರೈಲ್ವೆ ನಿಲ್ದಾಣಗಳಲ್ಲಿ ರೈಲ್ವೆ ಇಲಾಖೆಯವರು ಅಳವಡಿಸುತ್ತಾರೆ. ಆದ್ದರಿಂದ ಇದಕ್ಕೆ ರಾಜ್ಯ ಸರ್ಕಾರ ಯಾವುದೇ ವೆಚ್ಚವನ್ನು ಮಾಡುವುದಿಲ್ಲ. ನಾವು traffic signals ಗಳಲ್ಲಿ ಸಿಸಿ ಟಿ.ವಿ.ಯನ್ನು ಅಳವಡಿಸುತ್ತೇವೆ.

**ಶ್ರೀ ರಮೇಶ್ ಬಾಬು(ಶಿಕ್ಷಕರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಈ ವಿಧೇಯಕದ ಹಿಂದಿರುವ ಉದ್ದೇಶ ಉತ್ತಮವಾಗಿದೆ. ಆದರೆ, ಅದರ ವ್ಯಾಪ್ತಿ ಮತ್ತು ಪರಿಭಾಷೆ ಬಹುತೇಕ ಸಾರ್ವಜನಿಕರಿಗೆ ಮಾರಕವಾಗುವಂತಹ ಅಂಶಗಳನ್ನು ಒಳಗೊಂಡಿದೆ. ವಿಧೇಯಕದ ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆಯಲ್ಲಿ;

1. **“ಕಳ್ಳತನವನ್ನು ಒಳಗೊಂಡ ಸಾರ್ವಜನಿಕ ಭದ್ರತೆ ಮತ್ತು ಸಾರ್ವಜನಿಕ ಸುವ್ಯವಸ್ಥೆಯ ಸಲುವಾಗಿ ಅಪರಾಧಗಳ ತಡೆ, ಪತ್ತೆ ಮತ್ತು ಕಂಡುಹಿಡಿಯುವ ಹಾಗೂ ವ್ಯಕ್ತಿಗಳ ದೃಶ್ಯದಾಖಲೆಯನ್ನು ನಿರ್ವಹಿಸುವ ಸಾರ್ವಜನಿಕ ನಿಗಾ ವ್ಯವಸ್ಥೆಯೊಳಗೆ ಪೋಲೀಸ್ ಇಲಾಖೆಯು ಪ್ರವೇಶ ಮಾಡಲು ಇರುವ ಅವಶ್ಯಕತೆಯನ್ನು ಸಾಧ್ಯಗೊಳಿಸುವುದು”**

ಎಂದು ಇದೆ. ಇಲ್ಲಿ ‘ಪೋಲೀಸ್ ಇಲಾಖೆಯ ಪ್ರವೇಶ’ ಎನ್ನುವ ಪದ ಬಳಕೆ ಮಾಡಲಾಗಿದೆ. ಬಹುತೇಕ ಶಿಕ್ಷಣ ಸಂಸ್ಥೆಗಳನ್ನು ಮತ್ತು ಧಾರ್ಮಿಕ ಸಂಸ್ಥೆಗಳನ್ನು ಈ ವಿಧೇಯಕದಡಿಯಲ್ಲಿ ತಂದಿರುವುದರಿಂದ ಪೋಲೀಸರು ಇದನ್ನು ದುರ್ಬಳಕೆ ಮಾಡಿಕೊಂಡು, ಶಿಕ್ಷಣ ಸಂಸ್ಥೆಗಳಿಗೆ ತೊಂದರೆ ಕೊಡುವುದು, ಶಿಕ್ಷಣ ಸಂಸ್ಥೆಗಳ ಕಾರ್ಯನಡವಳಿಯಲ್ಲಿ ಮಧ್ಯೆ ಪ್ರವೇಶ ಮಾಡುವುದಕ್ಕೆ ಈ ಕಾಯಿದೆಯಲ್ಲಿ ಅವಕಾಶವಿದೆ. ಮುಂದುವರೆದು;

2. **ಭಯೋತ್ಪಾದಕ ದಾಳಿಯನ್ನು ಒಳಗೊಂಡು ಭದ್ರತೆಯ ಆತಂಕಗಳ ವಿರುದ್ಧ ಸುರಕ್ಷತೆಯನ್ನು ನೀಡಲು ಪ್ರತಿಬಂಧಾತ್ಮಕ ಕಾನೂನು ವ್ಯವಸ್ಥೆಯನ್ನು ಸುಧಾರಣೆಗೊಳಿಸುವುದು;**

3. **ಅಪರಾಧ ಪ್ರಮಾಣವನ್ನು, ಭಯೋತ್ಪಾದನೆ, ಕಾನೂನು ಬಾಹಿರ ಚಟುವಟಿಕೆಗಳನ್ನು ನಿರ್ಬಂಧಿಸುವುದು ಹಾಗೂ ಸಾರ್ವಜನಿಕರಿಗೆ ಸುರಕ್ಷಿತ ಮತ್ತು ಸುಭದ್ರ ವಾತಾವರಣವನ್ನು ಸುನಿಶ್ಚಿತಗೊಳಿಸುವ ಮೂಲಕ ವಿವಿಧ ಅಪರಾಧಗಳ ತನಿಖೆ, ಅಭಿಯೋಜನೆ ಹಾಗೂ ವಿಚಾರಣೆಗಳಿಗೆ ನೆರವು ನೀಡುವುದು;**

ಎಂದು ತಿಳಿಸಲಾಗಿದೆ. ಇವು ಈ ವಿಧೇಯಕವನ್ನು ತರಲು ಇರುವಂತಹ ಉದ್ದೇಶವಾಗಿದೆ. ಈ ವಿಧೇಯಕದ ಅನುಚ್ಛೇಧ 2(ಎ)ಯ ಪರಿಭಾಷೆಗಳಲ್ಲಿ;

> **"ಕಾರ್ಯಸಂಸ್ಥೆ" ಒಂದೇ ಸಮಯದಲ್ಲಿ ನೂರು ಜನ ಅಥವಾ ಹೆಚ್ಚು ಜನರು ಸಾರ್ವಜನಿಕವಾಗಿ ಒಟ್ಟುಗೂಡುವ ಸಂಭಾವ್ಯತೆಯೊಂದಿಗೆ ಜನರು ಬಹುಸಂಖ್ಯೆಯಲ್ಲಿ ಮತ್ತೆ ಮತ್ತೆ ಬರುವ ಸ್ಥಳಗಳಾದ ವಾಣಿಜ್ಯ ಸಂಸ್ಥೆಗಳು, ಕೈಗಾರಿಕಾ ಸಂಸ್ಥೆಗಳು, ಧಾರ್ಮಿಕ ಸಂಸ್ಥೆಗಳು, ಶೈಕ್ಷಣಿಕ ಸಂಸ್ಥೆಗಳು, ಆಸ್ಪತ್ರೆಗಳು, ಕ್ರೀಡಾ ಸಂಕೀರ್ಣಗಳು, ರೈಲ್ವೆ ನಿಲ್ದಾಣಗಳು, ಬಸ್ ನಿಲ್ದಾಣಗಳು, ಸಂಘಟಿತ ಧಾರ್ಮಿಕ ಕೂಟಗಳು ಸೇರುವ ಸ್ಥಳಗಳು, ಈ ಅಧಿನಿಯಮದ ಉದ್ದೇಶಕ್ಕಾಗಿ ಕಾರ್ಯ ಸಂಸ್ಥೆಯಾಗಿ ಸರ್ಕಾರವು ಅಧಿಸೂಚನೆಯ ಮೂಲಕ ಘೋಷಿಸಬಹುದಾದ ಅಂಥ ಇತರ ಕಾರ್ಯ ಸಂಸ್ಥೆಗಳು ಇಂಥ ಸ್ಥಳಗಳು"**

ಎಂದು ಇದೆ. ಮಾನ್ಯ ಸಚಿವರು ಮಾತನಾಡುವಂಥ ಸಂದರ್ಭದಲ್ಲಿ ಶಿಕ್ಷಣ ಸಂಸ್ಥೆಗಳಿಗೆ ಮತ್ತು ಧಾರ್ಮಿಕ ಸಂಸ್ಥೆಗಳಿಗೆ exemption ಅನ್ನು ನೀಡಲಾಗಿದೆ ಎನ್ನುವ ಮಾತನ್ನು ಹೇಳಿದ್ದಾರೆ.

**ಶ್ರೀ ರಾಮಲಿಂಗಾರೆಡ್ಡಿಃ-** ಸನ್ಮಾನ್ಯ ಸಭಾಪತಿಯವರೇ, ಶಿಕ್ಷಣ ಸಂಸ್ಥೆಗಳಿಗೆ exemption ಕೊಟ್ಟಿಲ್ಲ. ಶಿಕ್ಷಣ ಸಂಸ್ಥೆಗಳು ಕಡ್ಡಾಯವಾಗಿ ಸಿಸಿ ಕ್ಯಾಮರಾಗಳನ್ನು ಅಳವಡಿಸಿಕೊಳ್ಳಬೇಕಾಗಿದೆ.

**ಶ್ರೀ ರಮೇಶ್‌ಬಾಬುಃ-** ಸನ್ಮಾನ್ಯ ಸಭಾಪತಿಯವರೇ, ವಿಧೇಯಕದ ಅನುಚ್ಛೇಧ 6(3)ರಲ್ಲಿ "ದತ್ತಿ ಇಲಾಖೆಗಳ ಧಾರ್ಮಿಕ ಸಂಸ್ಥೆಗಳು ಅಥವಾ ಯಾವುದೇ ಇತರ ಧಾರ್ಮಿಕ ಸ್ಥಳ ಮತ್ತು ಶೈಕ್ಷಣಿಕ ಸಂಸ್ಥೆಗಳನ್ನು ಸೀಲು ಮಾಡತಕ್ಕದ್ದಲ್ಲ" ಎಂದು ಹೇಳಲಾಗಿದೆ. ಇದರಲ್ಲಿ ಪೋಲೀಸಿನವರು ಎಲ್ಲಿ seal ಮಾಡಬಹುದು ಎನ್ನುವ ವಿಷಯದಲ್ಲಿ ಶಿಕ್ಷಣ ಸಂಸ್ಥೆಗಳಿಗೆ exemption ನೀಡಲಾಗಿದೆ. ಶಿಕ್ಷಣ ಸಂಸ್ಥೆಗೆ ಪೋಲೀಸಿನವರು interfere ಮಾಡುವ ಬಗ್ಗೆ ಹೇಳಬೇಕಾದರೆ, ಯಾರೋ ಒಬ್ಬ ಸಬ್ ಇನ್ಸ್‌ಪೆಕ್ಟರ್‌ಗೆ ಯಾವುದೋ ಶಿಕ್ಷಣ ಸಂಸ್ಥೆಯನ್ನು ಕಂಡರೆ ಆಗದಿದ್ದರೆ ಆ ಸಬ್ ಇನ್ಸ್‌ಪೆಕ್ಟರ್ ವಿನಾಕಾರಣ ಆ ಶಿಕ್ಷಣ ಸಂಸ್ಥೆಗೆ ನೋಟಿಸ್ ಕೊಟ್ಟು, ಕೇಸ್ ಹಾಕುವಂತಹ ತೊಂದರೆಯನ್ನು ಕೊಡುತ್ತಾನೆ. ಈ ಕಾನೂನನ್ನು ದುರುಪಯೋಗಪಡಿಸಿಕೊಳ್ಳುವಂತಹ ಅವಕಾಶಗಳು ಹೆಚ್ಚಾಗಿವೆ. ಯಾವುದೇ ಸಂಸ್ಥೆಗಳನ್ನು seal ಮಾಡಿದಂತಹ ಸಂದರ್ಭದಲ್ಲಿ ಅವರು ಅಪೀಲು ಹೋಗುವುದಕ್ಕೆ ಧಾರ್ಮಿಕ ಸಂಸ್ಥೆಗಳಿಗೆ ಮತ್ತು ಶಿಕ್ಷಣ ಸಂಸ್ಥೆಗಳಿಗೆ exemption ಅನ್ನು ನೀಡಲಾಗಿದೆ.

ಅನುಚ್ಛೇಧ 2(ಎ)ರಲ್ಲಿ ಧಾರ್ಮಿಕ ಸಂಸ್ಥೆಗಳು ಮತ್ತು ಶೈಕ್ಷಣಿಕ ಸಂಸ್ಥೆಗಳನ್ನು ಸೇರಿಸಲಾಗಿದೆ. ಅಯ್ಯಪ್ಪಸ್ವಾಮಿಗೆ ಹೋಗುವಂತಹ seasonನಲ್ಲಿ ನೂರು ಜನ ಭಕ್ತರು ಒಂದು ಕಡೆ ಸೇರುತ್ತಾರೆ, ಶ್ರಾವಣ ಮಾಸದಲ್ಲಿ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ ಒಂದು ಕಾರ್ಯಕ್ರಮವಾಗುತ್ತದೆ ಮತ್ತು

ಅಲ್ಪಸಂಖ್ಯಾತರ ಉರುಸ್ ಕಾರ್ಯಕ್ರಮ ನಡೆಯುತ್ತದೆ ಅಲ್ಲಿ ಸುಮಾರು 100-150 ಜನ ಸೇರುತ್ತಾರೆ. ಇದೂ ಸಹ season ನಲ್ಲಿ ನಡೆಯುತ್ತದೆ. ಆದರೆ, ಈ ಕಾಯಿದೆಯ ಪ್ರಕಾರ ಅಲ್ಲಿಯೂ ಸಹ ಸಿಸಿ ಟಿ.ವಿ.ಯನ್ನು ಅಳವಡಿಸಬೇಕಾಗುತ್ತದೆ. The event takes place only on some occasion. ಉದಾಹರಣೆಗೆ ಹೇಳಬೇಕಾದರೆ, ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿಯಲ್ಲಿ ಫೆಬ್ರವರಿ ತಿಂಗಳನಲ್ಲಿ ತಾತಯ್ಯನವರ ಕಾರ್ಯಕ್ರಮ ಎಂದು ಒಂದು ಉತ್ಸವ ನಡೆಯುತ್ತದೆ. ಅಲ್ಲಿ ಸುಮಾರು 5-6 ಸಾವಿರ ಜನರು ಸೇರುತ್ತಾರೆ. ಆ ತಿಂಗಳನಲ್ಲಿ ಬಿಟ್ಟರೆ ಉಳಿದಂತೆ ಅಲ್ಲಿ 100 ಜನ ಸೇರುವಂತಹ ಕಾರ್ಯಕ್ರಮಗಳು ಇರುವುದಿಲ್ಲ. ಇಂತಹ ಸನ್ನಿವೇಶಗಳಿಗೆ ಈ ಕಾಯಿದೆಯಲ್ಲಿ exemptionನ್ನು ನೀಡಿಲ್ಲ. ಯಾವುದೋ ಒಂದು ಖಾಸಗಿ ಶಾಲೆಯಲ್ಲಿ 1 ರಿಂದ 4ನೇ ತರಗತಿ ನಡೆಯುತ್ತಿದ್ದರೆ ಅಲ್ಲಿ 100 ಜನ ಮಕ್ಕಳು ಇದ್ದೇ ಇರುತ್ತಾರೆ.

**ಶ್ರೀ ರಾಮಲಿಂಗಾರೆಡ್ಡಿ:-** ಸನ್ಮಾನ್ಯ ಸಭಾಪತಿಯವರೇ, ಅಂತಹ ಶಾಲೆಗಳಲ್ಲಿ ಆಡಳಿತ ಮಂಡಳಿಯವರು ಸಿಸಿ ಕ್ಯಾಮರಾವನ್ನು ಅಳವಡಿಸಬೇಕಾಗುತ್ತದೆ.

**ಶ್ರೀ ರಮೇಶ್‌ಬಾಬು:-** ಸನ್ಮಾನ್ಯ ಸಭಾಪತಿಯವರೇ, ಅವರು ಸಿಸಿ ಕ್ಯಾಮರಾಗಳನ್ನು ಹಾಕಬೇಕು ಎನ್ನುವುದನ್ನು ನಾನು ಒಪ್ಪುತ್ತೇನೆ. ಒಂದು ವೇಳೆ ಅವರು ಹಾಕಿಲ್ಲವೆಂದರೆ ಅದನ್ನು ನೋಡುವುದಕ್ಕೆ ಪೋಲೀಸ್‌ನವರಿಗೆ ಅಧಿಕಾರವನ್ನು ನೀಡಲಾಗುತ್ತಿದೆ. ಶಿಕ್ಷಣ ಸಂಸ್ಥೆಯೊಳಗೆ ಪೋಲೀಸ್ ವ್ಯವಸ್ಥೆಯನ್ನು ತಂದರೆ, how they will conduct academic activities without police force. ಯಾರೋ ಒಬ್ಬ ಪೋಲೀಸ್‌ನ ಮಗನಿಗೆ ಅಥವಾ ಮಗಳಿಗೆ ಯಾವುದೋ ಒಂದು ಶಾಲೆ seat ಕೊಡಲಿಲ್ಲವೆಂದರೆ ಅಥವಾ ಅವನು ಹೇಳಿದ್ದನ್ನು ಮಾಡದೇ ಹೋದರೆ ಆ ಶಾಲೆಯ ಮೇಲೆ ಕೇಸ್ ಹಾಕುತ್ತಾನೆ. ಇಂತಹ ಘಟನೆಗಳು ನಡೆಯುವುದಕ್ಕೆ ಈ ವಿಧೇಯಕದಲ್ಲಿ ಅವಕಾಶವಿದೆ. ಎಲ್ಲೆಲ್ಲಿ ತೊಂದರೆಯಾಗಿದೆ ಎನ್ನುವ ವಿಚಾರವನ್ನು ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಧಾರ್ಮಿಕ ಸಂಸ್ಥೆಗಳಲ್ಲಿ ಮಾತ್ರವಲ್ಲ ಶಿಕ್ಷಣ ಸಂಸ್ಥೆಗಳಿಗೂ ಸಹ ತೊಂದರೆಯಾಗುತ್ತದೆ. ಪರಿಭಾಷೆಗಳಲ್ಲಿ ಆಸ್ಪತ್ರೆಗಳಲ್ಲಿ ಮತ್ತು ಕ್ರೀಡಾ ಸಂಕೀರ್ಣಗಳಲ್ಲಿ ಸಿಸಿ ಟಿ.ವಿ.ಯನ್ನು ಅಳವಡಿಸಬೇಕು ಎಂದು ಹೇಳಲಾಗಿದೆ. ಉದಾಹರಣೆಗೆ ಹೇಳಬೇಕಾದರೆ, ಯಾವುದೋ ಒಂದು ತಾಲ್ಲೂಕು ಕೇಂದ್ರದಲ್ಲಿರುವ ಒಂದು ಕ್ಲಿನಿಕ್‌ಗೆ 100 ಜನ ರೋಗಿಗಳು ಬಂದೇ ಬರುತ್ತಾರೆ. ಆ ಕ್ಲಿನಿಕ್‌ನ ಡಾಕ್ಟರ್ ಸಿಸಿ ಟಿ.ವಿ.ಯನ್ನು ಅಳವಡಿಸಿಕೊಳ್ಳಲೇ ಬೇಕಾಗುತ್ತದೆ ಮತ್ತು ಒಂದು ತಿಂಗಳಾದ ನಂತರ video footage ಅನ್ನು ಸಂಗ್ರಹಿಸಿಕೊಂಡು ಸಂಬಂಧಪಟ್ಟ ಪೋಲೀಸ್ ಠಾಣೆಗೆ ಹೋಗಿ submit ಮಾಡಿ ಮಾಡಿ ಎನ್.ಓ.ಸಿ. ತೆಗೆದುಕೊಳ್ಳಬೇಕಾಗುತ್ತದೆ. ಡಾಕ್ಟರ್‌ಗೆ ಪ್ರತಿತಿಂಗಳೂ ಅದೇ ಕೆಲಸವಾಗುತ್ತದೆ. ಆ ಕೆಲಸ ಮಾಡದೆ

ಹೋದರೆ, ಪೋಲೀಸಿನವರು ಅವನಿಗೆ ನೋಟಿಸ್ ಕೊಡುತ್ತಾರೆ ಕೇಸ್ ಹಾಕುತ್ತಾರೆ. ಅದೇ ರೀತಿಯಲ್ಲಿ ಶಿಕ್ಷಣ ಸಂಸ್ಥೆಯವರು ಸಹ video footage ಅನ್ನು ಸಂಗ್ರಹಿಸಿಕೊಂಡು ಸಂಬಂಧಪಟ್ಟ ಪೋಲೀಸ್ ಠಾಣೆಗೆ ಹೋಗಿ ಅದನ್ನು ಒಪ್ಪಿಸಿ, ಎನ್.ಓ.ಸಿ. ತೆಗೆದುಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ನೋಟಿಸ್ ಕೊಟ್ಟು ಕೇಸ್ ದಾಖಲು ಮಾಡುತ್ತಾರೆ. Appealing authority ಬೇರೆ ಇದೆ. ಆದರೆ, ಇಲ್ಲಿ ಮಾಡಿರುವಂತಹ mandatory provision ಶಾಲೆಯಾಗಿರಬಹುದು ಕ್ಲಿನಿಕ್ ಇರಬಹುದು ಅಥವಾ ಧಾರ್ಮಿಕ ಕೇಂದ್ರ ಇರಬಹುದು all comes under this purview. ಈ ವಿಧೇಯಕದ ಪುಟ ಸಂಖ್ಯೆ:02 ಅನುಚ್ಛೇಧ 3(2)ರಲ್ಲಿ ಕಾರ್ಯ ಸಂಸ್ಥೆಯೊಂದನ್ನು ನಡೆಸುತ್ತಿರುವ ಪ್ರತಿಯೊಬ್ಬ ಮಾಲೀಕ ಅಥವಾ ವ್ಯವಸ್ಥಾಪಕ ಅಥವಾ ವ್ಯಕ್ತಿ ಅಥವಾ ವ್ಯಕ್ತಿಗಳು ಮೂವತ್ತು ದಿನಗಳ ಅಥವಾ ಸರ್ಕಾರವು ಅಧಿಸೂಚಿಸಿದ ಅವಧಿಗಾಗಿ video footage ಅನ್ನು ಕ್ರಮಬದ್ಧವಾಗಿ ಉಳಿಸತಕ್ಕದ್ದು ಅಥವಾ ಸಂಗ್ರಹಿಸತಕ್ಕದ್ದು ಮತ್ತು ಪ್ರದೇಶದ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಪೋಲೀಸ್ ನಿರೀಕ್ಷಕನು ಅಥವಾ ಸರ್ಕಾರವು ಅಧಿಸೂಚಿಸಬಹುದಾದ ಯಾವೊಬ್ಬ ಇತರ ಪ್ರಾಧಿಕಾರಿಯು ಅಗತ್ಯಪಡಿಸಿದಾಗಲೆಲ್ಲ ಅದನ್ನು ಒದಗಿಸತಕ್ಕದ್ದು" ಎಂದು ಇದೆ. ಯಾವುದೇ ಒಂದು ಕ್ಲಿನಿಕ್‌ನಲ್ಲಿ ಒಬ್ಬ ಡಾಕ್ಟರ್, ಯಾವುದೋ ಒಂದು ಶಾಲೆ ಅಥವಾ ಅಲ್ಪ ಸಂಖ್ಯಾತರ ಯಾವುದೇ ಒಂದು ಕಾರ್ಯಕ್ರಮ ನಡೆದಾಗ ಅವರು video footage ಅನ್ನು ಕೊಡದಿದ್ದರೆ, the police is supposed to issue the notice. ಕ್ರಿಮಿನಲ್ ಕೇಸ್ ದಾಖಲು ಮಾಡುತ್ತಾರೆ. ಈ ರೀತಿ ಆದರೆ ಶಾಲೆಗಳು ಕಾರ್ಯನಿರ್ವಹಿಸುವುದು ಹೇಗೆ? ತಿಂಗಳಿಗೊಮ್ಮೆ video footage ಅನ್ನು ಕೊಡಲೇಬೇಕು ಎಂದು ಕಡ್ಡಾಯ ಮಾಡಲಾಗಿದೆ. ಶಿಕ್ಷಣ ಸಂಸ್ಥೆಗಳು ಪ್ರತಿ ತಿಂಗಳು ಪೋಲೀಸ್ ಠಾಣೆಗೆ video footage ಅನ್ನು ಕೊಡುವುದಕ್ಕೆ ಓಡಾಡಿಕೊಂಡು ಇದ್ದರೆ, how they will conduct the academic activities? ಸರ್ಕಾರಿ ಶಾಲಾ/ಕಾಲೇಜುಗಳನ್ನು ಈ ವಿಧೇಯಕದಡಿ ಸೇರಿಸಿಲ್ಲ ಅದಕ್ಕಾಗಿ ನಾನು ಸರ್ಕಾರವನ್ನು ಅಭಿನಂದಿಸುತ್ತಿದ್ದೇನೆ. ಅಷ್ಟರ ಮಟ್ಟಿಗೆ we have to appreciate and we are happy. ಆದರೆ, ಅನುದಾನಿತ ಅಥವಾ ಅನುದಾನ ರಹಿತ ಖಾಸಗಿ ಶಾಲಾ/ಕಾಲೇಜುಗಳು ಪ್ರತಿ ತಿಂಗಳು video footage ಅನ್ನು ಕೊಡುವುದಕ್ಕೆ ಓಡಾಡುತ್ತಿದ್ದರೆ ಅವರು academic activitiesಗಳನ್ನು ನಡೆಸುವುದು ಹೇಗೆ? ಇದು ಕೇವಲ ಶಾಲಾ ಕಾಲೇಜುಗಳಿಗೆ ಮಾತ್ರ ಸೀಮಿತವಾಗಿಲ್ಲ, ಕ್ಲಿನಿಕ್‌ಗಳು ಅಥವಾ ನರ್ಸಿಂಗ್ ಹೋಂಗಳನ್ನು ನಡೆಸುವಂತಹ ಡಾಕ್ಟರ್‌ಗಳು ಸಹ ಇದೇ ಕೆಲಸವನ್ನು ಮಾಡಬೇಕಾಗುತ್ತದೆ. ನೂರು ಜನ ಸೇರುವಂತಹ ಯಾವುದೇ ಸ್ಥಳವಾಗಿರಬಹುದು, ಉದಾಹರಣೆಗೆ ಖಾಸಗಿಯಾಗಿ ಯಾವುದೋ ಒಂದು ಅಂಗಡಿ ನಡೆಸುತ್ತಿದ್ದರೆ ಆ ಅಂಗಡಿಗೆ ಪ್ರತಿದಿನ 100 ಜನಕ್ಕಿಂತ ಹೆಚ್ಚು ಜನ ಗ್ರಾಹಕರು ಬರುತ್ತಾರೆ.

According to the Act, they are bound to furnish the details. ಯಾವುದೋ ಒಂದು ದಿನಸಿ ಅಂಗಡಿಗೆ ಪ್ರತಿದಿನ 200 ಜನ ಗ್ರಾಹಕರು ಬರುತ್ತಾರೆ. ಈ ಕಾನೂನಿನ ಪ್ರಕಾರ 100 ಜನರ ವ್ಯಾಪ್ತಿ ಮುಗಿದರೆ, they are bound to furnish the details.

ಅನುಚ್ಛೇಧ 4ರಲ್ಲಿ ನಿಯತಕಾಲಿಕ ವಿವರಪಟ್ಟಿಕೆಗಳನ್ನು ದಾಖಲು ಮಾಡುವ ಹೊಣೆಗಾರಿಕೆ ಎನ್ನುವ ಶೀರ್ಷಿಕೆಯಡಿಯಲ್ಲಿ;

> **" ಕಾರ್ಯ ಸಂಸ್ಥೆಯೊಂದನ್ನು ನಡೆಸುತ್ತಿರುವ ಪ್ರತಿಯೊಬ್ಬ ಮಾಲೀಕ ಅಥವಾ ವ್ಯವಸ್ಥಾಪಕ ಅಥವಾ ವ್ಯಕ್ತಿ ಅಥವಾ ವ್ಯಕ್ತಿಗಳು ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಸಂಬಂಧಪಟ್ಟ ಪೋಲೀಸ್ ನಿರೀಕ್ಷಕನಿಗೆ, ಪ್ರತಿ ಮೂರು ತಿಂಗಳಿಗೊಮ್ಮೆ ಸಾರ್ವಜನಿಕ ಸುರಕ್ಷಾ ಕ್ರಮಗಳನ್ನು ಒದಗಿಸಲಾಗಿದೆ, ಕ್ರಮಬದ್ಧವಾಗಿ ನಿರ್ವಹಿಸಲಾಗಿದೆ ಮತ್ತು ಸಂಬಂಧಪಟ್ಟ ಸಲಕರಣೆಗಳು ಸುಸ್ಥಿತಿಯಲ್ಲಿ ಕಾರ್ಯನಿರ್ವಹಿಸುತ್ತಿದೆ ಎಂದು ಪ್ರಾಮಾಣೀಕರಿಸುವ ನಿಯತಕಾಲಿಕ ವಿವರಪಟ್ಟಿಕೆಗಳನ್ನು ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಮತ್ತು ಅಂಥ ನಮೂನೆಯಲ್ಲಿ ದಾಖಲು ಮಾಡತಕ್ಕದ್ದು, ನಿಯತಕಾಲಿಕ ವಿವರಪಟ್ಟಿಕೆಯನ್ನು ದಾಖಲು ಮಾಡಲು ವಿಫಲರಾಗುವ ಅಂಥವರು ಮೊದಲ ಸಲಕ್ಕೆ ಎರಡು ಸಾವಿರ ರೂಪಾಯಿಗಳ ಮತ್ತು ತದನಂತರದ ಪ್ರಸಂಗಗಳಿಗೆ ನಾಲ್ಕು ಸಾವಿರ ರೂಪಾಯಿಗಳ ಜುಲ್ಮಾನೆಯನ್ನು ಪಾವತಿಸಲು ಹೊಣೆಗಾರರಾಗತಕ್ಕದ್ದು;"**

ಎಂದು ತಿಳಿಸಲಾಗಿದೆ.

(990)15.11.2017-3.50-ಪಿಕೆ-ಜಿಆರ್

**ಶ್ರೀ ರಮೇಶ್‌ಬಾಬು(ಮುಂದುವರೆದಿದೆ)**

ಯಾವುದಾದರೂ ಶಾಲಾ-ಕಾಲೇಜುಗಳು, ಧಾರ್ಮಿಕ ಸಂಸ್ಥೆಗಳು, ಆಸ್ಪತ್ರೆಗಳು ಅಥವಾ ಯಾವುದಾದರೂ ಎಸ್ಟಾಬ್ಲಿಷ್‌ಮೆಂಟ್ ಅಂದರೆ, ಅಂಗಡಿಯೋ ಮತ್ತೊಂದೋ ಅಥವಾ ನೂರಕ್ಕಿಂತ ಹೆಚ್ಚು ಜನ ಸಂಪರ್ಕ ಹೊಂದಿರುವವರು ಕೊಡಲಿಲ್ಲ ಎಂದರೆ ಅವರ ಮೇಲೆ ಜುಲ್ಮಾನೆ ಹಾಕುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಇದನ್ನು ಪೋಲೀಸ್‌ನವರು ದುರುಪಯೋಗ ಮಾಡಿಕೊಳ್ಳುವುದಕ್ಕೆ ಅವಕಾಶ ಇದೆ ಎನ್ನುವುದಕ್ಕಾಗಿ ನಾನು ಈ ಮಾತನ್ನು ಹೇಳುತ್ತಿದ್ದೇನೆ.

"ಸೆಕ್ಷನ್ **5. ಆವರಣಗಳನ್ನು ಪರಿಶೀಲಿಸಲು ಪೋಲೀಸ್ ನಿರೀಕ್ಷಕನ ಅಧಿಕಾರಗಳು**', ಇದರಲ್ಲಿ 'ನಿಯಮಗಳಲ್ಲಿ ನಿರ್ದಿಷ್ಟಪಡಿಸಲಾದಂತೆ, ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಪೋಲೀಸ್ ನಿರೀಕ್ಷಕನು ಯಾವುದೇ ಸಮಯದಲ್ಲಿ ಪೂರ್ವ ಸೂಚನೆಯಿಲ್ಲದೇ ಯಾವುದೇ ಸಂಸ್ಥೆಯನ್ನು ಪ್ರವೇಶಿಸಿ ಸಾರ್ವಜನಿಕ ಸುರಕ್ಷಾ ಕ್ರಮಗಳ ಅಳವಡಿಸುವಿಕೆ ಮತ್ತು ಕಾರ್ಯನಿರ್ವಹಣೆಯ ಕುರಿತು ಪರಿಶೀಲಿಸಬಹುದು ಮತ್ತು ತಪಾಸಣೆ ಮಾಡಬಹುದು ಹಾಗೂ ಯಾವುದೇ ಕರ್ತವ್ಯಲೋಪ

ಅಥವಾ ಉಲ್ಲಂಘನೆ ಸಂದರ್ಭದಲ್ಲಿ, ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿ ಹೊಂದಿರುವ ಸಹಾಯಕ ಪೊಲೀಸ್ ಆಯುಕ್ತ(ಎಸಿಪಿ) ಅಥವಾ ಸಂದರ್ಭಾನುಸಾರವಾಗಿ ಸಂಬಂಧಪಟ್ಟ ಉಪ–ವಿಭಾಗೀಯ ಪೊಲೀಸ್ ಅಧಿಕಾರಿ (ಎಸ್‌ಡಿಪಿಒ) ಇವರಿಗೆ ವರದಿಯನ್ನು ಕಳುಹಿಸತಕ್ಕದ್ದು" ಎಂದಿದೆ.

ಅಂದರೆ, without intimation at any time, ಶಾಲೆಗಳಿರಬಹುದು, ಆಸ್ಪತ್ರೆಗಳಿರಬಹುದು, ಮತ್ತೊಂದು ಇರಬಹುದು, if he desires, ಯಾವುದೋ ಒಬ್ಬ ಪೊಲೀಸ್ ಅಧಿಕಾರಿಗೆ ಅನುಮಾನ ಬಂತು ಎಂದರೆ immediately without intimation he can go, he can inspect and he can give a report.

ಸೆಕ್ಷನ್ 6, (2) ಇದರ ಅಡಿ

"(i) ಕರ್ತವ್ಯಲೋಪದ ಮೊದಲ ತಿಂಗಳಿಗಾಗಿ ರೂ.5000.00

(ii) ಕರ್ತವ್ಯಲೋಪದ ಎರಡನೇ ತಿಂಗಳಿಗಾಗಿ ರೂ. 10000.00

–ರಾಜಿ ಮಾಡಿಕೊಳ್ಳುವ ಶುಲ್ಕವನ್ನು (compoundable fee) ವಿಧಿಸಬಹುದು" ಎಂದಿದೆ.

ಅಂದರೆ, ಯಾವುದೋ ಒಂದು ಪ್ರಕರಣದಲ್ಲಿ ದುರುಪಯೋಗ ಮಾಡಿಕೊಳ್ಳುವುದಕ್ಕೆ ಇಲ್ಲಿ ಅವಕಾಶ ಇರುತ್ತದೆ. ಬೆಂಗಳೂರಿನವರಾದ ಮಾನ್ಯ ಗೃಹ ಸಚಿವರಿಗೆ ಈ ಒಂದು ಪ್ರಕರಣ ಗೊತ್ತಿದೆ. ಬೆಂಗಳೂರಿನಲ್ಲಿ ವಕೀಲರ ಮತ್ತು ಮಾಧ್ಯಮದವರ ನಡುವೆ ದೊಡ್ಡ ಗಲಾಟೆ ಆಯಿತು. ಅದು ಸುಪ್ರೀಂ ಕೋರ್ಟ್‌ವರೆಗೆ ಹೋಯಿತು. ಪೊಲೀಸ್‌ನವರು ತಮ್ಮ ಅಧಿಕಾರ ದುರುಪಯೋಗ ಮಾಡಿಕೊಂಡು, ಮನೆಗೆ ಹೋಗುತ್ತಿದ್ದ ಮಹಿಳಾ ವಕೀಲರನ್ನು ಮತ್ತು ಯಾರ್ಯಾರು ಕರಿ ಕೋಟ್ ಹಾಕಿದ್ದರೋ ಅಂಥವರನ್ನು ಹುಡುಕಿ ಅವರ ಮೇಲೆ ಲಾಠಿ ಬೀಸಿದರು ಎನ್ನುವ ಗುರುತರವಾದ ಆರೋಪ ಬಂತು. ಈ ಪ್ರಕರಣ ಹೈಕೋರ್ಟ್‌ಗೆ ಬಂದು ನಂತರ ಸುಪ್ರೀಂ ಕೋರ್ಟ್‌ಗೂ ಹೋಯಿತು. ಕೋರ್ಟ್‌ನವರು video footage submit ಮಾಡಿ ಎಂದು ನಿರ್ದೇಶನ ಕೊಟ್ಟಾಗ ಇವರ ಹತ್ತಿರ ಆ footage ಇರಲಿಲ್ಲ. There was no evidence. ಸರ್ಕಾರದ ಗೃಹ ಇಲಾಖೆಗೆ ಸಂಬಂಧಪಟ್ಟಂತೆಯೇ footage ಇಟ್ಟಿರಲಿಲ್ಲ. ಆದರೆ ಇಲ್ಲಿ, ಯಾವುದೋ ಖಾಸಗಿ ಸಂಸ್ಥೆಯವರು footage ಇಟ್ಟಿಲ್ಲ ಎಂದು ಅವರ ಮೇಲೆ ದಂಡ ಹಾಕುವುದು, ನೋಟಿಸ್ ಕೊಡುವುದು, ಪ್ರತಿ ತಿಂಗಳು submit ಮಾಡಿ ಎಂದು ಹೇಳುವುದು, 3 ತಿಂಗಳಿಗೆ ಒಮ್ಮೆ ಮಾಡಲಿಲ್ಲ ಎಂದರೆ ಕೇಸ್ ಹಾಕುತ್ತೇವೆ ಎಂದರೆ where will they stand?

**ಉಪಸಭಾಪತಿಯವರು:–** ಮಾನ್ಯ ರಮೇಶ್‌ಬಾಬುರವರೇ ಬೇಗ ಮುಗಿಸಿ. ಏನೇನು ಬದಲಾವಣೆ ಆಗಬೇಕು ಎಂಬುದನ್ನು ಹೇಳಿ. ಬೇರೆಯವರಿಗೂ ಮಾತನಾಡುವುದಕ್ಕೆ ಅವಕಾಶ ಕೊಡಬೇಕಿದೆ.

**ಶ್ರೀ ರಮೇಶ್‌ಬಾಬು:–** ಮಾನ್ಯ ಸಭಾಪತಿಯವರೇ, ಇದು ಆಕ್ಟ್ ಆಗಿದೆ, ಆದ್ದರಿಂದ ಮಾತನಾಡುತ್ತಿದ್ದೇನೆ. ಇಲ್ಲಿ limitation ಇಲ್ಲ. ಸೆಕ್ಷನ್ 7.ಅಪೀಲುಗಳು (1) ಇದರಲ್ಲಿ "ಈ ಅಧಿನಿಯಮದ ಅಡಿಯಲ್ಲಿ ಸಹಾಯಕ ಪೊಲೀಸ್ ಆಯುಕ್ತ ಅಥವಾ ಉಪ–ವಿಭಾಗಿಯ ಪೊಲೀಸ್ ಅಧಿಕಾರಿಯು ಮಾಡಿದ ಆದೇಶ ಅಥವಾ ಯಾವುದೇ ಕ್ರಮದಿಂದಾಗಿ ಬಾಧಿತನಾದ ಯಾವೊಬ್ಬ ವ್ಯಕ್ತಿ ಅಥವಾ ಕಾಯಸಂಸ್ಥೆಯು, ಆದೇಶದ ಅಥವಾ ಕ್ರಮದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಅಧಿಕಾರ ವ್ಯಾಪ್ತಿಯುಳ್ಳ ಉಪ ಪೊಲೀಸ್ ಆಯುಕ್ತನಿಗೆ ಅಥವಾ ಸಂದರ್ಭಾನುಸಾರವಾಗಿ ಪೊಲೀಸ್ ಅಧೀಕ್ಷಕನು ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಅಹವಾಲನ್ನು ಆಲಿಸಿ ಅಪೀಲನ್ನು ವಿಲೇ ಮಾಡತಕ್ಕದ್ದು." ಎಂದಿದೆ. ಎಷ್ಟು ದಿವಸದಲ್ಲಿ ವಿಲೇ ಮಾಡಬೇಕು? There is no time limit at all. ನನಗೆ ಯಾರೋ ಒಬ್ಬ ಇನ್ಸ್‌ಪೆಕ್ಟರ್ ತೊಂದರೆ ಮಾಡಿದಾಗ ನಾನು ಎ.ಸಿ.ಪಿ., ಗೋ ಅಥವಾ ಡಿವೈಎಸ್‌ಪಿ ಯವರಿಗೋ ಅಪೀಲ್ ಹಾಕಿಕೊಳ್ಳುತ್ತೇನೆ. ಅವರು ಎಷ್ಟು ದಿವಸದಲ್ಲಿ dispose ಮಾಡಬೇಕು? There is no time limitation. ೩೦ ದಿವಸದಲ್ಲಿ ಮಾಡುತ್ತಾರೆಯೇ, ೩ ವರ್ಷಗಳಲ್ಲಿ ಮಾಡುತ್ತಾರೆಯೇ ಅಥವಾ 5 ವರ್ಷಗಳಲ್ಲಿ ಡಿಸ್ಪೋಸ್ ಮಾಡುತ್ತಾರೆಯೇ? There should be a specific time limit. ಅವರೇನೋ ಬೇರೆ ಆರ್ಡರ್ ಮಾಡಿದರೆ ನಾನು ಡಿ.ಜಿ., ಅವರಿಗೆ ಅಪೀಲ್ ಮಾಡಬೇಕಾಗುತ್ತದೆ. ಹಾಗೆ ಮಾಡಬೇಕಾದರೆ ಎಷ್ಟು ದಿವಸದ ಒಳಗೆ ಅಪೀಲ್ ಮಾಡಬೇಕು ಮತ್ತು ಅವರು ಎಷ್ಟು ದಿವಸಗಳ ಒಳಗೆ dispose ಮಾಡಬೇಕು? ಈ ರೀತಿಯ ಗೊಂದಲ ಇದರಲ್ಲಿ ಇದೆ. ನೀವು ಈ ಕಾಯಿದೆಯನ್ನು ತಂದಿರುವ ಉದ್ದೇಶ ಒಳ್ಳೆಯದೇ ಆಗಿದೆ. ಆದರೆ ತಾವು ಶಿಕ್ಷಣ ಸಂಸ್ಥೆಗಳನ್ನು ಮತ್ತು ಧಾರ್ಮಿಕ ಸಂಸ್ಥೆಗಳನ್ನು ಇದರಿಂದ ಆಚೆ ಇಡಬೇಕು. ಈ ವ್ಯಾಪ್ತಿಯೊಳಗಡೆ ಕ್ಲಿನಿಕ್‌ಗಳನ್ನು, ಧಾರ್ಮಿಕ ಸಂಸ್ಥೆಗಳನ್ನು, ಶಿಕ್ಷಣ ಸಂಸ್ಥೆಗಳನ್ನು ತೆಗೆದುಕೊಂಡು ಬಂದರೆ ಇಲ್ಲಿ ಉಪಯೋಗಕ್ಕಿಂತ ಅನಾನುಕೂಲ ಜಾಸ್ತಿ ಆಗುತ್ತದೆ. Police atrocities ಜಾಸ್ತಿ ಆಗುತ್ತವೆ. ಪೊಲೀಸ್‌ನವರು ಇದನ್ನು ದುರುಪಯೋಗ ಮಾಡಿಕೊಳ್ಳುವಂತಹ ಅವಕಾಶಗಳು ಇರುತ್ತವೆ. ಈ ಕಾಯಿದೆಯಿಂದ ಸದರಿ ಸಂಸ್ಥೆಗಳನ್ನು ಅಚೆ ಇಡಬೇಕು.

**ಶ್ರೀ ರಾಮಲಿಂಗಾರೆಡ್ಡಿ:–** ರೂಲ್ಸ್ ಮಾಡುವಾಗ ಅಪೀಲ್ ಮಾಡುವುದಕ್ಕೆ ಅವಕಾಶ ಕಲ್ಪಿಸಿಕೊಡುವ ಅಂಶವನ್ನು ಸೇರಿಸಬಹುದು.

**ಶ್ರೀ ರಮೇಶ್ ಬಾಬು**:– ನೀವು in addition to this, ರೂಲ್ಸ್ ಫ್ರೇಮ್ ಮಾಡುತ್ತಿದ್ದೀರಿ. I will welcome it. ಆದರೆ ಈ ಕಾಯಿದೆಯಲ್ಲಿ ಶಿಕ್ಷಣ ಸಂಸ್ಥೆಗಳನ್ನು, ಧಾರ್ಮಿಕ ಸಂಸ್ಥೆಗಳನ್ನು ದಯಮಾಡಿ ಕೈಬಿಡಿ. Including clinics, ಆಸ್ಪತ್ರೆಗಳನ್ನೂ ಕೈಬಿಡಬೇಕು. ಹಾಗೆ ಮಾಡದೇ ಹೋದರೆ ಪ್ರತಿದಿನವೂ ರೆಕಾರ್ಡ್ ಹೊತ್ತುಕೊಂಡು ಪೊಲೀಸ್ ಠಾಣೆಗೆ ತಿರುಗುವುದಕ್ಕೆ ಆಗುವುದಿಲ್ಲ. ಇದು academic institution ಕೆಲಸ ಅಲ್ಲ. ನೀವು mandatory provision ಮಾಡುವ ಸಮಯದಲ್ಲಿ ಅವರು ದಾಖಲೆಗಳನ್ನು ಸಬ್‌ಮಿಟ್ ಮಾಡಬೇಕಾಗುತ್ತದೆ, certify ಮಾಡಬೇಕಾಗುತ್ತದೆ. ಮತ್ತೆ, ಆತ recognition renewalಗೆ ಹೋದರೆ ಪೊಲೀಸ್‌ನವರು 'no objection' ಕೊಡಬೇಕಾಗುತ್ತದೆ. ಇಂಥದ್ದೆಲ್ಲವೂ ಆದರೆ ಶಿಕ್ಷಣ ಸಂಸ್ಥೆಗಳು ಕೊನೆಗೆ ಎಲ್ಲಿ ಹೋಗಿ ಮುಟ್ಟುತ್ತವೆ? ನೀವು ಆ್ಯಕ್ಟ್‌ನಲ್ಲೇ ಇದನ್ನು ಕೈಬಿಡಬೇಕು. ಇಲ್ಲದೇ ಇದ್ದರೆ ಇದನ್ನು ಹೌಸ್ ಕಮಿಟಿಗೆ ರೆಫರ್ ಮಾಡಬೇಕು ಅಥವಾ ಈ ವಿಧೇಯಕವನ್ನು withdraw ಮಾಡಿ. ಉಲ್ಲೇಖಿತ ಸಂಸ್ಥೆಗಳನ್ನು ಕೈಬಿಟ್ಟು ಕಾಯಿದೆ ತರಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ವಿ.ಎಸ್.ಉಗ್ರಪ್ಪ(ನಾಮನಿರ್ದೇಶನ ಹೊಂದಿದವರು)**:–ಮಾನ್ಯ ಸಭಾಪತಿಯವರೇ, ಸರ್ಕಾರ ಸಮಾಜದ ರಕ್ಷಣೆಯ ದೃಷ್ಟಿಯಿಂದ, ಜನಸಾಮಾನ್ಯರ ರಕ್ಷಣೆಯ ದೃಷ್ಟಿಯಿಂದ ಮತ್ತು ಸಮಾಜದಲ್ಲಿ ನಡೆಯುತ್ತಿರುವಂತಹ ಕಳ್ಳತನ ಇರಬಹುದು, chain snatching ಇರಬಹುದು, ಮಹಿಳೆಯರ ಮೇಲೆ ನಡೆಯತಕ್ಕಂಥ ದೌರ್ಜನ್ಯಗಳಿರಬಹುದು, ಈ ರೀತಿಯ ಅನೇಕ ಅಪರಾಧಗಳನ್ನು ತಡೆಯುವುದಕ್ಕೆ, ಯಾರು ಅಪರಾಧಗಳನ್ನು ಎಸಗುತ್ತಾರೋ ಅಂಥವರನ್ನು ಶಿಕ್ಷೆಗೆ ಒಳಪಡಿಸಬೇಕಾದರೆ 21ನೇ ಶತಮಾನದಲ್ಲಿರುವ ನಾವು ವೈಜ್ಞಾನಿಕವಾಗಿ ಟೆಕ್ನಾಲಜಿ ಬಳಸಿಕೊಳ್ಳುವ ದೃಷ್ಟಿಯಿಂದ ಈ ವಿಧೇಯಕವನ್ನು ತಂದಿದ್ದಾರೆ. ಇದು ನಿಜಕ್ಕೂ ಸಹ ಸಮಯೋಚಿತ ಮತ್ತು ಸ್ವಾಗತಾರ್ಹವಾದುದು. ಮಾನ್ಯ ಸಭಾಪತಿಯವರೇ, Statement of Objects and reasons ನಲ್ಲಿ ಸ್ಪಷ್ಟವಾಗಿ, ಯಾವ ಕಾರಣಗಳ ಹಿನ್ನೆಲೆಯಲ್ಲಿ ಈ ಕಾನೂನನ್ನು ತರುವುದಕ್ಕೆ ಹೊರಟ್ಟಿದ್ದೇವೆ ಎಂದು ಹೇಳಿದ್ದಾರೆ. It reads thus:

> "Therefore, it is considered necessary to provide for,-
>
> xx xx xx xx xx
>
> (ii)installations of public surveillance system such as CCTVs by owners of establishments at their own cost and to provide for making available video recordings up to 30 days to the designated police

> authorities as and when required in the investigation of specific crimes."

ಇದರ ಮೇಲೆ in the Definitions clause 2, 'Establishment' ಗಳು ಯಾವುದು ಎನ್ನುವುದನ್ನು ಹೇಳಿದ್ದಾರೆ. Clause 2(a) of the Bill reads thus:

> "(a) **"Establishment"** means a place frequented by large number of people with a likelihood of public gathering of hundred people or more at a time or Five Hundred per day such as commercial establishments, industrial establishments, religious places, educational institutions, hospitals, sports complexes, railway stations, bus stations, places of organized congregations, such other establishments as the Government, may by notification declare to be an establishment for the purpose of this Act."

ಇದನ್ನು ನೋಡಿದರೆ this provision is applicable only to private establishments. ಸರ್ಕಾರಿ ಶಾಲಾ-ಕಾಲೇಜುಗಳು, ಬ್ಯಾಂಕುಗಳು, ಕಚೇರಿಗಳಿಗೆ ಹೋದಂಥ ಸಂದರ್ಭದಲ್ಲಿ ಈ threats ಇರುತ್ತದೆ. "Establishment" ಎನ್ನುವ ಕಡೆ "which includes Government offices, which includes Banks, which includes PG Centers" ಎಂದು ಸೇರಿಸಬೇಕು ಎಂದು ಹೇಳಬಯಸುತ್ತೇನೆ. ಅದೇರೀತಿ, ಪ್ರತಿವಾರ ನಡೆಯುವ ಸಂತೆಗಳೂ ಇರುತ್ತವೆ. ಬ್ಯಾಂಕಿಗೆ ಸಿಸಿ ಟಿವಿ ಹಾಕದೇ ಇದ್ದರೆ ಯಾರು ಬೇಕಾದರೂ ದರೋಡೆ ಮಾಡುವ ಅವಕಾಶಗಳಿರುತ್ತವೆ. ಮಾನ್ಯ ಸಭಾಪತಿಯವರೇ, ನಾನು ಒಂದು ಸಮಿತಿಯ ಅಧ್ಯಕ್ಷನಾಗಿ ರಾಜ್ಯದ 30 ಜಿಲ್ಲೆಗಳ ಅನೇಕ ಹಾಸ್ಟೆಲ್‌ಗಳಿಗೆ, ಶಾಲೆಗಳಿಗೆ ಭೇಟಿ ಮಾಡಿದ್ದೆ. ಬಹುಶಃ ಸಿಸಿ ಟಿವಿ ಇರುವಂತಹ ಕಾರಣದಿಂದ ಅನೇಕ ಅಪರಾಧಿಗಳನ್ನು ಹಿಡಿಯುವುದಕ್ಕೆ ಸಾಧ್ಯವಾಗಿದೆ. ಸಿಸಿ ಟಿವಿ ಇವೆ ಎನ್ನುವ ಕಾರಣದಿಂದ ಕ್ರೈಮ್ ರೇಟ್ ಕಡಿಮೆ ಆಗಿರುವಂಥದ್ದೂ ಇದೆ. ಆದರೆ ಅನೇಕ ಕಡೆ ಸಿಸಿ ಟಿವಿ ಇದ್ದರೂ ದುರಾದೃಷ್ಟವಶಾತ್ ಅದು ಕೆಲಸ ಮಾಡುತ್ತಿರುವುದಿಲ್ಲ. ಎಲೆಕ್ಟ್ರಾನಿಕ್ ಸಿಟಿಯ ಒಂದು ಪಿಜಿ ಸೆಂಟರ್‌ನಲ್ಲಿ ಹೆಣ್ಣು ಮಕ್ಕಳ ಮೇಲೆ ರೇಪ್ ಆದದ್ದು ನಮಗೆ ಗೊತ್ತಿದೆ. ನಾನು ಅಲ್ಲಿ ವಿಸಿಟ್ ಕೂಡ ಮಾಡಿದ್ದೆ. ಇಂದಿರಾ ನಗರದ ಶಾಲೆಯಲ್ಲಿ ಯಾವರೀತಿ ಹೆಣ್ಣು ಮಕ್ಕಳ ಮೇಲೆ ದೌರ್ಜನ್ಯವಾಯಿತು ಎನ್ನುವುದು ನಮಗೆ ಗೊತ್ತಿದೆ. ಈ ರೀತಿಯ ಅನೇಕ ಪ್ರಕರಣಗಳು ಇವೆ.

(ಮುಂದು . . .)

(991)15-11-2017.4.00 ಡಿಎಸ್-ಜಿಆರ್

**ಶ್ರೀ ವಿ.ಎಸ್.ಉಗ್ರಪ್ಪ(ಮುಂದು):-**

ಅಥವಾ ಇಂದಿರಾನಗರದ ಶಾಲೆಗಳಲ್ಲಿ ಯಾವ ರೀತಿ ಹೆಣ್ಣುಮಕ್ಕಳ ಮೇಲೆ ದೌರ್ಜನ್ಯವಾಗಿತ್ತು. ಅದೇ ರೀತಿಯ ಈ ರೀತಿ ಅನೇಕ ಪ್ರಕರಣಗಳಿವೆ. ನನಗನಿಸುವುದೇನೆಂದರೆ, ಈ Definition Clause ನಲ್ಲಿ ಇನ್ನು ಸ್ವಲ್ಪ widen ಮಾಡುವಂಥದ್ದಕ್ಕೆ Government Establishments, ಶಾಲಾ-ಕಾಲೇಜುಗಳು, ಹಾಸ್ಟೆಲ್‌ಗಳು ಪ್ರತಿಯೊಂದನ್ನು ತರುವುದರ ಜೊತೆಗೆ ಪಿ.ಜಿ.ಸೆಂಟರ್‌ಗಳನ್ನು, ಬ್ಯಾಂಕ್‌ಗಳನ್ನು ತರಬೇಕಾಗುತ್ತದೆ. ಪ್ರತಿ ವಾರ ಸಂತೆಗಳು ನಡೆಯುತ್ತಿರುತ್ತವೆ, ಅಲ್ಲೂ ಕೂಡ ಅನೇಕ ಜನರು ಸಂತೆಗೆ ದನಗಳನ್ನು, ಎಮ್ಮೆಗಳನ್ನು ತಂದು ಮಾರಾಟ ಮಾಡಿ ಹೋಗುತ್ತಿರಬೇಕಾದರೆ pickpocket ಮಾಡಿ ಆ ರೈತನ ಹಣವನ್ನು ಒಡೆದುಕೊಂಡು ಹೋಗಿರುವಂತಹ ಅನೇಕ ಸಂದರ್ಭಗಳಿವೆ. ಇದನ್ನು ಆ Definition Clause ನಲ್ಲಿ ಸೇರಿಸತಕ್ಕಂಥದ್ದು ಸೂಕ್ತ ಎಂದು ನಾನು ಭಾವಿಸಿದ್ದೇನೆ. Further, in Clause 2(g), it is stated as follows:-

> **"(g)** "**Public Safety Measures**" means Access Controls and Closed Circuit Television Surveillance at entry and exit points and common public places of the establishments and their parking areas as prescribed by the Government by installing ...."

ಒಳಗೆ ಹೋಗುವುದು, ಹೊರಗೆ ಹೋಗುವುದು ಅಷ್ಟೆ ಅಲ್ಲ, ಯಾವ್ಯಾವ ಶಾಲೆಗಳಲ್ಲಿ ಮಕ್ಕಳ ಮೇಲೆ ದೌರ್ಜನ್ಯ ನಡೆದಿದೆ ಅದೆಲ್ಲವೂ ಕೂಡ Urinals ನಲ್ಲಿ ಆಗಿರುವಂಥದ್ದು. Urinals ಒಳಗಡೆ ಆಗುವಂಥದ್ದಲ್ಲ. Entry ಯಲ್ಲಿ Ladies Urinals ಎಂದು ಬರೆದಿದ್ದರೆ ಹೆಣ್ಣುಮಕ್ಕಳ Urinals ಗೆ ಗಂಡಸು ಏಕೆ ಹೋಗುತ್ತಾನೆ? ಉದಾಹರಣೆಗೆ ತುಮಕೂರು ರಸ್ತೆಯ ಪೀಣ್ಯಾದ ಹತ್ತಿರ ಒಂದು ಶಾಲೆಯಲ್ಲಿ ಅದೇ ನಡೆಯಿತು. ಅಲ್ಲಿರತಕ್ಕಂಥ ವಾಚ್‌ಮೆನ್ ಮಗುವಿನ ಮೇಲೆ ದೌರ್ಜನ್ಯ ಮಾಡಿದ್ದಾನೆ. Ultimately, establish ಮಾಡತಕ್ಕಂಥದ್ದು ತನಿಖೆಯಾಗಬೇಕು. ನನಗೆ ಎಲ್ಲೆಲ್ಲಿ ಅವಶ್ಯಕತೆ ಇದೆಯೋ ಅಲ್ಲಿ ಸಿ.ಸಿ.ಟಿ.ವಿ., ಗಳನ್ನು establish ಮಾಡತಕ್ಕಂಥದಕ್ಕೆ ಕ್ರಮ ಜರುಗಿಸಬೇಕು. ಅದನ್ನು Clause 2(g) ನಲ್ಲಿ entry and exit ಇಷ್ಟಕ್ಕೆ ಸೀಮಿತ

ಮಾಡಬಾರದು ಎನ್ನುವುದು ನನ್ನ ಸಲಹೆ. Further, Sub-clause (2) of Clause 3 reads thus:-

> "**3.Liability to provide Public Safety measures**.-
>
> Xx xx xx xx xx
>
> (2) Every owner or manager or person or the persons who are running an establishment shall save or store video footage properly for a period of thirty days or as notified by the Government and provide the same as and when required by an Inspector of Police having jurisdiction over the area or any other authority as may be notified by the Government."

ನನಗನಿಸುವುದೇನೆಂದರೆ, footages ಇರತಕ್ಕಂಥದ್ದನ್ನು ೩೦ ದಿವಸ ಇಡುವುದರಿಂದ ಏನು ಉಪಯೋಗ ಆಗುವುದಿಲ್ಲ. ಏಕೆಂದರೆ, ಯಾವುದೋ ಸಂದರ್ಭದಲ್ಲಿ ಪಕ್ಕದ ಮತ್ತೊಂದು ರೂಮ್‌ನಲ್ಲಿ ಆಗಿರುತ್ತದೆ ಅಥವಾ ಪಕ್ಕದ ಪಿ.ಜಿ.ಯಲ್ಲಿ ಆಗಿರುತ್ತದೆ ಅಥವಾ ಪಕ್ಕದ ಹಾಸ್ಟಲ್‌ನಲ್ಲಿ ಆಗಿರುತ್ತದೆ. ಆಗ realise ಆಗಿ ಅವರು ದೂರು ಕೊಡುತ್ತಾರೆ. ತನಿಖೆ ಮಾಡುವುದಕ್ಕೆ ಹೋದಾಗ ೩೦ ದಿವಸಗಳಲ್ಲಿ destroy ಮಾಡಿದ್ದೇವೆಂದು ಹೇಳಿದರೆ ತನಿಖೆ ಮಾಡುವುದಕ್ಕಾಗುವುದಿಲ್ಲ. ನನ್ನ ದೃಷ್ಟಿಯಲ್ಲಿ ಈ footages ಗಳನ್ನು ಕನಿಷ್ಠ ಪಕ್ಷ one to three years ಇಡತಕ್ಕಂಥದ್ದನ್ನು ಮಾಡಿದರೆ ಈ crime detect ಮಾಡುವಂಥದ್ದಕ್ಕೆ ಬಹಳ ಉಪಯೋಗವಾಗುತ್ತದೆ. ಇದನ್ನು ೩೦ ದಿವಸಗಳ ಬದಲು ಕನಿಷ್ಠ ಒಂದು ವರ್ಷ, ಗರಿಷ್ಠ ೩ ವರ್ಷ ಮಾಡಬೇಕಾಗುತ್ತದೆ. ಈಗ ಉದಾಹರಣೆಗೆ ತಮಗೆಲ್ಲರಿಗೂ ಗೊತ್ತಿದೆ, ವಿಶ್ವವಿದ್ಯಾಲಯಗಳಲ್ಲಿ answer scripts ಅನ್ನು ಗರಿಷ್ಠ ಮೂರು ವರ್ಷಗಳ ಕಾಲ ಸಂರಕ್ಷಿಸಿ ಇಟ್ಟಿರುತ್ತಾರೆ. ಮೂರು ವರ್ಷಗಳಾದ ನಂತರ destroy ಮಾಡುತ್ತಾರೆ. ಹಾಗೆಯೇ minimum one year and maximum three years ಎಂದು ಮಾಡಿದರೆ crime detect ಮಾಡುವುದಕ್ಕೆ ಮತ್ತು ಅಪರಾಧವನ್ನು ಎಸಗಿರುವಂಥವರಿಗೆ ಕೋರ್ಟ್‌ನಲ್ಲಿ ಶಿಕ್ಷೆ ಆಗಬೇಕು ಎನ್ನುವುದಾದರೆ ಇದರ ಅವಶ್ಯಕತೆ ಇರುತ್ತದೆ. ಅದನ್ನು ೩೦ ದಿವಸಗಳ ಬದಲು minimum one years and maximum of three years ಮಾಡತಕ್ಕಂಥದ್ದು ಸೂಕ್ತ ಎಂದು ನಾನು ಭಾವಿಸಿದ್ದೇನೆ. Further, Clause 4 reads thus:-

> "**4. Liability for filing periodical returns**.- (1) Every owner or manager or person or the persons who are running an establishment shall file periodical returns in such manner…."

ಇದು ಬಹುಶಃ written details or returns ಬಗ್ಗೆ ಎಂದು ಕಾಣುತ್ತದೆ. Returns ಎಂದರೆ ಟ್ಯಾಕ್ಸ್‌ನಲ್ಲಿ ಬರತಕ್ಕಂಥದ್ದು ಇರುತ್ತವೆ. ಯಾರು ಫೈಲ್ ಮಾಡವುದಿಲ್ಲವೋ ಅವರ ಬಗ್ಗೆ Clause 4 ನಲ್ಲಿ ಹೀಗೆ ಹೇಳಲಾಗಿದೆ:

> "…Those failing to file periodical returns are liable to pay a fine of rupees two thousand in the first instance and rupees four thousand from subsequent instance.

ಬಹುಶಃ rupees two thousand or four thousand ಯಾರು ಪಿ.ಜಿ.ಗಳನ್ನು ನಡೆಸುತ್ತಾರೆಯೋ ಅವರಿಗೆ ಇದೇನೂ ದೊಡ್ಡ ಮೊತ್ತದ ದಂಡವಲ್ಲ. ಮೊನ್ನೆ ನಾನು ಮಂಗಳೂರಿಗೆ ಹೋಗಿದ್ದೆ. ಅಲ್ಲಿ ಆಳ್ವಾಸ್ ಎನ್ನುವ ಸಂಸ್ಥೆ ಇದೆ. ಅಲ್ಲಿ 25,000 ವಿದ್ಯಾರ್ಥಿಗಳು residential schools ನಲ್ಲಿ ಇರುತ್ತಾರೆ. ನಾನು ಸರ್ಕಾರಕ್ಕೆ ಸಂಬಂಧಪಟ್ಟ ಎಲ್ಲಾ ಇಲಾಖೆಯ ಅಧಿಕಾರಿಗಳನ್ನು ಕೇಳಿದ್ದೇನೆ. Residential schools ನ್ನು ನಡೆಸುವುದಕ್ಕೆ ಯಾವ ಇಲಾಖೆ ಅನುಮತಿ ಕೊಡುವುದಕ್ಕೆ ಅವಕಾಶ ಇದೆ ಎಂದು ಕೇಳಿದ್ದೇನೆ. Inspite of repeated requests from my Committee, ವರ್ಷಗಳಾದರೂ ಕೂಡ ಯಾವುದೇ ಇಲಾಖೆ ನಮ್ಮ ವ್ಯಾಪ್ತಿಗೆ ಬರುವುದಿಲ್ಲ ಎಂದು ಹೇಳುತ್ತಾರೆಯೆ ಹೊರತು ರಾಜ್ಯದಲ್ಲಿರುವಂತಹ ಸರ್ಕಾರಿ ಶಾಲೆಗಳನ್ನು ಬಿಟ್ಟು, ಸರ್ಕಾರೇತರದ ಎಲ್ಲಾ residential schools ಇವತ್ತು ಕಾನೂನು ಬಾಹಿರವಾಗಿವೆ. ನಾನು ಜವಾಬ್ದಾರಿಯುತವಾಗಿ ಈ ಮಾತನ್ನು ಹೇಳುತ್ತಿದ್ದೇನೆ. ಆಳ್ವಾಸ್ ಸಂಸ್ಥೆಯಲ್ಲಿ 25,000 ವಿದ್ಯಾರ್ಥಿಗಳಲ್ಲಿ 2,000 ವಿದ್ಯಾರ್ಥಿಗಳಿಗೆ ಶುಲ್ಕವಿಲ್ಲದೆ ಕ್ರೀಡೆ, ಕಲೆ, ಮುಂತಾದ ಕೋಟಾದಲ್ಲಿ ಅವಕಾಶ ಕೊಡುತ್ತಾರೆ. ಸರಾಸರಿ ಒಂದು ವರ್ಷಕ್ಕೆ ಒಂದು ಲಕ್ಷ ರೂಪಾಯಿಗಳ ಶುಲ್ಕವನ್ನು ಸಂಗ್ರಹ ಮಾಡಿದರೆ ಆ ಸಂಸ್ಥೆಗೆ more than Rs.200 crore income per year ಇದೆ. ಅಲ್ಲಿ ಕಟ್ಟಡವನ್ನು ಯಾವುದೇ authorities approval, plan ಇಲ್ಲದೆ ಕಟ್ಟಿದ್ದಾರೆ. ಹಾಸ್ಟೆಲ್‌ಗಳಲ್ಲಿ ಸಿಸಿ ಟಿವಿ, ವಾಚ್‌ಮನ್‌ಗಳು ಇಲ್ಲ. ಹಾಸ್ಟೆಲ್‌ನಲ್ಲಿ ಯಾವುದೇ ವಿಧವಾದ ಸೌಲಭ್ಯಗಳಿಲ್ಲದೆ ಮೊನ್ನೆ ಉದಯೋನ್ಮುಖ ಕ್ರೀಡಾ ಆಟಗಾರ್ತಿ ಎಸ್.ಎಸ್.ಎಲ್.ಸಿ., ಯಲ್ಲಿ ಓದುತ್ತಿರುವ ಮಗು ಅಸ್ವಾಭಾವಿಕ ಸಾವಿಗೀಡಾಗಿದ್ದಾರೆ. ನಾನು ಏನು ಹೇಳುವುದಕ್ಕೆ ಬಯಸುತ್ತಿದ್ದೇನೆಂದರೆ, ಯಾರು ಈ ರೀತಿಯ establishments run ಮಾಡುತ್ತಾರೆ ಅವರ ಮೇಲೆ ಮೊದಲನೆಯದಾಗಿ there must

be a license or permission from the competent authorities. ಯಾರು ಇದನ್ನು violate ಮಾಡುತ್ತಾರೆ ಅವರಿಗೆ ಎರಡು ಕೋಟಿ ಅಥವಾ ಹತ್ತು ಕೋಟಿ ರೂಪಾಯಿಗಳ ವರಮಾನ ಇರತಕ್ಕಂತಹ ಸಂಸ್ಥೆಯವರಿಗೆ ಸಾವಿರ, ಎರಡು ಸಾವಿರ, ನಾಲ್ಕು ಸಾವಿರ ರೂಪಾಯಿಗಳ ದಂಡ ವಿಧಿಸುವುದು ಅವರಿಗೆ ಯಾವ ಲೆಕ್ಕ? ಈ ರೀತಿ ಯಾರು ಉಲ್ಲಂಘನೆಯನ್ನು ಮಾಡುತ್ತಾರೆ, ಅವರಿಗೆ ಕನಿಷ್ಠ 50 ಲಕ್ಷ ರೂ.ಗಳಿಂದ ಒಂದು ಲಕ್ಷ ರೂ.ಗಳವರೆಗೆ ದಂಡವನ್ನು ವಿಧಿಸಿದರೆ ಆಗಲಾದರೂ ಸಹ ಅವರಿಗೆ ಭಯ ಬರುತ್ತದೆ. ಶಿಕ್ಷಣ ಹಕ್ಕು ಕಾಯ್ದೆ ಜಾರಿಗೆ ಬಂದ ನಂತರ ಪ್ರತಿ ವಿದ್ಯಾರ್ಥಿಗೆ ಸರ್ಕಾರವೇ 11,000 ದಿಂದ 15,000 ರೂ.ವನ್ನು ಸರ್ಕಾರವೇ ಕೊಡುತ್ತಿದೆ. ಎಲ್ಲಾ ಶಾಲಾ-ಕಾಲೇಜುಗಳು ಮುಚ್ಚಿ ಹೋಗುವಂಥ ಪರಿಸ್ಥಿತಿಯಲ್ಲಿದ್ದಾಗ ಶಿಕ್ಷಣ ಹಕ್ಕು ಕಾಯ್ದೆ ಬಂದು ಈಗ ಅವುಗಳು ಸುಧಾರಿಸಿಕೊಂಡಿವೆ. ಇಂತಹ ಶಾಲೆಗಳು ಸಿಸಿ ಟಿವಿ ಕ್ಯಾಮೆರಾ ಹಾಕಿಸಿಕೊಳ್ಳುವುದಕ್ಕೆ ಏನು ತೊಂದರೆ ಇದೆ? ಅವರು ಕಾನೂನನ್ನು ಉಲ್ಲಂಘನೆ ಮಾಡುತ್ತಾರೆಂದರೆ ಕೇವಲ 4,000 ದಂಡ ಅಲ್ಲ, ಇದಕ್ಕೆ ನನ್ನ ಪ್ರಕಾರ ಕನಿಷ್ಠ ಒಂದು ಲಕ್ಷ ರೂ. ದಂಡವನ್ನು ವಿಧಿಸುವುದು ಸೂಕ್ತವೆಂದು ನಾನು ಹೇಳಲಿಕ್ಕೆ ಬಯಸುತ್ತೇನೆ. ಇದರ ಜೊತೆಗೆ ಇದನ್ನು ಇಂಪ್ಲಿಮೆಂಟ್ ಮಾಡಲು ಮೂರು ತಿಂಗಳ ಸಮಯವನ್ನು ನೀಡುತ್ತಿದ್ದಾರೆ. ಇದರಲ್ಲಿ safety and security point ಇರುವುದರಿಂದ ಮೂರು ತಿಂಗಳ ಅವಶ್ಯಕತೆ ಇಲ್ಲ. ಒಂದು ತಿಂಗಳು ಎಂದು ಮಾಡಬೇಕೆಂದು ನಾನು ಸರ್ಕಾರವನ್ನು ವಿನಂತಿಸುತ್ತಿದ್ದೇನೆ.

(ಮುಂದು)

992/15-11-2017/04-10/bkp-md

ಶ್ರೀ ವಿ.ಎಸ್.ಉಗ್ರಪ್ಪ(ಮುಂದು. . .)

ಕೊನೆಯದಾಗಿ, ಸೆಕ್ಷನ್ 6 ನಲ್ಲಿ **Failure to provide Public Safety Measure:** ಎನ್ನುವಂತಹದ್ದನ್ನು ಹೇಳುತ್ತಾ, ಇಲ್ಲಿಯೂ ಸಹ ಅದನ್ನೇ ಹೇಳುತ್ತಾರೆ. (i) for the first month of default – Rs. 5,000/- (ii) for the second month of default – Rs. 10,000/-. ಬಹುಶಃ ಇಲ್ಲಿ ಒಂದು ಸೊನ್ನೆಯನ್ನು ಸೇರಿಸಿದರೆ 50,000 ಮತ್ತು 1,00,000 ರೂಪಾಯಿಗಳನ್ನು ಮಾಡುವಂಥದ್ದು ಸೂಕ್ತವಾಗುತ್ತದೆ. ಆಗ ಮಾತ್ರ ಹೆದರಿಕೆ ಬರಲಿಕ್ಕೆ ಸಾಧ್ಯತೆ ಇದೆ. ಆದರೆ, section 6(3) ನಲ್ಲಿ *"...the inspector of Police having jurisdiction over the area shall, seal the premises temporarily and send a report to licensing authority concerned, through the Assistant Commissioner of Police (ACP) or as the case may be the*

*Sub Divisional Police Officer (SCPO) having jurisdiction over the area:..."* ಎಂದು ಹೇಳುತ್ತಾರೆ. ಆದರೆ, ಇದನ್ನು ಇಲ್ಲಿ seal ಮಾಡುವಂತಹದ್ದಕ್ಕೆ ದೇವಸ್ಥಾನಗಳಿರಬಹುದು ಅಥವಾ ಶಾಲಾ-ಕಾಲೇಜುಗಳಿರಬಹುದು ಅಥವಾ ಆಸ್ಪತ್ರೆಗಳಿರಬಹುದು ಅಥವಾ ಪಿ.ಜಿ.ಗಳಿರಬಹುದು. ಅವುಗಳನ್ನು seal ಮಾಡುವುದರಿಂದ ಉಪಯೋಗವಾಗುವುದಿಲ್ಲ. seal ಮಾಡುವುದಕ್ಕೆ ಬದಲಾಗಿ, ಯಾರು ಆ ಒಂದು establishment ನ್ನು ನಡೆಸುತ್ತಿದ್ದಾನೆ, ಅವನ ಮೇಲೆ non-bailable warrant ಎಂದು ಹೇಳಿ offence ಎಂದು create ಕ್ರಿಯೇಟ್ ಮಾಡಿ, ಅವನನ್ನು arrest ಮಾಡುವಂತಹ ಕೆಲಸವನ್ನು ಮಾಡಬೇಕೇ ಹೊರತು ಈ ರೀತಿಯಲ್ಲಿ ಶಾಲೆಗಳನ್ನು seal ಮಾಡುತ್ತೇವೆ ಅಥವಾ ದೇವಸ್ಥಾನಗಳನ್ನು seal ಮಾಡುತ್ತೇವೆ ಎನ್ನುವಂತಹದ್ದು ಅಷ್ಟೊಂದು ಸಮಂಜಸವಲ್ಲ ಎನ್ನುವುದನ್ನು ಹೇಳಲಿಕ್ಕೆ ಬಯಸುತ್ತೇನೆ.

ಕೊನೆಯದಾಗಿ, ಸೆಕ್ಷನ್ 7 ರಲ್ಲಿ ಏನು ಅಪೀಲ್‌ಗೆ ೩೦ ದಿನಗಳಿವೆ, ಒಂದು ವೇಳೆ limitation ಇಲ್ಲವೆಂದರೆ Limitation Act ಗೆ ಹೋಗಬೇಕಾಗಿತ್ತು. ಒಂದು ವೇಳೆ ಹೈಕೋರ್ಟ್‌ನಲ್ಲಿ Writ Petition dismiss ಆದರೆ Writ Appeal ಹಾಕಲಿಕ್ಕೆ ೩೦ ದಿನಗಳು ಅವಕಾಶ ಇರುವಂತಹದ್ದಾಗಿದೆ. ೩೦ ದಿನಗಳಾದ ಮೇಲೆ ವಿಳಂಬಕ್ಕೆ ವಿವರಣೆಯನ್ನು ಕೊಡಬೇಕು. ಇದು ೩೦ ದಿನಗಳು ಸರಿ ಇದೆ. ಆದರೆ, ಇಲ್ಲಿ ಒಂದು ವಿಷಯ ಏನೆಂದರೆ ಎಲ್ಲೋ ಒಂದು ಕಡೆ ಪ್ರಮುಖವಾಗಿರುವಂತಹದ್ದು, disposal ಗೆ ಒಂದು ವರ್ಷವೋ, ಆರು ತಿಂಗಳೋ.. ಏಕೆಂದರೆ ಚುನಾವಣೆ ವಿಷಯಗಳು ಬಂದಾಗ ಉದಾಹರಣೆಗೆ section 82 of Representation of the People *Act,1951* ಪ್ರಕಾರ election petitions file ಮಾಡಿದರೆ ಒಂದು ವರ್ಷದಲ್ಲಿ ಮಾಡಬೇಕೆಂದು ಇದೆ. ಅದೇ ರೀತಿಯಲ್ಲಿ rape case ಏನಾದರೂ ಆದರೆ Criminal Procedure Code ಕೋಡ್ ಕೆಳಗಡೆ ೯೦ ದಿನಗಳಲ್ಲಿ charge sheet ಹಾಕಬೇಕು. Charge sheet ಹಾಕಿದ ದಿನದಿಂದ ೫ ತಿಂಗಳ ಒಳಗಡೆ case disposal ಆಗಬೇಕೆಂದು ಇದೆ. ಅದೇ *POCSO Act* (The Protection of Children from Sexual Offences) 2012 ನಲ್ಲಿ ಕೇಸ್ ನೋಂದಣಿಯಾದರೆ ಒಂದು ವರ್ಷದಲ್ಲಿ ಎಲ್ಲವೂ ಆಗಬೇಕಾಗಿದೆ. ದುರದೃಷ್ಟವಶಾತ್ ಅದು ಆಗುತ್ತಿಲ್ಲ. ಒಂದು ವರ್ಷ ಎಂದರೆ, ಅದು ೫ ವರ್ಷವೂ ಆಗುತ್ತಿದೆ. Infact, ಒಂದು ಕೇಸ್‌ನಲ್ಲಿ ೩ ವರ್ಷ ಆಗಿದೆ. Investigation ನಡೆಯದೇ charge sheet ಆಗುತ್ತಿಲ್ಲ. ಇದನ್ನು ಮಾನ್ಯ ಗೃಹ ಸಚಿವರ ಗಮನಕ್ಕೆ ತಂದಿದ್ದೇನೆ. ಆ ಕೇಸ್ ಅನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಹೋಗುವುದಿಲ್ಲ. ಬಹುಶಃ ಆ

ಬಗ್ಗೆ ಕ್ರಮವನ್ನು initiate ಮಾಡಿದ್ದಾರೆ. ಆದ್ದರಿಂದ, ನಾನು ಏನು ಹೇಳಲಿಕ್ಕೆ ಬಯಸುತ್ತೇನೆಂದರೆ, ಇದು ಬಹಳ ಪ್ರಮುಖವಾದ ವಿಚಾರವಾಗಿರುವುದರಿಂದ disposal ಗೆ ಒಂದು time limit ಅನ್ನು 6 ತಿಂಗಳು ಅಥವಾ ಒಂದು ವರ್ಷವನ್ನು ಸೆಕ್ಷನ್ 7 ಕೆಳಗಡೆ ಮಾಡುವಂತಹದ್ದು ಸೂಕ್ತವೆಂದು ಹೇಳುತ್ತೇನೆ.

ಇನ್ನು Appeals ನಲ್ಲಿ ಹಾಕತಕ್ಕಂಥಾದ್ದು, final order ಎಂದು 7(2) ರಲ್ಲಿ ಹೇಳಿದ್ದಾರೆ. Final order ಆದ ತಕ್ಷಣ Article 226 ಕೆಳಗಡೆ ಹೈಕೋರ್ಟ್‌ನಲ್ಲಿ writ ಹಾಕಲು ಅವಕಾಶವಿದೆ. ಅದಕ್ಕೆ ಏನು limitation ಅಥವಾ ಮತ್ತೊಂದು ಬರಲಿಕ್ಕೆ ಸಾಧ್ಯತೆಯಿಲ್ಲ. ಹೀಗಾಗಿ ಇಷ್ಟೊಂದು ಸಮಾಜಮುಖಿಯಾಗಿರುವಂತಹ ಸಮಾಜದ ರಕ್ಷಣೆಯ ದೃಷ್ಟಿಯಿಂದ, ಜನ ಸಾಮಾನ್ಯರ ರಕ್ಷಣೆಯ ದೃಷ್ಟಿಯಿಂದ ಸರ್ಕಾರ ಏನು ಈ ಕಾನೂನನ್ನು ತರಲಿಕ್ಕೆ ಹೊರಟಿದೆ, ಇದು ಅತ್ಯಂತ ಸಮಯೋಚಿತವಾಗಿರುವಂತಹದ್ದು. ಆದರೆ, ಈ ಕೆಲವು anomalies ಏನಿವೆ, ಅವುಗಳನ್ನು ಸರ್ಕಾರ ಹೇಗೆ ಸರಿಪಡಿಸಲಿಕ್ಕೆ ಸಾಧ್ಯತೆ ಇದೆ ಎಂಬುದನ್ನು ಪರಿಶೀಲಿಸಿ ಅದನ್ನು ಸರಿಪಡಿಸಿದರೆ ಇದು ಅತ್ಯಂತ ಸೂಕ್ತವಾದಂತಹ ಒಂದು ಕಾನೂನು ಆಗುತ್ತದೆನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿ, ನನ್ನ ಮಾತನ್ನು ಮುಗಿಸುತ್ತೇನೆ, ವಂದನೆಗಳು.

**ಉಪ ಸಭಾಪತಿಯವರು:**- ಈಗ ಶ್ರೀಯುತ ಐವನ್ ಡಿ' ಸೋಜಾ ರವರೇ, ತಾವು ಮಾತನಾಡಿ. ಆದರೆ, ಮಾನ್ಯ ಸದಸ್ಯರುಗಳಾದ ಶ್ರೀಯುತ ಉಗ್ರಪ್ಪನವರು ಮತ್ತು ಶ್ರೀಯುತ ರಮೇಶ್ ಬಾಬು ರವರು ಹೇಳಿರುವ ವಿಚಾರಗಳನ್ನು ಹೊರತುಪಡಿಸಿ ಹೊಸದಾಗಿ ಏನಾದರೂ ಸೇರಿಸುವುದು ಇದ್ದರೆ ಹೇಳಬೇಕು. ಅದನ್ನು ಪುನಾರವರ್ತನೆ ಮಾಡುವುದು ಬೇಡ.

**ಶ್ರೀ ಐವನ್ ಡಿ'ಸೋಜಾ(ಸರ್ಕಾರದ ಮುಖ್ಯ ಸಚೇತಕರು):** ಮಾನ್ಯ ಸಭಾಪತಿಯವರೇ, **ಕರ್ನಾಟಕ ಸಾರ್ವಜನಿಕ ಸುರಕ್ಷೆಯ (ಕ್ರಮಗಳ) ಜಾರಿ ವಿಧೇಯಕ, 2017 ಅನ್ನು** ನಾನು ಸ್ವಾಗತ ಮಾಡುತ್ತೇನೆ. ಈ ಸದನದ ಮಾನ್ಯ ಸದಸ್ಯರಾದ ಡಾ|| ಜಿ.ಪರಮೇಶ್ವರ್ ರವರು ಗೃಹ ಸಚಿವರಾಗಿ ಕೆಲಸ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಕಳೆದ ಬಾರಿಯ ಅಧಿವೇಶನದಲ್ಲಿ, ವಿಧಾನಸಭೆಯಲ್ಲಿ ಈ ವಿಧೇಯಕವನ್ನು ಮಂಡನೆ ಮಾಡಿದ್ದರು. ಆಗಲೇ ಈ ಬಗ್ಗೆ ಪತ್ರಿಕೆಗಳಲ್ಲಿ ಚರ್ಚೆಗಳಾಗಿದ್ದವು. ಇದನ್ನು ಕಾನೂನು ರೂಪದಲ್ಲಿ ತರಬೇಕೆನ್ನುವುದು ನಮ್ಮೆಲ್ಲರ ಆಸೆಯಾಗಿತ್ತು. ಈಗ ಇದನ್ನು ಇಂದಿನ ಗೃಹ ಸಚಿವರು ಈ ಸದನದ ಮುಂದೆ ಮಂಡಿಸಿದ್ದಾರೆ. ಅದಕ್ಕೆ ನಾನು ಅಭಿನಂದನೆ ಸಲ್ಲಿಸುತ್ತೇನೆ. ಯಾವುದೇ ಹೊಸ ಕಾನೂನುಗಳು ಬಂದಾಗ ಸ್ವಲ್ಪ ಅಡೆತಡೆಗಳಿರುತ್ತವೆ. ಆದರೆ, ಈ ಕಾನೂನು ಈ ರಾಜ್ಯದಲ್ಲಿ ಈಗಾಗಲೇ ಅಧಿಕೃತವಾಗಿಯೋ, ಅನಧಿಕೃತವಾಗಿಯೋ ಎಲ್ಲಿಯೋ ಒಂದು ಕಡೆ ಜಾರಿಯಾಗಿದೆ. ಶಿಕ್ಷಣ ಸಂಸ್ಥೆಗಳಲ್ಲಿ ಈಗಾಗಲೇ ಎಲ್ಲಾ ಶಾಲೆಗಳಿಗೆ ಸಿ.ಸಿ.ಟಿ.ವಿ. ಕ್ಯಾಮರಾಗಳನ್ನು

ಹಾಕಬೇಕು, ಸುರಕ್ಷತೆ ದೃಷ್ಟಿಯಿಂದ ನೀವು ಕ್ರಮ ವಹಿಸಬೇಕೆಂದು ಹೇಳಿದ್ದಾರೆ. ಅದೇ ರೀತಿ ಧಾರ್ಮಿಕ ಸಂಸ್ಥೆಗಳಲ್ಲಿಯೂ ಸಹ ಅಳವಡಿಸಬೇಕೆಂದು ಹೇಳಿದ್ದಾರೆ. ಮತ್ತೆ, ಬೇರೆ ಬೇರೆ ಶೈಕ್ಷಣಿಕ ಸಂಸ್ಥೆಗಳಲ್ಲಿ ಈಗಾಗಲೇ ಈ ಕ್ರಮ ಜಾರಿಗೆ ಬಂದಿದೆ. ಅದು ಎಲ್ಲಿಯೋ ಒಂದು ಕಡೆ ಈ ವ್ಯವಸ್ಥೆ ಕಡ್ಡಾಯವಾಗಿ ಆಗಬೇಕೆನ್ನುವ ನಿಟ್ಟಿನಲ್ಲಿ ನಮ್ಮಲ್ಲಿ ಕಾನೂನುಗಳಿರಲಿಲ್ಲ. ಹೀಗಾಗಿ, ಇವತ್ತು ಕಾನೂನು ಮುಖಾಂತರ ಇದನ್ನು ಜಾರಿಗೆ ತರಲಾಗುತ್ತಿದೆ. ಮತ್ತೆ, ಅವರುಗಳಿಗೆ accountability ಯನ್ನು ನಿಗದಿ ಮಾಡಿರುವಂತಹದ್ದು ಅತ್ಯಂತ ಸ್ವಾಗತಾರ್ಹವೆಂದು ಈ ಸಂದರ್ಭದಲ್ಲಿ ನಾನು ಹೇಳಲಿಕ್ಕೆ ಬಯಸುತ್ತೇನೆ. ನನಗೆ ಗೊತ್ತಿರುವ ಪ್ರಕಾರ ಸುಮಾರು ಒಂದು ವರ್ಷದ ಹಿಂದೆ ಶ್ರೀಯುತ ರಾಹುಲ್ ಗಾಂಧಿಯವರು ಮಂಗಳೂರಿಗೆ ಭೇಟಿ ನೀಡಿದಾಗ *SPG (Special Protection Group)* ನವರು ನನಗೆ ಒಂದು ವರ್ಷದ ಹಿಂದೆಯೇ ಆ ಎಲ್ಲಾ gathering ಆಗುವಂತಹದ್ದಕ್ಕೆ ಸಿ.ಸಿ.ಟಿ.ವಿ ಕ್ಯಾಮರಾಗಳನ್ನು ಹಾಕಿ ಎಲ್ಲವನ್ನೂ cover ಮಾಡಿ, ಆ ಸಂಬಂಧ ಎಲ್ಲಾ ಸಿ.ಡಿ.ಗಳನ್ನು ಅವರಿಗೆ ಕೊಡತಕ್ಕಂತಹ ಕೆಲಸಕ್ಕೆ ಒಂದು ವರ್ಷದ ಹಿಂದೆ ನನ್ನನ್ನು ಹಾಕಿದ್ದರು. ಆ ಸಂದರ್ಭದಲ್ಲಿ 6 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇನೆ. ಆ ಒಂದು ಸೆಕ್ಯೂರಿಟಿ ಉದ್ದೇಶಕ್ಕೆ ನಾನು *SPG ಗೆ in-charge* ಇದ್ದೆ. ಹಾಗಾಗಿ, ಇದು ಬಹಳ ಸಂದರ್ಭೋಚಿತವಾಗಿ ಬಂದಿದೆ ಎಂದು ನಾನು ಹೇಳಲಿಕ್ಕೆ ಬಯಸುತ್ತೇನೆ. ಇದರಲ್ಲಿ ನನಗೆ ಪ್ರಮುಖವಾಗಿರುವಂತಹದ್ದು ಏನೆಂದರೆ, ಸೆಕ್ಷನ್ 1(2) ನಲ್ಲಿ "ಇದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976ರ ಅಡಿಯಲ್ಲಿ ರಚನೆಯಾದ ಇತರ ನಗರ ಪಾಲಿಕೆಗಳ ಸಮಗ್ರ ಪ್ರದೇಶಗಳು ಮತ್ತು ರಾಜ್ಯ ಸರ್ಕಾರವು ಕಾಲಕಾಲಕ್ಕೆ ಗುರುತಿಸಿ ಮತ್ತು ಅಧಿಸೂಚಿಸಬಹುದಾದ ಅಂಥ ಇತರ ಪ್ರದೇಶಗಳು ಮತ್ತು ಸ್ಥಳಗಳಿಗೆ ವ್ಯಾಪ್ತವಾಗುತ್ತದೆ" ಎಂದು ಹೇಳಿದ್ದಾರೆ. ನನ್ನ ನಿರೀಕ್ಷೆ ಮತ್ತು ಅಪೇಕ್ಷೆ ಏನೆಂದರೆ, ಇದನ್ನು ಕರ್ನಾಟಕದ ಎಲ್ಲಾ ಕಡೆ ಅನ್ವಯಿಸಬೇಕು. ನಮಗೆ ಈ ಕಾನೂನು ಯಾವಾಗ ನೆನಪು ಬರುವುದು ಎಂದರೆ, ಎಲ್ಲಿಯಾದರೂ ದೊಡ್ಡಮಟ್ಟದಲ್ಲಿ ಒಂದು ಕಳ್ಳತನವಾದರೆ, ಎಲ್ಲಿಯಾದರೂ ರೇಪ್‌ನಂತಹ ಒಂದು ದೊಡ್ಡ ಘಟನೆಯಾಯಿತು, ಮತ್ತೆ ಇನ್ನೇನಾದರೂ ಕಾನೂನುಬಾಹೀರ ಘಟನೆಯಾದಂತಹ ಸಂದರ್ಭದಲ್ಲಿ ಮಾತ್ರ ನಾವು ಮೊದಲು ಕೇಳುವುದು; "ಏನು ಅಲ್ಲಿ ಸಿ.ಸಿ.ಟಿ.ವಿ. ಕ್ಯಾಮರಾ ಇತ್ತಾ" ಎಂದು. ಇತ್ತೀಚೆಗೆ ಪತ್ರಕರ್ತೆ ಶ್ರೀಮತಿ ಗೌರಿ ಲಂಕೇಶ್‌ರವರ ಕೊಲೆಯಾಯಿತು. ಆಗ " ಅಲ್ಲಿ ಸಿ.ಸಿ.ಟಿ.ವಿ ಕ್ಯಾಮರಾ ಇತ್ತಾ, ಅದು ಏನಾದರೂ ಚಿತ್ರಗಳನ್ನು ಸೆರೆ ಹಿಡಿದಿತ್ತಾ" ಎಂದು ನಾವು ಮೊದಲು ಕೇಳುತ್ತೇವೆ. ಯಾವಾಗ ಅದು ಅಲ್ಲಿ ಸಿ.ಸಿ.ಟಿ.ವಿ. ಕ್ಯಾಮರಾ ಇರುವುದಿಲ್ಲ. ಅಂತಹ ಸಂದರ್ಭದಲ್ಲಿ ಈ ಕಾನೂನು ನೆನಪಿಗೆ ಬರುತ್ತದೆ. ನೀವು ಕೇವಲ ಮಹಾನಗರ ಪಾಲಿಕೆಗೆ ಮಾಡಿರುವುದರಿಂದ ಬಹುಶಃ ಇದರ purpose defeat ಆಗುತ್ತದೆ ಎಂದು ನಾನು ಹೇಳಲಿಕ್ಕೆ ಬಯಸುತ್ತೇನೆ.

ಮಾನ್ಯ ಸಚಿವರು ಕೇವಲ ಮಹಾನಗರ ಪಾಲಿಕೆಗೆ ಸಂಬಂಧಪಟ್ಟಂತೆ ಈ ಕಾನೂನು ಮಾಡುತ್ತಿದ್ದಾರೆ. ಈ ಒಂದು ಸಂಸ್ಥೆಯ ಬಗ್ಗೆ ಸನ್ಮಾನ್ಯ ಸದಸ್ಯರಾದ ಶ್ರೀಮಾನ್ ಉಗ್ರಪ್ಪನವರು ಉಲ್ಲೇಖ ಮಾಡಿದರು. ಆ ಸಂಸ್ಥೆ ಇರುವಂತಹದ್ದು ನಗರ ಪಾಲಿಕೆಯೊಳಗಡೆ ಬರುವುದಿಲ್ಲ. ಅಂತಹ ಅನೇಕ ವಿದ್ಯಾ ಸಂಸ್ಥೆಗಳು ಬೇರೆ ಬೇರೆ ಕಡೆ ಇವೆ, ದೊಡ್ಡ ದೊಡ್ಡ ಮಟ್ಟದ ವಿದ್ಯಾ ಸಂಸ್ಥೆಗಳಿವೆ. ಒಂದೊಂದು ರೆಸಿಡೆನ್ಸಿ ಶಾಲಾ-ಕಾಲೇಜುಗಳಲ್ಲಿ thousands together students ಇರುತ್ತಾರೆ. ಇದೇ ಕಾನೂನನ್ನು ತೆಗೆದುಕೊಂಡು ಹೋದರೆ ಮಣಿಪಾಲ್‌ನಂತಹ ಶಿಕ್ಷಣ ಸಂಸ್ಥೆಗಳಲ್ಲಿ ಈ ಕಾನೂನನ್ನು ಅನ್ವಯ ಮಾಡಲಿಕ್ಕೆ ಬರುವುದಿಲ್ಲ. ಹೀಗಾಗಿ, ಇದನ್ನು ತಾವು ನಗರಪಾಲಿಕೆಯಿಂದ ಬಿಟ್ಟು, ನಗರ ಪಂಚಾಯಿತಿ ಅಥವಾ ಪುರಸಭೆ ಇಂತಹ ಏರಿಯಾಗಳಿಗೂ ಅನ್ವಯಿಸುವುದರ ಜೊತೆಗೆ ಕರ್ನಾಟಕದ ಎಲ್ಲಾ ಭಾಗಗಳಿಗೆ ಈ ಕಾನೂನನ್ನು ವಿಸ್ತರಣೆ ಮಾಡಿದರೆ ಬಹುಶಃ ಖಂಡಿತವಾಗಿ ಈ ಕಾನೂನಿನ ಉಪಯೋಗ ಮತ್ತು ಸಮಾಜದಲ್ಲಿ ಆಗಬಹುದಾದ ಅನೇಕ ಅನಾಹುತಗಳನ್ನು ತಪ್ಪಿಸಲಿಕ್ಕೆ ಸಾಧ್ಯವಾಗುತ್ತದೆ.

ಮತ್ತೆ, ಇನ್ನೊಂದು ವಿಚಾರವಾಗಿ ಮಾನ್ಯ ಸಚಿವರನ್ನು ಕೇಳಲಿಕ್ಕೆ ಬಯಸುತ್ತೇನೆ. ಇದರಲ್ಲಿ **ಉದ್ದೇಶ ಮತ್ತು ಕಾರಣಗಳನ್ನು ಹೇಳಿದೆ** : ಉಪಕಲಂ **(i) (ii) (iii)** ಇದೆ. ಅದರ ಉಪಕಲಂ **(ii)** ರಲ್ಲಿ ಏನು ಹೇಳಲಾಗಿದೆ ಎಂದರೆ, "ಕಾರ್ಯ ಸಂಸ್ಥೆಗಳ ಮಾಲೀಕರು ತಮ್ಮ ಸ್ವಂತ ವೆಚ್ಚದಲ್ಲಿ ಸಿ.ಸಿ.ಟಿ.ವಿ.ಗಳಂಥ ಸಾರ್ವಜನಿಕ ನಿಗಾ ವ್ಯವಸ್ಥೆಗಳನ್ನು ಅಳವಡಿಸಿಕೊಳ್ಳಲು ಮತ್ತು ನಿರ್ದಿಷ್ಟ ಅಪರಾಧಗಳ ತನಿಖೆಯಲ್ಲಿ ಅಗತ್ಯವಿದ್ದಾಗಲೆಲ್ಲಾ ನಿಯೋಜಿತ ಪೋಲೀಸ್ ಅಧಿಕಾರಿಗಳಿಗೆ ೩೦ ದಿನಗಳವರೆಗೆ ದೃಶ್ಯ ದಾಖಲೆಗಳು ಲಭ್ಯವಾಗುವಂತೆ ಮಾಡುವುದಕ್ಕೆ ಉಪಬಂಧ ಕಲ್ಪಿಸಲು" ಎಂದು ಹೇಳಿದ್ದಾರೆ.

ನನ್ನ ಪ್ರಶ್ನೆ ಏನೆಂದರೆ, ನೀವು ೩೦ ದಿನಗಳಿಗೆ ಮಾತ್ರ ಎಂದರೆ, *"...to provide for making available video recordings up to 30 days to the designated police authorities as and when required..."* ಎಂದಿದೆ. ನಾವು ಪ್ರತಿದಿನ ತೆಗೆದುಕೊಂಡು ಹೋಗಿ submit ಮಾಡಬೇಕೋ ಅಥವಾ ಏನಾದರೂ ಘಟನೆಯಾದಾಗ ಅಥವಾ as and when called for, ಮಾತ್ರ ಕೊಡಬೇಕೋ ಎನ್ನುವುದು ಇಲ್ಲಿ ಒಂದು ಕಡೆ ಸ್ವಲ್ಪ clarity ಇಲ್ಲ ಎನ್ನುವುದನ್ನು ನಾನು ಸನ್ಮಾನ್ಯ ಸಚಿವರ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಮತ್ತೆ, ಈ ಒಂದು ಕಾನೂನಿನಲ್ಲಿ ತಾವು ಏನು ಅಂಶಗಳನ್ನು ಅಳವಡಿಸಿಕೊಂಡಿದ್ದೀರಿ, ಈಗಾಗಲೇ ಇದರ ಬಗ್ಗೆ ಚರ್ಚೆಯಾಗಿದೆ. ಅದರಲ್ಲಿ good and bad ಇರಬಹುದು. ನಮ್ಮ ಊರಿನಲ್ಲಿ ನಮ್ಮ ಪ್ರದೇಶವನ್ನು ಸರಿಯಾಗಿ ಇಟ್ಟುಕೊಳ್ಳಬೇಕಾದರೆ ಅಪರಾಧಗಳಿಂದ ಮುಕ್ತರಾಗುವುದಕ್ಕೆ, ಅಪರಾಧಗಳ ಬಗ್ಗೆ ತಕ್ಷಣ

detect ಮಾಡಲಿಕ್ಕೆ ಇದು ಒಂದು ಉತ್ತಮ ಹೆಜ್ಜೆ. ಆದ್ದರಿಂದ ಈ ವಿಧೇಯಕವನ್ನು ತರುವುದರ ಮೂಲಕ ಸರ್ಕಾರ ಬಹಳ ಒಳ್ಳೆಯ ಕೆಲಸ ಮಾಡಿದೆ. ಖರ್ಚು-ವೆಚ್ಚಗಳಿಲ್ಲದೆ, ಈ ಒಂದು ಕಾನೂನನ್ನು ಜಾರಿಗೆ ತರಬೇಕೆಂದು ಹೊರಟಿರುವುದು ನಿಜವಾಗಿಯೂ ಸ್ವಾಗತಾರ್ಹವಾಗಿದೆ. ನಾನು ಇದನ್ನು ಸ್ವಾಗತ ಮಾಡುತ್ತೇನೆ ಮತ್ತು ಸರ್ಕಾರವನ್ನು ಈ ನಿಟ್ಟಿನಲ್ಲಿ ಅಭಿನಂದಿಸುತ್ತೇನೆ.

ಮುಂದು. . .

(993)15.11.2017/04.20/ಎಸ್‌ವಿ-ಎಂಡಿ

**ಶ್ರೀ ರಮೇಶ್ ಬಾಬು (ಶಿಕ್ಷಕರ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳ ಗಮನಕ್ಕೆ ಒಂದು ಅಂಶವನ್ನು ತರಬಯಸುತ್ತೇನೆ. ನಾನು exemption ಕೇಳಿರುವಂಥದ್ದು installation of CCTV ಬಗ್ಗೆ ಅಲ್ಲ. ನಾನು ಕೇಳುತ್ತಿರುವಂಥದ್ದು ಸೆಕ್ಷನ್ 3 ಅಡಿಯಲ್ಲಿ ಪ್ರತಿ 30 ದಿನಗಳಿಗೊಮ್ಮೆ returns ರೀತಿಯಲ್ಲಿ ಪೋಲೀಸ್ ಠಾಣೆಗೆ ವರದಿ ಸಲ್ಲಿಸಬೇಕು. ಸೆಕ್ಷನ್ 4ರ ಅಡಿಯಲ್ಲಿ ಪ್ರತಿ 90 ದಿನಗಳಿಗೊಮ್ಮೆ ಅಂದರೆ ಮೂರು ತಿಂಗಳಿಗೊಮ್ಮೆ ಕೊಟ್ಟು ಪ್ರಮಾಣಪತ್ರವನ್ನು ಪಡೆದುಕೊಳ್ಳಬೇಕು. ಇಲ್ಲವಾದಲ್ಲಿ ಅಂತಹ ಸಂಸ್ಥೆಗಳ ಮೇಲೆ ಪೋಲೀಸ್ ಕೇಸು ದಾಖಲು ಮಾಡಲು ಅವಕಾಶವಿದೆ. ದಂಡ ವಿಧಿಸಲು ಅವಕಾಶವಿದೆ. ಶಿಕ್ಷಣ ಸಂಸ್ಥೆಗಳಿಗೆ, ಧಾರ್ಮಿಕ ಸಂಸ್ಥೆಗಳಿಗೆ ಮತ್ತು ಕ್ಲಿನಿಕ್‌ಗಳಿಗೆ exemption ಕೊಡಿ ಎಂದು ಕೇಳಿದ್ದೇನೆ. ಸಿಸಿ ಟಿ.ವಿ ಅಳವಡಿಸುವುದನ್ನು ನಾನು ಒಪ್ಪುತ್ತೇನೆ. ಆದರೆ returns ಸಲ್ಲಿಸುವುದನ್ನು ನಾನು ಆಕ್ಷೇಪಿಸುತ್ತೇನೆ.

**ಶ್ರೀ ಐವನ್ ಡಿ'ಸೋಜಾ (ಸರ್ಕಾರಿ ಮುಖ್ಯ ಸಚೇತಕರು)**:- ಮಾನ್ಯ ಸಭಾಪತಿಯವರೇ, ಪ್ರತಿ 30 ದಿನಗಳಿಗೊಮ್ಮೆ ನೀಡಬೇಕೆ ಅಥವಾ as and when required ನೀಡಬೇಕೆ ಎಂಬುದನ್ನು ಸಚಿವರು ಸ್ಪಷ್ಟ ಪಡಿಸಬೇಕು.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ವಿರೋಧಪಕ್ಷದ ಮುಖ್ಯ ಸಚೇತಕರು)**:- ಮಾನ್ಯ ಸಭಾಪತಿಯವರೇ, ಸಾರ್ವಜನಿಕ ಸುರಕ್ಷತೆಯ ಹಿತದೃಷ್ಟಿಯಿಂದ ಸಿಸಿಟಿವಿಯನ್ನು ಅಳವಡಿಸಬೇಕು ಎಂಬ ಉದ್ದೇಶದಿಂದ ಮಂಡಿಸಿರುವಂತಹ ವಿಧೇಯಕವನ್ನು ಮೂಲಭೂತವಾಗಿ ನಾನು ಸ್ವಾಗತ ಮಾಡುತ್ತೇನೆ. ಹಲವು ಮಾನ್ಯ ಸದಸ್ಯರು ಈಗಾಗಲೇ ಕೆಲವು ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ. ಈ ಕಾನೂನು ಇರಲಿಲ್ಲ ಎಂಬ ಕಾರಣಕ್ಕಾಗಿ ಖಾಸಗಿ ಸಂಸ್ಥೆಗಳು ಸಿಸಿ ಟಿ.ವಿ.ಗಳನ್ನು ಅಳವಡಿಸದೆ ಏನೂ ಇರಲಿಲ್ಲ. ಅದರ ಮಹತ್ವವನ್ನು ಮನಗಂಡು ಈಗಾಗಲೇ ಬಹಳಷ್ಟು ಸಂಸ್ಥೆಗಳಲ್ಲಿ ಸಿಸಿ ಟಿ.ವಿ.ಗಳನ್ನು ಅಳವಡಿಸಲಾಗಿದೆ. ಇಲ್ಲಿ ಮೊದಲನೆಯದಾಗಿ ಉಲ್ಲೇಖ ಮಾಡಿರುವುದು ಕರ್ನಾಟಕ ನಗರ ಪಾಲಿಕೆ ಅಧಿನಿಯಮ ಬಿಟ್ಟು, ಬೆಂಗಳೂರು ಮಹಾನಗರ ಪಾಲಿಕೆ ಅಂದರೆ ದೊಡ್ಡ ದೊಡ್ಡ ನಗರಗಳನ್ನು ಬಿಟ್ಟರೆ ಗ್ರಾಮಾಂತರಕ್ಕೆ ಅನ್ವಯ ಮಾಡಬೇಕಾದರೆ ಕಾಲಕಾಲಕ್ಕೆ ಅಧಿಸೂಚನೆ ಹೊರಡಿಸಿ ಎಲ್ಲಿ ಈ ಸಿಸಿ

ಟಿ.ವಿ.ಗಳನ್ನು ಅಳವಡಿಸಬೇಕು ಎಂಬುದನ್ನು ಗುರುತಿಸಿದ ಮೇಲೆ ಆಗುತ್ತದೆ. ಇದರಲ್ಲಿ 100 ಜನ ಎಂದು ಉಲ್ಲೇಖ ಮಾಡಲಾಗಿದೆ. ಅಂದರೆ 99 ಜನ ಇದ್ದರೆ ಸರ್ಕಾರ ಕೇಸು ಹಾಕುವುದಿಲ್ಲವೆ? ಏಕೆ ಇಲ್ಲಿ 100 ಜನ ಎಂಬ ಪದವನ್ನು ಸೇರಿಸಲಾಗಿದೆ? ಇದರಿಂದಾಗಿ ಎಲ್ಲೋ ಒಂದು ಕಡೆ ಈ ಕಾನೂನಿನಿಂದ ತಪ್ಪಿಸಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ನಾವು 99 ಜನ ಇದ್ದೇವೆ, 98 ಜನ ಇದ್ದೇವೆ ಎಂದು ಹೇಳುತ್ತಾರೆ. ಹಾಗಾಗಿ ಜನಸಂದಣಿ ಇರುವಂತಹ ಪ್ರದೇಶದಲ್ಲಿ ಹಾಕಿ ಎಂದು ತಿಳಿಸಿ. ಆದರೆ ಈ 100 ಜನ ಎನ್ನುವ ಪದ ಏನು ಇದೆ, ಈ ಪದವನ್ನು ತೆಗೆಯಬೇಕು ಎಂದು ನನಗನ್ನಿಸುತ್ತದೆ. ಎರಡನೆಯದಾಗಿ, ಯಾವ ತಾಂತ್ರಿಕ ಸಲಕರಣೆ ತೆಗೆದುಕೊಳ್ಳಬೇಕು ಎನ್ನುವ ಪ್ರಶ್ನೆ ಬಂದಾಗ, ಸರ್ಕಾರವು "ಅಧಿಸೂಚಿಸುವ ನಿರ್ದಿಷ್ಟ ವಿವರಣೆಗಳನ್ನು ದೃಢವಾಗಿ ಪಾಲಿಸುವ" ಎಂದು ಹೇಳಿರುವುದನ್ನು ನೋಡಿದರೆ ಎಲ್ಲೋ ಒಂದು ಕಡೆ ಸಂಶಯ ಮೂಡುತ್ತದೆ. ಈಗಾಗಲೇ ಖಾಸಗಿ ಸಂಸ್ಥೆಗಳವರು ಸಿಸಿ ಟಿ.ವಿ ಸಾಧನಗಳನ್ನು ಅಳವಡಿಸಿಕೊಂಡಿದ್ದಾರೆ. ಅಕಸ್ಮಾತ್ ಅವರು ಹಾಕಿಕೊಂಡದ್ದಕ್ಕೆ ಸರ್ಕಾರ ಅಧಿಕೃತ ಪಟ್ಟಿಯನ್ನು ಕೊಟ್ಟಿಲ್ಲ ಎಂದಾದಲ್ಲಿ ಸರ್ಕಾರ ಹೇಳಿದ್ದನ್ನೇ ಹಾಕಿಸಿಕೊಳ್ಳಬೇಕು. ಸರ್ಕಾರ ಹೇಳಿದ್ದನ್ನೇ ಹಾಕಿಸಿಕೊಳ್ಳಬೇಕಾದರೆ ಮತ್ತೆ ಆ ಕಂಪನಿಯವರು ಹೋಗಿ ಸರ್ಕಾರದಲ್ಲಿ ಏನಾದರೂ ಮಾಡಬೇಕು. ಅಂತಹ ಸಮಯದಲ್ಲಿ ಅವ್ಯವಹಾರವಾಗುವ ಸಾಧ್ಯತೆ ಇದೆ. ಹಾಗಾಗಿ ಖಾಸಗಿಯವರು ಅವರಿಗೆ ಬೇಕಾದಂತಹ ಒಳ್ಳೆಯ ಗುಣಮಟ್ಟದ ತಾಂತ್ರಿಕ ಸಾಧನಗಳನ್ನು ಹಾಕಿಕೊಳ್ಳುವುದನ್ನು ಬಿಟ್ಟು ಸರ್ಕಾರ ಹೇಳಿದ ಸಾಧನವನ್ನೇ ಹಾಕಿಕೊಳ್ಳಬೇಕು ಎಂದು ಏಕೆ insist ಮಾಡಲಾಗಿದೆ? ಸರ್ಕಾರವು ಪ್ರಮಾಣಪತ್ರವನ್ನು ನೀಡಬೇಕಾದರೆ ಏನೆಲ್ಲಾ ನಡೆಯುತ್ತದೆ ಎಂಬುದು ತಮಗೆಲ್ಲಾ ಗೊತ್ತಿದೆ. ಸಾಮಾನ್ಯವಾಗಿ ಸಿಸಿ ಟಿ.ವಿ ಹಾಕಬೇಕಾದರೆ ಯಾರೂ ಕಳಪೆ ಗುಣಮಟ್ಟದ ಸಿಸಿಟಿವಿಗಳನ್ನು ಹಾಕುವುದಿಲ್ಲ. ಇಷ್ಟು ದಿನಗಳಿಂದಲೂ ಒಳ್ಳೆಯ ಸಿಸಿ ಟಿ.ವಿ.ಗಳನ್ನೇ ಹಾಕಿಕೊಂಡಿದ್ದಾರೆ. ಈ ಕಾನೂನು ಬರುವುದಕ್ಕಿಂತ ಮುಂಚೆಯಿಂದಲೂ ಖಾಸಗಿ ಸಂಸ್ಥೆಗಳಲ್ಲಿ ಸಿಸಿ ಟಿ.ವಿ.ಗಳನ್ನು ಅಳವಡಿಸಲಾಗಿದೆ. ಯಾವಾಗಲೂ ಸರ್ಕಾರ ಹೇಳಿದ್ದನ್ನೆ ಮಾಡಬೇಕೆಂದು ಹೊರಟರೆ ಆಗ ದಂಧೆ ಶುರುವಾಗುತ್ತದೆ. ಸರ್ಕಾರದಿಂದ ಪ್ರಮಾಣಪತ್ರ ಬೇಕೆಂದರೆ ಏನಾಗುತ್ತದೆಯೆಂದು ನಮಗೆ ಗೊತ್ತಿದೆ. ಘರ್ಷಣೆಯೂ ಆಗುತ್ತದೆ ಮತ್ತು ದಂಧೆಯೂ ನಡೆಯುತ್ತದೆ. ಹಾಗಾಗಿ ಆ ಕಲಂ ಅಗತ್ಯವಿಲ್ಲ.

ಮೂರನೆಯದಾಗಿ ಸೀಲ್ ಮಾಡಬೇಕೆಂದು ಹೇಳಲಾಗಿದೆ. ಉದಾಹರಣೆಗೆ ಖಾಸಗಿ ಆಸ್ಪತ್ರೆಗಳನ್ನು ಸೀಲ್ ಮಾಡಿದರೆ ಏನಾಗುತ್ತದೆ? ಸೀಲ್ ಮಾಡುವ ಸಾಧ್ಯತೆಯಿದೆಯೇ? ಸೀಲ್ ಮಾಡುವ ಅವಶ್ಯಕತೆಯಿದೆಯೇ? ಹಾಗಾಗಿ ಸೀಲ್ ಮಾಡಬೇಕು ಎನ್ನುವ ಅಂಶವನ್ನು ತಾವು ಹೇಳಿದಂತಹ ಸಂಸ್ಥೆಗಳು ಅಂದರೆ ವಾಣಿಜ್ಯ ಸಂಸ್ಥೆಗಳು, ಕೈಗಾರಿಕಾ ಸಂಸ್ಥೆಗಳು, ಧಾರ್ಮಿಕ ಸಂಸ್ಥೆಗಳು, ಶೈಕ್ಷಣಿಕ ಸಂಸ್ಥೆಗಳನ್ನು ಬಿಡಲಾಗಿದೆ. ಆಸ್ಪತ್ರೆಗಳು ಕ್ರೀಡಾ ಸಂಕೀರ್ಣಗಳು, ರೈಲ್ವೆ ನಿಲ್ದಾಣಗಳು ಇವೆಲ್ಲಾ ಬರದೇ ಇದ್ದ ಮೇಲೆ ಹೇಗೆ ಸೀಲ್ ಮಾಡಲಾಗುತ್ತದೆ? ಅಂತಿಮವಾಗಿ ಕಾನೂನು ಬಂದದ್ದರಿಂದ ಒಂದಷ್ಟು ಲಾಭವಾದರೂ ಕೂಡ ಅಲ್ಲಿ ನಡೆಯುವುದು ದಂಧೆಯೇ. ಹಾಗಾಗಿ ಸೀಲ್ ಮಾಡುವ

ಅಂಶವನ್ನು ಮಾನ್ಯ ಸಚಿವರು ದಯವಿಟ್ಟು ಕೈ ಬಿಡಬೇಕು ಎಂದು ಹೇಳುತ್ತೇನೆ. ಇನ್ನು ಈ ಎಲ್ಲಾ ಸಂಗತಿಗಳು ಖಾಸಗಿ ಸಂಸ್ಥೆಗಳಿಗೆ ಅನ್ವಯವಾಗುತ್ತದೆ. ಸರ್ಕಾರಿ ವ್ಯವಸ್ಥೆಯಲ್ಲಿರುವಂತಹ ಈ ಎಲ್ಲಾ ಸಂಗತಿಗಳು ಅಂದರೆ ನೂರು ಅಥವಾ ನೂರಕ್ಕಿಂತ ಹೆಚ್ಚು ಜನ ಸೇರುವಂತಹ ಸಂಸ್ಥೆಗಳಿಗೆ ಏನು ವ್ಯವಸ್ಥೆಯನ್ನು ಮಾಡಲಾಗುತ್ತದೆ? ಅಲ್ಲಿಗೆ ಏನು ಕಾನೂನು ಇದೆ? ಅಲ್ಲಿ ಅಕಸ್ಮಾತ್ ಈ ರೀತಿಯ ಸುರಕ್ಷೆಗೆ ಸಂಬಂಧಪಟ್ಟ ಸಂಗತಿಗಳು ನಡೆದರೆ ಅಲ್ಲಿ ಸಿಸಿಟಿವಿ ಹಾಕುವ ಅವಶ್ಯಕತೆ ಇಲ್ಲವೆ? ಒಂದು ನಯಾಪೈಸೆ ಖರ್ಚಾಗುವುದಿಲ್ಲವೆಂದು ಉಲ್ಲೇಖ ಮಾಡಲಾಗಿದೆ. ಅಂದರೆ ಯಾರದೋ ಹೆಗಲ ಮೇಲೆ ಕೈ ಇಟ್ಟು trigger ಒತ್ತುವುದು ಬಹಳ ಸುಲಭ. ಈ ಸಣ್ಣ ಸಣ್ಣ ಸಂಸ್ಥೆಗಳು ಸಿಸಿ ಟಿ.ವಿ ಹಾಕಬೇಕು, ಕಾಲ ಕಾಲಕ್ಕೆ CCTV footage store ಮಾಡಿ ವರದಿಯನ್ನು ನೀಡಬೇಕೆಂದರೆ, ಮಾನ್ಯ ಸದಸ್ಯರು ಒಂದು ವರ್ಷದ್ದು ಇಡಬೇಕೆಂದು ಹೇಳಿದರು. ಒಂದು ವರ್ಷದ CCTV footage store ಮಾಡಿ ಇಡಬೇಕೆಂದು ಹೇಳಿದರೆ ಆ device cost ಎಷ್ಟಾಗುತ್ತದೆ? ಎಲ್ಲೋ ಒಂದು ಕಡೆ ಸಣ್ಣ ಸಣ್ಣ ಸಂಸ್ಥೆಗಳಿಗೆ ಇದನ್ನು ಮಾಡುವುದಕ್ಕೆ ಸರ್ಕಾರ ಏನಾದರೂ ಸಹಾಯ ಧನವನ್ನು ಕೊಡಲಾಗುತ್ತದೆಯೇ? ಕಾನೂನು ಮತ್ತು ಸುವ್ಯವಸ್ಥೆ ಒದಗಿಸುವಂಥದ್ದು ಸರ್ಕಾರದ ಜವಾಬ್ದಾರಿಯಾಗಿದೆ. ಅದಕ್ಕಾಗಿ ಸರ್ಕಾರಿ ಸಂಸ್ಥೆಗಳಲ್ಲದೆ ಖಾಸಗಿ ಸಂಸ್ಥೆಗಳ ಸಹಾಯ ಬೇಕು. ಅಲ್ಲಿ ಸಿಸಿ ಟಿ.ವಿ ಹಾಕಬೇಕಾದರೆ ಅವರ ಖರ್ಚಿನ ಜವಾಬ್ದಾರಿಯನ್ನು ಯಾರು ತೆಗೆದುಕೊಳ್ಳುತ್ತಾರೆ? ಹೇಳುವುದು ಸುಲಭ, ಜಾರಿಗೆ ತರಲು ಸಾಧ್ಯವಾಗುತ್ತದೆಯೇ? ಇದರ ಬಗ್ಗೆ ಆಲೋಚನೆ ಮಾಡಬೇಕೆಂದು ಹೇಳುತ್ತಾ ಒಟ್ಟು crime rate ಕಡಿಮೆ ಮಾಡುವುದಕ್ಕಾಗಲೀ, ಪತ್ತೆ ಹಚ್ಚುವುದಕ್ಕಾಗಲೀ, ಕಳ್ಳತನ ಇರಬಹುದು, ಸರಗಳ್ಳತನ ಇರಬಹುದು, ದರೋಡೆ ಇರಬಹುದು ಅತ್ಯಾಚಾರ ಇರಬಹುದು ಈ ಸಂಗತಿಗಳಿಗೆ ಸಂಬಂಧಪಟ್ಟ ಹಾಗೆ ಇಂದಿನ ತಂತ್ರಜ್ಞಾನ ಉಪಯೋಗಿಸುವ ಅವಶ್ಯಕತೆ ಇದೆ. ಅದರಲ್ಲಿ ಎರಡು ಮಾತಿಲ್ಲ. ಖಂಡಿತವಾಗಿಯೂ ಇದು ಆಗಲೇ ಬೇಕಾದಂತಹದ್ದು. ಆದರೆ ಎಲ್ಲೋ ಒಂದು ಕಡೆ ಸಾರ್ವಜನಿಕ ಸಹಭಾಗಿತ್ವದಲ್ಲಿ ಅವರ ಮನವೊಲಿಕೆ ಮಾಡಿಕೊಂಡು ಮಾಡಬೇಕೆ ಹೊರತು ಕಾನೂನು ಪ್ರಕಾರ ಮಾಡುತ್ತೇವೆಂದು ಹೋದರೆ ಅದು ಕೇವಲ ಘರ್ಷಣೆಗೆ ಅಥವಾ ದಂಧೆ ನಡೆಸುವುದಕ್ಕೆ ಅವಕಾಶ ಮಾಡಿಕೊಡುತ್ತದೆಯೇ ಹೊರತು ಪೋಲೀಸ್ ಇಲಾಖೆಗೆ ಸಹಾಯ ಕೊಡುವಂತಹದ್ದು, ಸಹಕಾರ ಕೊಡುವಂತಹದ್ದು ಸಾರ್ವಜನಿಕರ ಕರ್ತವ್ಯ. ಖಂಡಿತವಾಗಿ ಮಾಡಿಯೇ ಮಾಡುತ್ತಾರೆ. ಯಾರೇ ಯಾವುದೇ ಸಿಸಿ ಟಿ.ವಿ ಹಾಕಿದರೂ ಕೂಡ ನಾವು footage ಒದಗಿಸುವುದಿಲ್ಲ, ಅದು ಮಾಡುವುದಿಲ್ಲ, ಇದು ಮಾಡುವುದಿಲ್ಲ ಎಂದು ಹೇಳುವುದಿಲ್ಲ. ಕಾನೂನು ಎಂದು ಮಾಡಿದಾಗ ಬೇರೆ ಏನು ಕೆಲಸ ಮಾಡದಿದ್ದರೂ ಕೂಡ ಸಂಗ್ರಹ ಮಾಡಬಹುದು ಎನ್ನುವ ಕಾರಣಕ್ಕಾಗಿ ಪೋಲೀಸರಿಗೆ ಒಂದು ಹೊಸ ಕೆಲಸವನ್ನು ಕೊಟ್ಟು ಅದರ ಮೂಲಕ ದಂಧೆಯನ್ನು ನಡೆಸಲು ಅನುಕೂಲವಾಗುತ್ತದೆ. ಉದ್ದೇಶ ಚೆನ್ನಾಗಿದ್ದರೂ ಕೂಡ ಮಾನ್ಯ ಸಚಿವರು ತಂದಿರುವ

ಕಾನೂನನ್ನು ನೋಡಿದಾಗ ಹಿಂದೆ ಹೇಳುತ್ತಿದ್ದಂತೆ "License Quota Permit Raj" ಆ ರೀತಿ ಮತ್ತೊಮ್ಮೆ ಪೋಲೀಸ್ ಇಲಾಖೆಯ ಮೂಗಿನ ನೇರಕ್ಕೆ ಮಾಡುವ ಸಾಧ್ಯತೆಗಳಿರುವುದರಿಂದ ಮತ್ತೊಮ್ಮೆ ಇದನ್ನು ವಿಮರ್ಶೆ ಮಾಡಿಕೊಂಡು ನೂರು ಜನ ಎಂದು ಹೇಳುವುದನ್ನು ಕೈಬಿಡಬೇಕು. ಎರಡನೆಯದು ಸರ್ಕಾರಿ ವ್ಯವಸ್ಥೆಯಲ್ಲಿ ಗುರುತಿಸಲ್ಪಟ್ಟ ಸಲಕರಣೆಯನ್ನೇ ಬಳಸಬೇಕೆಂಬ ಕಾನೂನು ಕೈಬಿಡಬೇಕು. ಸೀಲ್ ಮಾಡುವ ಸ್ಥಳಗಳು ಸಾರ್ವಜನಿಕ ಸ್ಥಳಗಳಾಗಿರುವುದರಿಂದ ಅದನ್ನು ಕೈಬಿಡಬೇಕು. ಕಡ್ಡಾಯವಾಗಿ ಸರ್ಕಾರಿ ಸಂಸ್ಥೆಗಳಲ್ಲಿಯೂ ಕೂಡ ಮಾದರಿಯಾಗಿ ಮೊದಲು ಅಳವಡಿಸಬೇಕು. ಸರ್ಕಾರವೇ ಮಾದರಿಯಾಗಿ ಹಾಕದೆ ಸರ್ಕಾರವೇ ಖರ್ಚು ಮಾಡದೆ ಸಾರ್ವಜನಿಕರ ಮೇಲೆ ಗೂಬೆ ಕೂರಿಸಿ ಮಾಡಿ ಎನ್ನುವುದು ಬಹಳ ಸುಲಭ. ದಯವಿಟ್ಟು ಸರ್ಕಾರದ ಅಡಿಯಲ್ಲಿ ಬರುವ ಈ ಎಲ್ಲಾ ಸಂಸ್ಥೆಗಳಲ್ಲಿ ಒಂದು ಮಾದರಿಯಾಗಿ ಸಿಸಿ ಟಿ.ವಿ.ಯನ್ನು ಅಳವಡಿಸಿಕೊಳ್ಳಬೇಕು. ಇದನ್ನು ನೋಡಿ ನೀವು ಈ ರೀತಿ ಮಾಡಿ ಎಂದು ಹೇಳಬೇಕು. ಸರ್ಕಾರವೇ ಏನೂ ಮಾಡದೆ ಸಾರ್ವಜನಿಕರಿಗೆ ಅಥವಾ ಖಾಸಗಿಯವರಿಗೆ ಹೇಳುವುದು ಸರಿಯಲ್ಲ. ಅದನ್ನು ಕೂಡ ಗಮನಿಸಬೇಕೆಂದು ವಿನಂತಿ ಮಾಡುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸಾರ್ವಜನಿಕ ಸುರಕ್ಷತೆಯ ವಿಧೇಯಕದ ಒಟ್ಟು ಆಶಯವನ್ನು ನಾನು ಒಪ್ಪುತ್ತೇನೆ. ಆದರೆ ಈಗಾಗಲೇ ನಮ್ಮ ಸ್ನೇಹಿತರು ಸೂಕ್ಷ್ಮವಾಗಿ ಪ್ರಸ್ತಾಪ ಮಾಡಿದರು. ಶಿಕ್ಷಣ ಸಂಸ್ಥೆಗಳು, ಧಾರ್ಮಿಕ ಸಂಸ್ಥೆಗಳು ಮತ್ತು ಖಾಸಗಿ ಆಸ್ಪತ್ರೆಗಳ ವಿಚಾರದಲ್ಲಿ ಇವರ ನಿರ್ದೇಶನವನ್ನು ಪಾಲಿಸದೆ ಹೋದರೆ ಮೇಲ್ವಿಚಾರಣಾ ಸಮಿತಿಯ ಪರಿಶೀಲನೆಗೆ ಒಳಪಡಿಸಬೇಕು. ಯಾವುದು ಆ ಮೇಲ್ವಿಚಾರಣಾ ಸಮಿತಿ? ದಯಮಾಡಿ ಮಾನ್ಯ ಸಚಿವರು ಈ ಕುರಿತು ಬೆಳಕು ಚೆಲ್ಲಬೇಕು. ಆ ಮೇಲ್ವಿಚಾರಣಾ ಸಮಿತಿಯಲ್ಲಿ ಯಾರೆಲ್ಲಾ ಇರುತ್ತಾರೆ ಎಂಬ ಬಗ್ಗೆ ತಿಳಿಸಿಕೊಡಬೇಕು. ಎರಡನೆಯದಾಗಿ ಶಿಕ್ಷಣ ಸಂಸ್ಥೆಗಳನ್ನು ನಿಯಂತ್ರಿಸಲಿಕ್ಕೆ ಶಿಕ್ಷಣ ಇಲಾಖೆ ಇದೆ. ಧಾರ್ಮಿಕ ಸಂಸ್ಥೆಗಳನ್ನು ನಿಯಂತ್ರಿಸಲಿಕ್ಕೆ ಧಾರ್ಮಿಕ ದತ್ತಿ ಇಲಾಖೆ ಇದೆ. ಖಾಸಗಿ ಆಸ್ಪತ್ರೆಗಳನ್ನು ನಿಯಂತ್ರಿಸಲಿಕ್ಕೆ ಆರೋಗ್ಯ ಇಲಾಖೆಯ ಅಧಿಕಾರಿಗಳಿದ್ದಾರೆ. ಪೋಲಿಸರನ್ನು ಅಲ್ಲಿಗೆ ಬಿಟ್ಟರೆ ಅದು ಎಲ್ಲಿಗೆ ಹೋಗಿ ನಿಲ್ಲುತ್ತದೆ ಎಂಬುದನ್ನು ನಾವು ಕನಸಿನಲ್ಲಿಯೂ ಎಣಿಸುವುದಕ್ಕೆ ಸಾಧ್ಯವಿಲ್ಲ. ಅಂತಹ ಶಿಕ್ಷಣ ಸಂಸ್ಥೆಯ ಮಾನ್ಯತೆಯನ್ನು ರದ್ದು ಮಾಡಿ ಎಂದು ಕ್ಷೇತ್ರ ಶಿಕ್ಷಣಾಧಿಕಾರಿಗೆ ಹೇಳಲಿ ಅಥವಾ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಿಗೆ ಹೇಳಲಿ. ಶಿಕ್ಷಣ ಸಂಸ್ಥೆಗಳಲ್ಲಿ ಏನು operate ಮಾಡಬೇಕೊ ಅದನ್ನು ಶಿಕ್ಷಣ ಇಲಾಖೆಯ ಮೂಲಕವೇ ಮಾಡಿಸಲಿ. ಸಿಸಿ ಟಿ.ವಿ ಹಾಕಲಿಲ್ಲ ಎಂದರೆ recognition ಕೊಡಬೇಡಿ ಎಂದು ಹೇಳಲಿ. ಆದರೆ ಶಿಕ್ಷಣ ಸಂಸ್ಥೆಗಳನ್ನು ಸೀಲ್ ಮಾಡುವ ಅಧಿಕಾರವನ್ನು ಪೋಲೀಸರ ಕೈಗೆ ಕೊಟ್ಟರೆ ಅದು ಅತ್ಯಂತ ಅಪಾಯಕಾರಿ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳಲೇ ಬೇಕಾಗಿದೆ. ಖಾಸಗಿ ಆಸ್ಪತ್ರೆಗಳಲ್ಲಿಯೂ ಅಷ್ಟೆ. ಬೆಳಗಾದರೆ ಅಲ್ಲಿ exploitation ಶುರುವಾಗುತ್ತದೆ. ಪುಟ 3ರಲ್ಲಿ ದತ್ತಿ ಸಂಸ್ಥೆಗಳನ್ನು ಸೀಲ್ ಮಾಡುವುದು

ಬೇಡ ಎಂದು ಹೇಳಲಾಗಿದೆ. ಏಕೆ? ಅವುಗಳಗೇನು ಕೊಂಬು ಇದೆಯೇ? ಅವುಗಳನ್ನೂ ಇದರ ವ್ಯಾಪ್ತಿಗೆ ಒಳಪಡಿಸಬೇಕು. ಅವುಗಳನ್ನೂ ಸೀಲ್ ಮಾಡಬೇಕು. ಆ ಇಲಾಖೆಯವರು ಮಾಡಲಿ. ಪೋಲೀಸರು ಇದರ ಬಗ್ಗೆ ಸಂಬಂಧಪಟ್ಟಂತಹ ದತ್ತಿ ಇಲಾಖೆಗೆ ರಿಪೋರ್ಟ್ ಮಾಡಲಿ ಅಥವಾ ಶಿಕ್ಷಣ ಇಲಾಖೆಗೆ ರಿಪೋರ್ಟ್ ಮಾಡಲಿ ಅಥವಾ ಆರೋಗ್ಯ ಇಲಾಖೆಗೆ ರಿಪೋರ್ಟ್ ಮಾಡಲಿ. ಆ ಇಲಾಖೆಯವರು ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಲಿ. ಪೋಲೀಸರನ್ನು ಶಾಲಾ-ಕಾಲೇಜಿನೊಳಗೆ, ಧಾರ್ಮಿಕ ಸಂಸ್ಥೆಯೊಳಗೆ ಮತ್ತು ಆಸ್ಪತ್ರೆಯೊಳಗೆ ಕಳುಹಿಸಿದರೆ ಅದು ಎಲ್ಲಿಗೆ ಹೋಗಿ ನಿಲ್ಲುತ್ತದೆ ಎಂದು ಲೆಕ್ಕ ಹಾಕುವುದಕ್ಕೆ ಯಾರ ಕೈಯಲ್ಲೂ ಆಗುವುದಿಲ್ಲ. ನಮ್ಮ ಕೈಯಲ್ಲೂ ಆಗುವುದಿಲ್ಲ. ದಯಮಾಡಿ ಆ ಕ್ರಮಕ್ಕೆ ಸರ್ಕಾರ ಮುಂದಾಗಬಾರದು. ಅದಕ್ಕೆಂದೇ ಸಂಬಂಧಪಟ್ಟ ಇಲಾಖೆಗಳಿವೆ. ಒಂದು ವರ್ಷಗಳ ಕಾಲ ಅವುಗಳನ್ನು ರಕ್ಷಣೆ ಮಾಡಬೇಕೆಂಬ ಒಂದು ಅಂಶವನ್ನು ಮಾನ್ಯ ಉಗ್ರಪ್ಪನವರು ಹೇಳಿದರು. ಆ CCTV footage store ಮಾಡಿ ಅವುಗಳನ್ನು ಎಲ್ಲಿಡುವುದು? ಆ Hard Disk ಗಳನ್ನು ಎಲ್ಲಿ store ಮಾಡುವುದು?

(...ಮುಂದು)

(993)15.11.2017/04.20/ಎಸ್‌ವಿ-ಎಂಡಿ

**ಶ್ರೀ ರಮೇಶ್ ಬಾಬು (ಶಿಕ್ಷಕರ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳ ಗಮನಕ್ಕೆ ಒಂದು ಅಂಶವನ್ನು ತರಬಯಸುತ್ತೇನೆ. ನಾನು exemption ಕೇಳಿರುವಂಥದ್ದು installation of CCTV ಬಗ್ಗೆ ಅಲ್ಲ. ನಾನು ಕೇಳುತ್ತಿರುವಂಥದ್ದು ಸೆಕ್ಷನ್ 3 ಅಡಿಯಲ್ಲಿ ಪ್ರತಿ 30 ದಿನಗಳಗೊಮ್ಮೆ returns ರೀತಿಯಲ್ಲಿ ಪೋಲೀಸ್ ಠಾಣೆಗೆ ವರದಿ ಸಲ್ಲಿಸಬೇಕು. ಸೆಕ್ಷನ್ 4ರ ಅಡಿಯಲ್ಲಿ ಪ್ರತಿ 90 ದಿನಗಳಗೊಮ್ಮೆ ಅಂದರೆ ಮೂರು ತಿಂಗಳಗೊಮ್ಮೆ ಕೊಟ್ಟು ಪ್ರಮಾಣಪತ್ರವನ್ನು ಪಡೆದುಕೊಳ್ಳಬೇಕು. ಇಲ್ಲವಾದಲ್ಲಿ ಅಂತಹ ಸಂಸ್ಥೆಗಳ ಮೇಲೆ ಪೋಲೀಸ್ ಕೇಸು ದಾಖಲು ಮಾಡಲು ಅವಕಾಶವಿದೆ. ದಂಡ ವಿಧಿಸಲು ಅವಕಾಶವಿದೆ. ಶಿಕ್ಷಣ ಸಂಸ್ಥೆಗಳಗೆ, ಧಾರ್ಮಿಕ ಸಂಸ್ಥೆಗಳಗೆ ಮತ್ತು ಕ್ಲಿನಿಕ್‌ಗಳಗೆ exemption ಕೊಡಿ ಎಂದು ಕೇಳಿದ್ದೇನೆ. ಸಿಸಿ ಟಿ.ವಿ ಅಳವಡಿಸುವುದನ್ನು ನಾನು ಒಪ್ಪುತ್ತೇನೆ. ಆದರೆ returns ಸಲ್ಲಿಸುವುದನ್ನು ನಾನು ಆಕ್ಷೇಪಿಸುತ್ತೇನೆ.

**ಶ್ರೀ ಐವನ್ ಡಿ'ಸೋಜಾ (ಸರ್ಕಾರಿ ಮುಖ್ಯ ಸಚೇತಕರು)**:- ಮಾನ್ಯ ಸಭಾಪತಿಯವರೇ, ಪ್ರತಿ 30 ದಿನಗಳಗೊಮ್ಮೆ ನೀಡಬೇಕೆ ಅಥವಾ as and when required ನೀಡಬೇಕೆ ಎಂಬುದನ್ನು ಸಚಿವರು ಸ್ಪಷ್ಟ ಪಡಿಸಬೇಕು.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ವಿರೋಧಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಸಾರ್ವಜನಿಕ ಸುರಕ್ಷತೆಯ ಹಿತದೃಷ್ಟಿಯಿಂದ ಸಿಸಿಟಿವಿಯನ್ನು ಅಳವಡಿಸಬೇಕು ಎಂಬ ಉದ್ದೇಶದಿಂದ ಮಂಡಿಸಿರುವಂತಹ ವಿಧೇಯಕವನ್ನು ಮೂಲಭೂತವಾಗಿ ನಾನು ಸ್ವಾಗತ ಮಾಡುತ್ತೇನೆ. ಹಲವು ಮಾನ್ಯ ಸದಸ್ಯರು ಈಗಾಗಲೇ ಕೆಲವು ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ. ಈ ಕಾನೂನು ಇರಲಿಲ್ಲ ಎಂಬ ಕಾರಣಕ್ಕಾಗಿ ಖಾಸಗಿ ಸಂಸ್ಥೆಗಳು ಸಿಸಿ ಟಿ.ವಿ.ಗಳನ್ನು ಅಳವಡಿಸದೆ ಏನೂ ಇರಲಿಲ್ಲ. ಅದರ ಮಹತ್ವವನ್ನು ಮನಗಂಡು ಈಗಾಗಲೇ ಬಹಳಷ್ಟು ಸಂಸ್ಥೆಗಳಲ್ಲಿ ಸಿಸಿ ಟಿ.ವಿ.ಗಳನ್ನು ಅಳವಡಿಸಲಾಗಿದೆ. ಇಲ್ಲಿ ಮೊದಲನೆಯದಾಗಿ ಉಲ್ಲೇಖ ಮಾಡಿರುವುದು ಕರ್ನಾಟಕ ನಗರ ಪಾಲಿಕೆ ಅಧಿನಿಯಮ ಬಿಟ್ಟು, ಬೆಂಗಳೂರು ಮಹಾನಗರ ಪಾಲಿಕೆ ಅಂದರೆ ದೊಡ್ಡ ದೊಡ್ಡ ನಗರಗಳನ್ನು ಬಿಟ್ಟರೆ ಗ್ರಾಮಾಂತರಕ್ಕೆ ಅನ್ವಯ ಮಾಡಬೇಕಾದರೆ ಕಾಲಕಾಲಕ್ಕೆ ಅಧಿಸೂಚನೆ ಹೊರಡಿಸಿ ಎಲ್ಲಿ ಈ ಸಿಸಿ ಟಿ.ವಿ.ಗಳನ್ನು ಅಳವಡಿಸಬೇಕು ಎಂಬುದನ್ನು ಗುರುತಿಸಿದ ಮೇಲೆ ಆಗುತ್ತದೆ. ಇದರಲ್ಲಿ 100 ಜನ ಎಂದು ಉಲ್ಲೇಖ ಮಾಡಲಾಗಿದೆ. ಅಂದರೆ 99 ಜನ ಇದ್ದರೆ ಸರ್ಕಾರ ಕೇಸು ಹಾಕುವುದಿಲ್ಲವೆ? ಏಕೆ ಇಲ್ಲಿ 100 ಜನ ಎಂಬ ಪದವನ್ನು ಸೇರಿಸಲಾಗಿದೆ? ಇದರಿಂದಾಗಿ ಎಲ್ಲೋ ಒಂದು ಕಡೆ ಈ ಕಾನೂನಿನಿಂದ ತಪ್ಪಿಸಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ನಾವು 99 ಜನ ಇದ್ದೇವೆ, 98 ಜನ ಇದ್ದೇವೆ ಎಂದು ಹೇಳುತ್ತಾರೆ. ಹಾಗಾಗಿ ಜನಸಂದಣಿ ಇರುವಂತಹ ಪ್ರದೇಶದಲ್ಲಿ ಹಾಕಿ ಎಂದು ತಿಳಿಸಿ. ಆದರೆ ಈ 100 ಜನ ಎನ್ನುವ ಪದ ಏನು ಇದೆ, ಈ ಪದವನ್ನು ತೆಗೆಯಬೇಕು ಎಂದು ನನಗನ್ನಿಸುತ್ತದೆ. ಎರಡನೆಯದಾಗಿ, ಯಾವ ತಾಂತ್ರಿಕ ಸಲಕರಣೆ ತೆಗೆದುಕೊಳ್ಳಬೇಕು ಎನ್ನುವ ಪ್ರಶ್ನೆ ಬಂದಾಗ, ಸರ್ಕಾರವು "ಅಧಿಸೂಚಿಸುವ ನಿರ್ದಿಷ್ಟ ವಿವರಣೆಗಳನ್ನು ದೃಢವಾಗಿ ಪಾಲಿಸುವ" ಎಂದು ಹೇಳಿರುವುದನ್ನು ನೋಡಿದರೆ ಎಲ್ಲೋ ಒಂದು ಕಡೆ ಸಂಶಯ ಮೂಡುತ್ತದೆ. ಈಗಾಗಲೇ ಖಾಸಗಿ ಸಂಸ್ಥೆಗಳವರು ಸಿಸಿ ಟಿ.ವಿ ಸಾಧನಗಳನ್ನು ಅಳವಡಿಸಿಕೊಂಡಿದ್ದಾರೆ. ಅಕಸ್ಮಾತ್ ಅವರು ಹಾಕಿಕೊಂಡದ್ದಕ್ಕೆ ಸರ್ಕಾರ ಅಧಿಕೃತ ಪಟ್ಟಿಯನ್ನು ಕೊಟ್ಟಿಲ್ಲ ಎಂದಾದಲ್ಲಿ ಸರ್ಕಾರ ಹೇಳಿದ್ದನ್ನೇ ಹಾಕಿಸಿಕೊಳ್ಳಬೇಕು. ಸರ್ಕಾರ ಹೇಳಿದ್ದನ್ನೇ ಹಾಕಿಸಿಕೊಳ್ಳಬೇಕಾದರೆ ಮತ್ತೆ ಆ ಕಂಪನಿಯವರು ಹೋಗಿ ಸರ್ಕಾರದಲ್ಲಿ ಏನಾದರೂ ಮಾಡಬೇಕು. ಅಂತಹ ಸಮಯದಲ್ಲಿ ಅವ್ಯವಹಾರವಾಗುವ ಸಾಧ್ಯತೆ ಇದೆ. ಹಾಗಾಗಿ ಖಾಸಗಿಯವರು ಅವರಿಗೆ ಬೇಕಾದಂತಹ ಒಳ್ಳೆಯ ಗುಣಮಟ್ಟದ ತಾಂತ್ರಿಕ ಸಾಧನಗಳನ್ನು ಹಾಕಿಕೊಳ್ಳುವುದನ್ನು ಬಿಟ್ಟು ಸರ್ಕಾರ ಹೇಳಿದ ಸಾಧನವನ್ನೇ ಹಾಕಿಕೊಳ್ಳಬೇಕು ಎಂದು ಏಕೆ insist ಮಾಡಲಾಗಿದೆ? ಸರ್ಕಾರವು ಪ್ರಮಾಣಪತ್ರವನ್ನು ನೀಡಬೇಕಾದರೆ ಏನೆಲ್ಲಾ ನಡೆಯುತ್ತದೆ ಎಂಬುದು ತಮಗೆಲ್ಲಾ ಗೊತ್ತಿದೆ. ಸಾಮಾನ್ಯವಾಗಿ ಸಿಸಿ ಟಿ.ವಿ ಹಾಕಬೇಕಾದರೆ ಯಾರೂ ಕಳಪೆ ಗುಣಮಟ್ಟದ ಸಿಸಿಟಿವಿಗಳನ್ನು ಹಾಕುವುದಿಲ್ಲ. ಇಷ್ಟು ದಿನಗಳಿಂದಲೂ ಒಳ್ಳೆಯ ಸಿಸಿ ಟಿ.ವಿ.ಗಳನ್ನೇ ಹಾಕಿಕೊಂಡಿದ್ದಾರೆ. ಈ ಕಾನೂನು ಬರುವುದಕ್ಕಿಂತ ಮುಂಚೆಯಿಂದಲೂ ಖಾಸಗಿ ಸಂಸ್ಥೆಗಳಲ್ಲಿ ಸಿಸಿ ಟಿ.ವಿ.ಗಳನ್ನು ಅಳವಡಿಸಲಾಗಿದೆ. ಯಾವಾಗಲೂ ಸರ್ಕಾರ ಹೇಳಿದ್ದನ್ನೆ ಮಾಡಬೇಕೆಂದು ಹೊರಟರೆ ಆಗ ದಂಧೆ

ಶುರುವಾಗುತ್ತದೆ. ಸರ್ಕಾರದಿಂದ ಪ್ರಮಾಣಪತ್ರ ಬೇಕೆಂದರೆ ಏನಾಗುತ್ತದೆಯೆಂದು ನಮಗೆ ಗೊತ್ತಿದೆ. ಘರ್ಷಣೆಯೂ ಆಗುತ್ತದೆ ಮತ್ತು ದಂಧೆಯೂ ನಡೆಯುತ್ತದೆ. ಹಾಗಾಗಿ ಆ ಕಲಂ ಅಗತ್ಯವಿಲ್ಲ.

ಮೂರನೆಯದಾಗಿ ಸೀಲ್ ಮಾಡಬೇಕೆಂದು ಹೇಳಲಾಗಿದೆ. ಉದಾಹರಣೆಗೆ ಖಾಸಗಿ ಆಸ್ಪತ್ರೆಗಳನ್ನು ಸೀಲ್ ಮಾಡಿದರೆ ಏನಾಗುತ್ತದೆ? ಸೀಲ್ ಮಾಡುವ ಸಾಧ್ಯತೆಯಿದೆಯೇ? ಸೀಲ್ ಮಾಡುವ ಅವಶ್ಯಕತೆಯಿದೆಯೇ? ಹಾಗಾಗಿ ಸೀಲ್ ಮಾಡಬೇಕು ಎನ್ನುವ ಅಂಶವನ್ನು ತಾವು ಹೇಳಿದಂತಹ ಸಂಸ್ಥೆಗಳು ಅಂದರೆ ವಾಣಿಜ್ಯ ಸಂಸ್ಥೆಗಳು, ಕೈಗಾರಿಕಾ ಸಂಸ್ಥೆಗಳು, ಧಾರ್ಮಿಕ ಸಂಸ್ಥೆಗಳು, ಶೈಕ್ಷಣಿಕ ಸಂಸ್ಥೆಗಳನ್ನು ಬಿಡಲಾಗಿದೆ. ಆಸ್ಪತ್ರೆಗಳು ಕ್ರೀಡಾ ಸಂಕೀರ್ಣಗಳು, ರೈಲ್ವೆ ನಿಲ್ದಾಣಗಳು ಇವೆಲ್ಲಾ ಬರದೇ ಇದ್ದ ಮೇಲೆ ಹೇಗೆ ಸೀಲ್ ಮಾಡಲಾಗುತ್ತದೆ? ಅಂತಿಮವಾಗಿ ಕಾನೂನು ಬಂದದ್ದರಿಂದ ಒಂದಷ್ಟು ಲಾಭವಾದರೂ ಕೂಡ ಅಲ್ಲಿ ನಡೆಯುವುದು ದಂಧೆಯೇ. ಹಾಗಾಗಿ ಸೀಲ್ ಮಾಡುವ ಅಂಶವನ್ನು ಮಾನ್ಯ ಸಚಿವರು ದಯವಿಟ್ಟು ಕೈ ಬಿಡಬೇಕು ಎಂದು ಹೇಳುತ್ತೇನೆ. ಇನ್ನು ಈ ಎಲ್ಲಾ ಸಂಗತಿಗಳು ಖಾಸಗಿ ಸಂಸ್ಥೆಗಳಿಗೆ ಅನ್ವಯವಾಗುತ್ತದೆ. ಸರ್ಕಾರಿ ವ್ಯವಸ್ಥೆಯಲ್ಲಿರುವಂತಹ ಈ ಎಲ್ಲಾ ಸಂಗತಿಗಳು ಅಂದರೆ ನೂರು ಅಥವಾ ನೂರಕ್ಕಿಂತ ಹೆಚ್ಚು ಜನ ಸೇರುವಂತಹ ಸಂಸ್ಥೆಗಳಿಗೆ ಏನು ವ್ಯವಸ್ಥೆಯನ್ನು ಮಾಡಲಾಗುತ್ತದೆ? ಅಲ್ಲಿಗೆ ಏನು ಕಾನೂನು ಇದೆ? ಅಲ್ಲಿ ಅಕಸ್ಮಾತ್ ಈ ರೀತಿಯ ಸುರಕ್ಷೆಗೆ ಸಂಬಂಧಪಟ್ಟ ಸಂಗತಿಗಳು ನಡೆದರೆ ಅಲ್ಲಿ ಸಿಸಿಟಿವಿ ಹಾಕುವ ಅವಶ್ಯಕತೆ ಇಲ್ಲವೆ? ಒಂದು ನಯಾಪೈಸೆ ಖರ್ಚಾಗುವುದಿಲ್ಲವೆಂದು ಉಲ್ಲೇಖ ಮಾಡಲಾಗಿದೆ. ಅಂದರೆ ಯಾರದೋ ಹೆಗಲ ಮೇಲೆ ಕೈ ಇಟ್ಟು trigger ಒತ್ತುವುದು ಬಹಳ ಸುಲಭ. ಈ ಸಣ್ಣ ಸಣ್ಣ ಸಂಸ್ಥೆಗಳು ಸಿಸಿ ಟಿ.ವಿ ಹಾಕಬೇಕು, ಕಾಲ ಕಾಲಕ್ಕೆ CCTV footage store ಮಾಡಿ ವರದಿಯನ್ನು ನೀಡಬೇಕೆಂದರೆ, ಮಾನ್ಯ ಸದಸ್ಯರು ಒಂದು ವರ್ಷದ್ದು ಇಡಬೇಕೆಂದು ಹೇಳಿದರು. ಒಂದು ವರ್ಷದ CCTV footage store ಮಾಡಿ ಇಡಬೇಕೆಂದು ಹೇಳಿದರೆ ಆ device cost ಎಷ್ಟಾಗುತ್ತದೆ? ಎಲ್ಲೋ ಒಂದು ಕಡೆ ಸಣ್ಣ ಸಣ್ಣ ಸಂಸ್ಥೆಗಳಿಗೆ ಇದನ್ನು ಮಾಡುವುದಕ್ಕೆ ಸರ್ಕಾರ ಏನಾದರೂ ಸಹಾಯ ಧನವನ್ನು ಕೊಡಲಾಗುತ್ತದೆಯೇ? ಕಾನೂನು ಮತ್ತು ಸುವ್ಯವಸ್ಥೆ ಒದಗಿಸುವಂಥದ್ದು ಸರ್ಕಾರದ ಜವಾಬ್ದಾರಿಯಾಗಿದೆ. ಅದಕ್ಕಾಗಿ ಸರ್ಕಾರಿ ಸಂಸ್ಥೆಗಳಲ್ಲದೆ ಖಾಸಗಿ ಸಂಸ್ಥೆಗಳ ಸಹಾಯ ಬೇಕು. ಅಲ್ಲಿ ಸಿಸಿ ಟಿ.ವಿ ಹಾಕಬೇಕಾದರೆ ಅವರ ಖರ್ಚಿನ ಜವಾಬ್ದಾರಿಯನ್ನು ಯಾರು ತೆಗೆದುಕೊಳ್ಳುತ್ತಾರೆ? ಹೇಳುವುದು ಸುಲಭ, ಜಾರಿಗೆ ತರಲು ಸಾಧ್ಯವಾಗುತ್ತದೆಯೇ? ಇದರ ಬಗ್ಗೆ ಆಲೋಚನೆ ಮಾಡಬೇಕೆಂದು ಹೇಳುತ್ತಾ ಒಟ್ಟು crime rate ಕಡಿಮೆ ಮಾಡುವುದಕ್ಕಾಗಲೀ, ಪತ್ತೆ ಹಚ್ಚುವುದಕ್ಕಾಗಲೀ, ಕಳ್ಳತನ ಇರಬಹುದು, ಸರಗಳ್ಳತನ ಇರಬಹುದು, ದರೋಡೆ ಇರಬಹುದು ಅತ್ಯಾಚಾರ ಇರಬಹುದು ಈ ಸಂಗತಿಗಳಿಗೆ ಸಂಬಂಧಪಟ್ಟ ಹಾಗೆ ಇಂದಿನ ತಂತ್ರಜ್ಞಾನ ಉಪಯೋಗಿಸುವ ಅವಶ್ಯಕತೆ ಇದೆ. ಅದರಲ್ಲಿ ಎರಡು ಮಾತಿಲ್ಲ. ಖಂಡಿತವಾಗಿಯೂ ಇದು ಆಗಲೇ

ಬೇಕಾದಂತಹದ್ದು. ಆದರೆ ಎಲ್ಲೋ ಒಂದು ಕಡೆ ಸಾರ್ವಜನಿಕ ಸಹಭಾಗಿತ್ವದಲ್ಲಿ ಅವರ ಮನವೊಲಿಕೆ ಮಾಡಿಕೊಂಡು ಮಾಡಬೇಕೆ ಹೊರತು ಕಾನೂನು ಪ್ರಕಾರ ಮಾಡುತ್ತೇವೆಂದು ಹೋದರೆ ಅದು ಕೇವಲ ಘರ್ಷಣೆಗೆ ಅಥವಾ ದಂಧೆ ನಡೆಸುವುದಕ್ಕೆ ಅವಕಾಶ ಮಾಡಿಕೊಡುತ್ತದೆಯೇ ಹೊರತು ಪೋಲೀಸ್ ಇಲಾಖೆಗೆ ಸಹಾಯ ಕೊಡುವಂತಹದ್ದು, ಸಹಕಾರ ಕೊಡುವಂತಹದ್ದು ಸಾರ್ವಜನಿಕರ ಕರ್ತವ್ಯ. ಖಂಡಿತವಾಗಿ ಮಾಡಿಯೇ ಮಾಡುತ್ತಾರೆ. ಯಾರೇ ಯಾವುದೇ ಸಿಸಿ ಟಿ.ವಿ ಹಾಕಿದರೂ ಕೂಡ ನಾವು footage ಒದಗಿಸುವುದಿಲ್ಲ, ಅದು ಮಾಡುವುದಿಲ್ಲ, ಇದು ಮಾಡುವುದಿಲ್ಲ ಎಂದು ಹೇಳುವುದಿಲ್ಲ. ಕಾನೂನು ಎಂದು ಮಾಡಿದಾಗ ಬೇರೆ ಏನು ಕೆಲಸ ಮಾಡದಿದ್ದರೂ ಕೂಡ ಸಂಗ್ರಹ ಮಾಡಬಹುದು ಎನ್ನುವ ಕಾರಣಕ್ಕಾಗಿ ಪೋಲೀಸರಿಗೆ ಒಂದು ಹೊಸ ಕೆಲಸವನ್ನು ಕೊಟ್ಟು ಅದರ ಮೂಲಕ ದಂಧೆಯನ್ನು ನಡೆಸಲು ಅನುಕೂಲವಾಗುತ್ತದೆ. ಉದ್ದೇಶ ಚೆನ್ನಾಗಿದ್ದರೂ ಕೂಡ ಮಾನ್ಯ ಸಚಿವರು ತಂದಿರುವ ಕಾನೂನನ್ನು ನೋಡಿದಾಗ ಹಿಂದೆ ಹೇಳುತ್ತಿದ್ದಂತೆ "License Quota Permit Raj" ಆ ರೀತಿ ಮತ್ತೊಮ್ಮೆ ಪೋಲೀಸ್ ಇಲಾಖೆಯ ಮೂಗಿನ ನೇರಕ್ಕೆ ಮಾಡುವ ಸಾಧ್ಯತೆಗಳಿರುವುದರಿಂದ ಮತ್ತೊಮ್ಮೆ ಇದನ್ನು ವಿಮರ್ಶೆ ಮಾಡಿಕೊಂಡು ನೂರು ಜನ ಎಂದು ಹೇಳುವುದನ್ನು ಕೈಬಿಡಬೇಕು. ಎರಡನೆಯದು ಸರ್ಕಾರಿ ವ್ಯವಸ್ಥೆಯಲ್ಲಿ ಗುರುತಿಸಲ್ಪಟ್ಟ ಸಲಕರಣೆಯನ್ನೇ ಬಳಸಬೇಕೆಂಬ ಕಾನೂನು ಕೈಬಿಡಬೇಕು. ಸೀಲ್ ಮಾಡುವ ಸ್ಥಳಗಳು ಸಾರ್ವಜನಿಕ ಸ್ಥಳಗಳಾಗಿರುವುದರಿಂದ ಅದನ್ನು ಕೈಬಿಡಬೇಕು. ಕಡ್ಡಾಯವಾಗಿ ಸರ್ಕಾರಿ ಸಂಸ್ಥೆಗಳಲ್ಲಿಯೂ ಕೂಡ ಮಾದರಿಯಾಗಿ ಮೊದಲು ಅಳವಡಿಸಬೇಕು. ಸರ್ಕಾರವೇ ಮಾದರಿಯಾಗಿ ಹಾಕದೆ ಸರ್ಕಾರವೇ ಖರ್ಚು ಮಾಡದೆ ಸಾರ್ವಜನಿಕರ ಮೇಲೆ ಗೂಬೆ ಕೂರಿಸಿ ಮಾಡಿ ಎನ್ನುವುದು ಬಹಳ ಸುಲಭ. ದಯವಿಟ್ಟು ಸರ್ಕಾರದ ಅಡಿಯಲ್ಲಿ ಬರುವ ಈ ಎಲ್ಲಾ ಸಂಸ್ಥೆಗಳಲ್ಲಿ ಒಂದು ಮಾದರಿಯಾಗಿ ಸಿಸಿ ಟಿ.ವಿ.ಯನ್ನು ಅಳವಡಿಸಿಕೊಳ್ಳಬೇಕು. ಇದನ್ನು ನೋಡಿ ನೀವು ಈ ರೀತಿ ಮಾಡಿ ಎಂದು ಹೇಳಬೇಕು. ಸರ್ಕಾರವೇ ಏನೂ ಮಾಡದೆ ಸಾರ್ವಜನಿಕರಿಗೆ ಅಥವಾ ಖಾಸಗಿಯವರಿಗೆ ಹೇಳುವುದು ಸರಿಯಲ್ಲ. ಅದನ್ನು ಕೂಡ ಗಮನಿಸಬೇಕೆಂದು ವಿನಂತಿ ಮಾಡುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಸಾರ್ವಜನಿಕ ಸುರಕ್ಷತೆಯ ವಿಧೇಯಕದ ಒಟ್ಟು ಆಶಯವನ್ನು ನಾನು ಒಪ್ಪುತ್ತೇನೆ. ಆದರೆ ಈಗಾಗಲೇ ನಮ್ಮ ಸ್ನೇಹಿತರು ಸೂಕ್ಷ್ಮವಾಗಿ ಪ್ರಸ್ತಾಪ ಮಾಡಿದರು. ಶಿಕ್ಷಣ ಸಂಸ್ಥೆಗಳು, ಧಾರ್ಮಿಕ ಸಂಸ್ಥೆಗಳು ಮತ್ತು ಖಾಸಗಿ ಆಸ್ಪತ್ರೆಗಳ ವಿಚಾರದಲ್ಲಿ ಇವರ ನಿರ್ದೇಶನವನ್ನು ಪಾಲಿಸದೆ ಹೋದರೆ ಮೇಲ್ವಿಚಾರಣಾ ಸಮಿತಿಯ ಪರಿಶೀಲನೆಗೆ ಒಳಪಡಿಸಬೇಕು. ಯಾವುದು ಆ ಮೇಲ್ವಿಚಾರಣಾ ಸಮಿತಿ? ದಯಮಾಡಿ ಮಾನ್ಯ ಸಚಿವರು ಈ ಕುರಿತು ಬೆಳಕು ಚೆಲ್ಲಬೇಕು. ಆ ಮೇಲ್ವಿಚಾರಣಾ ಸಮಿತಿಯಲ್ಲಿ ಯಾರೆಲ್ಲಾ ಇರುತ್ತಾರೆ ಎಂಬ ಬಗ್ಗೆ ತಿಳಿಸಿಕೊಡಬೇಕು. ಎರಡನೆಯದಾಗಿ ಶಿಕ್ಷಣ ಸಂಸ್ಥೆಗಳನ್ನು ನಿಯಂತ್ರಿಸಲಿಕ್ಕೆ ಶಿಕ್ಷಣ ಇಲಾಖೆ ಇದೆ. ಧಾರ್ಮಿಕ ಸಂಸ್ಥೆಗಳನ್ನು ನಿಯಂತ್ರಿಸಲಿಕ್ಕೆ ಧಾರ್ಮಿಕ ದತ್ತಿ ಇಲಾಖೆ ಇದೆ. ಖಾಸಗಿ ಆಸ್ಪತ್ರೆಗಳನ್ನು ನಿಯಂತ್ರಿಸಲಿಕ್ಕೆ ಆರೋಗ್ಯ ಇಲಾಖೆಯ ಅಧಿಕಾರಿಗಳಿದ್ದಾರೆ. ಪೋಲಿಸರನ್ನು

ಅಲ್ಲಿಗೆ ಬಿಟ್ಟರೆ ಅದು ಎಲ್ಲಿಗೆ ಹೋಗಿ ನಿಲ್ಲುತ್ತದೆ ಎಂಬುದನ್ನು ನಾವು ಕನಸಿನಲ್ಲಿಯೂ ಎಣಿಸುವುದಕ್ಕೆ ಸಾಧ್ಯವಿಲ್ಲ. ಅಂತಹ ಶಿಕ್ಷಣ ಸಂಸ್ಥೆಯ ಮಾನ್ಯತೆಯನ್ನು ರದ್ದು ಮಾಡಿ ಎಂದು ಕ್ಷೇತ್ರ ಶಿಕ್ಷಣಾಧಿಕಾರಿಗೆ ಹೇಳಲಿ ಅಥವಾ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಿಗೆ ಹೇಳಲಿ. ಶಿಕ್ಷಣ ಸಂಸ್ಥೆಗಳಲ್ಲಿ ಏನು operate ಮಾಡಬೇಕೊ ಅದನ್ನು ಶಿಕ್ಷಣ ಇಲಾಖೆಯ ಮೂಲಕವೇ ಮಾಡಿಸಲಿ. ಸಿಸಿ ಟಿ.ವಿ ಹಾಕಲಿಲ್ಲ ಎಂದರೆ recognition ಕೊಡಬೇಡಿ ಎಂದು ಹೇಳಲಿ. ಆದರೆ ಶಿಕ್ಷಣ ಸಂಸ್ಥೆಗಳನ್ನು ಸೀಲ್ ಮಾಡುವ ಅಧಿಕಾರವನ್ನು ಪೋಲೀಸರ ಕೈಗೆ ಕೊಟ್ಟರೆ ಅದು ಅತ್ಯಂತ ಅಪಾಯಕಾರಿ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳಲೇ ಬೇಕಾಗಿದೆ. ಖಾಸಗಿ ಆಸ್ಪತ್ರೆಗಳಲ್ಲಿಯೂ ಅಷ್ಟೆ. ಬೆಳಗಾದರೆ ಅಲ್ಲಿ exploitation ಶುರುವಾಗುತ್ತದೆ. ಪುಟ ೩ರಲ್ಲಿ ದತ್ತಿ ಸಂಸ್ಥೆಗಳನ್ನು ಸೀಲ್ ಮಾಡುವುದು ಬೇಡ ಎಂದು ಹೇಳಲಾಗಿದೆ. ಏಕೆ? ಅವುಗಳಿಗೇನು ಕೊಂಬು ಇದೆಯೇ? ಅವುಗಳನ್ನೂ ಇದರ ವ್ಯಾಪ್ತಿಗೆ ಒಳಪಡಿಸಬೇಕು. ಅವುಗಳನ್ನೂ ಸೀಲ್ ಮಾಡಬೇಕು. ಆ ಇಲಾಖೆಯವರು ಮಾಡಲಿ. ಪೋಲೀಸರು ಇದರ ಬಗ್ಗೆ ಸಂಬಂಧಪಟ್ಟಂತಹ ದತ್ತಿ ಇಲಾಖೆಗೆ ರಿಪೋರ್ಟ್ ಮಾಡಲಿ ಅಥವಾ ಶಿಕ್ಷಣ ಇಲಾಖೆಗೆ ರಿಪೋರ್ಟ್ ಮಾಡಲಿ ಅಥವಾ ಆರೋಗ್ಯ ಇಲಾಖೆಗೆ ರಿಪೋರ್ಟ್ ಮಾಡಲಿ. ಆ ಇಲಾಖೆಯವರು ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಲಿ. ಪೋಲೀಸರನ್ನು ಶಾಲಾ-ಕಾಲೇಜಿನೊಳಗೆ, ಧಾರ್ಮಿಕ ಸಂಸ್ಥೆಯೊಳಗೆ ಮತ್ತು ಆಸ್ಪತ್ರೆಯೊಳಗೆ ಕಳುಹಿಸಿದರೆ ಅದು ಎಲ್ಲಿಗೆ ಹೋಗಿ ನಿಲ್ಲುತ್ತದೆ ಎಂದು ಲೆಕ್ಕ ಹಾಕುವುದಕ್ಕೆ ಯಾರ ಕೈಯಲ್ಲೂ ಆಗುವುದಿಲ್ಲ. ನಮ್ಮ ಕೈಯಲ್ಲೂ ಆಗುವುದಿಲ್ಲ. ದಯಮಾಡಿ ಆ ಕ್ರಮಕ್ಕೆ ಸರ್ಕಾರ ಮುಂದಾಗಬಾರದು. ಅದಕ್ಕೆಂದೇ ಸಂಬಂಧಪಟ್ಟ ಇಲಾಖೆಗಳಿವೆ. ಒಂದು ವರ್ಷಗಳ ಕಾಲ ಅವುಗಳನ್ನು ರಕ್ಷಣೆ ಮಾಡಬೇಕೆಂಬ ಒಂದು ಅಂಶವನ್ನು ಮಾನ್ಯ ಉಗ್ರಪ್ಪನವರು ಹೇಳಿದರು. ಆ CCTV footage store ಮಾಡಿ ಅವುಗಳನ್ನು ಎಲ್ಲಿಡುವುದು? ಆ Hard Disk ಗಳನ್ನು ಎಲ್ಲಿ store ಮಾಡುವುದು?

(...ಮುಂದು)

(994)15.11.2017/4.30/ಕೆ.ಜಿ-ಜಿಆರ್

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಮುಂದು)**:- ಅವರು ಅದನ್ನು ಸ್ಪಷ್ಟಪಡಿಸಬೇಕು. ಅವರು ಯಾರಿಗೆ ಹಸ್ತಾಂತರ ಮಾಡಬೇಕು? ಶಿಕ್ಷಣ ಇಲಾಖೆಯವರಿಗೆ ಹಸ್ತಾಂತರ ಮಾಡಬೇಕೇ ಅಥವಾ ಯಾರ್ಯಾರು, ಯಾರಿಗೆ, ಎಲ್ಲಿ ಹಸ್ತಾಂತರ ಮಾಡಬೇಕು, ಅದನ್ನು ಎಲ್ಲಿ ಸಂಗ್ರಹಣೆ ಮಾಡಬೇಕು, ಅದನ್ನು ಎಲ್ಲಿಯವರೆಗೆ ರಕ್ಷಣೆ ಮಾಡಬೇಕು ಎಂಬುದನ್ನು ಮೊದಲು ಮಾನ್ಯ ಸಚಿವರು ಸ್ಪಷ್ಟಪಡಿಸಬೇಕು. ಆದರೆ, ಸಂಪೂರ್ಣವಾಗಿ ಏಕಾಏಕಿ ಹಿಡಿಯುವಂತಹ ಅಧಿಕಾರವನ್ನು ಪೋಲೀಸ್ ವ್ಯವಸ್ಥೆಗೆ ಕೊಡುವುದಕ್ಕೆ ನಮ್ಮ ಸಂಪೂರ್ಣವಾದ ವಿರೋಧ ಇದೆ. ಅದನ್ನು ಸಂಬಂಧಪಟ್ಟ ಇಲಾಖೆಗಳ ಮೂಲಕ

handle ಮಾಡುವುದಕ್ಕೆ ನಮ್ಮ ಅಡ್ಡಿ ಇಲ್ಲ. ಮತ್ತೆ ನಮ್ಮ ಸದಸ್ಯ ಮಿತ್ರರಾದಂತಹ ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ರವರು ಹೇಳಿದಂತೆ, ಸರ್ಕಾರದ ಎಲ್ಲಾ ಸಂಸ್ಥೆಗಳನ್ನು ಇದರ ವ್ಯಾಪ್ತಿಗೆ ತಂದು, ನೀವು ಅದಕ್ಕೆ ಮಾದರಿಯಾಗಿ, ನೀವು ಈ ರೀತಿ ಮಾಡಿ ಎಂದು ಹೇಳುವಂತಹ ಕೆಲಸಕ್ಕೆ ಮುಂದಾಗುವುದಾದರೆ, ಅದು ಅತ್ಯಂತ ಸ್ವಾಗತಾರ್ಹವೆಂದು ನಾನು ಭಾವಿಸುತ್ತೇನೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಸಚಿವರು ತಂದಿರುವಂತಹ **"ಕರ್ನಾಟಕ ಸಾರ್ವಜನಿಕ ಸುರಕ್ಷತೆಯ (ಕ್ರಮಗಳ) ವಿಧೇಯಕ, 2017"** ಏನಿದೆ ಇದರಲ್ಲಿ ಎಷ್ಟು ಒಳ್ಳೆಯ ಅಂಶಗಳು ಇವೆಯೋ ಅಷ್ಟೇ ಕೆಟ್ಟದ್ದು ಇದೆ. ಪೋಲೀಸ್ ಅಧಿಕಾರಿಗಳಿಗೆ ಅಧಿಕಾರ ಕೊಡುವಂಥದ್ದು ಅವರು ಮಾಮೂಲು ವಸೂಲಿ ಮಾಡುವುದಕ್ಕೆ ಅಷ್ಟೇ ತಾವು ಇಲ್ಲಿ provision ಮಾಡಿದ್ದೀರಿ ಎಂಬುದು ನನ್ನ ಅಭಿಪ್ರಾಯ. ಅದು ಯಾವ ರೀತಿ ಎಂದರೆ, ಈಗಾಗಲೇ ಪೋಲೀಸ್ ಇಲಾಖೆಗಳಿಗೆ ಸಾಕಷ್ಟು ಅಧಿಕಾರಗಳನ್ನು ಸಹ ಕೊಟ್ಟಿದ್ದೀರಿ. ಹಾಗೆಯೇ, ಗೂಂಡಾ ಕಾಯ್ದೆಯನ್ನು ಕೊಟ್ಟಿದ್ದೀರಿ. ಅವರು execute ಮಾಡುವಂಥದ್ದರಲ್ಲಿ, ಅವರಲ್ಲಿ top officers ಇರುವಂಥದ್ದು ಬೇರೆ ವಿಚಾರ. ಆದರೆ, ಪೋಲೀಸ್ ಠಾಣೆಗಳಲ್ಲಿ ಪೋಲೀಸ್ ನಿರೀಕ್ಷಕರ ಮತ್ತು ಸಹಾಯಕ ಪೋಲೀಸ್ ನಿರೀಕ್ಷಕರ ಮಟ್ಟದಲ್ಲಿ ಯಾವ ರೀತಿಯಲ್ಲಿ ನಡೆಯುತ್ತಿದೆ ಎಂಬುದು ತಮಗೂ ಗೊತ್ತಿದೆ, ನಮಗೂ ಗೊತ್ತಿದೆ. ಹಾಗೂ ಪ್ರತಿಯೊಬ್ಬರಿಗೂ ಗೊತ್ತಿದೆ. ಕಾನೂನನ್ನು violate ಮಾಡಿ, ಅವರ ಮನಸ್ಸಿಗೆ ಬಂದಂತೆ ಕ್ರಮ ತೆಗೆದುಕೊಳ್ಳುವುದು, ರಾಜಕೀಯದ influence ಗೆ ಅಥವಾ ಇನ್ನೊಬ್ಬರ influence ಗೆ ಕೆಲಸ ಮಾಡುವಂಥದ್ದು ಸಾಮಾನ್ಯವಾಗಿರುವಂಥದ್ದು. ಅದರಲ್ಲಿ ದಂಡ ಹಾಕುವುದಕ್ಕೆ ಮತ್ತು seal ಮಾಡುವಂಥದ್ದಕ್ಕೆ ಯಾವಾಗ ನೀವು ಅಧಿಕಾರ ಕೊಟ್ಟಿದ್ದೀರೋ, ಅವರು ದಿನನಿತ್ಯ ಕಿರುಕುಳ ಕೊಡುವುದಕ್ಕೆ ನಮ್ಮ ಮಿತ್ರರಾದಂತಹ ರಮೇಶ್‌ಬಾಬು ರವರು ಹೇಳಿದ ಹಾಗೆ ಆಸ್ಪತ್ರೆಗಳು ಇರಬಹುದು, ಶೈಕ್ಷಣಿಕ ಸಂಸ್ಥೆಗಳು ಇರಬಹುದು, ಧಾರ್ಮಿಕ ಸಂಸ್ಥೆಗಳು ಇರಬಹುದು, ಆ ಧಾರ್ಮಿಕ ಸಂಸ್ಥೆಗಳ ಬಗ್ಗೆ ಇವರಿಗೆ ದ್ವೇಷ ಇರುತ್ತದೆ. ರಾಜಕಾರಣದಲ್ಲಿ ಇವತ್ತು ನೀವು ಇರಬಹುದು, ನಾಳೆ ನಾವು ಬರಬಹುದು. ಆದರೆ, ದ್ವೇಷ ಸಾಧಿಸುವುದಕ್ಕೆ ಇದು ಒಂದು ದೊಡ್ಡ ಅಸ್ತ್ರವೆಂದು ನನ್ನ ಅಭಿಪ್ರಾಯ. ಇನ್ನೊಂದು ನನ್ನ ಸದಸ್ಯ ಮಿತ್ರರಾದಂತಹ ಶ್ರೀಕಂಠೇಗೌಡರವರು ಅಪೀಲು ಯಾರಿಗೆ ಮಾಡಬೇಕೆಂದು ಪ್ರಸ್ತಾಪ ಮಾಡಿದ್ದಾರೆ. ಸಬ್-ಇನ್ಸ್‌ಪೆಕ್ಟರ್ ಮತ್ತು ಇನ್ಸ್‌ಪೆಕ್ಟರ್ seal ಮಾಡುವಂಥದ್ದು, ಅಪೀಲು ಮಾಡುವಂಥದ್ದು ಸಹಾಯಕ ಪೋಲೀಸ್ ಕಮಿಷನರ್‌ರವರಿಗೆ, ಇವರಿಬ್ಬರಿಗೂ ಪೋಲೀಸ್ ಇಲಾಖೆಯ ಅಧಿಕಾರಿಗಳೇ ಆಗಿದ್ದಾರೆ. ಅಪೀಲು ಪ್ರಾಧಿಕಾರ ಇರಬಹುದು, ತೀರ್ಪು ಕೊಡುವಂತಹವರು ಇರಬಹುದು, judiciously ನೀವು ತಹಶೀಲ್ದಾರ್ ಅಥವಾ ಸಹಾಯಕ ಆಯುಕ್ತರಿಗೆ powers ಕೊಡಬೇಕೇ ಹೊರತು, ನೀವು ಪೋಲೀಸ್ ಇಲಾಖೆಯವರಿಗೆ ಅಪೀಲು

ಮಾಡುವಂತಹ ಅಧಿಕಾರ ಕೊಟ್ಟರೆ, ಇನ್ಸ್‌ಪೆಕ್ಟರ್ seal ಮಾಡಿದ್ದನ್ನು ಸಹಾಯಕ ಪೋಲೀಸ್ ಕಮಿಷನರ್ ಆಗುವುದಿಲ್ಲವೆಂದು ಹೇಳಿ ಇಲಾಖೆಯನ್ನು ಬಿಟ್ಟು ಕೊಡುವುದಕ್ಕೆ ಆಗುತ್ತದೆಯೇ? ಮಾನ್ಯ ಸಚಿವರು ಮೊನ್ನೆ ಸದನದಲ್ಲಿ ಸರಗಳ್ಳತನ ಇರಬಹುದು, ಇನ್ನೊಂದು ಪ್ರಕರಣ ಇರಬಹುದು, ನಾನು ೩೦ ನಿರ್ದೇಶನಗಳನ್ನು ಪೋಲೀಸರಿಗೆ ಕೊಟ್ಟಿದ್ದೇನೆ. ಈ ೩೦ ನಿರ್ದೇಶನಗಳನ್ನು implement ಮಾಡಬೇಕಾದರೆ, ಕಾನೂನಿನ ತೊಡಕು ಇದೆಯಾ ಎಂದು ನಮ್ಮ ಅಧಿಕಾರಿಗಳನ್ನು ಕೇಳಿದ್ದೇನೆ. ಅದಕ್ಕೆ ಅಧಿಕಾರಿಗಳು ನಮಗೆ ಯಾವುದೇ ತೊಡಕು ಇಲ್ಲ, ನಮಗೆ ಇರುವಂತಹ powers ಸಾಕಾಗಿದೆ ಎಂದು ಅವರು ತಿಳಿಸಿದ್ದಾರೆಂದು ಮಾನ್ಯ ಸಚಿವರು ಹೇಳಿದ್ದಾರೆ. ಅಷ್ಟೆಲ್ಲಾ ಇದ್ದ ಮೇಲೆ implementation ನಲ್ಲಿ ಏನಾದರೂ ಲೋಪದೋಷಗಳು ಇದ್ದರೆ, ಅದರ ಬಗ್ಗೆ ತಾವು ಯೋಚನೆ ಮಾಡಬೇಕೇ ಹೊರತು ಇದ್ದ ಕಾನೂನುಗಳನ್ನು ತಂದು seal ಮಾಡುವಂಥದ್ದು, ದಂಡ ಹಾಕುವಂಥದ್ದು, ನೇರವಾಗಿ ಧಾರ್ಮಿಕ ಸಂಸ್ಥೆಗಳಿಗೆ ನುಗ್ಗುವಂತಹದ್ದು, ವಾಣಿಜ್ಯ ಸಂಸ್ಥೆಗಳಿಗೆ ನುಗ್ಗುವಂತಹ ಅಧಿಕಾರವನ್ನು ಕೊಟ್ಟರೆ, ನಾವು ಈ ದಿವಸ ಇಲ್ಲಿ ಕುಳಿತುಕೊಂಡು ಕಾನೂನು ಮಾಡುತ್ತೇವೆ. ನಾಳೆ ದಿವಸ ನಮಗೆ ಅದು "**ಗೂಟ**"ವಾಗುತ್ತದೆ. ನಾವು ಏನು ಹೇಳಿದರೂ ಅವರು ಕೇಳುವುದಿಲ್ಲ. ನೀವು ಕಾನೂನು ಮಾಡಿಕೊಟ್ಟಿದ್ದೀರಿ, ನಾವು ಅದನ್ನು ಚಲಾಯಿಸುತ್ತಿದ್ದೇವೆ ಎಂದು ಹೇಳಿ ಅಧಿಕಾರದ ಪ್ರವೃತ್ತಿ ಬೆಳೆದು ಬರುತ್ತದೆ. ದಯವಿಟ್ಟು ಇದನ್ನು ಮತ್ತೊಂದು ಬಾರಿ ಯೋಚನೆ ಮಾಡುವುದು ಒಳ್ಳೆಯದೆಂದು ನನ್ನ ಭಾವನೆ. ಈ ಒಂದು ವಿಧೇಯಕ ತಂದಿರುವಂಥದ್ದು ಸುರಕ್ಷತೆಯ ವಿಚಾರದ ಜೊತೆಗೆ, ತಿಂಗಳ ವಸೂಲಿ ಮಾಡುವುದಕ್ಕೆ ಪೋಲೀಸ್ ಠಾಣಾಧಿಕಾರಿಗಳಿಗೆ ಬಹಳ ಅನುಕೂಲ ಮಾಡಿಕೊಡಲಾಗಿದೆ ಎನ್ನುವುದು ನನ್ನ ಅಭಿಪ್ರಾಯ. ಆದ್ದರಿಂದ, ದಯವಿಟ್ಟು ಈ ವಿಧೇಯಕವನ್ನು ಮತ್ತೆ ಯೋಚನೆ ಮಾಡುವಂಥದ್ದು ಅವಶ್ಯ ಇದೆ.

ಉಪ ಸಭಾಪತಿಯವರು:- ಮಾನ್ಯ ಪುಟ್ಟಸ್ವಾಮಿಯವರೆ, ತಾವು ಮಾತನಾಡಿದ ಪದ "**ಗೂಟ**" ಎಂಬ ಪದವನ್ನು ಕಡತದಿಂದ ತೆಗೆದಿದ್ದೇನೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ**:- ಮಾನ್ಯ ಸಭಾಪತಿಯವರೇ, ಅದರಲ್ಲಿ ಏನು ತಪ್ಪು ಇದೆ? ಅದು unparliamentary word ಹೇಗೆ ಆಗುತ್ತದೆ?

**ಉಪ ಸಭಾಪತಿಯವರು**:- ಮಾನ್ಯ ಪುಟ್ಟಸ್ವಾಮಿಯವರೆ, ಅದು parliamentary word ಅಲ್ಲ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:**- ಮಾನ್ಯ ಸಭಾಪತಿಯವರೇ, ದಯವಿಟ್ಟು ಸ್ವಲ್ಪ ಕೇಳಿ. ನಾವು ಹಲವಾರು ಕಾನೂನುಗಳನ್ನು ಮಾಡಿದ್ದೇವೆ. ಅವುಗಳನ್ನು implement ಮಾಡಿದಾಗ, ಹಲವಾರು department ಗಳು ನಮಗೆ ಗೊತ್ತಾಗಲಿಲ್ಲ.

**ಉಪ ಸಭಾಪತಿಯವರು:**- ಮಾನ್ಯ ಪುಟ್ಟಸ್ವಾಮಿಯವರೇ, ಈ ವಿಧೇಯಕವನ್ನು ಮಾಡುತ್ತಿರುವುದು. ತಮಗಾಗಿ ಅಲ್ಲ. ತಾವು "ಗೂಟ" ಎಂಬ ಪದವನ್ನು ಹೇಳಿದ್ದೀರಿ. ಅದರಿಂದ ಪದವನ್ನು ಕಡತದಿಂದ ತೆಗೆಯುತ್ತಿದ್ದೇನೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:**- ಮಾನ್ಯ ಸಭಾಪತಿಯವರೇ, ಕಾನೂನುಗಳನ್ನು ಅಧಿಕಾರಿಗಳಿಗೆ ಕೊಟ್ಟಾಗ ಆ ಕಾನೂನುಗಳು ಯಾವ ರೀತಿ ಗೂಟ ಆಗುತ್ತವೆ ಎಂಬುದನ್ನು ಹೇಳಿದ್ದೇನೆ ಅಷ್ಟೇ.

**ಉಪ ಸಭಾಪತಿಯವರು:**- ಮಾನ್ಯ ಪುಟ್ಟಸ್ವಾಮಿಯವರೆ, ನಿಮ್ಮ ಪದದ ಅರ್ಥ ಏನು? ತಾವು ಏನು ಹೇಳಿದ್ದೀರಿ. ನಮಗೆ ಗೂಟ ಆಗುತ್ತದೆಂದು ಹೇಳಿದ್ದೀರಿ. ದಯವಿಟ್ಟು ಆ ಪದ ಬೇಡ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):**- ಮಾನ್ಯ ಸಭಾಪತಿಯವರೆ, it is not in good taste. ಆ ಪದ ಬೇಡ.

ಉಪ **ಸಭಾಪತಿಯವರು:**- ಮಾನ್ಯ ಬಸನಗೌಡ ಯತ್ನಾಳ್ ರವರೆ, ತಾವು ಮಾತನಾಡಿ.

**ಶ್ರೀ ಬಸನಗೌಡ ಆರ್.ಪಾಟೀಲ್(ಯತ್ನಾಳ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):**- ಮಾನ್ಯ ಸಭಾಪತಿಯವರೇ, **"ಕರ್ನಾಟಕ ಸಾರ್ವಜನಿಕ ಸುರಕ್ಷತೆಯ (ಕ್ರಮಗಳ) ಜಾರಿ ವಿಧೇಯಕ 2017"ರ** ಬಗ್ಗೆ ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಂತಹ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ವಿಧಾನಸಭೆಯಲ್ಲಿ ಈಗಾಗಲೇ ಅಂಗೀಕಾರವಾಗಿ ಬಂದಿರುವಂತಹ **"ಕರ್ನಾಟಕ ಸಾರ್ವಜನಿಕ ಸುರಕ್ಷತೆಯ (ಕ್ರಮಗಳ) ಜಾರಿ ವಿಧೇಯಕ 2017"ರನ್ನು** ಸಾರ್ವಜನಿಕ ಹಿತದೃಷ್ಟಿಯಿಂದ ನಾನು ಮೊದಲನೆಯದಾಗಿ ಅದಕ್ಕೆ ಸ್ವಾಗತವನ್ನು ಬಯಸುತ್ತೇನೆ. ಏಕೆಂದರೆ, ಇವತ್ತು ರಾಷ್ಟ್ರದಲ್ಲಿ ಭಯೋತ್ಪಾದನೆ ಮತ್ತು ಸಮಾಜವಾದಿ ಚಟುವಟಿಕೆಗಳು ಹಾಗೂ ಕೋಮು ಸಂಘರ್ಷಗಳು ನಡೆಯುತ್ತಿರುವಂತಹ ಒಂದು ಸಂದರ್ಭದಲ್ಲಿ ಈ ಸುರಕ್ಷತೆಯ ಕ್ರಮಗಳು ಆಧುನಿಕ ತಂತ್ರಜ್ಞಾನಗಳ ಉಪಯೋಗದಿಂದ ಇವತ್ತು ಸಾಕಷ್ಟು ಅಪರಾಧಿಗಳನ್ನು ಮತ್ತು ಅಪರಾಧಗಳನ್ನು ಮಟ್ಟ ಹಾಕುವುದರಲ್ಲಿ ಯಶಸ್ವಿ ಆಗಿದೆ. ನಾವು ಇವತ್ತು "ಇಸ್ರೇಲ್" ದೇಶವನ್ನು ಉದಾಹರಣೆಗೆ ತೆಗೆದುಕೊಂಡರೆ, "ಇಸ್ರೇಲ್" ದೇಶವನ್ನು CCTV ಕ್ಯಾಮರಾದಡಿ ತಂದಿದ್ದರಿಂದ ಇವತ್ತು ಆ ದೇಶದಲ್ಲಿ ಭಯೋತ್ಪಾದನೆಗೆ ಅವಕಾಶ ಇಲ್ಲ. ಆ ದೇಶದಲ್ಲಿ ಒಂದೇ ಒಂದು ಪ್ರಕರಣ ಸಹ ಆಗಿಲ್ಲ. ಅದಕ್ಕೆ ಕಾರಣವೇನೆಂದರೆ, ಆಧುನಿಕ ತಂತ್ರಜ್ಞಾನಗಳ ಒಂದು ಉಪಯೋಗದಿಂದ ಅದು ಸಾಧ್ಯವಾಗಿದೆ. ನಮ್ಮ ದೇಶದಲ್ಲಿಯೂ ಇವತ್ತು

ಭಯೋತ್ಪಾದನೆ, ರಾಷ್ಟ್ರ ವಿರೋಧಿ ಚಟುವಟಿಕೆಗಳು, ಕೋಮು ಘರ್ಷಣೆಗಳು ನಡೆಯುತ್ತಿರುವಂತಹ ಪರಿಸ್ಥಿತಿಯಲ್ಲಿ ಮಾನ್ಯ ಗೃಹ ಸಚಿವರು ಈ ವಿಧೇಯಕವನ್ನು ತಂದಿದ್ದಾರೆ ಅದನ್ನು ನಾನು ಸ್ವಾಗತ್ತಿಸುತ್ತೇನೆ. ಆದರೆ, ಮಾನ್ಯ ಸದಸ್ಯರಾದಂತಹ ಉಗ್ರಪ್ಪನವರಿಗೆ ಎಲ್ಲೋ ಒಂದು ಕಡೆ ಖಾಸಗಿ ಶಿಕ್ಷಣ ಸಂಸ್ಥೆಗಳ, ಖಾಸಗಿ ವೈದ್ಯರ ಬಗ್ಗೆ ಏಕೋ ಒಂದು ತರಹ allergy. ಯಾವಾಗಲೂ ಅವರ ಮೇಲೆ ಹರಿಹಾಯುತ್ತಾರೆ. ಖಾಸಗಿ ಶಿಕ್ಷಣ ಸಂಸ್ಥೆಯಲ್ಲಿ ಎಲ್ಲರೂ ಕಳ್ಳರು, ಅವರೆಲ್ಲರೂ ಲೂಟಿ ಮಾಡುತ್ತಾರೆ, ಅವರು ಸಮಾಜಮುಖಿಯಾಗಿ ಕೆಲಸ ಮಾಡುವುದಿಲ್ಲ. ಈ ರೀತಿ ಮನೋಭಾವನೆ ಇರುವವರು ಸರ್ಕಾರದಲ್ಲಿ ಇರಬಾರದು.

(ಗೊಂದಲ)

**ಉಪ ಸಭಾಪತಿಯವರು**:– ಮಾನ್ಯ ಪಾಟೀಲ್ ರವರೆ, ಪಾಟೀಲ್‌ರವರೆ,..

(ಗೊಂದಲ)

**ಐವನ್ ಡಿ'ಸೋಜಾ (ಸರ್ಕಾರದ ಮುಖ್ಯ ಸಚೇತಕರು)**:– ಮಾನ್ಯ ಸಭಾಪತಿಯವರೇ, let him talk only about the legislation. ಮಾನ್ಯ ಸದಸ್ಯರು ಉಗ್ರಪ್ಪನವರ ಹೆಸರನ್ನು ಏಕೆ ಪ್ರಸ್ತಾಪ ಮಾಡಬೇಕು?

(ಗೊಂದಲ)

ಉಪ **ಸಭಾಪತಿಯವರು**:– ಮಾನ್ಯ ಡಿ'ಸೋಜಾರವರೆ,.. ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

**ಶ್ರೀ ಬಸನಗೌಡ ಆರ್.ಪಾಟೀಲ್(ಯತ್ನಾಳ್)**:– ಮಾನ್ಯ ಸಭಾಪತಿಯವರೇ, ಹಾಗಾದರೆ, ನಾನು ಆಡಳಿತ ಪಕ್ಷದ Chief Whip ರವರು ಬರೆದುಕೊಟ್ಟಂತೆ ಮಾತನಾಡಬೇಕೇ? ನಾನು ವಿಧಾನ ಪರಿಷತ್ತಿನ ಸದಸ್ಯ. ನಾನು ಅದರಲ್ಲೂ ಸ್ವತಂತ್ರವಾಗಿ ಆಯ್ಕೆಯಾದವನು. ನಮ್ಮ ಭಾವನೆಗಳನ್ನು ಸ್ವತಂತ್ರವಾಗಿ ತಮ್ಮ ಅವಗಾಹನೆಗೆ ತರುತ್ತಿದ್ದೇನೆ. ನಾನು ಹೇಳುವುದು ಏನೆಂದರೆ,.

(ಗೊಂದಲ)

**ಉಪ ಸಭಾಪತಿಯವರು**:– ಯತ್ನಾಳ್‌ರವರೇ, ಈ ವಿಧೇಯಕದ ಬಗ್ಗೆ ಮಾತ್ರ ಮಾತನಾಡಿ. ಈಗ ಹೆಚ್ಚಿನ ಸಮಯ ಇಲ್ಲ.

**ಶ್ರೀ ವಿ.ಎಸ್.ಉಗ್ರಪ್ಪ**:– ಮಾನ್ಯ ಸಭಾಪತಿಯವರೇ, ನನಗೆ ಒಂದು ನಿಮಿಷ ಅವಕಾಶ ಕೊಡಿ.

**ಉಪ ಸಭಾಪತಿಯವರು:**- ಮಾನ್ಯ ಉಗ್ರಪ್ಪನವರೇ, ಬೇಡ, ಬೇಡ. ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ವಿ.ಎಸ್.ಉಗ್ರಪ್ಪ:**- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿಸಿಕೊಂಡರೋ ಬಿಟ್ಟರೋ ಅದು ನನಗೆ ಗೊತ್ತಿಲ್ಲ. ಈ ಕಾಯ್ದೆಯಲ್ಲಿ private management ಅನ್ನು ಮಾತ್ರ ತಂದಿದ್ದೀರಿ. ನಾನು ಸರ್ಕಾರವನ್ನು ಸಹ ತರಬೇಕೆಂದು ಹೇಳಿದ್ದೇನೆ. ಮಾನ್ಯ ಸದಸ್ಯರಿಗೆ ಇದರ ಅರಿವು ಇಲ್ಲದಿದ್ದರೆ, ನಾನು ಏನು ಹೇಳಲಿ? ಯಾವ ರೀತಿ ದುರುಪಯೋಗ ಆಗುತ್ತಿದೆ ಎಂಬುದರ ಬಗ್ಗೆಯೂ ಸಹ ಕೆಲವು ಘಟನೆಗಳನ್ನು ಸಹ ಹೇಳಿದ್ದೇನೆ. ಬಹುಶಃ ಅವರು ಕಾಮಾಲೆ ಕಣ್ಣಿನಿಂದ ನೋಡುವಂತಹ ಪ್ರವೃತ್ತಿಯನ್ನು ಬಿಡುವುದು ಸೂಕ್ತವೆಂದು ನಾನು ಭಾವಿಸುತ್ತೇನೆ.

**ಶ್ರೀ ಬಸನಗೌಡ ಆರ್.ಪಾಟೀಲ್(ಯತ್ನಾಳ್):**- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿರುವುದನ್ನು ಒಪ್ಪುತ್ತೇನೆ. ನಾನು ಅವರಲ್ಲಿ ಕ್ಷಮೆಯನ್ನು ಸಹ ಕೇಳುತ್ತೇನೆ. ಏಕೆಂದರೆ, ಮಾನ್ಯ ಉಗ್ರಪ್ಪನವರು ಇಷ್ಟೊಂದು ಕಾಳಜಿಯನ್ನು ಖಾಸಗಿಯವರ ಬಗ್ಗೆ ತೋರಿಸಿದ್ದಾರೆ ಎಂದರೆ, ನಾನು ಅವರಿಗೆ ಅಭಿನಂದನೆಗಳನ್ನು ಸಹ ಸಲ್ಲಿಸುತ್ತೇನೆ. ಈ ತಿದ್ದುಪಡಿಯಲ್ಲಿ ಈಗಾಗಲೇ ನಮ್ಮ ಜನತಾ ದಳದ ಉಪನಾಯಕರು ಹೇಳಿದ್ದಾರೆ; ನೀವು ಎಲ್ಲಾ ಕಡೆಯೂ ಪೋಲೀಸರ ಒಂದು ಹಸ್ತಕ್ಷೇಪವನ್ನು ತಂದು ಇದರಿಂದ ಅವರಿಗೆ ಹೆಚ್ಚಿಗೆ ಆದಾಯವನ್ನು ತರುವುದಕ್ಕೆ ಮಾಡುತ್ತಿದ್ದೀರಿ. ಈ ವಿಧೇಯಕ ಅವರ ಆದಾಯವನ್ನು ಯಾವ ರೀತಿ ಹೆಚ್ಚು ಮಾಡುತ್ತದೆ ಎಂದರೆ, ಅವರು ನಾಳೆ ದಿವಸ ಒಂದು ಆಸ್ಪತ್ರೆಗೆ ಹೋಗುತ್ತಾರೆ, ನಮಗೆ ಉಚಿತವಾಗಿ ಚಿಕಿತ್ಸೆ ನೀಡಿ, ಇಲ್ಲದಿದ್ದರೆ, CCTV ಕ್ಯಾಮರಾದಲ್ಲಿ ಒಬ್ಬ ಆರೋಪಿ ಬಂದಿದ್ದನ್ನು ನಾವು ನೋಡಿದ್ದೇವೆಂದು ಹೇಳುತ್ತಾರೆ. Convent ನಲ್ಲಿ free seat ಕೊಡಿ ಎಂದು ಕೇಳುತ್ತಾನೆ, ಮೆಡಿಕಲ್ ಸೀಟ್‌ನಲ್ಲಿ ನನಗೆ concession ಕೊಡಿ ಎಂದು ಕೇಳುತ್ತಾನೆ, ದೇವಸ್ಥಾನಕ್ಕೆ ಹೋಗುತ್ತಾನೆ ಅಲ್ಲಿಯೂ ಸಹ ನೇರವಾಗಿ ನನಗೆ ದೇವರನ್ನು ಭೇಟಿ ಮಾಡಿಸಿ ಎಂದು ಕೇಳುತ್ತಾನೆ. ಆಸ್ಪತ್ರೆಗೆ ಹೋದರೆ ಉಚಿತವಾಗಿ ನನ್ನ ಹೆಂಡತಿ ಮತ್ತು ಮಗಳಿಗೆ operation ಮಾಡಿ ಎಂದು ಕೇಳುತ್ತಾನೆ. ಅದಕ್ಕೆ ಸರ್ಕಾರ ಅವರಿಗೆ ಹೆಚ್ಚು ಸೌಲಭ್ಯಗಳನ್ನು ಮಾಡುವುದಕ್ಕೆ ಏನು ಹೊರಟ್ಟಿದ್ದೀರಿ ಅದನ್ನು ಕೈಬಿಡಬೇಕು.

(ಮುಂದು...)

(995)15.11.2017-4.40-ಎಂವಿ:ಎಕೆ

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್) (ಮುಂದು..):**-

ಆರೋಗ್ಯ ಇಲಾಖೆ, ಶಿಕ್ಷಣ ಇಲಾಖೆ, ಧಾರ್ಮಿಕ ದತ್ತಿ ಇಲಾಖೆ ಮತ್ತು ವಾಣಿಜ್ಯ ಇಲಾಖೆ. ಈ ರೀತಿಯಾಗಿ ಎಲ್ಲಾ ಇಲಾಖೆಗಳು ಇವೆ. ನಮ್ಮ ಗೃಹ ಮಂತ್ರಿಗಳು ಕೊಡುವುದನ್ನು ನಾನು ವಿರೋಧ ಮಾಡುತ್ತೇನೆ. ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ಅದನ್ನು ತಿದ್ದುಪಡಿ ಮಾಡಿ.

ಸಂಬಂಧಿಸಿದಂತಹ ಇಲಾಖೆಗಳಿಗೆ ಅದರ ಜವಾಬ್ದಾರಿಯನ್ನು ನೀಡಿ. ಇವತ್ತಿನ ದಿವಸ ಶಿಕ್ಷಣ ಸಂಸ್ಥೆಗಳ ಬಗ್ಗೆ ಅವರು ಅಷ್ಟು ಹಣ ತೆಗೆದುಕೊಳ್ಳುತ್ತಾರೆಂದು ನಾವು ಚರ್ಚೆ ಮಾಡುತ್ತಿರುತ್ತೇವೆ. ಬಿಜಾಪುರದಲ್ಲಿ ಒಂದು ಕಾಲೋನಿ ಇದೆ, ಅಲ್ಲಿ ಮೇಲಿಂದ ಮೇಲೆ ಕಳ್ಳತನ ಆಗುತ್ತಿದ್ದುದ್ದರಿಂದ, ಅಲ್ಲಿನ ಪ್ರತಿಯೊಂದು ಮನೆಗಳಿಂದ ಹಣವನ್ನು ಸಂಗ್ರಹ ಮಾಡಿ ಸ್ವಂತವಾಗಿ CCTV ಕ್ಯಾಮರಾಗಳನ್ನು ಅಳವಡಿಸಿದ್ದಾರೆ. ಅಲ್ಲಿ ಆ CCTV ಕ್ಯಾಮರಾಗಳನ್ನು ನಿಗಾ ಮಾಡುವುದಕ್ಕೆ ಒಬ್ಬ ವ್ಯಕ್ತಿಯನ್ನು ಸಹ ಇಟ್ಟಿದ್ದಾರೆ. ಖಾಸಗಿ ಸಂಸ್ಥೆಗಳ ವೈದ್ಯರನ್ನು ಪ್ರೀತಿಯಿಂದ ಕರೆದು ಹೇಳಿ. ಕೈಗಾರಿಕೆಗಳು ಇದ್ದಂತಹವರಿಗೆ ಹೇಳಿದರೆ ಅವರು ಸಹಭಾಗಿತ್ವದಲ್ಲಿ ಸೌಲಭ್ಯಗಳನ್ನು ಒದಗಿಸಬಹುದು. ಬೆಂಗಳೂರಿನ ಪೋಲೀಸ್ ಠಾಣೆಗಳನ್ನು ಎಷ್ಟೋ ಖಾಸಗಿ ಸಂಸ್ಥೆಯವರು ಕಟ್ಟಿ ಕೊಟ್ಟಿದ್ದಾರೆ. ಅದರ ಮೇಲೆ ಇಂತಹವರಿಂದ ಪೋಲೀಸ್ ಠಾಣೆ ನಿರ್ಮಾಣಗೊಂಡಿದೆ ಎಂದು ಫಲಕಗಳಿರುತ್ತವೆ. ಈಗಾಗಲೇ ಸಾಕಷ್ಟು ಚರ್ಚೆ ಮಾಡಿದ್ದೇವೆ. ಖಾಸಗಿ ವೈದ್ಯಕೀಯ ವಿಧೇಯಕ ಇಷ್ಟರಲ್ಲೇ ಬರುತ್ತದೆ. ಆದುದರಿಂದ ಮಾನ್ಯ ಸಚಿವರಿಗೆ ಇಷ್ಟೆ ಸಲಹೆಯನ್ನು ಕೊಡುವುದೇನೆಂದರೆ, ಇದನ್ನು ಪೋಲೀಸರ ವ್ಯಾಪ್ತಿಯಿಂದ ಹೊರಗೆ ಇಟ್ಟು. ಇವತ್ತಿನ ದಿವಸ ರಾಜ್ಯದ ಹಿತದೃಷ್ಟಿಯಿಂದ, ರಾಷ್ಟ್ರದ ಹಿತದೃಷ್ಟಿಯಿಂದ ಈ ಕಾನೂನನ್ನು ಏನು ತಂದಿದ್ದೀರಿ, ಇದರಿಂದ ದೇಶದ್ರೋಹ ಕೆಲಸ ಮಾಡುವವರಿಗೆ ಭಯವಿರುತ್ತದೆ. ಅಂದರೆ, ಯಾವಾಗಲೂ CCTV ಕ್ಯಾಮರಾಗಳು 'on' ಇವೆ ಎಂದರೆ, ಈಗ ಕೋಮುಗಲಭೆಯಾದಂತಹ ಪ್ರದೇಶಗಳಲ್ಲಿ ಕಡ್ಡಾಯವಾಗಿ 24 ಘಂಟೆಗಳು CCTV ಕ್ಯಾಮರಾಗಳನ್ನು ಅಳವಡಿಸಿ, ಅವುಗಳ ಮೇಲೆ ನಿಗಾ ಇಟ್ಟರೆ ಬಹುತೇಕ ನಮ್ಮ ರಾಜ್ಯದಲ್ಲಿ ಕೋಮು ಘರ್ಷಣೆ ಮತ್ತು ಇತರೆ ಘರ್ಷಣೆಗಳ ಸಂಖ್ಯೆ ಕಡಿಮೆಯಾಗುತ್ತದೆಂದು ಎನ್ನುವಂತಹ ಭಾವನೆಯನ್ನು ವ್ಯಕ್ತಪಡಿಸಿ, ಈ ಒಂದು ಮಸೂದೆಯನ್ನು ನಾನು ಬೆಂಬಲಿಸುತ್ತೇನೆಂದು ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಭಾನುಪ್ರಕಾಶ (ವಿಧಾನಸಭಾ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ಬಹಳ ಸಕಾಲಿಕವಾಗಿ ಈ ಕಾನೂನನ್ನು ಪ್ರಸ್ತಾಪ ಮಾಡಿದ್ದಾರೆಂದು ಅನೇಕರು ಹೇಳಿದ್ದಾರೆ. ಆದರೆ, ನಾನು ಇದನ್ನು ಪ್ರಸ್ತಾಪ ಮಾಡಿದಾಗ ನನಗೆ ಅನ್ನಿಸುವುದು ಏನೆಂದರೆ, ಸಾರ್ವಜನಿಕರಿಗೆ ನಮ್ಮ ಕಡೆಯಿಂದ ರಕ್ಷಣೆಯನ್ನು ಕೊಡುವುದಕ್ಕೆ ಆಗುವುದಿಲ್ಲ, ನಿಮ್ಮ ರಕ್ಷಣೆಯನ್ನು ನೀವೇ ಮಾಡಿಕೊಳ್ಳಿ ಎಂದು ಸರ್ಕಾರ ಹೇಳಿದ ಹಾಗೆ ಕಾಣುತ್ತಿದೆ. CCTV ಕ್ಯಾಮರಾಗಳನ್ನು ಕಾನ್ವೆಂಟ್‌ಗಳಿಗೆ ಮತ್ತು ಸ್ಕೂಲ್‌ಗಳಿಗೆ ಕಡ್ಡಾಯವಾಗಿ ಹಾಕುವುದು ಹಾಗೂ ಧಾರ್ಮಿಕ ಸಂಸ್ಥೆಗಳಿಗೆ ಹಾಕುವುದು ಬಹಳ ಹಿಂದೆಯೇ ಚರ್ಚೆಯಾಗಿದೆ ಹಾಗೂ CCTV ಕ್ಯಾಮರಾಗಳನ್ನು ಅಳವಡಿಸಿದೆ. ಸಾಮಾನ್ಯವಾಗಿ ಪ್ರಜಾಪ್ರಭುತ್ವದಲ್ಲಿ ಪೋಲೀಸ್ ಇಲಾಖೆಗೆ ಅಧಿಕಾರವನ್ನು ಕಡಿಮೆ ಮಾಡುತ್ತಾ, ಪ್ರಜಾಪ್ರಭುತ್ವದಲ್ಲಿ ಸಾರ್ವಜನಿಕ ಸಹಭಾಗಿತ್ವ ಜಾಸ್ತಿಯಾಗಿ, ಪೋಲೀಸರು ಮತ್ತು ಸಾರ್ವಜನಿಕರು friendly ಆದರೆ ಅದನ್ನು ನಾಗರಿಕ ಸರ್ಕಾರ ಎಂದು ಹೇಳುತ್ತಾರೆ. ಎಲ್ಲವನ್ನೂ ಸಹ ಕಾನೂನಿನ ಮೂಲಕ ಹತೋಟಿ ಮಾಡುತ್ತೇವೆ ಎನ್ನುವಂತಹ

ಮನೋಭಾವ ಇದೆ. ಈ ತರಹದ ಮನೋಭಾವ ಸರಿಯಲ್ಲ. ಈ ಕಾನೂನಿನ ಹಿಂದೆ ಈ ತರಹದ ಮನೋಭಾವ ಕಾಣುತ್ತಿದೆ. ಏಕೆಂದರೆ, ಸಾರ್ವಜನಿಕರು CCTV ಕ್ಯಾಮರಾಗಳನ್ನು ಹಾಕಬೇಕು, ಈಗ ನೂರು ಜನ ಸೇರುವಂತಹ ಜಾಗದಲ್ಲಿ ಹಾಕಬೇಕು, ನಾಳೆ ಹತ್ತು ಜನ ಸೇರುವಂತಹ ಜಾಗದಲ್ಲಿ ಹಾಕಬೇಕು, ನಾಳೆಯ ದಿವಸ ಅವರುಗಳೇ ತಲೆಗೆ ಕಟ್ಟಿಕೊಂಡು ಓಡಾಡಬೇಕು. ಏಕೆಂದರೆ ಯಾವಾಗ ಅಪರಾಧ ನಡೆಯುತ್ತದೆಂದು ಗೊತ್ತಾಗುವುದಿಲ್ಲ. ಇಲಾಖೆಯಿಂದ ಅದನ್ನು ಹಿಡಿಯುವುದಕ್ಕೆ ಆಗುವುದಿಲ್ಲ. ಅಂತಹ ಸಂದರ್ಭದಲ್ಲಿ ಸಾರ್ವಜನಿಕರೇ ಬಂದು ನಮಗೆ ಮಾಹಿತಿಯನ್ನು ಕೊಡಬೇಕು. ನೀವು ಮಾಹಿತಿ ಕೊಟ್ಟ ಮೇಲೆ ಅದನ್ನು ಪರಿಶೀಲನೆ ಮಾಡುತ್ತೇವೆ. ಈ ರೀತಿಯಾದರೆ ಇದು ಯಾವ ರೀತಿಯ ಸರ್ಕಾರವೆಂದು ನನಗೆ ಅರ್ಥವಾಗುತ್ತಿಲ್ಲ. ಇದರ ಬದಲು ಮಾನ್ಯ ಗೃಹ ಸಚಿವರು ಪೊಲೀಸ್ ಇಲಾಖೆಯ ಆಧುನೀಕರಣಕ್ಕೆ ಒಂದು ಸಾವಿರ ಕೋಟಿ ರೂಪಾಯಿಗಳನ್ನು ನೀಡಿ ಎಂದು ಕೇಳಿದರೆ ಹಾಗೂ ಇನ್ನು ನೂರು Drone ಕ್ಯಾಮರಾಗಳನ್ನು ತೆಗೆದುಕೊಳ್ಳುತ್ತೇವೆ ಎಂದರೆ ನಾವು ಬಹಳ ಸಂತೋಷದಿಂದ ಒಪ್ಪಿಗೆಯನ್ನು ಕೊಡುತ್ತೇವೆ. ಮಾನ್ಯ ಸದಸ್ಯರಾದ ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್) ರವರು ಹೇಳಿದ ಹಾಗೆ ಇಸ್ರೇಲ್ ದೇಶದಲ್ಲಿ ಬಹಳ ಚೆನ್ನಾಗಿ ಮಾಡಿದ್ದಾರೆ. ಆ ರೀತಿಯಾಗಿ ಪ್ರಯೋಗಾತ್ಮಕವಾಗಿ ಏನಾದರೂ ಮಾಡುತ್ತೇವೆ ಒಂದು ಸಾವಿರ ಕೋಟಿ ರೂಪಾಯಿಗಳನ್ನು ನೀಡಿ ಎಂದು ಕೇಳಿದರೆ, ಎಲ್ಲರೂ ಪಕ್ಷಭೇದ ಮರೆತು ಸ್ವಾಗತ ಮಾಡುತ್ತಿದ್ದರೇನೊ ನನಗೆ ಗೊತ್ತಿಲ್ಲ. ಆದರೆ, ಅದರ ಬದಲು ಎಲ್ಲವನ್ನು ಸಾರ್ವಜನಿಕರು ಮಾಡುವುದಾದರೆ, ಮತ್ತೆ ಸಾರ್ವಜನಿಕರೆ ಪೊಲೀಸ್‌ನವರಿಗೆ ಕೊಡುವುದಾದರೆ ನಿಮ್ಮ ಇಲಾಖೆ ಏಕೆ ಬೇಕು? ನಾಳೆಯಿಂದ ಎಲ್ಲಾದರೂ ಘಟನೆ ನಡೆದಾಗ ಪೊಲೀಸ್‌ನವರ ಹತ್ತಿರ ರಕ್ಷಣೆ ಕೊಡುವುದಕ್ಕೆ ಆಗುವುದಿಲ್ಲ. ಈಗ ನೀವು ಕಾನೂನುಗಳನ್ನು ಮಾಡಿದ್ದೀರಿ ಎಡಗಡೆಯೇ ಹೋಗಬೇಕು, ಸರ್ಕಲ್‌ನಲ್ಲಿ ರೌಂಡ್ ಹೊಡೆದು ಹೋಗಬೇಕು. ಈಗ ನಾವು ಅದನ್ನು ಅನುಸರಿಸುತ್ತಿದ್ದೆವೆಯೇ ಅಥವಾ ಇಲ್ಲವೇ; ಈ ತರಹ ಆರ್ಥಿಕವಾಗಿ ಖರ್ಚಿಲ್ಲದೆ ಯಾವುದೇ ಕಾನೂನನ್ನು ಮಾಡಿದರೂ ಕೂಡ ಯಾವುದೇ ನಾಗರಿಕರು ಅದನ್ನು ಅನುಸರಿಸುವುದಕ್ಕೆ ಸಾಧ್ಯವಿದೆ. ಈಗ ದೇವಸ್ಥಾನಗಳಿಗೆ ಇನ್ನೊಂದು ಮತ್ತೊಂದು ಎಂದು ಹೇಳುತ್ತಿರಲ್ಲ, ಈಗ ಶಿವರಾತ್ರಿ ಹಬ್ಬ ನಡೆಯುತ್ತದೆ, ಒಂದು ಜಾತ್ರೆ ನಡೆಯುತ್ತದೆ, ಒಂದು ದೊಡ್ಡ ಕಾರ್ಯಕ್ರಮ ನಡೆಯುತ್ತದೆ, ಅಲ್ಲಿ ನೂರಾರು ಜನ ಸೇರಿಕೊಂಡು ಅವತ್ತಿನ ದಿವಸ ಕಾರ್ಯಕ್ರಮವನ್ನು ಮಾಡುತ್ತಾರೆ. ಈ ತರಹ ಎಲ್ಲವನ್ನು ಮಾಡಿಕೊಂಡು ಹೋಗಬೇಕಾದರೆ, ಎಲ್ಲಿಂದ ದುಡ್ಡನ್ನು ತರಬೇಕೆಂದು ಯಾರಾದರೂ ಹೇಳಿ ನೋಡೋಣ. ಯಾರೋ ಮುಂದೆ ನಿಂತಿಕೊಳ್ಳುತ್ತಾರೆ, ಯಾವುದೋ ಜಾತ್ರೆ ನಡೆಯುತ್ತದೆ. ಸಂತೆಗಳು ನಡೆಯುತ್ತವೆ, ಅಲ್ಲಿ ಮಾರಾಟ ಮಾಡುವುದಕ್ಕೆ ಸಂತೆಗಳು ನಡೆಯುತ್ತವೆ. ಅವರು ಪುಟ್ಟಿಯಲ್ಲಿ ಹೊತ್ತುಕೊಂಡು ಬರುತ್ತಾರೆ. ಪುಟ್ಟಿಯಲ್ಲಿ ಹೊತ್ತುಕೊಂಡು ಬಂದರೆ ಏನಾಗುತ್ತದೆ ನಾನು ಹೇಳುವುದಿಲ್ಲ. ಪೊಲೀಸ್ ಇಲಾಖೆಗೆ ಕೊಟ್ಟರೆ ಏನಾಗುತ್ತದೆಂದು ಹೇಳುವುದಿಲ. ನನಗೆ ಪೊಲೀಸ್‌ನವರ ಬಗ್ಗೆ ಆ ತರಹದ ಅಗೌರವವಿಲ್ಲ. ಆದರೆ,

ಕಾನೂನನ್ನು ದುರುಪಯೋಗ ಮಾಡಿಕೊಳ್ಳುವುದಕ್ಕೆ ಒಂದು ಅವಕಾಶ. ಸಂತೆಯಲ್ಲಿ ಪುಟ್ಟಿಯನ್ನು ಹೊತ್ತುಕೊಂಡು ಬಂದು ಅಲ್ಲಿ ಸುಮಾರು ಮೂರ್ನಾಲ್ಕು ಗಂಟೆ ಸೇರುತ್ತಾರೆ ಹಾಗಾದರೆ ಅಲ್ಲಿ ಹಾಕಬೇಕೆ ಅಥವಾ ಬೇಡವೇ? ಅದರಲ್ಲಿ clarity ಇಲ್ಲ. ಅದರ ಬದಲು ಸರ್ಕಾರ ಒಂದು ಯೋಜನೆಯನ್ನು ಮಾಡಿ, ಸರ್ಕಾರದ ಕಡೆಯಿಂದ ಎಲ್ಲೆಲ್ಲಿ ಮಾಡುತ್ತಿರೆಂದು ಹೇಳಿ. ಸರ್ಕಾರದ ಕಡೆಯಿಂದ ಮಾಡಿದ ಮೇಲೆ, ನೋಡಿ ಈ ತರಹ ಮಾಡಿದ್ದೇವೆ, ನೀವೂ ಕೂಡ ಸಾರ್ವಜನಿಕ ಸಹಭಾಗಿತ್ವ ಸಿಕ್ಕಿದರೆ ಮಾಡುತ್ತೇವೆಂದು ಹೇಳಿದರೆ ಒಳ್ಳೆಯದಾಗುತ್ತದೆ. ದಯವಿಟ್ಟು ಮಾನ್ಯ ಗೃಹಸಚಿವರೆ, ಈ ಕಾನೂನನ್ನು ಅನುಮೋಧನೆ ಮಾಡಬೇಕೆಂದು ಒತ್ತಾಯ ಮಾಡಬೇಡಿ.

ಎರಡನೆಯದಾಗಿ ಇದು ವಿಧಾನಸಭೆಯಲ್ಲಿ ಅನುಮೋದನೆಯಾಗಿದೆ ಎಂದು ನನಗೆ ಗೊತ್ತಿದೆ, ಪ್ರಜಾಪ್ರಭುತ್ವದಲ್ಲಿ ಯಾರೇ ಅಧಿಕಾರದಲ್ಲಿ ಇದ್ದರೂ ವಿಧಾನ ಪರಿಷತ್ತಿನಲ್ಲಿ ಆ ವಿಧೇಯಕ ಚರ್ಚೆ ಮಾಡಲೆಂದು ಬಿಡುತ್ತಾರೆ ಎಂದು ನನಗೆ ಅನಿಸುತ್ತದೆ. ನಾನೇನು ಅವಹೇಳನ ಮಾಡುತ್ತಿಲ್ಲ. ವಿಧಾನಸಭೆಯಲ್ಲಿ ಅನುಮೋದನೆ ಆಗದೆ ಇದ್ದರೆ, ವಿಧಾನ ಪರಿಷತ್ತಿನಲ್ಲಿ ಅ ವಿಧೇಯಕ ತಿರಸ್ಕಾರಗೊಂಡರು, ಅದನ್ನು ಮತ್ತೆ ವಿಧಾನಸಭೆಯಲ್ಲಿ ಅನುಮೋದನೆ ಮಾಡಿಕೊಳ್ಳುತ್ತೇವೆ ಎನ್ನುವುದು ಇದ್ದರೆ, ನಾವು ಇದರ ಬಗ್ಗೆ ಏನನ್ನು ಹೇಳುವುದಿಲ್ಲ ಈ ಕ್ರಮ ಸರಿಯಲ್ಲವೆಂದು. ಇದರಲ್ಲಿ ಮೂಲಭೂತವಾಗಿ ಪೋಲೀಸ್‌ನವರಿಗೆ ಜಾಸ್ತಿ ಅಧಿಕಾರ ಕೊಡುವಂತಹ ಕಾನೂನನ್ನು ಏನು ಜಾರಿಗೆ ತಂದಿದ್ದೀರಿ, ಇದು ಪ್ರಜಾಪ್ರಭುತ್ವದಲ್ಲಿ ಒಳ್ಳೆಯ ಲಕ್ಷಣವಲ್ಲ. ತಾವು ದಯವಿಟ್ಟು ಇದನ್ನು ಪರಿಶೀಲನೆ ಮಾಡಿ. ಇದನ್ನು ಸಚಿವರು ಬಹಳ ಸದ್ಭಾವನೆಯಿಂದ ತೆಗೆದುಕೊಂಡಿದ್ದಾರೆ, ಅದನ್ನು ನಾನು ಇಲ್ಲವೆಂದು ಹೇಳುವುದಿಲ್ಲ. ಸಾರ್ವಜನಿಕರ ರಕ್ಷಣೆ ಸರ್ಕಾರದ ಹೊಣೆಯಾಗಿರುತ್ತದೆ. ಇವತ್ತಿನ ದಿವಸ ಕುಡಿಯುವ ನೀರನ್ನು ಪಡೆದುಕೊಳ್ಳುವುದು ಮೂಲಭೂತ ಹಕ್ಕು ಎಂದು ನಮ್ಮ ಸ್ನೇಹಿತರೊಬ್ಬರು ಹೇಳಿದರು. ಸುಮಾರು 60-70 ವರ್ಷದಲ್ಲಿ ನಾವು ಇನ್ನೂ ಅದನ್ನು ಕೊಡುವುದಕ್ಕೆ ಆಗಿಲ್ಲ. ಯಾವಾಗ ಕೋಡುತ್ತಿರೆಂದರೆ, ಇನ್ನೂ ಸರ್ಕಾರದ ಬಳಿ ಉತ್ತರವಿಲ್ಲ. ಈಗ ಆದ್ಯತೆಯ ಮೇಲೆ ಮೂರ್ನಾಲ್ಕು ವರ್ಷದಲ್ಲಿ ಮೂಲಭೂತ ಹಕ್ಕಾದಂತಹ ಕುಡಿಯುವ ನೀರನ್ನು ಕೊಡುತ್ತೇವೆಂದು ಹೇಳಿ. ಆಮೇಲೆ ಉಳಿದಿರುವಂಥದ್ದಕ್ಕೆ ಹೋಗಿ. ಅದರ ಬದಲು ಈ ತರಹ ಎಲ್ಲವನ್ನೂ ಸಾರ್ವಜನಿಕರೆ ಮಾಡುವುದಾದರೆ, ಅದರ ಮೇಲೆ ಕಾನೂನನ್ನು ತಂದು ಅದನ್ನು ಅನುಮೋದನೆ ಮಾಡಿಕೊಂಡರೆ, ಅದರಿಂದ ನಮಗೆ ಏನು ಲಾಭವಾಗುತ್ತದೆ. ಸಾರ್ವಜನಿಕ ಸುರಕ್ಷತೆಯನ್ನು ಹೆಚ್ಚಿಸಲು ಕರಡು ಮಸೂದೆಯ ‘ಡಿ’ ನಲ್ಲಿ “ಕಾಲಕಾಲಕ್ಕೆ ಸರ್ಕಾರ ಸೂಚಿಸುವ ಇತರೆ ಯಾವುದೇ ಸಲಕರಣೆ” ತಮಗೂ ಗೊತ್ತಿರುವಂತೆ ದೂರವಾಣಿ ಬಂತು, ದೂರವಾಣಿಯಿಂದ ಮೊಬೈಲ್ ಬಂತು ಆಮೇಲೆ ಅದನ್ನು ದಿನದಿಂದ ದಿನಕ್ಕೆ ಬದಲಾವಣೆ ಮಾಡುತ್ತಿರುವುದು, ಇವತ್ತಿನ ದಿವಸ 4ಜಿ ನೆಟ್‌ವರ್ಕ್ ಇದೆ. ಅದು ಆದ ಮೇಲೆ 5ಜಿ, 6ಜಿ ಆಮೇಲೆ 7ಜಿ ನೆಟ್‌ವರ್ಕ್ ದಿನದಿಂದ ದಿನಕ್ಕೆ ಬದಲಾವಣೆಯಾಗುತ್ತದೆ. ಅದರ ಬೆಲೆ ಎಷ್ಟು ಎಂದು ನಿಮಗೆ ಗೊತ್ತಿದೆ. ಇದನ್ನು ಪ್ರತಿ ಸಂಸ್ಥೆಯವರು ಹಾಕಬೇಕೆಂದು ಬಯಸಿದರೆ, ಈಗ ಸುಮಾರು ಹತ್ತು

ಸಾವಿರ ರೂಪಾಯಿಗಳನ್ನು ಹಾಕಿಕೊಂಡು ಮಾಡಿರುತ್ತಾರೆ. ನಾಳೆ ಬದಲಾವಣೆಯಾಗುತ್ತದೆ. ಆ footage ಸಿಗುವುದಿಲ್ಲವೆಂದು ಪೋಲೀಸ್‌ನವರು ಹೇಳುತ್ತಾರೆ. ಪೋಲೀಸ್‌ನವರು ವರದಿ ಕೊಡಬೇಕು. ಪೋಲೀಸ್‌ನವರೇ seal ಮಾಡಬೇಕು. ಅಲ್ಲಿ ಅವರ ಮೇಲಾಧಿಕಾರಿಗಳು ಅಂತಿಮವಾದಂತಹ ತೀರ್ಪನ್ನು ಕೊಡುವುದು. Clarification ಬೇಕೆಂದರೆ ಹೈಕೋರ್ಟ್‌ಗೆ ಹೋಗಬಹುದೆಂದು ಮಾನ್ಯ ಸದಸ್ಯರಾದ ಶ್ರೀ ವಿ.ಎಸ್.ಉಗ್ರಪ್ಪನವರು ಹೇಳಿದರು ಅದು ನನಗೆ ಗೊತ್ತಿಲ್ಲ. ಇದರಲ್ಲಿ ಅಂತಿಮವಾದಂತಹ ಅಧಿಕಾರ ಪೋಲೀಸ್ ಮಹಾನಿರ್ದೇಶಕರಿಗೆ ಇದೆ. ಅವರೆ ನಿರ್ದೇಶನ ಕೊಡುವುದಾದರೆ ನ್ಯಾಯಾಂಗ ಏಕೆ ಬೇಕು? ಎಲ್ಲವನ್ನೂ ಸಹ ಪೋಲೀಸ್‌ನವರಿಗೆ ಅಧಿಕಾರ ಕೊಟ್ಟುಬಿಡಿ. ಹಾಗಾಗಿ ನಾನು ಮಾನ್ಯ ಗೃಹ ಸಚಿವರಲ್ಲಿ ಮತ್ತು ಸರ್ಕಾರಕ್ಕೆ ಮನವಿಯನ್ನು ಮಾಡುವುದೇನೆಂದರೆ, ಇದನ್ನು ವಾಪಸ್ಸು ತೆಗೆದುಕೊಳ್ಳಿ. ನೀವು ಮಾಡುವಂಥದ್ದು ಎಲ್ಲವನ್ನೂ ಮಾಡಿ, ಆ ವಿಧೇಯಕವನ್ನು ತೆಗೆದುಕೊಂಡು ಬನ್ನಿ, ಎಲ್ಲರಿಗೂ ರಕ್ಷಣೆ ಕೊಡುವುದಕ್ಕೆ ನಾವು ಇದನ್ನು ಮಾಡಿದ್ದೇವೆಂದು. ಅದು ಆದ ಮೇಲೆ ಸಾರ್ವಜನಿಕರ ಹಿತದೃಷ್ಟಿಯಿಂದ ಏನೇನೂ ಮಾಡಬೇಕೆಂದು ಅಪೇಕ್ಷೆ ಮಾಡುತ್ತಿರೋ, ಅಂತಹ ವಿಧೇಯಕವನ್ನು ದಯವಿಟ್ಟು ತನ್ನಿ. ಅದರ ಹೊರತು, ಈ ವಿಧೇಯಕವನ್ನು ತಾವು ವಾಪಸ್ಸು ಪಡೆಯಬೇಕು, ಇದಕ್ಕೆ ನನ್ನ ವಿರೋಧವಿದೆ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಡಾ:ಜಯಮಾಲ ರಾಮಚಂದ್ರ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಅವಕಾಶ ನೀಡಿರುವುದಕ್ಕೆ ಧನ್ಯವಾದಗಳು. ಈಗಾಗಲೇ ಎಲ್ಲಾ ಗೌರವಾನ್ವಿತ ಸದಸ್ಯರುಗಳು ಸುರಕ್ಷತೆಯ ವಿಧೇಯಕದ ಬಗ್ಗೆ ಬಹಳಷ್ಟು ಒಳ್ಳೆಯ ಮಾತುಗಳನ್ನು ಆಡಿದರು. ಕೆಲವು ವಿಷಯಗಳ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯಬೇಕೆನಿಸಿತು. ಇದೇ ಸದನದಲ್ಲಿ ನಾವುಗಳು ಬಹಳಷ್ಟು ಸಲ ಮಕ್ಕಳ ಮೇಲೆ ಮತ್ತು ಮಹಿಳೆಯರ ಮೇಲೆ ಅತ್ಯಾಚಾರವಾದಾಗ CCTV ಕ್ಯಾಮರಾಗಳ ಅವಶ್ಯಕತೆ ಎಷ್ಟು ಇದೆ ಎಂಬುದರ ಬಗ್ಗೆ ಪಕ್ಷಭೇದವನ್ನು ಮರೆತು ಎಲ್ಲರೂ ಸಹ ಮಾತನಾಡಿದ್ದೇವೆ. ಕಡ್ಡಾಯವಾಗಿ CCTV ಕ್ಯಾಮರಾಗಳನ್ನು ಹಾಕಬೇಕೆಂದು ಹೇಳಿ ಮೇಜುಗಳನ್ನು ತಟ್ಟಿದ್ದೇವೆ. ಆದರೆ, time lapse ಮನುಷ್ಯನ ನೆನಪುಗಳು ಹೇಗೆ ಮರೆಯಾಗುತ್ತದೆ ಎಂಬುದಕ್ಕೆ ನನಗೆ ಇಲ್ಲಿ ಕುಳಿತಾಗ ಎಲ್ಲೋ ಒಂದು ಕಡೆ ಆತಂಕವಾಗುತ್ತದೆ. ಅಂದರೆ ಒಂದು ವಿಧೇಯಕ ಇಷ್ಟು ತಡವಾಗಿ ಬರುವಾಗ, ಮನುಷ್ಯನ ನೆನಪುಗಳು ಕೂಡ ಇಷ್ಟೊಂದು ಮಾಸುತ್ತವೆಯೇ? ಈಗ ಒಂದು ವಿಚಾರವನ್ನು ಸರ್ಕಾರದ ಗಮನಕ್ಕೆ ತರುತ್ತೇನೆ, ಬೆಂಗಳೂರಿನ ಒಂದು ಪ್ರತಿಷ್ಠಿತ ಆಸ್ಪತ್ರೆಗೆ ಅತ್ಯಾಚಾರ ತಡೆ ಸಮಿತಿ ಅಧ್ಯಕ್ಷರಾದ ಶ್ರೀ ವಿ.ಎಸ್. ಉಗ್ರಪ್ಪನವರು ಇಲ್ಲೆ ಇದ್ದಾರೆ, ನಾನು ಕೂಡ ಆ ಸಮಿತಿಯಲ್ಲಿ ಸದಸ್ಯರಾಗಿದ್ದೇನೆ, ಅವರ ಜೊತೆಯಲ್ಲಿ ಆ ಆಸ್ಪತ್ರೆಗೆ ಹೋಗಿದ್ದೆ. ಮದುವೆಯಾಗಿರತಕ್ಕಂತಹ ಮಹಿಳೆಯು ಡೆಂಗ್ಯೂ ಜ್ವರ ಬಂದು ನರಳುತ್ತಿದ್ದು ತೀವ್ರ ನಿಗಾ ಘಟಕದಲ್ಲಿ ಇದ್ದಂತವಳ ಮೇಲೆ ಅತ್ಯಾಚಾರ ಮಾಡಿರುವಂಥದ್ದು, ಚಿಕ್ಕ-ಚಿಕ್ಕ

ಮಕ್ಕಳು ಶೌಚಾಲಯಕ್ಕೆ ಹೋಗಿದಾಗ, ಅಲ್ಲಿ ಇರುವಂತಹವರು ಆ ಮಕ್ಕಳ ಮೇಲೆ ಅತ್ಯಾಚಾರ ಮಾಡಿರುವಂಥದ್ದು ಮತ್ತು ಅವರಿಗೆ ಕಿರುಕುಳ ಕೊಟ್ಟಿರುವಂಥದ್ದು ಇವುಗಳೆಲ್ಲವೂ ಸಹ ನಮ್ಮ ನೆನಪಿನಿಂದ ಮಾಸಿ ಹೋಗುತ್ತಿದೆಯೇ? ಇದು ಮಾಸಿ ಹೋಗಬಾರದೆಂದು ನಾನು ಮಾನ್ಯ ಸದಸ್ಯರ ಮುಂದೆ ಕೇಳುತ್ತಿದ್ದೇನೆ.

**(ಮುಂದು...)**

(996)15.11.2017-04.50-ಎಲ್‌ಎಲ್-ಆರ್‌ಎನ್

**(ಶ್ರೀಮತಿ ಜಯಮಾಲ):- (ಮುಂದುವರೆದಿದ್ದು...)**

ಈ ಸದನದಲ್ಲಿ ಒಳ್ಳೆಯ ಸಿ.ಸಿ.ಟಿ.ವಿ. ಕ್ಯಾಮೆರಾಗಳನ್ನು ಹಾಕುವ ಬಗ್ಗೆ ಚರ್ಚೆಯಾಗಲಿ. ನಿಜಕ್ಕೂ ಹೆಚ್ಚು ಸ್ಪಷ್ಟರೂಪತೆ(High Definition) ಕ್ಯಾಮೆರಾಗಳನ್ನು ಯಾರೂ ಹಾಕುವುದಿಲ್ಲ. 6 ತಿಂಗಳನಿಂದ 1 ವರ್ಷದವರೆಗೆ ಆ ಕ್ಯಾಮೆರಾದ ಫೂಟೇಜ್ (ವಿಡಿಯೋ ತುಣುಕನ್ನು) ಇಡಬೇಕೆಂದು ಹೇಳುತ್ತಾರೆ. ಆ ರೀತಿಯ ವ್ಯವಸ್ಥೆ ನಮ್ಮಲ್ಲಿ ಎಲ್ಲಿಯೂ ಇರುವುದಿಲ್ಲ. ಅಷ್ಟು ದೊಡ್ಡ ದೊಡ್ಡ ಕ್ಯಾಮೆರಾಗಳನ್ನು ಹಾಕುವುದಕ್ಕೆ ಯಾರಿಗೂ ಸಾಧ್ಯವಿಲ್ಲ. ಇತ್ತೀಚೆಗೆ ನಮ್ಮ ಮನೆಯ ಮುಂದಿನ ರಸ್ತೆಯಲ್ಲಿ 6 ಗಂಟೆ 20 ನಿಮಿಷ ಸಮಯದಲ್ಲಿ ಒಂದು ಹುಡುಗಿ ಹೋಗುತ್ತಿರುವಾಗ, ಸುಮಾರು 18 ರಿಂದ 20 ವರ್ಷ ಪ್ರಾಯದ ಹುಡುಗ ಆಕೆಯ ಬಳಿ ಬಂದು ಕೈಯಲ್ಲಿರುವುದನ್ನು ಕೇಳಿದ. ಆದರೆ, ಆಕೆ ಕತ್ತಿನಲ್ಲಿ ತಾಳಿ ಅಥವಾ ಇನ್ನಿತರ ಯಾವುದೇ ಆಭರಣ ಹಾಕಿರಲಿಲ್ಲ. ನಂತರ, ಆತ ಆಕೆಯ ಹೊಟ್ಟೆಯ ಭಾಗಕ್ಕೆ ಚಾಕುವಿನಿಂದ ಇರಿದು ಹಾಕಿದನು. ನನ್ನ ಮನೆಯ ಮುಂದೆ ಹೊರಗಡೆ ಹಾಕಿರುವಂತಹ ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ಆ ವಿಡಿಯೋ ದಾಖಲಾಗಿದೆ. ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ಆ ವಿಡಿಯೋ ದಾಖಲಾಗಿದ್ದರಿಂದಲೇ ತಾನೇ ಆತನನ್ನು ಹಿಡಿಯಲಿಕ್ಕೆ ಆಗಿದ್ದು? ಇಂತಹ ಹೆಚ್ಚು ಸ್ಪಷ್ಟರೂಪತೆ (High Definition) ಇರುವ ಕ್ಯಾಮೆರಾಗಳನ್ನು ಇಸ್ರೇಲ್ ದೇಶದಲ್ಲಿ ಅಳವಡಿಸಿದ್ದಾರೆಂದು ನಾವು ಹೇಳುತ್ತೇವೆ. ಈ ರೀತಿಯ ವ್ಯವಸ್ಥೆಯನ್ನು ನಮ್ಮ ರಾಜ್ಯದಲ್ಲಿ ಅಳವಡಿಸಲು ಹೊಸ ತಂತ್ರಜ್ಞಾನವನ್ನು ಬಳಸಿಕೊಳ್ಳಬೇಕೆಂದು ನನಗನ್ನಿಸುತ್ತದೆ. ಆದರೆ, ಹೆಚ್ಚು ಸ್ಪಷ್ಟರೂಪತೆ (High Definition) ಇರುವ ಕ್ಯಾಮೆರಾಗಳನ್ನು ಬಳಸಿಕೊಳ್ಳಬೇಕು ಮತ್ತು ಫೂಟೇಜ್ ಅನ್ನು ಹೆಚ್ಚು ಕಾಲದವರೆಗೆ ಶೇಖರಣೆ ಮಾಡಿಕೊಳ್ಳಬೇಕು, ಈ ವಿಚಾರದಲ್ಲಿ ನಾನು ಒಂದು ಸತ್ಯವನ್ನು ಹೇಳುವುದಕ್ಕೆ ಬಯಸುತ್ತೇನೆ. ಅದೇನೆಂದರೆ, ಈ ಫೂಟೇಜ್‌ಗಳನ್ನು ಇವತ್ತಿನ ದಿವಸ ಯಾರು ಮಾನಿಟರಿಂಗ್ ಮಾಡುತ್ತಾರೆ, ಯಾರು ಅದರ ನಿರ್ವಹಣೆಯನ್ನು ನೋಡುತ್ತಾರೆ ಎನ್ನುವುದು ನನ್ನ ಪ್ರಶ್ನೆಯಾಗಿದೆ ಏಕೆಂದರೆ, ಕಳ್ಳ ಏನು ಮಾಡುತ್ತಾನೆಂದರೆ, ಕೃತ್ಯ ನಡೆಸಿದ ದಿನದ ಫೂಟೇಜ್‌ನ ದಿನಾಂಕವನ್ನೇ ಆತ ಅಳಿಸಿ ಹಾಕುತ್ತಾನೆ. ಅಂತಹ ಅಪರಾಧಕ್ಕೆ ಆತನಿಗೆ ಏನಾದರೂ ಶಿಕ್ಷೆ ವಿಧಿಸುವಂತಹ ಕ್ಲಾಸ್ ಹಾಕುತ್ತಾರೆಯೇ? ಆ

ಫೂಟೇಜ್ ಅಳಿಸಿ ಹಾಕಿದರೆ ಯಾವ ಶಿಕ್ಷೆ ಎಂದು ಹಾಕುತ್ತಾರೆಯೇ? ಅಂದರೆ, ವ್ಯವಸ್ಥಿತವಾಗಿ, ಯೋಜನೆ ಹಾಕಿಕೊಂಡು ಕೃತ್ಯ ಮಾಡಿದರೆ ಅಥವಾ ಇದನ್ನು ಸಂಪೂರ್ಣವಾಗಿ ಬಿಟ್ಟರೆ ಏನಾಗುತ್ತದೆ? ಇಂತಹ ವ್ಯವಸ್ಥೆ ಬೇಕಾಗಿದೆಯೇ? ಇಸ್ರೇಲ್ ದೇಶ ಇದಕ್ಕೆ ಮಾದರಿಯಾಗುವುದಾದರೆ ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಈ ಒಂದು ಫೂಟೇಜ್‌ನಿಂದ ನಮ್ಮ ಮಕ್ಕಳ ಮತ್ತು ಮಹಿಳೆಯರ ರಕ್ಷಣೆಗಳನ್ನು ನಾವು ನೋಡಬೇಕಾಗುತ್ತದೆ. ನಾಡಿದ್ದು, ಇದೇ ಸದನದಲ್ಲಿ ಈ ವಿಚಾರದ ಬಗ್ಗೆ ನಾನು ಇನ್ನು ವಿಸ್ತೃತವಾಗಿ ಮಾತನಾಡುತ್ತೇನೆ. ಸಾರಿಗೆ ಬಸ್ಸುಗಳಲ್ಲಿ ಈ ಸಿ.ಸಿ.ಟಿ.ವಿ. ಕ್ಯಾಮೆರಾಗಳನ್ನು ಹಾಕಬೇಕಾಗುತ್ತದೆ. ಇವೆಲ್ಲವನ್ನು ಕೂಡ ನಾವು ಮನುಷ್ಯನ ರಕ್ಷಣೆಯ ದೃಷ್ಟಿಯಿಂದ ಹಾಕಬೇಕಾಗುತ್ತದೆ. ಇದರ ಬಗ್ಗೆ ಚಿಂತನೆ ಮಾಡಬೇಕೆಂದು ಹೇಳಿ, ಈ ವಿಧೇಯಕವನ್ನು ನಾನು ಗೌರವಿಸುತ್ತೇನೆ. ಇಂತಹ ವಿಧೇಯಕಗಳು ಬರಬೇಕು, ಅಗತ್ಯವೆನಿಸಿದರೆ ಈ ವಿಧೇಯಕದಲ್ಲಿ ಸ್ವಲ್ಪ ಮಾರ್ಪಾಡುಗಳನ್ನು ಮಾಡಿಕೊಳ್ಳಲಿ. ಆದರೆ, ಇದರಿಂದಾಗಿ ಯಾರನ್ನೂ ಹಿಂಸಿಸಬಾರದು. ಇದು ಸಾರ್ವಜನಿಕರ ರಕ್ಷಣೆಯ ಉದ್ದೇಶದಿಂದ ತಂದಿರುವಂತಹ ವಿಧೇಯಕ. ಆದುದರಿಂದ, ಈ ವಿಧೇಯಕವನ್ನು ನಾನು ಸ್ವಾಗತ ಮಾಡುತ್ತೇನೆ.

**ಶ್ರೀ ಕಾಂತರಾಜು(ಬಿ.ಎಂ.ಎಲ್):-** ಮಾನ್ಯ ಸಭಾಪತಿಯವರೇ, ಸಿ.ಸಿ.ಟಿ.ವಿ. ಕ್ಯಾಮೆರಾದ ಬಗ್ಗೆ ಸರ್ಕಾರ ತಂದಿರುವ ವಿಧೇಯಕವನ್ನು ನಾನು ಸ್ವಾಗತ ಮಾಡುತ್ತೇನೆ. ಪೋಲೀಸ್ ಇಲಾಖೆಯವರ ಹಿಡಿತಕ್ಕೆ ಕೊಟ್ಟರೆ ಅದು ಎಷ್ಟರಮಟ್ಟಿಗೆ ನಡೆಯುತ್ತದೆಯೆಂದು ನಾವು ಯೋಚನೆ ಮಾಡಬೇಕು. ನಾವು ಹೇಳುವುದು ಸರ್ಕಾರ ನೀವೇ ಸ್ವಂತ ಜವಾಬ್ದಾರಿ ತೆಗೆದುಕೊಂಡು ಹೆಚ್ಚು ಸ್ಪಷ್ಟರೂಪದ High Definition ಕ್ಯಾಮೆರಾ ಹಾಕಬೇಕಾದರೆ ಅದಕ್ಕೆ ಅಧಿಕ ವೆಚ್ಚವಾಗುತ್ತದೆ. ಅವುಗಳ ನಿರ್ವಹಣೆ ಮಾಡುವುದು ಬಹಳ ಕಷ್ಟ. ಜೊತೆಗೆ, 6 ತಿಂಗಳಿನಿಂದ 1 ವರ್ಷದವರೆಗೆ ಸದರಿ ಕ್ಯಾಮೆರಾದ ವಿಡಿಯೋ ತುಣುಕುಗಳನ್ನು ಶೇಖರಣೆ ಮಾಡಬೇಕೆಂದು ಹೇಳಿದ್ದಾರೆ. ಅದು ಬಹಳ ಕಷ್ಟ. ಅದು ಸಾಧ್ಯವಾಗುವುದಿಲ್ಲ. ಇಂತಹ ಕ್ಯಾಮೆರಾ ಹಾಕಬೇಕೆಂದು ಆದೇಶ ನೀಡುವುದು ಸರಿ ಕಾಣುವುದಿಲ್ಲವೆಂದು ನನಗನ್ನಿಸುತ್ತದೆ. ಏಕೆಂದರೆ, ವರ್ಷದಿಂದ ವರ್ಷಕ್ಕೆ ತಂತ್ರಜ್ಞಾನ ಬದಲಾವಣೆಯಾಗುತ್ತದೆ, ದರ ಕೂಡ ಕಡಿಮೆಯಾಗುತ್ತದೆ. ಮಾರ್ಕೆಟಿಂಗ್ ಕೂಡ ಈಗ ಪೈಪೋಟಿಯಲ್ಲಿದೆ. ಸರ್ಕಾರ ಹೆಚ್ಚು ಸ್ಪಷ್ಟರೂಪದ High Definition ಕ್ಯಾಮೆರಾ ಹಾಕಬೇಕೆಂದು ಬೇಕಾದರೆ ನಿಯಮ ಮಾಡಿಕೊಳ್ಳಲಿ. ನಮ್ಮ ಮಾನ್ಯ ಸದಸ್ಯರು ತಿಳಿಸಿದ ಹಾಗೆ ಮೊದಲು ಈ ರೀತಿಯ ಕ್ಯಾಮೆರಾಗಳನ್ನು ಸರ್ಕಾರಿ ಕಛೇರಿಗಳಲ್ಲಿ ಹಾಕಬೇಕು. ಸರ್ಕಾರದವರು ಬೆಂಗಳೂರಿನ ಮುಖ್ಯ ರಸ್ತೆಗಳಲ್ಲಿ ಹಾಕಿರುವಂತಹ ಕ್ಯಾಮೆರಾಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ. ಅದನ್ನು ಮೊದಲು ಸರಿಪಡಿಸಬೇಕು. ಏಕೆಂದರೆ, ಪತ್ರಕರ್ತೆ ಗೌರಿ ಲಂಕೇಶ್‌ರವರ ಹತ್ಯೆ ಪ್ರಕರಣದಲ್ಲಿ ಮುಖ್ಯರಸ್ತೆಯಲ್ಲಿರುವ ಕ್ಯಾಮೆರಾದಿಂದ ಹಂತಕ ಬೈಕ್‌ನಲ್ಲಿ ಹೋಗುತ್ತಿರುವುದನ್ನು ಪರಿಶೀಲಿಸಿದರೆ ಅದರಲ್ಲಿ ಹಂತಕನ

ಗುರುತು ಸರಿಯಾಗಿ ಗೋಚರವಾಗುತ್ತಿಲ್ಲ. ಆದುದರಿಂದ, ಸರ್ಕಾರ ಮೊದಲು ಕೆಲಸ ಮಾಡಿ, ಆ ನಂತರ ವಿಧೇಯಕವನ್ನು ತರಬೇಕು.

ಇನ್ನೊಂದು ವಿಚಾರವೆಂದರೆ, ನಮ್ಮ ಕರ್ನಾಟಕದಲ್ಲಿ ರಾಜ್ಯದಲ್ಲಿ ರಾಷ್ಟ್ರೀಯ ಹೆದ್ದಾರಿಗಳು ಅಧಿಕವಾಗಿವೆ. ಅವುಗಳನ್ನು ಗಮನಿಸಿದರೆ, ಸುಂಕ ವಸೂಲಾತಿ ಕೇಂದ್ರಗಳಲ್ಲಿ ಹಣ ವಸೂಲು ಮಾಡುವ ಬಳಿ ಕ್ಯಾಮೆರಾಗಳನ್ನು ಅಳವಡಿಸಿರುವುದು ಬಿಟ್ಟರೆ ಬೇರೆ ಎಲ್ಲಿಯೂ ಕಾಣುವುದಿಲ್ಲ. ಹೆದ್ದಾರಿಗಳಲ್ಲಿ ಇಷ್ಟು ಕಿಲೋ ಮೀಟರ್ ದೂರಕ್ಕೆ ಒಂದು ಕ್ಯಾಮೆರಾ ಹಾಕಬೇಕೆಂದು ನಿಯಮವಿದೆ. ಅದರಲ್ಲಿಯೂ ಅತಿ ಹೆಚ್ಚು ಸ್ಪಷ್ಟರೂಪದ High Definition ಕ್ಯಾಮೆರಾ ಹಾಕಬೇಕು. ಅದರಲ್ಲಿ ವಾಹನಗಳ ವೇಗ ಮತ್ತು ಆ ವಾಹನಗಳ ನಂಬರ್ ಪ್ಲೇಟ್ ಕೂಡ ದಾಖಲಾಗುತ್ತದೆ. ಮೊದಲು ಹೆದ್ದಾರಿ ವ್ಯಾಪ್ತಿಯಲ್ಲಿ ಕ್ಯಾಮೆರಾಗಳನ್ನು ಹಾಕಬೇಕೆಂದು ಕಾನೂನು ಮಾಡಿ, ಈಗ ತಂದಿರುವ ವಿಧೇಯಕವನ್ನು ಖಂಡಿತವಾಗಿ ನಾನು ಸ್ವಾಗತ ಮಾಡುತ್ತೇನೆ. ಆದರೆ, ಅದರಲ್ಲಿ ಕೆಲವೊಂದು ಮಾರ್ಪಾಡುಗಳನ್ನು ಮಾಡಿ ನಂತರ ಮಂಡನೆ ಮಾಡಬೇಕೆಂದು ನಾನು ಮಾನ್ಯ ಗೃಹ ಸಚಿವರಲ್ಲಿ ಮನವಿ ಮಾಡುತ್ತೇನೆ.

**ಶ್ರೀ ರಾಮಚಂದ್ರಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ವಿಧೇಯಕದಲ್ಲಿರುವ ನಿಯಮದ ವ್ಯಾಪ್ತಿ ಇಡೀ ರಾಜ್ಯಕ್ಕೆ ಇದೆಯೇ ಅಥವಾ ಬೆಂಗಳೂರು ಮಹಾನಗರಕ್ಕೆ ಮಾತ್ರ ಇದೆಯೇ ಎನ್ನುವ ಒಂದು ಪ್ರಶ್ನೆ ನನ್ನಲ್ಲಿದೆ. ಇಷ್ಟೊಂದು ಶಾಸಕರು, ಶಾಸನಗಳನ್ನು ಮಾಡುವಂತಹ ಜನ ನಮ್ಮ ಪೋಲೀಸ್ ಇಲಾಖೆಯವರ ಮೇಲೆ ಅನುಮಾನ ವ್ಯಕ್ತಪಡಿಸಿದರೆ ನಾವು ಏನು ಮಾಡುವುದಕ್ಕಾಗುತ್ತದೆ? ನಮ್ಮ ಪೋಲೀಸರು, ನಮ್ಮ ರಕ್ಷಣೆಗಾಗಿ ಇರುವವರು, ರಾಜ್ಯದ ರಕ್ಷಣೆಗಾಗಿ ಇರುವವರು, ನಮ್ಮ ಮಿಲಿಟರಿಯನ್ನೇ ನಾವು ನಂಬದೇ ಹೋದರೆ, ದೇಶ ರಕ್ಷಣೆಯಾಗುತ್ತದೆಯೇ? ನಮ್ಮ ಪೋಲೀಸರನ್ನು ನಾವು ನಂಬದೇ ಹೋದರೆ, ಕಾನೂನಿನ ರಕ್ಷಣೆಯಾಗುತ್ತದೆಯೇ? ಆದರೆ, ಎಲ್ಲಿಯೋ ಒಂದು ಕಡೆ ಲೋಪ ಇದೆ. ಅದಕ್ಕಾಗಿ ಪೋಲೀಸ್ ಇಲಾಖೆಯನ್ನು ಮೊದಲು ಸ್ವಚ್ಛಗೊಳಿಸಬೇಕು. ಇಲಾಖೆಯನ್ನು ಸ್ವಚ್ಛಗೊಳಿಸಿದ ನಂತರ ಅನೇಕ ವಿಚಾರಗಳನ್ನು ಕಾರ್ಯಗತ ಮಾಡುವುದಕ್ಕಾಗುತ್ತದೆ. ಇದು ಬಹಳ ಮುಖ್ಯ. **"ತನ್ನ ತಾನ್ ಪೊರೆಯಲಾರದವನ್ ಅನ್ಯರಂ ಪೊರೆವನೇ?"** ನನ್ನನ್ನು ನಾನು ಕಾಪಾಡಿಕೊಳ್ಳುವುದಕ್ಕಾಗದಿರುವಂತಹ ಪರಿಸ್ಥಿತಿಯಲ್ಲಿರುವಾಗ ಬೇರೆಯವರನ್ನು ನಾನು ಕಾಪಾಡುವುದಕ್ಕಾಗುತ್ತದೆಯೇ? ಸರ್ಕಾರದಲ್ಲಿರತಕ್ಕಂತಹ ಇಲಾಖೆಗಳಲ್ಲಿ ಮೊದಲು ನಾವು ಇಂತಹ ಕ್ಯಾಮೆರಾಗಳನ್ನು ಅಳವಡಿಸಿಕೊಳ್ಳಬೇಕು. ಅದನ್ನು ಅಳವಡಿಸಿಕೊಂಡ ನಂತರ ಬೇರೆಯವರಿಗೆ ಹೇಳಬಹುದು. ಕೆಲವು ಕಡೆ ಕಾಂಪೌಂಡ್‌ಗಳ ಮೇಲೆ, *"ಇಲ್ಲಿ ಮೂತ್ರ ವಿಸರ್ಜನೆ ಮಾಡಬಾರದು, ಮಾಡಿದರೆ ಶಿಕ್ಷೆಗೆ ಅರ್ಹರಾಗಿರುತ್ತಾರೆ,"* ಎಂದು ಇದೆ. ಆದರೆ, ಅಪರಾಧಕ್ಕೆ ಏನು ಶಿಕ್ಷೆ ಎಂಬುದು ಇರುವುದಿಲ್ಲ. ಈ ವಿಚಾರದಲ್ಲಿಯೂ ಕೂಡ ಸರ್ಕಾರ ಇದನ್ನೇ ಹೇಳಬಹುದಾಗಿತ್ತು. ಏನು ಹೇಳಬೇಕಾಗುತ್ತದೆಯೆಂದರೆ,

"ತಾವು ಈ ಕ್ಯಾಮೆರಾಗಳನ್ನು ಹಾಕದೇ ಹೋದರೆ ತಮ್ಮ ವಿರುದ್ಧ ಶಿಕ್ಷೆ ಇದೆ ಎಂದು" ಹೇಳಬೇಕಾಗಿತ್ತು. ಅದನ್ನು ಪೂರ್ತಿಯಾಗಿ 2 ಸಾವಿರ, 4 ಸಾವಿರ, 5 ಸಾವಿರ, 10 ಸಾವಿರ ಎಂದು ಹೇಳಿದರೆ ಬಹಳ ಕಷ್ಟವಾಗುತ್ತದೆ. ಪೊಲೀಸರು ಪಾದಚಾರಿಗಳಿಗೆ ಫುಟ್‌ಪಾತ್ ಮೇಲೆ ಹೋಗಿ, ರಸ್ತೆ ಮೇಲೆ ಏತಕ್ಕೆ ಹೋಗುತ್ತೀರಾ ಎಂದು ಎಚ್ಚರಿಕೆ ಕೊಡುತ್ತಾರೆ. ಆಗ ಅವರು ಫುಟ್‌ಪಾತ್ ಮೇಲೆ ಹೋಗುತ್ತಾರೆ. ಅದರಿಂದಾಗಿ, ಎಚ್ಚರಿಕೆ ಕೊಡುವುದಕ್ಕೆ ಪೊಲೀಸರು ಇರುತ್ತಾರೆ. ಸಂಬಂಧಪಟ್ಟ ಇಲಾಖೆಗಳು, ಅದು ವಿದ್ಯಾ ಇಲಾಖೆ ಆಗಬಹುದು, ಆರೋಗ್ಯ ಇಲಾಖೆ ಆಗಬಹುದು, ಸಹಕಾರ ಇಲಾಖೆಯವರು ಆಗಬಹುದು, ಬ್ಯಾಂಕ್‌ನವರು ಆಗಬಹುದು, ಸಂಬಂಧಪಟ್ಟಂತಹವರು ಅಂತಹವರಿಗೆ ಸುತ್ತೋಲೆಗಳನ್ನು ಕಳುಹಿಸಿ, ನಿಮ್ಮ ಇಲಾಖೆಯಲ್ಲಿ ಬರುವಂತಹ ಎಲ್ಲಾ ಕಛೇರಿಗಳಲ್ಲಿ ಸಿ.ಸಿ.ಟಿ.ವಿ. ಕ್ಯಾಮೆರಾ ಹಾಕಲೇಬೇಕು." ಒಂದು ವೇಳೆ ಅಲ್ಲಿ ಸಿ.ಸಿ.ಟಿ.ವಿ. ಕ್ಯಾಮೆರಾ ಹಾಕದೆಯೇ ಏನಾದರೂ ಘಟನೆ ನಡೆದು ದೂರು ಬಂದಾಗ ಅವರ ವಿರುದ್ಧ ಹೆಚ್ಚು ದಂಡ ವಿಧಿಸಬೇಕು. ಉದಾಹರಣೆಗೆ, ಯಾವುದೋ ಒಂದು ಕಾಲೇಜಿನಲ್ಲಿ ಸಿ.ಸಿ.ಟಿ.ವಿ. ಕ್ಯಾಮೆರಾ ಹಾಕಿರುವುದಿಲ್ಲ. ಆ ಕಾಲೇಜಿನಲ್ಲಿ ಏನೋ ಒಂದು ಘಟನೆ ನಡೆಯುತ್ತದೆ. ಆ ಘಟನೆ ನಡೆದಾಗ ಸದರಿ ಕಾಲೇಜಿನ ವಿರುದ್ಧ ಸರ್ಕಾರ ದಂಡ ವಿಧಿಸಬಹುದು. ಅವರು ಸಿಸಿಟಿವಿ ಕ್ಯಾಮೆರಾ ಹಾಕಿಲ್ಲವೆಂದು ದಂಡ ಹಾಕಬಾರದು. You must give them an option to put it. ಅಲ್ಲಿ ಏನಾದರೂ ಗಲಾಟೆ ಆದಾಗ, ಗಡಿಬಿಡಿಯಾದಾಗ, ಸರಗಳ್ಳತನ ಆದಾಗ, ಅದರ ಬಗ್ಗೆ ದೂರು ಬಂದರೆ, ತಾವು ಏತಕ್ಕೆ ಸಿಸಿಟಿವಿ ಕ್ಯಾಮೆರಾ ಹಾಕಿರುವುದಿಲ್ಲವೆಂದು ಕೇಳಬಹುದು. ಅದಕ್ಕೆ ದಂಡ ಕೂಡ ವಿಧಿಸಬಹುದು. ಆದುದರಿಂದ, ಸಿ.ಸಿ.ಟಿ.ವಿ. ಕ್ಯಾಮೆರಾಗಳನ್ನು ಅಳವಡಿಸಿಲ್ಲವೆಂದರೆ ಶಿಕ್ಷೆಗೆ ಅರ್ಹರಾಗಿರುತ್ತೀರೆಂದು ಅಷ್ಟು ಹೇಳಿದರೂ ಸಾಕು, ಸರಿ ಹೋಗುತ್ತದೆಯೆಂದು ನನಗನ್ನಿಸುತ್ತದೆ. ಇನ್ನು ಅನೇಕ ವಿಚಾರಗಳನ್ನು ಹೇಳಿದ್ದಾರೆ. ಅದರ ಪ್ರಕಾರ ಬೇಕಾದಷ್ಟು ತಿದ್ದುಪಡಿಗಳು ಬೇಕಾಗಿರುತ್ತದೆ. ಆದುದರಿಂದ, ಅದನ್ನು ಮತ್ತೊಮ್ಮೆ ಪರಿಶೀಲನೆ ಮಾಡಿ ಪುನಃ ಮಂಡನೆಗೆ ತೆಗೆದುಕೊಂಡು ಬಂದರೆ ಒಳ್ಳೆಯದಾಗುತ್ತದೆಯೆಂದು ನನಗನ್ನಿಸುತ್ತದೆ.

**ಶ್ರೀ ಶರಣಪ್ಪ ಮಟ್ಟೂರ**:– ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು, ಸೆಕ್ಷನ್–1, ಕ್ಲಾಸ್–2 ನಲ್ಲಿ ಏನು ಹೇಳಿದ್ದಾರೆ, ಅದನ್ನು ರಾಜ್ಯವ್ಯಾಪಿ ಅಳವಡಿಸಬೇಕು. ಮೊಟ್ಟ ಮೊದಲನೆಯದಾಗಿ, ಮಾನ್ಯ ಗೃಹ ಸಚಿವರು *The Karnataka Public Safety (Measures) Enforcement Bill-2017"* ಕಾಯ್ದೆಯನ್ನು ತಂದಿದ್ದಾರೆ. ಅದನ್ನು ನಾನು ತುಂಬು ಹೃದಯದಿಂದ ಸ್ವಾಗತ ಬಯಸುತ್ತೇನೆ. ಕಾರಣ ಏನೆಂದರೆ, ಮಾನ್ಯ ರಾಮಚಂದ್ರಗೌಡರವರು ನಮ್ಮ ಪೊಲೀಸ್ ಇಲಾಖೆಯವರನ್ನು ನಾವೇ ನಂಬದೇ ಹೋದರೆ, ಬೇರೆ ಯಾರು ನಂಬಬೇಕಾಗುತ್ತದೆ ಎಂದು ಬಹಳ ಚೆನ್ನಾಗಿ ಹೇಳಿದ್ದಾರೆ. ಕಾರಣ ಏನೆಂದರೆ, ಎಷ್ಟೋ ಪ್ರಕರಣಗಳು ಪತ್ತೆ ಹಚ್ಚಲಾಗದ ಪ್ರಕರಣಗಳಾಗಿ ಹೋಗುತ್ತಿವೆ. ಹೊಸ ಹೊಸ ರಾಜ್ಯದವರು ಬಂದು, ಕಳ್ಳತನ ಮಾಡಿಕೊಂಡು,

ಆಸ್ಪತ್ರೆಗಳಿಂದ ಮಕ್ಕಳನ್ನು ಕದಿಯುವುದಾಗಲಿ, ಶಾಲೆಗಳಿಂದ ಮಕ್ಕಳನ್ನು ಕದಿಯುವುದಾಗಲಿ ಅಥವಾ ನಿನ್ನೆಯ ದಿವಸ ಈ ಸದನದಲ್ಲಿ Narcotic Drugs and Psychotropic Substances Act ಬಗ್ಗೆ ವಿವರವಾಗಿ ಚರ್ಚೆ ಮಾಡಿದಾಗ ಶಾಲೆಗಳ ಸುತ್ತ ಮುತ್ತಲಿನ ಪ್ರದೇಶದಲ್ಲಿ ಮಾದಕ ದ್ರವ್ಯಗಳನ್ನು ಮಾರಾಟ ಮಾಡುವಂತಹದ್ದು, ಬಹಳ heinous offence. ಅಂತಹದ್ದರಲ್ಲಿ ಅಪರಾಧಿಗಳನ್ನು ಹಿಡಿಯುವುದಕ್ಕೆ ಸಿ.ಸಿ.ಟಿ.ವಿ. ಕ್ಯಾಮೆರಾ ಬಿಟ್ಟು, ಒಬ್ಬ ಅಥವಾ ಇಬ್ಬರು ಕಾನ್‌ಸ್ಟೇಬಲ್‌ಗಳನ್ನು ಒಂದು 50 ಎಕರೆ ವಿಸ್ತೀರ್ಣದ ದೊಡ್ಡ ಕಾಂಪೌಂಡ್ ಮುಂದೆ ಬಿಟ್ಟರೆ ಅವರು ಕಳ್ಳನನ್ನು ಹಿಡಿಯುವುದಕ್ಕೆ ಸಾಧ್ಯವಿಲ್ಲ. ಅದಕೋಸ್ಕರ ಕಾನೂನಿನಲ್ಲಿ ತುಂಬಾ ಚೆನ್ನಾಗಿ ಯೋಚನೆ ಮಾಡಿ, ಒಳ್ಳೆಯ ರೀತಿಯಲ್ಲಿ ಸುರಕ್ಷತಾ ಕ್ರಮಗಳನ್ನು ಕೈಗೊಂಡು ಅಪರಾಧಗಳನ್ನು ನಿಯಂತ್ರಣ ಮಾಡುವುದಕ್ಕೆ ಮಾನ್ಯ ಗೃಹ ಸಚಿವರು ಈ ವಿಧೇಯಕವನ್ನು ತಂದಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಪ್ರಕರಣಗಳು ಆದಾಗ, ಅದರಲ್ಲಿರುವ ಅಪರಾಧಿಗಳು ಸಿಗದೇ ಇದ್ದಾಗ ಅಂದರೆ, ಒಂದು ಕೃತ್ಯ ಮಾಡಿ ಅವನು ಬೇರೆ ರಾಜ್ಯಗಳಿಗೆ ಹೋದಾಗ ಅವನನ್ನು ಹಿಡಿಯುವುದಕ್ಕೆ ಸಾಧ್ಯವಿಲ್ಲ. ಅಂತಹ ಸಮಯದಲ್ಲಿ ಸಿ.ಸಿ.ಟಿ.ವಿ. ದಾಖಲೆ ಇದ್ದು, ಅದನ್ನು ಟಿವಿ ಮಾಧ್ಯಮಕ್ಕೆ ಕೊಟ್ಟಾಗ ಅಪರಾಧಿಯನ್ನು ಆ ರಾಜ್ಯದಲ್ಲಿಯೂ ಕೂಡ ಹಿಡಿಯುವುದಕ್ಕೆ ಅನುಕೂಲವಾಗುತ್ತದೆಯೆನ್ನುವ ವಿಚಾರ ಇದರಲ್ಲಿ ಬರುತ್ತದೆ.

ಎರಡನೆಯದಾಗಿ, ಇದನ್ನು ಇಡೀ ರಾಜ್ಯವ್ಯಾಪಿ ತರಬೇಕೆನ್ನುವುದು ನನ್ನ ಸಲಹೆ. ಮೂರನೆಯದಾಗಿ, ಲಿಮಿಟೇಷನ್ ಬಗ್ಗೆ ಮಾನ್ಯ ರಮೇಶ್‌ಬಾಬುರವರು ಹೇಳಿದ್ದಾರೆ. ಈ ಅರ್ಜಿಯನ್ನು ನಾವು ಕೊಟ್ಟಾಗ ಒಂದು ಪ್ರಾಧಿಕಾರ ಅಂದರೆ, Assistant Commissioner ಮುಂದೆ ಒಂದು ಅಪೀಲು, ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಯವರ ಮುಂದೆ ಒಂದು ಅಪೀಲು ಮತ್ತು ಉಪ ಪೋಲೀಸ್ ಆಯುಕ್ತರ ಮುಂದೆ ಒಂದು ಅಪೀಲು ಈ ರೀತಿ ಮೂರು ಸಲ ಅಪೀಲು ಬಂದಾಗ ಪ್ರಾವಿಷನ್ ಏನು ಕೊಟ್ಟಿದ್ದಾರೆಂದು ಸೆಕ್ಷನ್ 7 ರಲ್ಲಿ ಅವರಿಗೆ ಸಮಯ ನಿಗದಿ ಮಾಡಬೇಕು.

(ಮುಂದುವರೆದಿದೆ...)

(997)15.11.2017/5.00/ವೈಎಲ್-ಆರ್‌ಎನ್

**ಶ್ರೀ ಶರಣಪ್ಪ ಮಟ್ಟೂರು (ಮುಂದು):-**

Within thirty days from the date being aggrieved by the order, ಮೇಲ್ಮನವಿ ಕೊಟ್ಟಾಗ ಅವರುಗಳಿಗೆ ನಾವು ಒಂದು ನಿಗದಿತ ಸಮಯವನ್ನು ಹಾಕಬೇಕು. ಅದೇ ರೀತಿ ಮೇಲ್ಮನವಿ ಸಲ್ಲಿಸಿದ 30 ದಿನಗಳಲ್ಲಿ ಅವರುಗಳ ಮೇಲ್ಮನವಿಯನ್ನು ಡಿಸ್‌ಪೋಸ್ ಮಾಡಿದರೆ ಒಳ್ಳೆಯದಾಗುತ್ತದೆ. ಈ ರೀತಿಯಲ್ಲಿ ಒಂದು ಸಣ್ಣ ಸಲಹೆಯನ್ನು ಮಾನ್ಯ ಸಚಿವರಿಗೆ ಕೊಡುವುದಕ್ಕೆ ಬಯಸುತ್ತೇನೆ. ಮೇಲ್ಮನವಿ ಕಡತವನ್ನು 30 ದಿನಗಳೊಳಗಾಗಿ ಅವರು ಇತ್ಯರ್ಥಪಡಿಸಬೇಕೆಂದು

ಹೇಳುತ್ತೇನೆ. ನಾವು ಹೇಗೆ ೩೦ ದಿನಗಳನ್ನು ಮೇಲ್ಮನವಿಯನ್ನು ಹಾಕುವುದಕ್ಕೆ ಅವಕಾಶವನ್ನು ನೀಡಿರುತ್ತೇವೆಯೋ ಅದೇ ರೀತಿಯಲ್ಲಿ ಮೇಲ್ಮನವಿಯನ್ನು ಸಲ್ಲಿಸಿದ ೩೦ ದಿನಗಳೊಳಗಾಗಿ ಇತ್ಯರ್ಥಪಡಿಸಬೇಕೆಂಬ ಒಂದು ತಿದ್ದುಪಡಿಯನ್ನು ಈ ವಿಧೇಯಕದಲ್ಲಿ ತರಬೇಕಾಗುತ್ತದೆ. ಹಾಗೆಯೇ ಅಪರಾಧಗಳ ಪ್ರಮಾಣ ಹೆಚ್ಚಾಗುತ್ತಿರುವುದರ ಬಗ್ಗೆ ಈ ವಿಧೇಯಕದಲ್ಲಿ ಏನಿದೆ, ಇದು ಆಧುನಿಕ ತಂತ್ರಜ್ಞಾನದ ವ್ಯವಸ್ಥೆಯಲ್ಲಿರುವುದರ ಈ ವಿಧೇಯಕವೂ ಬಹಳ ಉತ್ತಮವಾಗಿದೆ. ಈ ವಿಧೇಯಕಕ್ಕೆ ನನ್ನ ಸಹಮತಿ ಇದೆ ಎಂದು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ. VIBGYOR ಶಾಲೆಯಲ್ಲಿ ನಡೆದ ಪ್ರಕರಣದ ಬಗ್ಗೆ ನಮಗೆಲ್ಲಾ ಗೊತ್ತಿದೆ. ಆ ಪ್ರಕರಣದ ನಂತರ ಸರ್ವೋಚ್ಚ ನ್ಯಾಯಾಲಯವೂ ಕಡ್ಡಾಯವಾಗಿ ವಿದ್ಯಾ ಸಂಸ್ಥೆಗಳಲ್ಲಿ ಸಿ.ಸಿ. ಕ್ಯಾಮರಾಗಳನ್ನು ಅಳವಡಿಸಬೇಕೆಂದು ಆದೇಶವನ್ನು ಹೊರಡಿಸಿದೆ. ಅದರ ಬಗ್ಗೆಯೂ ನಾವು ಈ ವಿಧೇಯಕದಲ್ಲಿ ಉಲ್ಲೇಖ ಮಾಡಬೇಕಾಗುತ್ತದೆ. ಮಾನ್ಯ ಸಚಿವರು ತಂದಿರತಕ್ಕಂಥ ವಿಧೇಯಕದಲ್ಲಿ ಆ ಆದೇಶವನ್ನು ಸಹ ತರಬೇಕು. ಮಾನದಂಡಗಳನ್ನು ಈ ವಿಧೇಯಕದಲ್ಲಿ ಸೇರಿಸಬೇಕೆಂಬ ಸಲಹೆಯನ್ನು ಕೊಡುತ್ತೇನೆ.

**ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಸಾರ್ವಜನಿಕ ಸ್ಥಳವೆಂದು ಏನು ಹೇಳುತ್ತಾರೆ. ಈ ಸಾರ್ವಜನಿಕ ಸ್ಥಳದ ಬಗ್ಗೆ ಕೆಲವೊಂದನ್ನು ಮಾತ್ರ ಮಾನ್ಯ ಸಚಿವರು ಈ ವಿಧೇಯಕದಲ್ಲಿ ತಂದಿದ್ದಾರೆ. ಆದರೆ, ಸಾರ್ವಜನಿಕ ಸ್ಥಳದಲ್ಲಿ ನೂರು ಜನಕ್ಕಿಂತ ಹೆಚ್ಚಾಗಿ ಯಾರು ಸೇರುತ್ತಾರೆ. ಅಂತಹದರ ಬಗ್ಗೆ ಅಧಿಸೂಚನೆಯನ್ನು ಹೊರಡಿಸುವುದಕ್ಕೆ ಅವಕಾಶಕೊಡಬೇಕು. ನಮ್ಮ ಬೆಂಗಳೂರು ನಗರದ ಜೊತೆಗೆ ಬೇರೆ ಬೇರೆ ನಗರಗಳು, ಪುರಸಭೆಗಳು ಇವೆ. ನೂರು ಜನ ಸೇರತಕ್ಕಂಥ ಜಾಗಗಳು ಎಂಥದ್ದು ಎಂಬುದನ್ನು ನೋಡಬೇಕಾಗುತ್ತದೆ. ಇಲ್ಲಿ ಕೊಟ್ಟಿರತಕ್ಕಂಥಾದ್ದನ್ನು ಬಿಟ್ಟು ಬೇರೆ ಬೇರೆ ಜಾಗಗಳು ಬೇಕಾದಷ್ಟು ಇದೆ. ಅಂಥವುಗಳನ್ನು ಒಳಗೊಂಡಂತೆ ಮೊದಲನೆಯದಾಗಿ ಅಧಿಸೂಚನೆಯನ್ನು ಹೊರಡಿಸುವುದು ಬಹಳ ಮುಖ್ಯ. ಅದರ ಒಂದು ಭಾಗವಾಗಿ ಈ ವಿಧೇಯಕದಲ್ಲಿ ಕೊಟ್ಟಿರತಕ್ಕಂಥದ್ದು ಒಳಗೆ ಮತ್ತು ಹೊರಗೆ ಹೋಗುವ ಸಂದರ್ಭದಲ್ಲಿ ಸಿ.ಸಿ. ಕ್ಯಾಮರಾವನ್ನು ಅಳವಡಿಸುವುದಕ್ಕೆ ಅವಕಾಶ ಕಲ್ಪಿಸಬೇಕು. ಹಾಗೆಯೇ ಸಾಮಾನ್ಯ ಸ್ಥಳಗಳು ಎಲ್ಲೆಲ್ಲಿವೆ ಅಂತಹ premises ನಲ್ಲಿ ಒಂದು ಅವಕಾಶ ನೀಡಿದ್ದಾರೆ. ಆದರೆ, ಬಹುತೇಕ ಮಾನ್ಯ ಸದಸ್ಯರು ಮಾತನಾಡುವಾಗ ಇದರ ದುರ್ಬಳಕೆ ಆಗುತ್ತದೆ ಎಂದು ಹೇಳಿದರು. ಇಂತಹ ಸಂದರ್ಭಗಳನ್ನು ಪೊಲೀಸ್ ಅಧಿಕಾರಿಗಳು ಬೇರೆ ರೀತಿಯಲ್ಲಿ ಉಪಯೋಗಿಸಿಕೊಳ್ಳುತ್ತಾರೆ ಎಂಬ ಒಂದು ಭಾವನೆ ಬಂದಿದೆ. ಇದು ಬೇರೆ ರಾಜ್ಯಗಳಲ್ಲಿ ಅನುಷ್ಠಾನವಾಗಿದೆ ಎಂದು ಈಗಾಗಲೇ ಮಾನ್ಯ ಸಚಿವರು ಹೇಳಿದ್ದಾರೆ. ಬೇರೆ ರಾಜ್ಯದಿಂದ ಪೂರ್ತಿ ಪ್ರಮಾಣದ ಮಾಹಿತಿಯನ್ನು ತೆಗೆದುಕೊಂಡು ಮಾನ್ಯ ಸಚಿವರು ಈ ವಿಧೇಯಕವನ್ನು ತಂದಿದ್ದಾರೆ. ಬೇರೆ ರಾಜ್ಯದಲ್ಲಿ ಯಾವ ರೀತಿ ಕಾರ್ಯಗತವಾಗಿದೆ. ಆ ರಾಜ್ಯಗಳಲ್ಲಿ ಯಾವ ರೀತಿಯ anomalies ಬರುತ್ತಿದೆ. ಕಾರ್ಯಗತವಾದ

ಮೇಲೆ ಆ ರಾಜ್ಯದಲ್ಲಿ ಯಾವ ರೀತಿ ಸಮಸ್ಯೆಗಳು ಉದ್ಭವಿಸುತ್ತಿದೆ ಎಂಬುದರ ಬಗ್ಗೆ ಅಧ್ಯಯನ ನಡೆಸಿ, ಅದರ ಆಧಾರದ ಮೇಲೆ ಈ ವಿಧೇಯಕವನ್ನು ತಂದರೆ ಒಳ್ಳೆಯದು. ಇವತ್ತಿನ ದಿನ GIS (Geographical Information System) ಮತ್ತು GPS (Global Positioning System) ಬೇಕಾದಷ್ಟು ತಾಂತ್ರಿಕತೆ ಇದೆ. ಕೆಲವು ಕೇಸ್‌ಗಳಲ್ಲಿ ಪೊಲೀಸ್ ಅಧಿಕಾರಿಗಳಿಗೆ ಸಹಕರಿಸಿಲ್ಲವೆಂದು ಈಗಾಗಲೇ ಒಂದೆರಡು ಪ್ರಕರಣಗಳಲ್ಲಿ ಬಂದಿದೆ. ಸಿ.ಸಿ. ಕ್ಯಾಮರಾವನ್ನು ಪೊಲೀಸ್ ಅಧಿಕಾರಿಗಳಿಗೆ ಒದಗಿಸಿಲ್ಲ. ಸೂಕ್ತವಾದಂತಹ ವೇಳೆಯಲ್ಲಿ ಅವರು ಸಿಕ್ಕಿಲ್ಲ. ಆದ್ದರಿಂದ ಇವುಗಳೆಲ್ಲವನ್ನು ನಿಯಂತ್ರಣಕ್ಕೆ ತರತಕ್ಕಂಥ ಕಾಯ್ದೆ ಬೇಕು. ಇಂತಹ ಒಂದು ಕಾಯ್ದೆ ಬಹಳ ಅವಶ್ಯಕತೆ ಇದೆ. ಆದ್ದರಿಂದ ಇದೆಲ್ಲವನ್ನು ಗಮನದಲ್ಲಿಟ್ಟು ಸಮಗ್ರವಾದಂತಹ ಒಂದು ಕಾಯ್ದೆಯನ್ನು ಮಾಡಿದರೆ ಒಳ್ಳೆಯದು. ಇದು long run ನಲ್ಲಿ ಬಹಳ ಪರಿಣಾಮಕಾರಿಯಾಗಿಯೂ ನಡೆಯುವಂಥಾದ್ದಾಗಬೇಕು. ಆ ಒಂದು ನಿಟ್ಟಿನಲ್ಲಿ ಗಮನಹರಿಸಬೇಕೆಂದು ಹೇಳುತ್ತಾ, ಈ ವಿಧೇಯಕವನ್ನು ತಂದಿರುವ ಮಾನ್ಯ ಸಚಿವರಿಗೂ ಅಭಿನಂದನೆಯನ್ನು ಸಲ್ಲಿಸುತ್ತೇನೆ.

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದ ಪೊಲೀಸ್ ಅಧಿಕಾರಿಗಳು ಬಹಳ ಅಚ್ಚುಕಟ್ಟಾಗಿ ಕೆಲಸ ಮಾಡುತ್ತಿದ್ದಾರೆ. ಕೆಲವು ಅಧಿಕಾರಿಗಳಿಂದ ನಾವೆಲ್ಲರೂ ಇವತ್ತಿನ ದಿನ ಏನು ಚರ್ಚೆ ಮಾಡುತ್ತಿದ್ದೇವೆ ಇಸ್ರೇಲ್ ದೇಶ ಸೇರಿದಂತೆ ಇನ್ನು ಮುಂತಾದ ಹೊರದೇಶದಲ್ಲಿ ಯಾವ ರೀತಿಯ ಕಾನೂನು ತಂದಿದ್ದಾರೆ. ಅದೇ ರೀತಿ ಅಪರಾಧಗಳೇ ಆಗದೇ ಇರತಕ್ಕಂಥ ತಂತ್ರಜ್ಞಾನದ ವ್ಯವಸ್ಥೆಯನ್ನು ಸುಧಾರಣೆ ಮಾಡಿ, ಅಲ್ಲಿರತಕ್ಕಂಥ ಕೆಲವು ಯೋಜನೆಗಳನ್ನು ಯಾವ ರೀತಿ ನಿಭಾಯಿಸುತ್ತಿದ್ದಾರೆಂಬುದರ ಬಗ್ಗೆ ನಮ್ಮ ಹಿರಿಯ ಪೊಲೀಸ್ ಅಧಿಕಾರಿಗಳನ್ನು ಕಳುಹಿಸಿ, ಆ ರಾಷ್ಟ್ರಗಳಲ್ಲಿ ಏಕೆ ಅಪರಾಧಗಳಾಗುತ್ತಿಲ್ಲ. ಅಪರಾಧಗಳಾಗದೇ ಇರುವುದಕ್ಕೆ ಕಾರಣಗಳೇನು ಎನ್ನುವುದರ ಬಗ್ಗೆ ಇಲ್ಲಿಯೂ ಮಾಡಿ ತೋರಿಸಬೇಕು. ಮಾನ್ಯ ಸಚಿವರು ಇಂತಹ ವ್ಯವಸ್ಥೆಯ ಬಗ್ಗೆ ಅಧ್ಯಯನ ಮಾಡಿದರೆ ಸ್ವಲ್ಪವಾದರೂ ಅಪರಾಧಗಳನ್ನು ಹತ್ತಿಕ್ಕುವುದರ ಜೊತೆಗೆ ಅದರ ನಿಯಂತ್ರಣ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಎರಡನೆಯದಾಗಿ ಶಿಕ್ಷಣ ಕ್ಷೇತ್ರವಾಗಿರಬಹುದು. ಧಾರ್ಮಿಕ ಕ್ಷೇತ್ರವಾಗಿರಬಹುದು. ಆರೋಗ್ಯ ಕ್ಷೇತ್ರವಾಗಿರಬಹುದು. ಇಂತಹ ಧಾರ್ಮಿಕ ಕೇಂದ್ರಗಳ ಬಗ್ಗೆ ಪೊಲೀಸ್ ಇಲಾಖೆಯನ್ನಿಟ್ಟುಕೊಂಡು ಏನು ಕಡಿವಾಣ ಹಾಕಬೇಕೆಂದು ಭಾವಿಸಿದ್ದಾರೆ. ಅದರ ಬಗ್ಗೆ ದಯಮಾಡಿ ಏನೇ ಕಂಡು ಬಂದರು ಆ ಇಲಾಖೆಯ ಅಧಿಕಾರಿಗಳಿಗೆ ಮಾನ್ಯ ಸಚಿವರು ಹೆಚ್ಚು ಶಕ್ತಿಯನ್ನು ಒದಗಿಸಿದಾಗ ನಿಜವಾಗಿಯೂ ಒಳ್ಳೆಯದಾಗುತ್ತದೆ. ಇವತ್ತು ಈ ಸದನದಲ್ಲಿ ಸಿ.ಸಿ. ಕ್ಯಾಮರಾದ ಬಗ್ಗೆ ಹಲವಾರು ಸದಸ್ಯರು ಚರ್ಚೆ ಮಾಡುತ್ತಿದ್ದೇವೆ. High resolution ಇರತಕ್ಕಂಥ ಕ್ಯಾಮರಾಗಳನ್ನು ಅಳವಡಿಸಬೇಕು. ಎರಡನೆಯದಾಗಿ ಈ ಸಿ.ಸಿ. ಕ್ಯಾಮರಾಗಳ ಮಾನಿಟರಿಂಗ್ ಅನ್ನು ಮಾಡಬೇಕಾಗುತ್ತದೆ. ಈ ಮಾನೀಟರಿಂಗ್ ವ್ಯವಸ್ಥೆಯನ್ನು ಜಾರಿಗೆ ತರಲು ಫುಟೇಜ್ ಇರಬಹುದು

ಒಂದು, ಎರಡು ಅಥವಾ ಮೂರು ತಿಂಗಳುಗಳ ಕಾಲ ಈ ಒಂದು ಸಮಯವನ್ನು ತೆಗೆದುಕೊಂಡು ಮಾಡಿದಾಗ ಸರಿಯಾದ ರೀತಿಯಲ್ಲಿ ಹಾರ್ಡ್ ಡಿಸ್ಕ್‌ಗಳಲ್ಲಿ ಹೆಚ್ಚಿನ ರೀತಿಯಲ್ಲಿ ಮಾಹಿತಿ ಸಂಗ್ರಹಿಸಿ, ವಿಡಿಯೋ ಫೂಟೇಜ್‌ಗಳನ್ನು ಇಟ್ಟುಕೊಳ್ಳುವಂತಹ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಉದಾಹರಣೆಗೆ ಹೇಳುವುದಾದರೆ, ಇಂತಹ ವ್ಯವಸ್ಥೆಯಿಂದಾಗಿ ಇತ್ತೀಚಿನ ದಿನಗಳಲ್ಲಿ ಗೌರಿ ಲಂಕೇಶ್‌ರವರು ಹತ್ಯೆಯಾಗಿರತಕ್ಕಂಥ ಪ್ರಕರಣ ಬಂದಿತ್ತು. ಬಹುಶ: ಗೌರಿ ಲಂಕೇಶ್‌ರವರು ಬಸವನಗುಡಿ ರಸ್ತೆಯ ಮೂಲಕವೇ ಅವರ ಮನೆಗೆ ಹೋಗಿರಬೇಕೆಂದು ಪೊಲೀಸ್‌ನವರಿಗೆ ತಿಳಿದಿರಬಹುದೇನೋ, ಅದಕ್ಕೆ ಪೊಲೀಸ್‌ನವರು ನನಗೆ ಫೋನ್ ಮಾಡಿ, ಅಪರಾಧಿಗಳು ಅಪ್ಪಾಜಿ ಕ್ಯಾಂಟೀನ್ ಮುಂದೆಯೇ ಹೋಗಿದ್ದಾರೆ, ಹಾಗಾಗಿ ನಮಗೆ ಸ್ವಲ್ಪ ವಿಡಿಯೋ ಫೂಟೇಜ್‌ಬೇಕೆಂದು ಕೇಳಿದ್ದರು. ನಾನು ಕ್ಯಾಮರಾವನ್ನು ಹಾಕಿದ್ದೆನು. ಆ ಫೂಟೇಜನ್ನು ಅಳವಡಿಸಿರುವುದರಿಂದ ಪೊಲೀಸ್‌ನವರಿಗೆ ಆ ಫೂಟೇಜನ್ನು ನೀಡಿ, ಸಹಾಯ ಮಾಡಿದ್ದೇನೆ. ಏತಕ್ಕಾಗಿ ನಾನು ಈ ಮಾತನ್ನು ಹೇಳುತ್ತಿದ್ದೇನೆಂದರೆ, ಇತ್ತೀಚಿನ ದಿನಗಳಲ್ಲಿ ಬಹಳಷ್ಟು ಕ್ಯಾಮರಾಗಳು high resolution ಇರುವುದಿಲ್ಲ. ಹಾಗಾಗಿ ಆ ಕ್ಯಾಮರಾಗಳನ್ನು ಒಂದು ಸ್ಟ್ಯಾಂಡರ್ಡ್ ಮಾಡಬೇಕು. ಹಾಗೆಯೇ ಈ ಕ್ಯಾಮರಾಗಳಲ್ಲಿ ರೆಕಾರ್ಡ್ ಆಗಿರುವುದನ್ನು ಸ್ಟೋರೇಜ್ ಮಾಡಬೇಕು. ಕನಿಷ್ಠ ಪಕ್ಷ ಈ ಕ್ಯಾಮರಾಗಳಲ್ಲಿ ರೆಕಾರ್ಡ್ ಆಗಿರುವುದನ್ನು 3 ತಿಂಗಳಾದರೂ ಸ್ಟೋರೇಜ್ ಮಾಡಬೇಕು. 3 ತಿಂಗಳ ಮಟ್ಟಿಗೆ ರೆಕಾರ್ಡ್ ಇಟ್ಟುಕೊಳ್ಳುವುದಕ್ಕೆ ಸಾಧ್ಯವಾಗುವಂತಹ ಸಾಮರ್ಥ್ಯವುಳ್ಳ ತಂತ್ರಜ್ಞಾನವನ್ನು ಈ ಸಿ.ಸಿ. ಕ್ಯಾಮರಾಗಳಲ್ಲಿ ಅಳವಡಿಸಿಕೊಳ್ಳಬೇಕು. ಈಗ 3ಜಿ, 4ಜಿ, 5ಜಿ ಬಂದಿದೆ ಎಂದು ನಾವು ಹೇಳುತ್ತೇವೆ ಅದೇ ರೀತಿ ಹಾರ್ಡ್ ಡಿಸ್ಕ್‌ನ ಸ್ಟೋರೇಜ್ ಪ್ರಮಾಣ ಹೆಚ್ಚಾಗಿ ಇರತಕ್ಕಂಥದನ್ನು ಮಾಡಿಕೊಂಡರೆ, ಅದರ ಹಾದಿಯಲ್ಲಿ ನಾವು ಮಾಡಬೇಕು. ಸಾರ್ವಜನಿಕವಾಗಿ ಜನರ ವಿಶ್ವಾಸವನ್ನು ಗೆಲ್ಲುವ ಹಾದಿಯಲ್ಲಿ ಕರ್ತವ್ಯ ನಿರ್ವಹಿಸಿದಂತಾಗುತ್ತದೆ. ಆ ನಿಟ್ಟಿನಲ್ಲಿ ಪೊಲೀಸ್ ಇಲಾಖೆಯವರು ಕೆಲಸ ಮಾಡಿದರೆ, ಯಾವುದೇ ಅಪರಾಧಗಳು ಇರಲಿ, ಅದನ್ನು ಪೊಲೀಸ್ ಇಲಾಖೆಯವರು ಪತ್ತೆ ಹಚ್ಚುವುದಕ್ಕೆ ಸುಲಭವಾಗುತ್ತದೆ. ಅದರ ಜೊತೆಗೆ ನಾವು ಕೂಡ ಮಾಹಿತಿಯನ್ನು ಪೊಲೀಸ್ ಇಲಾಖೆಯವರಿಗೆ ಒದಗಿಸಬೇಕಾಗುತ್ತದೆ. ಇಲ್ಲದಿದ್ದರೆ ಪೊಲೀಸ್ ಇಲಾಖೆಯವರು ಎಲ್ಲಿಂದ ಮಾಹಿತಿಯನ್ನು ಸಂಗ್ರಹಿಸುತ್ತಾರೆ. ನಮ್ಮಲ್ಲಿರತಕ್ಕಂಥ ಮಾಹಿತಿಯನ್ನು ಅವರಿಗೆ ಒದಗಿಸಿದರೆ, ಅವರುಗಳು ಅದರ ಆಧಾರದ ಮೇಲೆ ತನಿಖೆ ಮಾಡಿ, ಅಪರಾಧಿಗಳನ್ನು ಕಂಡು ಹಿಡಿಯುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಪೊಲೀಸ್‌ನವರ ಜೊತೆಗೆ ಜನರ ವಿಶ್ವಾಸವನ್ನು ತೆಗೆದುಕೊಳ್ಳಬೇಕಾಗುತ್ತದೆ. 3 ಪ್ರಮುಖ ಕ್ಷೇತ್ರಗಳಾದ ಆರೋಗ್ಯ ಇಲಾಖೆ, ಧಾರ್ಮಿಕ ಇಲಾಖೆ ಮತ್ತು ಶಿಕ್ಷಣ ಇಲಾಖೆ ಎಲ್ಲವನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಅದರ ಸಂಪೂರ್ಣ ಹೊಣೆಯನ್ನು ಆಯಾಯ ಇಲಾಖೆಯ ಅಧಿಕಾರಿಗಳ ಉನ್ನತ ಮಟ್ಟದ ಸಮಿತಿಯನ್ನು ರಚನೆ ಮಾಡಿ, ಆ ಅಧಿಕಾರಿಗಳಿಗೂ

ಮಾಹಿತಿಯನ್ನು ನೀಡಿದಾಗ ಖಂಡಿತ ಎಲ್ಲರಿಗೂ ನ್ಯಾಯ ಸಿಗುತ್ತದೆ. ಎಲ್ಲರೂ ಸಹಕರಿಸುತ್ತಾರೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀಮತಿ ತಾರಾ ಅನೂರಾಧ(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಸಾರ್ವಜನಿಕ ಸುರಕ್ಷೆಯ ವಿಧೇಯಕವನ್ನು ಸಾರ್ವಜನಿಕರ ಸುರಕ್ಷೆಗಾಗಿ ತಂದಿದ್ದಾರೆ. ಸಾರ್ವಜನಿಕ ಸುರಕ್ಷೆ ಎಂಬ ಪದವನ್ನು ಬಳಸಿರುವುದರಿಂದ ಮಾನ್ಯ ಗೃಹ ಸಚಿವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈಗಾಗಲೇ ಮಾನ್ಯ ಸದಸ್ಯರುಗಳು ಮಾತನಾಡಿರುವುದರಿಂದ ನಮಗೆ ಆಗಬೇಕಾಗಿರತಕ್ಕಂಥದ್ದೇನೆಂದರೆ, ಈಗಾಗಲೇ VIBGYOR ಎಂಬ ಶಾಲೆಯಲ್ಲಿ ಅತ್ಯಾಚಾರ, ಅನ್ಯಾಯ, ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಆಗಿರುವುದರಿಂದ ಆಯಾಯ ಶಾಲೆಗಳಲ್ಲಿ ಸಿ.ಸಿ. ಕ್ಯಾಮರಾವನ್ನು ಅಳವಡಿಸಬೇಕೆಂದು ನಿಯಮ ಬಂದಿರತಕ್ಕಂಥದ್ದು ಬಹಳ ಒಳ್ಳೆಯ ವಿಚಾರವಾಗಿದೆ. ಆದರೆ, ಇಸ್ರೇಲ್ ದೇಶವನ್ನು ಉದಾಹರಣೆಗೆ ತೆಗೆದುಕೊಂಡು ಮಾನ್ಯ ಹಿರಿಯ ಸದಸ್ಯರು ಈಗಾಗಲೇ ಮಾತನಾಡಿದ್ದಾರೆ. ಇಸ್ರೇಲ್ ದೇಶದ ಸರ್ಕಾರದವರು High Definition ಸಿ.ಸಿ. ಕ್ಯಾಮರಾವನ್ನು ಅಳವಡಿಸಿ, ಆಯಾಯ ರಸ್ತೆಯಲ್ಲಿ ರೆಕಾರ್ಡಿಂಗ್ ಇಟ್ಟಿರುವುದರಿಂದ ಆ ದೇಶದ ಪೋಲೀಸ್ ಅಧಿಕಾರಿಗಳು 24 ಗಂಟೆಗಳ ಕಾಲ ಮಾನಿಟರಿಂಗ್ ಮಾಡಿ, 3 ತಿಂಗಳ ಕಾಲ ರೆಕಾರ್ಡಿಂಗ್ ಸ್ಟೋರೇಜ್ ಮಾಡಿರುವ ಬಗ್ಗೆ ಈಗಾಗಲೇ ಮಾನ್ಯ ಶರವಣ ಅವರು ಮಾತನಾಡಿದ್ದರು. ಹಾಗಾಗಿ ಮಾನ್ಯ ಗೃಹ ಸಚಿವರು ಸ್ವಲ್ಪ ಗಮನಹರಿಸಿದರೆ, ನಗರ ಪಾಲಿಕೆ ಸದಸ್ಯರುಗಳು ನಗರ ಪಾಲಿಕೆಯಿಂದಾಗಲಿ ಅಥವಾ ಸರ್ಕಾರದಿಂದಾಗಲಿ ಅವರ ಅಧೀನದಲ್ಲಿರತಕ್ಕಂಥ ರಸ್ತೆಗಳಿಗೆ ಕಡ್ಡಾಯವಾಗಿ ಸಿ.ಸಿ. ಕ್ಯಾಮರಾವನ್ನು ಅಳವಡಿಸಬೇಕು. ಕೆಲವು ಸಾರ್ವಜನಿಕರು ಮನೆಗಳಲ್ಲಿ, ಅಂಗಡಿಗಳಲ್ಲಿ ಅವರ ಸ್ವಂತ ಸುರಕ್ಷತೆಗಾಗಿ ಸಿ.ಸಿ. ಕ್ಯಾಮರಾವನ್ನು ಅಳವಡಿಸಿಕೊಂಡಿರುತ್ತಾರೆ. ಹೀಗಾಗಿ ಅವರ ಹತ್ತಿರ ಮಾಹಿತಿಗಾಗಿ ಸಿ.ಸಿ.ಕ್ಯಾಮರಾವನ್ನು ಕೇಳುವುದರ ಬದಲು ಸರ್ಕಾರದವರು ಪ್ರತಿಯೊಂದು ರಸ್ತೆಯಲ್ಲಿಯೂ ಕೂಡಾ ಸಿ.ಸಿ.ಕ್ಯಾಮರಾವನ್ನು ಅಳವಡಿಸಿ, ರಸ್ತೆಯ ಕೊನೆಯಲ್ಲಿಯೇ ಅಳವಡಿಸಬಹುದು ಅಥವಾ ನಗರ ಪಾಲಿಕೆ ಸದಸ್ಯರಿಗೆ ಒಪ್ಪಿಸುವಂತಹ ನಿಟ್ಟಿನಲ್ಲಿ ಕೆಲಸ ಮಾಡಿದರೆ ಈ ಸಮಸ್ಯೆ ಬಗೆಹರಿಯಬಹುದೆಂದು ಅನ್ನಿಸುತ್ತದೆ. ಎಲ್ಲದಕ್ಕೂ ಕೂಡಾ ಧಾರ್ಮಿಕ ಸಂಸ್ಥೆಗಳಿಗೆ ಹೋಗಿ ಸಿ.ಸಿ.ಕ್ಯಾಮರಾವನ್ನು ಅಳವಡಿಸಿ ನೀವೇ ವಿಡಿಯೋ ಫೂಟೇಜ್ ಕೊಡಿ ಎನ್ನುವುದು ಅಷ್ಟೊಂದು ಸಮಂಜಸವಲ್ಲವೆನ್ನಿಸುತ್ತದೆ.

(ಮುಂದು) . . .

(998)/15.11.2017/5.10/ಎಸ್‌ಕೆ-ವಿಕೆ

**ಶ್ರೀ ಆರ್. ಪ್ರಸನ್ನಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳನ್ನು ತಿಳಿಸುತ್ತಾ, ಕರ್ನಾಟಕ

ಸಾರ್ವಜನಿಕ ಸುರಕ್ಷೆಯ (ಕ್ರಮಗಳ) ಜಾರಿ ವಿಧೇಯಕ, 2017ನ್ನು ಮಾನ್ಯ ಗೃಹ ಸಚಿವರು ಇವತ್ತು ಮಂಡಿಸಿದ್ದಾರೆ. ಅದನ್ನು ಅಂಗೀಕಾರ ಮಾಡುವಂತೆ ಸದನಕ್ಕೆ ನಾನು ಮನವಿ ಮಾಡುತ್ತಾ, ಈ ಒಂದು ಮಸೂದೆಯನ್ನು ನಾನು ಸ್ವಾಗತ ಮಾಡುತ್ತಿದ್ದೇನೆ. ಕಾರಣ ಇವತ್ತು ಮಸೂದೆಯಲ್ಲಿ ಮುಖ್ಯ ಅಂಶವೇನಿದೆ ಎಂದು ಹೇಳಿದರೆ, ಖಾಸಗಿ ಸ್ಥಳಗಳಲ್ಲಿ ಎಲ್ಲಿ ಜನಸಂದಣಿ ಇರುತ್ತದೆ. ಅಂತಹ ಸ್ಥಳಗಳಲ್ಲಿ ಸಿಸಿ ಕ್ಯಾಮರಾಗಳನ್ನು ಹಾಕಬೇಕು. ಅದರಲ್ಲೂ High Definition (HD) ಇರುವಂತಹ ಸಿಸಿ ಕ್ಯಾಮರಾಗಳನ್ನು ಹಾಕಿ, ಅದರ ಮೂರು ತಿಂಗಳ ಕಾಲ footage ಸಂಗ್ರಹಣೆ ಮಾಡಬೇಕೆಂದು ಹೇಳಿ, ಈ ಮಸೂದೆಯಲ್ಲಿ ಏನು ತಂದಿದ್ದಾರೆ. ಅದನ್ನು ನಾನು ಸ್ವಾಗತ ಮಾಡಬೇಕಾಗುತ್ತದೆ. ಕಾರಣ ಒಳ್ಳೆಯ ಗುಣಮಟ್ಟದ ಸಿಸಿ ಕ್ಯಾಮರಾಗಳನ್ನು ಇಡದೇ ಇದ್ದರೆ, ಖಂಡಿತವಾಗಿ ಅದರಲ್ಲಿ ಸುಮ್ಮನೆ ಏನೋ ನೆಪ ಮಾತ್ರಕ್ಕೆ ಒಂದು ಸಿಸಿ ಕ್ಯಾಮರಾ ಹಾಕಿದ್ದೇವೆ. ನೆಪ ಮಾತ್ರಕ್ಕೆ ಸಿಗುತ್ತದೆಂದು ಹೇಳಿ ಹಾಕಿ ಬಿಡುತ್ತಾರೆ. ಇವತ್ತು ಸರ್ಕಾರ ಕಾನೂನು ತಂದಿದೆ. ದ್ವಿಚಕ್ರ ವಾಹನದಲ್ಲಿ ಚಲಿಸುವವರು ಹೆಲ್ಮೆಟ್ ಹಾಕಿಕೊಳ್ಳಬೇಕು ಎಂದು. ಇವತ್ತು ಹೆಲ್ಮೆಟ್ ಹಾಕಿಕೊಂಡಿರುವಂತಹ ಸಂದರ್ಭದಲ್ಲಿ ಯಾವ ರೀತಿಯಿದೆ ಎಂದು ಹೇಳಿದರೆ ನೆಪ ಮಾತ್ರಕ್ಕೆ ಹೆಲ್ಮೆಟ್ ತಲೆ ಮೇಲೆ ಸಿಕ್ಕಿಸಿಕೊಂಡು ಹೋಗುತ್ತಿದ್ದಾರೆ. ಎಲ್ಲಿಯಾದರೂ ಅಪಘಾತವಾದಂತಹ ಸಂದರ್ಭದಲ್ಲಿ ನಿಮ್ಮ ಜೀವದ ರಕ್ಷಣೆಯನ್ನು ನೀವು ಮಾಡಿಕೊಳ್ಳಿ ಎಂದು ಸರ್ಕಾರ ಹೇಳಿದರೆ, ಇವತ್ತು ಅದರ ಬಗ್ಗೆ ಜನ ಆ ಒಂದು ವಿಷಯಕ್ಕೆ ಹೋಗುವುದಿಲ್ಲ. ಆದರೆ ಇವತ್ತು ಸರ್ಕಾರ ಅದಕ್ಕೆ ಸರಿಯಾದ ಕ್ರಮ ತೆಗೆದುಕೊಳ್ಳದಿದ್ದರೆ, ನಿಮ್ಮ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳದಿದ್ದರೆ ಖಂಡಿತ ಮಾಡುವುದಿಲ್ಲ. ಅದಕ್ಕೋಸ್ಕರ ಈ ಮಾತುಗಳನ್ನು ಹೇಳಿದ್ದಾರೆ. ಇನ್ನೊಂದು ಬರೀ Corporation limits ಇರುವ ಸ್ಥಳಗಳಲ್ಲಿ ಎಂದು ಹೇಳಿದ್ದಾರೆ. ಇದನ್ನು ಇಡೀ ರಾಜ್ಯಕ್ಕೆ ತರಬೇಕಾಗುತ್ತದೆ. ಬರೀ Corporation limits ನಲ್ಲಿ ಎಂದು ಹೇಳುವುದು ಸರಿಯಲ್ಲ. ಆ Corporation limits ನಿಂದ ಹೊರಗೆ ಸಾಕಷ್ಟು ವಿದ್ಯಾ ಸಂಸ್ಥೆಗಳಿರಬಹುದು, ಜನಸಂದಣಿ ಇರುವಂತಹ ಪ್ರದೇಶಗಳಿರಬಹುದು. ಆದ್ದರಿಂದ ಇದರ ವ್ಯಾಪ್ತಿಯನ್ನು ಇಡೀ ರಾಜ್ಯಕ್ಕೆ ಪೂರ್ಣವಾಗಿ ಜಾರಿಗೆ ತರಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಾ, ಇದನ್ನು ಅಂಗೀಕರಿಸಬೇಕೆಂದು ನಾನು ಮನವಿ ಮಾಡುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಗೃಹ ಸಚಿವರಿಗೆ ನಾನು ಹೇಳುವುದಕ್ಕೆ ಬಯಸುವುದೇನೆಂದರೆ, ಇವತ್ತು ನೀವು  ಇವತ್ತು ಇವರು ಸರ್ಕಾರಿ ಮತ್ತು ಖಾಸಗಿಯಲ್ಲಿ ವಲಯದಲ್ಲಿ discrimination ಮಾಡುತ್ತಿದ್ದೀರಿ. ಮೊದಲು ಇದು ದೊಡ್ಡದಾದಂತಹ ತಪ್ಪು. ಶ್ರೀಮತಿ ತಾರಾ ಅನೂರಾಧರವರು ಮತ್ತು ಇನ್ನಿತರ ಮಾನ್ಯ ಸದಸ್ಯರುಗಳು ಇಸ್ರೇಲ್ ಬಗ್ಗೆ ಮಾತನಾಡಿದ್ದಾರೆ. ಎರಡು ತಿಂಗಳ ಹಿಂದೆ ನಾನು ಇಸ್ರೇಲ್ ದೇಶಕ್ಕೆ ಹೋಗಿದ್ದೆನು. ಇಸ್ರೇಲ್ ದೇಶದಲ್ಲಿ ಮೊಟ್ಟಮೊದಲ ಬಾರಿಗೆ ಒಂದೇ ಸಾರಿ bomb blast ಆಗಿದ್ದು. ನಾವು

ಹೋದಾಗ ಅವರು ತೋರಿಸಿದರು. ಸುಮಾರು 9.00 ಗಂಟೆಗೆ bomb blast ಆದಾಗ ಸುಮಾರು 11.00 ಗಂಟೆಗೆ ಅವರನ್ನು arrest ಮಾಡಿದ್ದಾರೆ. ಸಂಜೆ ಸುಮಾರು 6.00 ಗಂಟೆಗೆ ಶಿಕ್ಷೆಯನ್ನು ಕೊಟ್ಟಿದ್ದಾರೆ. ಖಾಸಗಿಯವರು ಅಲ್ಲಿ ಯಾವುದೇ ಸಿಸಿ ಕ್ಯಾಮರಾಗಳು ಹಾಕಿಲ್ಲ. ಎಲ್ಲಾ ಸರ್ಕಾರದವರೇ ಸಿಸಿ ಕ್ಯಾಮರಾವನ್ನು ಹಾಕಿದ್ದಾರೆ. ಎಲ್ಲೆಂದರಲ್ಲಿ ನಾವು ಪೋಲೀಸ್ ನೋಡಲಿಲ್ಲ. ದೂರವಾಣಿ ಕರೆ ಮಾಡಿದ 25 ರಿಂದ 30 ಸೆಕೆಂಡ್‌ಗಳೊಳಗೆ ಪೋಲೀಸ್‌ನವರು ಅಲ್ಲಿ ಬರುತ್ತಾರೆ. ಎಲ್ಲಾ ಏರಿಯಾಗಳಲ್ಲಿ ಸಿಸಿ ಕ್ಯಾಮರಾಗಳನ್ನು fix ಮಾಡಿದ್ದಾರೆ. ನಾನು ಏನು ಹೇಳುತ್ತೇನೆಂದರೆ ಸರ್ಕಾರದವರೇ ಒಂದು ಮಾದರಿಯಾಗಿರಬೇಕು. ಶಾಸಕರ ನಿಧಿ, Corporate Fund ಇದೆ. ಅದನ್ನು compulsory ಇಷ್ಟಿಷ್ಟು ಫಂಡ್ ಕೊಡಬೇಕೆಂದು ಹೇಳಿ, ಅದನ್ನು ತೆಗೆದುಕೊಂಡು ಮಾಡಿದರೆ ಅದು ಒಳ್ಳೆಯದಾಗುತ್ತದೆ. ಆಸ್ಪತ್ರೆಗಳು, ಸಂಸ್ಥೆಗಳು ಸರ್ಕಾರದ್ದಲ್ಲ. ಎಲ್ಲವನ್ನು ಖಾಸಗಿಯವರೇ ಮಾಡಬೇಕೆಂದು ಇವರು ಏಕೆ ಹೇಳಬೇಕು. ಇದು ಸರಿಯಾದಂತಹ ಕ್ರಮವಲ್ಲ. ನಾನು ಮಾತನಾಡುವ ಅವಶ್ಯಕತೆಯಿರಲಿಲ್ಲ. ಸರ್ಕಾರ ಮಾದರಿಯಾಗಿ ಜನರಿಗೆ ತೋರಿಸಬೇಕು. ನಾವು ಮೊದಲು ಮಾದರಿಯಾಗುವ ಬದಲು ಇನ್ನೊಬ್ಬರಿಗೆ ಹೇಳಿದರೆ ಏನಾಗುತ್ತದೆಂದರೆ ಅದು ತಪ್ಪಾಗುತ್ತದೆ. ಇದಕ್ಕೆ ನಾನು ಹೇಳುವುದೇನೆಂದರೆ ಈ ವಿಧೇಯಕದ ಬಗ್ಗೆ ಸಾಕಷ್ಟು ಚರ್ಚೆ ಮಾಡಿದ್ದೇವೆ. ದಯಮಾಡಿ, ಇದನ್ನು ಇನ್ನೊಂದು ಬಾರಿ ಇಲಾಖೆಗೆ ಕೊಡಬೇಕು, ಏನು ಮಾಡಬೇಕೆಂಬುದರ ಬಗ್ಗೆ ಅಧಿಕಾರಿಗಳ ಜೊತೆ ಚರ್ಚೆ ಮಾಡಿ, ನಮ್ಮ ಅಧಿಕಾರಿಗಳನ್ನು ನಾವೇ ನಂಬಲಿಲ್ಲವೆಂದರೆ ಇನ್ನು ಯಾರು ನಂಬುತ್ತಾರೆ ಎನ್ನುವುದು ನಮಗೆ ಬಹಳ ಮುಖ್ಯವಾದದ್ದು. ಮಾನ್ಯ ರಾಮಚಂದ್ರಗೌಡರವರು ಮತ್ತು ನಾನು ಮಾತನಾಡುತ್ತಿದ್ದೆವು. ಆದರೆ ಕೆಲವರಿಂದ ಇಡೀ ವ್ಯವಸ್ಥೆಯೇ ಹಾಳಾಗುವುದಂತಹದ್ದು ಸರಿಯಲ್ಲವೆಂದು ನಾವು ಅದನ್ನು ಹೇಳುತ್ತೇವೆ. ಆ ಹಿನ್ನೆಲೆಯಲ್ಲಿ ಇದರ ಬಗ್ಗೆ ಸುಧೀರ್ಘವಾಗಿ ಚರ್ಚೆ ಮಾಡಿ, ತಿದ್ದುಪಡಿಗಳೆಲ್ಲವನ್ನೂ ಕ್ರೋಢೀಕರಿಸಿ, ನಂತರ ಅವುಗಳೆಲ್ಲವನ್ನೂ ಅಳವಡಿಸಿ ಜಾರಿಗೆ ತರುವುದಾದರೆ ಈ ವಿಧೇಯಕವನ್ನು ಅಂಗೀಕಾರ ಮಾಡಬಹುದು. ಏಕೆಂದರೆ ಇದರಿಂದ ಜನರಿಗೆ ರೀತಿ-ನೀತಿಗಳನ್ನು ಕಲಿಸಬೇಕಾಗುತ್ತದೆ. ಪ್ರತಿಯೊಂದನ್ನು ಉದಾಹರಣೆಯಾಗಿ ತೆಗೆದುಕೊಳ್ಳಲಿ. ಈಗ ಅವರು ಸಾರಿಗೆ ಮಂತ್ರಿಗಳಾಗಿದ್ದಾಗ ಕೆಎಸ್‌ಆರ್‌ಟಿಸಿ ಹಣೆಬರಹ ಏನಿತ್ತು? ಗಾಳಿಮಠ್ ಎನ್ನುವಂಥ ಹುಡುಗನೊಬ್ಬನಿಗೆ ಮೂಲವ್ಯಾಧಿಯಾದ ಕಾರಣ ಚಿಕಿತ್ಸೆ ಪಡೆಯಲೆಂದು ಬೆಂಗಳೂರಿನ ಒಂದು ಪ್ರತಿಷ್ಠಿತ ಆಸ್ಪತ್ರೆಗೆ ದಾಖಲಾಗಿದ್ದು, ಅಲ್ಲಿ ಅವನಿಗೆ ಶಸ್ತ್ರಚಿಕಿತ್ಸೆ ನಡೆಸಿದಂತಹ ಸಂದರ್ಭದಲ್ಲಿ ಬಟ್ಟೆಯನ್ನು ದೇಹದೊಳಗಡೆಯೇ ಬಿಟ್ಟು ಶಸ್ತ್ರಚಿಕಿತ್ಸೆಯನ್ನು ಮುಗಿಸಿದ್ದರು. ನಂತರ ಅವನ ದೇಹವೆಲ್ಲಾ ಕೀವು ಆಗಿತ್ತು. ಇಷ್ಟೆಲ್ಲಾ ಆದರೂ ಸಹ ಇಂತಹ ಆಸ್ಪತ್ರೆಗಳ ಮೇಲೆ ಯಾವುದೇ ಕ್ರಮ ಜರುಗಿಸಿಲ್ಲ. ದಯಮಾಡಿ, ಸರ್ಕಾರದಿಂದ ಮಾಡುವಂತಹ ವ್ಯವಸ್ಥೆ ಮಾಡಿ. ಸರ್ಕಾರದಿಂದ ಹಣ ಕೊಡುತ್ತೀರಿ. 300 ಜನ ಶಾಸಕರ ನಿಧಿ ಮತ್ತು Corporate Fund ನಿಂದ ಮಾಡಿ. ನೀವು ಏನು terms and

conditions ಹಾಕುತ್ತೀರಿ, ಸಿಸಿ ಕ್ಯಾಮರಾ ಅಳವಡಿಸುವುದರಲ್ಲಿ ಕೂಡ malpractice ಆಗುತ್ತದೆ. ಸಿಸಿ ಕ್ಯಾಮರಾಗಳು ಇಂತಹದ್ದೇ ಹಾಕಬೇಕೆಂದು ಹೇಳುತ್ತೀರಿ. ಅವರು ಯಾವುದೋ ಸಿಸಿ ಕ್ಯಾಮರಾಗಳನ್ನು ಹಾಕಿ certify ಮಾಡಿಕೊಡುತ್ತಾರೆ. ಅಲ್ಲಿ ಕೂಡ ಭ್ರಷ್ಟಾಚಾರವಾಗುತ್ತದೆ. ನನಗೆ ಅನಿಸುವ ರೀತಿಯಲ್ಲಿ ಎಲ್ಲಾ ಮಾನ್ಯ ಸದಸ್ಯರುಗಳು ಹೇಳಿರುವ ಮಾತುಗಳನ್ನು ಕ್ರೋಢೀಕರಿಸಿ, ಅವರು ವಿಧೇಯಕವನ್ನು ಮಂಡಿಸಿದರೆ ಪಾಸ್ ಮಾಡುವುದು ಸೂಕ್ತವೆನ್ನುವುದು ನನ್ನ ಅಭಿಪ್ರಾಯವಾಗಿದೆ.

**ಶ್ರೀ ರಾಮಲಿಂಗಾರೆಡ್ಡಿ (ಗೃಹ ಸಚಿವರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರುಗಳು ಅನೇಕ ಸಲಹೆ ಸೂಚನೆಗಳನ್ನು ನೀಡಿದ್ದಕ್ಕಾಗಿ ಧನ್ಯವಾದಗಳನ್ನು ಹೇಳುತ್ತೇನೆ. ಈ ತಿಂಗಳಿನ 8 ನೇ ತಾರೀಖಿನಂದು ಗುರಪ್ಪನಪಾಳ್ಯ ವಾರ್ಡ್‌ಗೆ ಹೋಗಿದ್ದೆನು. ಗುರಪ್ಪನ ಪಾಳ್ಯ ವಾರ್ಡ್ ಒಂದರಲ್ಲೇ 90 ರಿಂದ 100 ಕ್ಯಾಮರಾಗಳನ್ನು operate ಮಾಡುತ್ತಾರೆ. ಇದನ್ನು ಮಾನಿಟರ್ ಮಾಡುವುದಕ್ಕೆ 10 X 10 ಅಡಿಯ ಒಂದು ಬಿಲ್ಡಿಂಗ್ ಕಟ್ಟಿದ್ದಾರೆ. 100 ಸಿಸಿ ಟಿವಿ ಕ್ಯಾಮರಾಗಳಿಗೂ ಕೂಡ 10 X 10 ಅಡಿಯ ಛೇಂಬರ್‌ನಲ್ಲಿ ಕುಳಿತುಕೊಂಡು ಅಲ್ಲಿಂದಲೇ ಎಲ್ಲಾ monitor ಮಾಡಬಹುದು. ಆಮೇಲೆ ಅಲ್ಲಿಂದಲೇ ಮೈಕ್‌ನಲ್ಲೇ ಮಾತನಾಡಬಹುದು. ಒಂದು ಅಂಗಡಿಯ ಮುಂದೆ ಆಟೋ ನಿಲ್ಲಿಸಿರುತ್ತಾರೆ ಅಥವಾ ರಸ್ತೆಯಲ್ಲಿ ಟೆಂಪೋ ನಿಲ್ಲಿಸಿ ಬಿಟ್ಟಿರುತ್ತಾರೆ ಮತ್ತು ಜನ ಗುಂಪು ಕಟ್ಟಿಕೊಂಡಿರುತ್ತಾರೆ. 100 ಸಿಸಿ ಟಿವಿ ಕ್ಯಾಮರಾಗಳಿಂದ ಇಡೀ ವಾರ್ಡ್ monitor ಮಾಡುತ್ತಿದ್ದಾರೆ. ಶ್ರೀಮತಿ ತಾರಾ ಅನೂರಾಧರವರು ಹೇಳಿದರು, ಬಿಬಿಎಂಪಿಯಲ್ಲಿ ಒಂದೊಂದು ಕಾರ್ಪೋರೇಟರ್ ಏರಿಯಾಗೆ ಸಿಸಿ ಕ್ಯಾಮರಾಗಳನ್ನು ಅಳವಡಿಸಿಕೊಳ್ಳುವುದಕ್ಕೆ ಹತ್ತು ಲಕ್ಷ ರೂಪಾಯಿಗಳನ್ನು ಇಟ್ಟುಕೊಂಡಿದ್ದಾರೆ. ನಾನು, ಪೋಲೀಸ್ ಕಮೀಷನರ್, ಕಾರ್ಪೋರೇಷನ್ ಕಮೀಷನರ್, ಮೇಯರ್ ಮಾತನಾಡಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳ ಜೊತೆ ಮೀಟಿಂಗ್ ನಡೆದಾಗ ಕಾರ್ಪೋರೇಷನ್‌ನಿಂದ ಹಣ ಇದಕ್ಕೆ ವರ್ಗಾವಣೆ ಮಾಡಿಬಿಡಿ ಎಂದು ಅವರು ಹೇಳಿದರು. ಆಮೇಲೆ ಕಾರ್ಪೋರೇಷನ್ ಅವರು ಏನು ಹೇಳಿದರೆಂದರೆ corporators ಅವರವರ ಏರಿಯಾದಲ್ಲಿ ಯಾವುದೋ ಸಂಸ್ಥೆಯಿಂದ ಸಿಸಿಟಿವಿ ಅಳವಡಿಸಿದರೆ ಅವರಿಗೆ exemption ಸಿಗುತ್ತದೆ. ಆದುದರಿಂದ ಅವರೇ ಅದನ್ನು ಮಾಡಿಕೊಳ್ಳುತ್ತಾರೆಂದು ಹೇಳಿದರು. ಪೋಲೀಸ್ ಇಲಾಖೆಯಿಂದ ಅವರು ಎಲ್ಲಿ ಹೇಳುತ್ತಾರೋ ಅಂತಹ ಕಡೆ ಹಾಕಿಕೊಳ್ಳಿ ಎಂದು ನಾವು ಹೇಳಿದ್ದೇವೆ. ಅಂತಹ ಸಂದರ್ಭದಲ್ಲಿ ದೇವಸ್ಥಾನಗಳು ಅಂತಹದ್ದಕ್ಕೆಲ್ಲಾ ಮಾಡಬಹುದು. ಸಂಪೂರ್ಣ ವಾರ್ಡ್‌ಗೆ ಹತ್ತು ಲಕ್ಷ ರೂಪಾಯಿಗಳಲ್ಲಿ ಆಗುವುದಿಲ್ಲ. ಇನ್ನು ಎಂಟು-ಹತ್ತು ಲಕ್ಷ ರೂಪಾಯಿಗಳನ್ನು ಹಾಕಿಕೊಂಡರೆ ಸಂಪೂರ್ಣ ವಾರ್ಡ್‌ಗೆ cover ಆಗುತ್ತದೆ. ಇದರಿಂದ ಬಹಳ ಒಳ್ಳೆಯದು ಆಗುತ್ತದೆ. ಗುರಪ್ಪನ ಪಾಳ್ಯದಲ್ಲಿ ಬಹಳ ಚೆನ್ನಾಗಿ ಮಾಡಿರುವುದನ್ನು ನೋಡಿದರೆ ನಮ್ಮ ಕಮೀಷನ್‌ರವರೇ ಪ್ರಶಂಸಿಸಿದರು. ಅವರು ಏನು ಮಾಡಿದ್ದಾರೆ ಅದೆಲ್ಲವನ್ನು ನಮ್ಮ ಪೋಲೀಸ್

ಇಲಾಖೆಗೆ ಕೊಟ್ಟರೆ, ಒಬ್ಬ ಪೋಲೀಸ್ ಕಾನ್ಸ್‌ಟೇಬಲ್ ಇಡೀ ವಾರ್ಡ್‌ನಲ್ಲಿ ಏನಾಗುತ್ತದೆಂಬುದನ್ನು monitor ಮಾಡಬಹುದು.

ಮಾನ್ಯ ಸಭಾಪತಿಯವರೆ, ಈಗಾಗಲೇ ಬೆಂಗಳೂರಿನಲ್ಲಿ ಐದು ಲಕ್ಷ ನಲವತ್ತು ಸಾವಿರಕ್ಕಿಂತಲೂ ಹೆಚ್ಚು ಸಿಸಿ ಕ್ಯಾಮರಾಗಳು ಖಾಸಗಿಯವರ ಹತ್ತಿರವಿದೆ. ನಾವು ಬರೀ ಟ್ರಾಫಿಕ್‌ನಲ್ಲಿ maintain ಮಾಡುತ್ತಿದ್ದೇವೆ. ರಸ್ತೆಗಳಲ್ಲಿ ಎಲ್ಲೆಲ್ಲಿ ಟ್ರಾಫಿಕ್ ಮತ್ತು ಸಿಗ್ನಲ್ಸ್ ಇರುತ್ತದೆಯೋ ಅಲ್ಲಿ ನಮ್ಮ ಸಿಸಿ ಕ್ಯಾಮರಾಗಳಿವೆ. ಐದು ಲಕ್ಷ ನಲವತ್ತು ಸಾವಿರಕ್ಕಿಂತಲೂ ಹೆಚ್ಚು ಸಿಸಿ ಕ್ಯಾಮರಾಗಳು ಹೋಟೇಲ್‌ಗಳು, ಅಪಾರ್ಟ್‌ಮೆಂಟ್ಸ್, Commercial Establishments, ಮಾಲ್‌ಗಳಲ್ಲಿ ಎಲ್ಲಾ ಕಡೆಗಳಲ್ಲಿಯೂ ಇದೆ. ನಾವು ಇದನ್ನು ನಾವು ಕಡ್ಡಾಯ ಮಾಡುತ್ತಿದ್ದೇವೆ. ಇನ್ನೇನು ಗರಿಷ್ಟ ಎರಡು-ಮೂರು ಲಕ್ಷಗಳಾದರೆ ಎಲ್ಲವೂ ಮುಗಿದು ಬಿಡುತ್ತದೆ. ಆಮೇಲೆ ಇದು ಖಾಸಗಿ ಅಲ್ಲ. 2(ಎ)ನಲ್ಲಿ ಎಲ್ಲಾ Government Establishments ಕೂಡ ಇದರಲ್ಲಿ ಬಂದು ಬಿಡುತ್ತದೆ. ಆಮೇಲೆ ಹಣ ಯಾವ ರೀತಿ ಬೇಕೋ ಅದನ್ನು ಬೇಕಾದರೆ ಸರ್ಕಾರವೇ ಕೊಡಬಹುದು ಅಥವಾ ಶಾಸಕರ ಫಂಡ್‌ನಲ್ಲಿ ಕೊಡಬಹುದು ಮತ್ತು ಈಗ ಕಾರ್ಪೋರೇಷನ್‌ನಲ್ಲಿ ನಾವು ಎಲ್ಲೆಲ್ಲಿ Rangers and Commissioners ಜೊತೆಗೆ ಮೀಟಿಂಗ್ ಮಾಡುವುದಕ್ಕೆ ಹೋದಂತಹ ಸಂದರ್ಭದಲ್ಲಿ Local Bodies ನ್ನು contact ಮಾಡಿ ನಮ್ಮ ಭಾರತ ಸರ್ಕಾರದಿಂದ ಹೇಗಿದ್ದರೂ Smart Cities ಅಡಿಯಲ್ಲಿ ಫಂಡ್ಸ್ ಬರುತ್ತದೆ. ಅದನ್ನು ಉಪಯೋಗಿಸಿಕೊಂಡು ಮಾಡಿ ಎಂದು ಹೇಳಿದ್ದೇನೆ. ನಾವು ಪ್ರಾರಂಭ ಮಾಡಿದರೆ, ಬಹುತೇಕ ಒಂದೆರಡು ವರ್ಷದಲ್ಲಿ ಕರ್ನಾಟಕ ರಾಜ್ಯದಲ್ಲಿ ಎಲ್ಲಾ ಕಡೆಗಳಲ್ಲಿ ಕೂಡ ಇದು ಆಗುತ್ತದೆ. ಇದರಿಂದ crime rate ಕೂಡ ಕಡಿಮೆ ಆಗುತ್ತದೆ. Crime ಆಗುವುದೊಂದು ವಿಚಾರ. ಮತ್ತೊಂದು ಅಂಶ ಎಂದರೆ crime ಆದರೆ ತಕ್ಷಣ ಹಿಡಿಯಬಹುದು. ಇದೊಂದು ಅನುಕೂಲವಾಗುತ್ತದೆ ಮತ್ತು 2(ಎ)ನಲ್ಲಿ ಯಾವುದನ್ನಾದರೂ ಸೇರಿಸಿಕೊಳ್ಳಬಹುದು, ಸರ್ಕಾರದ್ದು ಇದೆ. ಈಗಾಗಲೇ ಪಿ.ಜಿ.ಗಳು ಬ್ಯಾಂಕ್‌ಗಳು ಎಲ್ಲವನ್ನು ಸೇರಿಸಬೇಕೆಂದು ಮಾನ್ಯ ಉಗ್ರಪ್ಪನವರು ಹೇಳಿದ್ದಾರೆ. ಇದೆಲ್ಲವನ್ನು ಸೇರಿಸಿಕೊಂಡು ಹೋಗಬಹುದು. 3(1) ನಲ್ಲಿ ಮೂವತ್ತು ದಿವಸ ಎಂದು ಇದೆ. ನಾವು ಅದನ್ನು ನೋಟಿಫಿಕೇಷನ್ ಮಾಡಿಕೊಂಡು, ಎರಡು ವರ್ಷ, ಮೂರು ವರ್ಷಗಳು ಅಥವಾ ಇನ್ನೂ ಎಷ್ಟು ದಿವಸವಾದರೂ ಇಟ್ಟುಕೊಳ್ಳಬಹುದು. ಅದನ್ನು storage ಮಾಡುವುದಕ್ಕೆ ದೊಡ್ಡ ಜಾಗ ಬೇಕಾಗುವುದಿಲ್ಲ. ಒಂದು ಸಣ್ಣ pen driveನಲ್ಲಿ ಎಷ್ಟು ಮಾಹಿತಿಗಳನ್ನು ಸಂಗ್ರಹಿಸಬಹುದು. ನಮಗೆ ಏನು ಅಂತಹ ಹೆಚ್ಚು ಸಮಸ್ಯೆ ಎನಿಸುವುದಿಲ್ಲ. ಬೇರೆ ನಗರಗಳಿಗೂ ಹಾಗೂ ಹಳ್ಳಿಗಳಿಗೂ ಕೂಡ ನೋಟಿಫಿಕೇಷನ್ ಮಾಡಿಕೊಂಡು ಇದನ್ನು ಮಾಡಿಕೊಳ್ಳಬಹುದು. ಇದರಲ್ಲಿಯೇ ಅಧಿಕಾರವಿದೆ. ಕಲಂ 6(3)ನಲ್ಲಿ schools and temples ಗೆ exemption ಇದೆ. ಮಾನ್ಯ

ರಮೇಶ್‌ರವರು seal ಮಾಡುತ್ತಾರೆಂದು ಹೇಳಿದರು. ಇಲ್ಲಿ seal ಮಾಡುವ ಪ್ರಶ್ನೆಯೇ ಬರುವುದಿಲ್ಲ. Schools and temples ಗೆ seal ಮಾಡಬಾರದೆಂದು exemption ಇದೆ.

(ಮುಂದು...)

(999)15.11.2017/5.20/ಟಿಸಿಹೆಚ್-ವಿಕೆ

**ಶ್ರೀ ರಾಮಲಿಂಗಾ ರೆಡ್ಡಿ (ಗೃಹ ಸಚಿವರು) (ಮುಂದು)**

ಸೆಕ್ಷನ್ 6(3) ರಲ್ಲಿ ಶಾಲೆಗಳು ಮತ್ತು ದೇವಸ್ಥಾನಗಳಿಗೆ ವಿನಾಯಿತಿ ಇದೆ. ಆದರೆ ಬೇರೆಯವುಗಳಿಗೆ ಬರುತ್ತದೆ. ಈಗ ಮಾಲ್‌ಗಳಲ್ಲಿ, ಹೋಟೆಲ್‌ನಲ್ಲಿ ಸಿ.ಸಿ.ಟಿ.ವಿ ಕ್ಯಾಮರಾಗಳನ್ನು ಹಾಕಿಲ್ಲವೆಂದರೆ ಸೀಲು ಮಾಡಬಹುದು. ಇವುಗಳಿಗೆ ಮಾತ್ರ ಈ ರೀತಿ ಇದೆ. ಆದ್ದರಿಂದ ಶಾಲಾ-ಕಾಲೇಜುಗಳು ಹಾಗೂ ಧಾರ್ಮಿಕ ಸಂಸ್ಥೆಗಳಿಗೆ exemption ಇದೆ. ಆದರೆ ಸುರಕ್ಷತೆಯ ದೃಷ್ಟಿಯಿಂದ ಹಾಕಿ ಎಂದು ನಾವು ಒತ್ತಾಯ ಮಾಡುತ್ತೇವೆ. ಆದರೆ ಇದರಲ್ಲಿ ೖಚಿಟ ಮಾಡುವಂಥ ಪ್ರಶ್ನೆ ಬರುವುದಿಲ್ಲ. ಅಪೀಲ್‌ಗಳು ಸಹ 7(1)ರಲ್ಲಿ ನಾವು ನಿಯಮದಲ್ಲಿ ಬದಲಾವಣೆ ಮಾಡಿಕೊಂಡು ಅದಕ್ಕೆ ಒಂದು ಸಮಯ ನಿಗಧಿ ಮಾಡೋಣ, ಇದರಿಂದ ಏನೂ ಸಮಸ್ಯೆ ಇಲ್ಲ. ಮಾನ್ಯ ಉಗ್ರಪ್ಪನವರು ಸಹ ದಂಡ ವಿಧಿಸುವುದು ಕೇವಲ 2,000 ರೂಪಾಯಿಗಳು, 4,000 ರೂಪಾಯಿಗಳು ಮತ್ತು ಇನ್ನೊಂದು ಕಡೆ 5,000 ರೂಪಾಯಿಗಳು ಮತ್ತು 10,000 ರೂಪಾಯಿಗಳು ಇದೆ, ಇದು ಬಹಳ ಕಡಿಮೆ ಇದೆ ಎಂದು ಹೇಳಿದರು. ಇದನ್ನೂ ಕೂಡ ನಾವು ಮುಂದಿನ ದಿನಗಳಲ್ಲಿ ಜಾಸ್ತಿ ಮಾಡಿಕೊಳ್ಳಬಹುದು. ಏಕೆಂದರೆ, ಬೆಂಗಳೂರಿನಲ್ಲಿ ದೊಡ್ಡ ದೊಡ್ಡ ಶಾಲೆಗಳಿವೆ, ಅಲ್ಲಿ ಎಲ್ಲೂ ಕೂಡ 100 ಮಕ್ಕಳು ಮತ್ತು 200 ಮಕ್ಕಳು ವ್ಯಾಸಂಗ ಮಾಡತಕ್ಕಂಥ ಶಾಲೆಗಳು ಇಲ್ಲ. ನಮ್ಮ ರೆಡ್ಡಿ ಜನ ಸಂಘದ ಶಾಲೆಯ ಆವರಣದಲ್ಲಿ ಸುಮಾರು 8000 ವಿದ್ಯಾರ್ಥಿಗಳಿದ್ದಾರೆ. ಒಂದು ಶಾಲೆಯಲ್ಲಿ 8000 ವಿದ್ಯಾರ್ಥಿಗಳಿರುವ ಸಂಸ್ಥೆಗಳು, ಸಿ.ಸಿ.ಟಿ.ವಿ ಕ್ಯಾಮರಾಗಳನ್ನು ಹಾಕಿ maintain ಮಾಡುವುದೆಂದರೆ, ಅಲ್ಲಿ ಸುಮಾರು 400-500 ಜನ ಸಿಬ್ಬಂದಿಗಳು ಇರುತ್ತಾರೆ. ಈ ರೀತಿ ಬೇರೆ ಬೇರೆ ದೊಡ್ಡ ದೊಡ್ಡ ಶಾಲೆಗಳಲ್ಲಿ ಒಂದೂವರೆ ಲಕ್ಷ ವಿದ್ಯಾರ್ಥಿಗಳು admission ಪಡೆದಿದ್ದಾರೆ. ಅಂದರೆ ಆ ಶಾಲೆಗಳ transaction ವರ್ಷಕ್ಕೆ ಎಷ್ಟು ಆಗಬಹುದು ಅಲ್ಲವೇ? ಇಂತಹ ಕಡೆಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮರಾಗಳನ್ನು ಹಾಕಿದರೆ, ಮಕ್ಕಳ ಸುರಕ್ಷತೆಗೆ ಅನುಕೂಲವಾಗುತ್ತದೆ ಎಂದು ಇದೆ. ನಾವು ಸಿ.ಸಿ.ಟಿ.ವಿ ಕ್ಯಾಮರಾಗಳನ್ನು ಹಾಕುವಾಗಲೂ ಸಹ ನಾವು High Definition (HD) cameras ಹಾಕದೇ ಇದ್ದರೆ, ಸುಮ್ಮನೆ ಕಾಟಾಚಾರಕ್ಕೆ ಯಾವುದೋ ಒಂದು ಸಿ.ಸಿ.ಟಿ.ವಿ ಕ್ಯಾಮರಾಗಳನ್ನು ಹಾಕಿಬಿಡುತ್ತಾರೆ. ಈಗ ದ್ವಿಚಕ್ರ ವಾಹನ ಸವಾರರು ಹೆಲ್ಮೆಟ್ ಧರಿಸುವಂತೆ, ಸುಪ್ರೀಂ ಕೋರ್ಟ್ ಆದೇಶ ಕೊಟ್ಟಿದೆ. ನಮ್ಮ ರಾಜ್ಯದಲ್ಲೂ ಕೂಡ ಹೆಲ್ಮೆಟ್ ಧರಿಸಬೇಕೆಂದು ಕಡ್ಡಾಯ ಮಾಡಿದ್ದೇವೆ. ವಾಹನ ಸವಾರರು ಹೆಲ್ಮೆಟ್‌ಗಳನ್ನು ಯಾವ ರೀತಿ

ಹಾಕಿಕೊಳ್ಳುತ್ತಿದ್ದಾರೆಂದರೆ, ಸುಮ್ಮನೆ ಕಾಟಾಚಾರಕ್ಕೆ ಟೋಪಿಯಂತಿರುವ ಹೆಲ್ಮೆಟ್‌ಗಳನ್ನು ಧರಿಸಿಕೊಂಡು ವಾಹನವನ್ನು ಚಲಾಯಿಸುತ್ತಿದ್ದು, ಮತ್ತೆ ಕಾರುಗಳ ಚಾಲಕರು ಸೀಟ್ ಬೆಲ್ಟ್ ಕೂಡ ಕಟ್ಟಿಕೊಳ್ಳುವುದಿಲ್ಲ. ನಮ್ಮ ರಾಜ್ಯದಲ್ಲಿ speed governor ಜಾರಿಗೆ ತಂದಿದ್ದೇವೆ. ನಮ್ಮ ಸುರಕ್ಷತೆಗೋಸ್ಕರ speed governor ನ್ನು ಅಳವಡಿಸಿಕೊಳ್ಳಿ ಎಂದು ಹೇಳುವಂಥದ್ದು. ಅದ್ಯಾವುದೋ ಕಾಟಾಚಾರಕ್ಕೆ 1,500 ರೂಪಾಯಿಯದು ತೋರಿಸುವುದಕ್ಕಾಗಿ ನಮ್ಮ ವಾಹನಕ್ಕೆ speed governor ನ್ನು ಅಳವಡಿಸಿದ್ದೇವೆಂದು ಹೇಳುತ್ತಾರೆ. ಆದ್ದರಿಂದ High Definition (HD) cameras ಹಾಕಬೇಕು. ಆದ್ದರಿಂದ ಸರ್ಕಾರ ಏನು specifications ಕೊಡುತ್ತದೆಯೋ ಅದನ್ನು ಹಾಕಿದರೆ ಇದರಿಂದ ನಮಗೆ ಅನುಕೂಲವಾಗುತ್ತದೆ, ಇಲ್ಲದಿದ್ದರೆ ಸುಮ್ಮನೆ ಏನೋ ಕಾಟಾಚಾರಕ್ಕೆ ಯಾವುದೋ ಒಂದನ್ನು ಅಳವಡಿಸಿದರೆ, ಇದರಿಂದ ಏನು ಅನುಕೂಲವಾಗುವುದಿಲ್ಲ. ಮಾನ್ಯ ಸಭಾಪತಿಯವರೇ, ಈ clarifications ನಿಂದ ಮಾನ್ಯ ಸದಸ್ಯರಿಗೆಲ್ಲಾ ಸಮಾಧಾನವಾಗಿದೆ ಎಂದು ಅನ್ನಿಸುತ್ತದೆ. ಆದ್ದರಿಂದ ದಯವಿಟ್ಟು ಈ ವಿಧೇಯಕವನ್ನು ಅನುಮೋದನೆ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ರಮೇಶ್ ಬಾಬು (ಶಿಕ್ಷಕರ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ, ಒಂದು ನಿಮಿಷ, ಬಹಳ ಪ್ರಮುಖವಾದ. . .

**ಶ್ರೀ ರಾಮಲಿಂಗಾರೆಡ್ಡಿ (ಗೃಹ ಸಚಿವರು)**:- ಸಿ.ಸಿ.ಟಿ.ವಿ ಕ್ಯಾಮರಾಗಳ footage ನ್ನು 30 ದಿನಗಳ ಇಟ್ಟುಕೊಳ್ಳಿ ಎಂದು ಹೇಳಿರುತ್ತೇವೆ. ಆದರೆ ಅವರು ಅದನ್ನು ಇಟ್ಟುಕೊಂಡಿರುವುದಿಲ್ಲ, ಅಂತಹ ಸಂದರ್ಭದಲ್ಲಿ ಮಾತ್ರ ಇದು ಬರುತ್ತದೆ. ಮುಂದೆ ಏನಾದರೂ ಸಮಯ ಸಂದರ್ಭ ಬಂದಾಗ ನಾವು ಇದಕ್ಕೆ ತಿದ್ದುಪಡಿಯನ್ನು ಮಾಡಿಕೊಳ್ಳಬಹುದು. ಸಿ.ಸಿ.ಟಿ.ವಿ. ಕ್ಯಾಮರಾ ಅಗತ್ಯವಾಗಿ ಬೇಕೇ ಬೇಕು ಎಂದು ನಾವು ನೀವೆಲ್ಲರೂ ಮಾತನಾಡುತ್ತಿದ್ದೇವೆ. ಕೆಲವೊಂದು ವಿಚಾರಗಳಲ್ಲಿ ಅಂದರೆ, ಕುಮಾರಿ ನಿರ್ಭಯ ಪ್ರಕರಣ ಆಯಿತು. ಈ ಪ್ರಕರಣವು ಬರೀ ನಮ್ಮ ರಾಷ್ಟ್ರದಲ್ಲೇ ಅಲ್ಲದೇ ಅಂತರರಾಷ್ಟ್ರೀಯ ಮಟ್ಟದಲ್ಲಿ ಸುದ್ದಿ ಆಯಿತು. ನಮ್ಮ ದೇಶಕ್ಕೂ ಕೂಡ ಕೆಟ್ಟ ಹೆಸರು ಬಂತು. ಆಮೇಲೆ ಪ್ರತಿಭಾ ಎನ್ನುವ ಒಬ್ಬ ಸಾಫ್ಟ್‌ವೇರ್ ಇಂಜಿನಿಯರ್‌ನ್ನು ರೇಪ್ ಮಾಡಿ ಅವರನ್ನು ಸಾಯಿಸಿ ಹಾಕಿಬಿಟ್ಟರಲ್ಲಾ, ಅದೂ ಕೂಡ ಸುದ್ದಿಯಾಯಿತು. ಅದಾದ ನಂತರ ಇತ್ತೀಚೆಗೆ ಹರಿಯಾಣದಲ್ಲಿ ರೆಯಾನ್ಸ್ ಶಾಲೆಯಲ್ಲಿ ಆ ಮಗುವಿನ ಕತ್ತನ್ನು ಸೀಳಿರುವ ಪ್ರಕರಣವನ್ನು ಸಹ ನೋಡಿದ್ದೇವೆ. ಹಿಂದಿನ ವರ್ಷ ಜನವರಿ 1ನೇ ತಾರೀಖಿನಂದು ಬ್ಯಾನರಿ ರೋಡ್‌ನಲ್ಲಿ ರಾತ್ರಿ 3.30 ಗಂಟೆಯಲ್ಲಿ ಆದ ಪ್ರಕರಣ. ಆ ಒಂದು incident ನಿಂದ ಬೆಂಗಳೂರಿನಲ್ಲಿ ಭದ್ರತೆ ಇಲ್ಲ ಎಂದರು. ರಾಷ್ಟ್ರೀಯ ಮಟ್ಟದಲ್ಲಿ, ಅಂತರರಾಷ್ಟ್ರೀಯ ಮಟ್ಟದಲ್ಲಿ Print Media and Electronic Media ದಲ್ಲಿ ಹೆಣ್ಣುಮಕ್ಕಳಿಗೆ ಸುರಕ್ಷತೆಯೇ

ಇಲ್ಲವೆಂದು ಹೇಳಿಬಿಟ್ಟರು. ಆದರೆ ರಾತ್ರಿ 3.30 ಗಂಟೆಯಲ್ಲಿ ಯಾರು ಅವರನ್ನು ಹೋಗಿ ಎಂದು ಹೇಳುತ್ತಾರೆ? ಆದರೆ 3.30 ಗಂಟೆಯಲ್ಲಿ ಅವರಿಗೇನು ಕೆಲಸ ಇರುತ್ತದೆ? ಬೆಂಗಳೂರಿನಲ್ಲಿ ಸುಮಾರು 1 ಕೋಟಿ 20 ಲಕ್ಷ ಜನಕ್ಕೂ ಪೋಲೀಸ್ ಸುರಕ್ಷತೆ ಕೊಡುವುದಕ್ಕೆ ಆಗುತ್ತದೆಯೇ? ಆಮೇಲೆ ಅವರು ರಾತ್ರಿ ಹೋಗುವಂಥ ಸಂದರ್ಭದಲ್ಲಿ, ಅವರ ಸಂಬಂಧಿಕರನ್ನು ಜೊತೆಯಲ್ಲಿ ಕರೆದುಕೊಂಡು ಹೋಗಬೇಕಾಗಿತ್ತು. ಆ ಘಟನೆ ಆಗಿ 2 ದಿನ ಆದನಂತರ ಏನಾಯಿತು ಎಂದರೆ, ಸ್ವಂತ ನಾದಿನಿಯೇ ಎಂದು ಗೊತ್ತಾಯಿತು. ಆದರೆ ಕೆಟ್ಟ ಹೆಸರು ಬಂದಿದ್ದು ಸರ್ಕಾರಕ್ಕೆ, ಅದು ಯಾವುದೇ ಸರ್ಕಾರ ಇರಬಹುದು. ಕುಮಾರಿ ನಿರ್ಭಯ ಪ್ರಕರಣದಲ್ಲಿ ಇಡೀ ನಮ್ಮ ರಾಷ್ಟ್ರಕ್ಕೆ ಅಪಮಾನವಾಯಿತು.

**ಶ್ರೀ ರಮೇಶ್‌ಬಾಬು (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ, ದಯವಿಟ್ಟು ಕ್ಷಮೆ ಇರಲಿ. ಇದು deviate ಆಗುತ್ತಿದೆ. ತಾವು ಹೇಳುತ್ತಿರುವಂಥದ್ದು ತಮ್ಮ ಪ್ರಶ್ನೆಗೆ ಸಮಂಜಸವಲ್ಲ. ಮಾನ್ಯ ಐವನ್ ಡಿ'ಸೋಜರವರ ಮಾತನ್ನು ನಾನು quote ಮಾಡುತ್ತೇನೆ. ನೀವು ಇತ್ತೀಚಿನ ದಿನಗಳಲ್ಲಿ ಎಲ್ಲಾ ಸಂಸ್ಥೆಗಳಲ್ಲಿ voluntarily CCTV cameras ಹಾಕುತ್ತಿದ್ದಾರೆ. ಈ ಮಾತನ್ನು ನಾನು ಒಪ್ಪಿಕೊಂಡು ಮಾತನಾಡುತ್ತಿದ್ದೇನೆ. ಇಲ್ಲಿರತಕ್ಕಂಥ ಎಲ್ಲಾ ಸದಸ್ಯರದ್ದೂ ಸಹ ಸಿ.ಸಿ.ಟಿ.ವಿಯನ್ನು ಹಾಕುವುದಕ್ಕೆ ತಕರಾರು ಇಲ್ಲ. ಇದನ್ನು ಇಟ್ಟುಕೊಂಡು ನಾವು ಮುಂದಕ್ಕೆ ಮಾತನಾಡಬೇಕು. ನಾವ್ಯಾರು ಸಹ ವಿರೋಧವಿಲ್ಲ. ಪ್ರಶ್ನೆ ಇರತಕ್ಕಂಥದ್ದು ಕಲಂ 3 ಮತ್ತು ಕಲಂ 4 ನ್ನು ತಂದಿದ್ದೀರಲ್ಲಾ, 30 ದಿನದೊಳಗೆ ಪೋಲೀಸ್‌ನವರಿಗೆ ಕೊಡಬೇಕು. ನೀವು ಈ ಕಾಯಿದೆ ಮಾಡಿದ ಮೇಲೆ ಪೋಲೀಸ್‌ನವರು ಇದನ್ನು ದುರುಪಯೋಗಪಡಿಸಿಕೊಳ್ಳುತ್ತಾರೆ. ಕಲಂ 4ರಲ್ಲಿ ಏನು ಹೇಳುತ್ತೀರಿ ಎಂದರೆ, ಪ್ರತಿ 90 ದಿವಸಕೊಮ್ಮೆ ಅವರ ಹತ್ತಿರ ಹೋಗಿ ಸಂಬಂಧಪಟ್ಟ ಫಾರಂನಲ್ಲಿ ಪ್ರಮಾಣ ಪತ್ರವನ್ನು ಪಡೆದುಕೊಳ್ಳಬೇಕು. ನನ್ನದು ಶಿಕ್ಷಣ ಸಂಸ್ಥೆ ಇದೆ. ನಾನು renewal ಗೆ ಹೋಗುತ್ತೇನೆ. Unless, we get the certificate from the police, renewal ಆಗುವುದಿಲ್ಲ. ಅದನ್ನೇ ಶ್ರೀ ಪುಟ್ಟಸ್ವಾಮಿಯವರು ಹೇಳಿದ್ದು. ಪೋಲೀಸ್‌ನವರು ಇದನ್ನು ದುರುಪಯೋಗಪಡಿಸಿಕೊಳ್ಳಲು ಅವಕಾಶ ಮಾಡಿಕೊಡಬಾರದು ಎನ್ನುವುದನ್ನು ಬಿಟ್ಟರೆ, CCTV cameras ಹಾಕುವುದರ ಬಗ್ಗೆ ನಮಗೆ ತಕಾರರು ಇಲ್ಲ. The Minister has quoted rightly about Gurappanapalya. ತಮ್ಮ ಕ್ಷೇತ್ರದ ವ್ಯಾಪ್ತಿಯಲ್ಲಿ ಅಂದರೆ ಬಹುತೇಕ ಜಯನಗರ ವಿಧಾನ ಸಭಾ ಕ್ಷೇತ್ರದಲ್ಲಿ ಸುಮಾರು 4-5 ಮಸೀದಿಗಳಿವೆ. ಜನ ಆ ಮಸೀದಿಗಳಿಗೆ ನಮಾಜ್ ಮಾಡಲು ಬರುತ್ತಾರೆ. ಯಾರನ್ನು ನೀವು ಇದರಲ್ಲಿ ಜವಾಬ್ದಾರರನ್ನಾಗಿ ಮಾಡುತ್ತೀರಿ. ನಿಮ್ಮ ಕಾಯ್ದೆ ಪ್ರಕಾರ ನಿಮ್ಮ ಇಲಾಖೆಯ ಪೋಲೀಸ್‌ನವರು ಅವರ ಮೇಲೆ ಪ್ರಕರಣ ದಾಖಲಿಸುತ್ತಾರೆ. CCTV footageನ್ನು ಪೋಲೀಸ್‌ನವರಿಗೆ ತೆಗೆದುಕೊಂಡು ಹೋಗಿ ಕೊಡಬೇಕು. 30 ದಿವಸ

ಶೇಖರಣೆ ಮಾಡಬೇಕು. ೯೦ ದಿವಸಗಳಿಗೆ ಕೊಟ್ಟು ಪ್ರಮಾಣಪತ್ರವನ್ನು ಪಡೆದುಕೊಳ್ಳಬೇಕು. ಯಾವ ಮಸೀದಿ ಮೇಲೆ ಫಿಕ್ಸ್ ಮಾಡುತ್ತೀರಿ, ಯಾರ ವಿರುದ್ಧ ಪ್ರಕರಣ ದಾಖಲಿಸುತ್ತೀರಿ. ಇಲ್ಲಿ ಇರತಕ್ಕಂಥ provisionನ್ನು ಬೇಡವೆಂದು ಹೇಳುವುದು. ಪ್ರಮುಖವಾಗಿ ಏನು ನೀವು ಮೇಲ್ಮನವಿ ಪ್ರಾಧಿಕಾರಕ್ಕೆ ಕೊಟ್ಟಿದ್ದೀರಲ್ಲಾ, ನೀವು working Magistrate ನವರಿಗೆ ಕೊಡಿ ತಹಸೀಲ್ದಾರ್ ಅಥವಾ ಎ.ಸಿಯವರಿಗೆ ಕೊಡಿ. We have no objection. ಆದರೆ ಪೋಲೀಸ್‌ನವರ ನೆರಳಿನಲ್ಲಿ ಶಿಕ್ಷಣ ಸಂಸ್ಥೆಗಳನ್ನು, ಕ್ಲಿನಿಕ್‌ಗಳನ್ನು ಮತ್ತು ಧಾರ್ಮಿಕ ಕೇಂದ್ರಗಳಲ್ಲಿ ನಡೆಸುವಂಥವುದರಲ್ಲಿ ಬೇಡ ಎನ್ನುವುದಷ್ಟೇ ನಮ್ಮ ಬೇಡಿಕೆ. ನೀವು ಮಾಡಿರತಕ್ಕಂಥ ಎಲ್ಲವನ್ನು ಒಪ್ಪಿಕೊಳ್ಳುತ್ತೇವೆ. ಇಲಾಖೆಗೆ ಕೊಡಿ, ಆದರೆ ಪೋಲೀಸ್ ಇಲಾಖೆಯವರಿಗೆ ಅದನ್ನು ಕೊಡುವುದು ಬೇಡ ಎನ್ನುವುದಷ್ಟೇ ನಮ್ಮ ಬೇಡಿಕೆ. ಶಿಕ್ಷಣ ಇಲಾಖೆಯವರು, ಪ್ರತಿ ಮೂರು ತಿಂಗಳು ಪ್ರಮಾಣ ಪತ್ರ ಬೇಕೆಂದು ಪೋಲೀಸ್‌ನವರ ಹತ್ತಿರ ಹೋಗಿ ನಿಂತುಕೊಳ್ಳುವುದಕ್ಕೆ ಆಗುತ್ತದೆಯೇ? ನಮ್ಮದು ಅಷ್ಟೇ ತಕಾರು. ನೀವು ಸಿ.ಸಿ.ಟಿ.ವಿಗಳನ್ನು ಅಳವಡಿಸಲು ನಾವೆಲ್ಲರೂ ಮುಕ್ತವಾಗಿ ಒಪ್ಪಿಕೊಳ್ಳುತ್ತಿದ್ದೇವೆ. ನಮ್ಮ ಪ್ರಶ್ನೆಯೇ ಇಲ್ಲ, ಎಲ್ಲರೂ suo moto ಹಾಕಿಬಿಟ್ಟಿದ್ದಾರೆ. ನೀವು ಒಂದು ಸಿ.ಸಿ.ಟಿವಿ ಅಲ್ಲದಿದ್ದರೂ ನಾಲ್ಕು ಸಿ.ಸಿ.ಟಿ.ವಿಗಳನ್ನು ಹಾಕಿಸಿ, ಅದಕ್ಕೆ ನಾವು ಸಿದ್ಧರಿದ್ದೇವೆ. ಪ್ರಶ್ನೆ ಅದು ಅಲ್ಲ. ಪ್ರತಿ ಮೂರು ತಿಂಗಳಿಗೊಮ್ಮೆ ಅವರ ಹತ್ತಿರ ಹೋಗಿ ಪ್ರಮಾಣ ಪತ್ರ ಪಡೆದುಕೊಳ್ಳಿ, renewal ಮಾಡಿಕೊಂಡು ಅವರ ಹತ್ತಿರ NOC ಪಡೆದುಕೊಳ್ಳಿ. ನಿಮ್ಮ ಇಲಾಖೆಯವರು ಯಾವಾಗ ಬೇಕಾದರೂ ಅಲ್ಲಿಗೆ ಹೋಗಿ inspection ಮಾಡಬಹುದು. ಈ ರೀತಿ ಆಗುವುದು ಬೇಡ. ನಾವು ಇದಕ್ಕಷ್ಟೇ exemption ನ್ನು ಛಟಚ್ಟು ಮಾಡುತ್ತಿರುವಂಥದ್ದು. ಸಿ.ಸಿ.ಟಿ.ವಿ ಹಾಕುವುದಕ್ಕೆ ನಮ್ಮೆಲ್ಲಾ ಸದಸ್ಯರದ್ದು ಒಪ್ಪಿಗೆ ಇದೆ. We have no objection at all.

**ಉಪ ಸಭಾಪತಿಯವರು**:- ಮಾನ್ಯ ರಮೇಶ್ ಬಾಬುರವರೇ ತಮಗೆ ನೀಡಿದ ಕಾಲಾವಕಾಶ ಮುಗಿಯಿತು ತಾವು ಕುಳಿತುಕೊಳ್ಳಿ.

**ಶ್ರೀ ರಾಮಲಿಂಗಾ ರೆಡ್ಡಿ**:- ಮಾನ್ಯ ಸಭಾಪತಿಯವರೇ, ನಾವು ಅಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಅಳವಡಿಸಿದ್ದೇವೆ. ಈಗ ಅವು ಸಮರ್ಪಕವಾಗಿ ನಡೆಯುತ್ತಿವೆಯೋ ಅಥವಾ ಇಲ್ಲವೋ ಎಂಬುದನ್ನು ನೋಡಬೇಕೋ ಬೇಡವೋ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ (ವಿಧಾನಸಭಾ ಕ್ಷೇತ್ರ)**:-ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ, ದಯವಿಟ್ಟು ಎಲ್ಲಾ ಇಲಾಖೆಯ ಜವಾಬ್ದಾರಿಯನ್ನು ಪೋಲೀಸ್ ಇಲಾಖೆಗೆ ಕೊಡಬೇಡಿ. ಎಲ್ಲಾ ಇಲಾಖೆಯ ಜವಾಬ್ದಾರಿಯನ್ನು ಪೋಲೀಸ್ ಇಲಾಖೆಯ ಸುಪರ್ದಿಗೆ ಕೊಟ್ಟುಬಿಟ್ಟರೆ, ಇದರಿಂದ ಏನಾಗಬಹುದು ತಾವು ಯೋಚನೆ ಮಾಡಬೇಕು.

**ಉಪ ಸಭಾಪತಿಯವರು**:– ಮಾನ್ಯ ಉಗ್ರಪ್ಪನವರು ಮಾತನಾಡುತ್ತಾರೆ.

**ಶ್ರೀ.ವಿ.ಎಸ್.ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು)**:– ಮಾನ್ಯ ಸಭಾಪತಿಯವರೇ, ಕಲಂ 6ರಲ್ಲಿ ನಿರ್ಧಿಷ್ಟವಾಗಿ ಅವರು ಎರಡನ್ನು ಮಾತ್ರ ಉಲ್ಲೇಖ ಮಾಡಿದ್ದಾರೆ. *"Provided that the religious institutions of Endowments Department or any other religious place and educational institutions shall not be sealed."* ಎಂದು ಹೇಳಿದ್ದಾರೆ. ಆದರೆ ಇಲ್ಲಿ ಏನಾಗುತ್ತದೆ ಎಂದರೆ, ಉದಾಹರಣೆಗೆ ಬಸ್ ನಿಲ್ದಾಣವನ್ನು ಸೀಲು ಮಾಡಿದರೆ ಏನಾಗಬಹುದು ಅದರಿಂದ ತೊಂದರೆ ಆಗಬಹುದಲ್ಲವೇ? ಏಕೆಂದರೆ definition clause ನಲ್ಲಿ "bus stations", "railway stations" ಎಂದು ಹೇಳಿದ್ದಾರೆ. ರೈಲ್ವೇ ನಿಲ್ದಾಣ ಮತ್ತು ಬಸ್‌ನಿಲ್ದಾಣವನ್ನು ಸೀಲು ಮಾಡಿದರೆ, ಜನರಿಗೆ ಏನಾಗಬಹುದು. ಆಸ್ಪತ್ರೆಗಳನ್ನು ಹೇಳಿದ್ದಾರೆ. ಹಾಗಾಗಿ, ಈ definition clause ನಲ್ಲಿರತಕ್ಕಂಥದ್ದು, ಕಲಂ 6ನಲ್ಲಿ ಉಪ ಕಲಂ 3 proviso ನಲ್ಲಿರತಕ್ಕಂಥದ್ದರಲ್ಲಿ ಈ ತರಹದ ಯಾವ್ಯಾವು ದಿನನಿತ್ಯ ಬಳಕೆ ಬೇಕಾಗಿರತಕ್ಕಂಥ ಜನರು ಬಳಸಿಕೊಳ್ಳತಕ್ಕಂಥದ್ದನ್ನು ಹೊರಗಡೆ ಇಟ್ಟು ಸೀಲು ಮಾಡುವುದರಿಂದ, ಯಾರೂ ತಪ್ಪಿತಸ್ಥರಿದ್ದಾರೆ ಅವರ ಮೇಲೆ stringent action ನ್ನು initiate ಮಾಡಿ ಇದು ಒಂದನೆಯದು. ಎರಡನೆಯದು, ನನಗೆ ಅನಿಸುವಂಥದ್ದು, Crime Detecting Agency ಇರುವಂಥದ್ದು ಪೊಲೀಸ್ ಇಲಾಖೆಯಲ್ಲಿ. Crime detect ಮಾಡುವುದಕ್ಕೆ ಇದನ್ನು ಮಾಡುತ್ತಿರುವಂಥದ್ದು. ಶಿಕ್ಷಣ ಇಲಾಖೆಗೋ, ರೈಲ್ವೇ ನಿಲ್ದಾಣಕ್ಕೋ ಅಥವಾ ಬಸ್ ನಿಲ್ದಾಣದಲ್ಲಿರತಕ್ಕಂಥವರಿಗೆ ಕೊಟ್ಟರೆ, ಅದರ purpose serve ಆಗುವುವದಿಲ್ಲ. ಹಾಗಾಗಿ, Crime detect ಮಾಡುವುದಕ್ಕೆ ಸಹಾಯಕಾರಿ ಆಗತಕ್ಕಂಥ ದೃಷ್ಟಿಯಿಂದ ಈ ವಿಧೇಯಕವನ್ನು ತಂದಿದ್ದಾರೆ, ಬಹುಶಃ ಅತ್ಯಂತ ಸೂಕ್ತವಾಗಿರತಕ್ಕಂಥದ್ದು. ಅದಕ್ಕೆ ನಾನು ಸರ್ಕಾರಕ್ಕೆ ಅಭಿನಂದಿಸುತ್ತೇನೆ.

**ಶ್ರೀ ರಾಮಲಿಂಗಾ ರೆಡ್ಡಿ**:– ಮಾನ್ಯ ಸಭಾಪತಿಯವರೇ, ಕಲಂ 4ರಲ್ಲಿ ತಿಳಿಸಿರುವಂತೆ periodical report shall be filed by self certification, not by certificate of police ಎಂದು ಹೇಳುತ್ತಾರೆ. ಆಮೇಲೆ ಸಾರ್ವಜನಿಕರಿಗೆ ಸುರಕ್ಷತೆ ಒದಗಿಸುವುದು ನಮ್ಮ ಇಲಾಖೆಯ ಕರ್ತವ್ಯ. ಏಕೆಂದರೆ, ಆರೋಗ್ಯ ಇಲಾಖೆ ಅಥವಾ ಶಿಕ್ಷಕರು, ಬಿ.ಇ.ಓ.ಗಳು ಸಾರ್ವಜನಿಕರಿಗೆ ಸುರಕ್ಷತೆ ಒದಗಿಸುವುದು ಕಷ್ಟ. ಈಗ ನೋಡಿ, ಇತ್ತೀಚೆಗೆ ಒಂದು ವಿಬ್‌ಗಯಾರ್ ಶಾಲೆಯಲ್ಲಿ ಒಂದು ಘಟನೆ ಆಯಿತು. ಇದು ಯಾರ ಮೇಲೆ ಜವಾಬ್ದಾರಿ ಬಂತು. ರಾಜ್ಯ ಸರ್ಕಾರದ ಮೇಲೆ ಬಂತು. ಪೊಲೀಸ್ ಇಲಾಖೆ ಮೇಲೆ ಬಂತು. ಒಂದು ಶಾಲೆ ಆವರಣದಲ್ಲಿ ಸುಮಾರು ಎರಡು–ಮೂರು ಎಕರೆಗೆ ಕಾಂಪೌಂಡ್ ಇರುತ್ತದೆ. ಆ ಶಾಲೆಯ ಕಾಂಪೌಂಡ್ ಒಳಗೆ ಏನಾದರೂ

ಘಟನೆ ನಡೆದರೆ, ಆಗ ಸರ್ಕಾರವನ್ನು ಬೈಯುತ್ತಾರೆ. ಆದ್ದರಿಂದ ಸಾರ್ವಜನಿಕರಿಗೆ ಸುರಕ್ಷತೆ ಒದಗಿಸುವುದು ಪೊಲೀಸ್ ಇಲಾಖೆ. ಆದ್ದರಿಂದ ಪೊಲೀಸ್ ಇಲಾಖೆಯೇ monitor ಮಾಡಬೇಕು.

**ಶ್ರೀ ಕಾಂತರಾಜು (ಬಿ.ಎಂ.ಎಲ್):–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರೇ, ನಮ್ಮ ಕೈಯಲ್ಲಿ ಸಿ.ಸಿ.ಟಿ.ವಿ ಕ್ಯಾಮರಾಗಳನ್ನು ಹಾಕುವುದಕ್ಕಾಗುವುದಿಲ್ಲ. ನೀವು ಅದನ್ನು ಹಾಕಿ ಎನ್ನುವಂತೆ ಆಯಿತು. ಇವರು ಚಂದಾ ವಸೂಲಿ ಮಾಡುವುದಕ್ಕೆ ನಾವು ಹಾಕಿಕೊಟ್ಟಂತಾಗುತ್ತದೆ.

**ಉಪ ಸಭಾಪತಿಯವರು:–** ಪ್ರಸಾವ ಏನೆಂದರೆ;

“ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2017ರ ಕರ್ನಾಟಕ ಸಾರ್ವಜನಿಕ ಸುರಕ್ಷೆಯ (ಕ್ರಮಗಳ) ಜಾರಿ ವಿಧೇಯಕವನ್ನು ಪರ್ಯಾಲೋಚಿಸುವುದು.”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.**

**ಖಂಡ 2 ರಿಂದ 10 ರವರೆಗೆ**

**ಉಪ ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

“ಖಂಡ 2 ರಿಂದ 10 ರವರೆಗೆ ಖಂಡಗಳು ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ರಿಂದ 10 ರವರೆಗೆ ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಉಪ ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

“ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕದ ಭಾಗವಾಗಿರುತ್ತದೆ”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ರಾಮಲಿಂಗಾರೆಡ್ಡಿ (ಗೃಹ ಸಚಿವರು)**:- ಮಾನ್ಯ ಸಭಾಪತಿಯವರೇ, "ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2017ರ ಕರ್ನಾಟಕ ಸಾರ್ವಜನಿಕ ಸುರಕ್ಷೆಯ (ಕ್ರಮಗಳ) ಜಾರಿ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

**ಉಪ ಸಭಾಪತಿಯವರು**:- ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2017ರ ಕರ್ನಾಟಕ ಸಾರ್ವಜನಿಕ ಸುರಕ್ಷೆಯ (ಕ್ರಮಗಳ) ಜಾರಿ ವಿಧೇಯಕವನ್ನು ಅಂಗೀಕರಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

**(ಮುಂದು...)**

**(1000)15.11.2017/5.30/ಎಂ.ಎಂ./ಬಿ.ಎನ್.ಎಸ್.**

**07. ಪ್ರಕಟಣೆಗಳು**

**ಸಭಾಪತಿಯವರುಃ**- ಅ) ವಿಧಾನ ಪರಿಷತ್ತಿನ ಕಾರ್ಯಕಲಾಪಗಳ ಸಲಹಾ ಸಮಿತಿಯು ಈ ದಿನ ಸಭೆ ಸೇರಿ ಈ ಕೆಳಕಂಡಂತೆ ಕಾರ್ಯಕಲಾಪಗಳನ್ನು ನಡೆಸಲು ತೀರ್ಮಾನಿಸಿರುತ್ತದೆ ಎಂದು ಸದನದ ಗಮನಕ್ಕೆ ತರಲಾಗಿದೆ.

- ಪ್ರಶ್ನೋತ್ತರ, ಗಮನ ಸೆಳೆಯುವ ಸೂಚನೆ, ನಿಯಮ 330ರ ಮೇರೆಗೆ ಚರ್ಚೆ, ಶೂನ್ಯವೇಳೆ, ನಿಯಮ 68ರ ಮೇಲಿನ ಪ್ರಸ್ತಾವನೆ;
- ವಿಧೇಯಕಗಳ ಮಂಡನೆ, ಪರ್ಯಾಲೋಚನೆ ಮತ್ತು ಅಂಗೀಕಾರ;
- ಉತ್ತರ ಕರ್ನಾಟಕ ಭಾಗದ ಸಮಸ್ಯೆಗಳ ಕುರಿತು ಮಾನ್ಯ ಸದಸ್ಯರುಗಳಿಂದ ಸ್ವೀಕೃತವಾದ ಸೂಚನೆಗಳ ಮೇಲೆ ಚರ್ಚೆ;

ಈ ವರದಿಗೆ ಸದನದ ಅಂಗೀಕಾರವಿದೆ ಎಂದು ಭಾವಿಸುತ್ತೇನೆ.

**ಆ) ಮಾನ್ಯ ಸಭಾಧ್ಯಕ್ಷರವರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ:-**

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 104ರ ಮೇರೆಗೆ ವಿಧಾನ ಸಭೆಯು ದಿನಾಂಕ 15.11.2017ರಂದು ಈ ಕೆಳಕಂಡ ವಿಧೇಯಕಗಳನ್ನು ಅಂಗೀಕರಿಸಿರುತ್ತದೆಂದು ಹಾಗೂ ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

1. ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ತಿದ್ದುಪಡಿ) ವಿಧೇಯಕ, 2017
2. ಕರ್ನಾಟಕ ಕೆಲವು ಅಧಿನಿಯಮಗಳನ್ನು ನಿರಸನಗೊಳಿಸುವ ವಿಧೇಯಕ, 2017

3. ಅಂತರ್‌–ವಿಷಯ ಆರೋಗ್ಯ ವಿಜ್ಞಾನಗಳು ಮತ್ತು ತಂತ್ರಜ್ಞಾನ ಸಂಸ್ಥೆ (ತಿದ್ದುಪಡಿ) ವಿಧೇಯಕ, 2017

**(ಸದನವು ಸಂಜೆ 5 ಗಂಟೆ 34 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ನಾಳೆ ಅಂದರೆ, ದಿನಾಂಕ 15ನೇ ನವೆಂಬರ್ ಮಾಹೆ 2017ರಂದು ಬುಧವಾರ ಬೆಳಗ್ಗೆ 11.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)**

<><><>